ಸಾಹಿತ್ಯ ಸಂವಾದ - ೫೪, ೫೫

ಲಂಕೇಶ್ ನೆನಪಿನ ಸಂಚಿಕೆ



ಸಂವಾದ ಪ್ರಕಾಶನ
ಮಲ್ಲಾಡಿಹಳ್ಳಿ

ಸಾಹಿತ್ಯ

ಸಂವಾದ: ೫೪-೫೫

(ಎಪ್ರಿಲ್ - ಸೆಪ್ಟಂಬರ್, ೨೦೦೦)

ಲಂಕೇಶ ನೆನಪಿನ ಸಂಚಿಕೆ

☐ ನಮ್ಮ ಸಾಹಿತ್ಯಿಕ ಸಾಂಸ್ಕೃತಿಕ ಬದುಕಿನ ಸ್ಪಂದನಕ್ಕೆ

☐ ಬಹುಮುಖ ಸತ್ಯದ ಆವಿಷ್ಕಾರಕ್ಕಾಗಿ

ಸಂಪಾದಕ

ರಾಘವೇಂದ್ರ ಪಾಟೀಲ

ಚಂದಾ ವಿವರ

ಆಜೀವ ಚಂದಾ: ರೂ.೭೫೦ (ವ್ಯಕ್ತಿಗಳಿಗೆ) ; ರೂ.೧೦೦೦ (ಸಂಸ್ಥೆಗಳಿಗೆ)
ವಾರ್ಷಿಕ ಚಂದಾ: ರೂ.೭೫ (ವ್ಯಕ್ತಿಗಳಿಗೆ); ರೂ.೧೦೦ (ಸಂಸ್ಥೆಗಳಿಗೆ)

ಅಕ್ಷರ ಜೋಡಣೆ, ಪ್ರಕಟಣೆ ಮತ್ತು ಪ್ರಕಾಶನ

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ - ೫೭೭೫೩೧
ದೂರವಾಣಿ: ೦೮೧೯೧ - ೮೯೫೦೧ ಮತ್ತು ೮೯೪೨೬

ಬೋದಿಲೇರ್ ಯಾಕೆ?

ಭಯಕ್ಕೆ ಕೆಲವು ಮೂಲಗಳಿವೆ.ಸಮಾಜ ನಮ್ಮಲ್ಲಿ ಚಿಕ್ಕಂದಿನಿಂದಲೇ ಧರ್ಮ,ನೀತಿಯನ್ನು ಬಿತ್ತಲು ಪ್ರಯತ್ನಿಸುತ್ತದೆ;ಸಭ್ಯ ಪ್ರಜೆಯನ್ನಾಗಿಸಲು ತಳಪಾಯ ಹಾಕುತ್ತದೆ.ಅವು ನಮಗೆ ನೆರವಾಗುವುದಿಲ್ಲವೆ?ತಲತಲಾಂತರದಿಂದ ಬಂದ ಧರ್ಮ ಪ್ಯಾರಿಸಿನ ಕಾಯಿಲೆಗಳಲ್ಲಿ ಕೊಚ್ಚಿ ಹೋಗುತ್ತದೆಯೆ? ಧರ್ಮ ನಮ್ಮನ್ನು ಹದಗೆಡಿಸುವ ಬಗೆ ಕೂಡ ಕುತೂಹಲಕರ. ಧರ್ಮ ನಮಗೆ ಕೊಡುವ ಬಳುವಳಿಗಳಲ್ಲಿ ಮುಖ್ಯವಾದದ್ದು ಪಾಪಪ್ರಜ್ಞೆ. ಬೋದಿಲೇರ್ ಪ್ಯಾರಿಸ್ ಮಹಾನಗರವನ್ನು ಹಿನ್ನೆಲೆಯಾಗಿಟ್ಟುಕೊಂಡು ಮನುಷ್ಯ ತನ್ನ ದೇಹದ ಮೂಲಕ ಮಾಡಬಹುದಾದ ಪಾಪ,ಹೊಂದಬಹುದಾದ ಕಾಯಿಲೆ,ಅನುಭವಿಸಬಹುದಾದ ದಿಗ್ಭ್ರಮೆಯನ್ನೆಲ್ಲ ಪಡೆಯುತ್ತಾನೆ. ಹೆಣ್ಣುಗಳು ,ಗಾಂಜಾ,ಹೆಂಡ,ಜೂಜು,ಬಡತನ ; ಇದರಿಂದೆಲ್ಲ ಹೆಚ್ಚುವ ದೇವರ ಮತ್ತು ಸೈತಾನನ ಭಯ;ಅವನ್ನು ಮರೆಯಲು,ತಾನು ಮನುಷ್ಯನೆಂಬುದನ್ನು ನೆನೆಸಿಕೊಳ್ಳಲು ಮತ್ತಷ್ಟು ಪಾಪ .ಎಲ್ಲ ಪ್ರಜ್ಞೆಯನ್ನು ಮುಳುಗಿಸಬಲ್ಲ ವಿಷಯಲಂಪಟತನ ; ತನ್ನ ಅಸ್ತಿತ್ವ ಉಳಿಸಿಕೊಳ್ಳುವುದಕ್ಕಾಗಿ ಲೋಲುಪ್ತ ಜೀವನ.

ಈ ಬಲೆಯಲ್ಲಿ ಸಿಕ್ಕ ಮನುಷ್ಯ ಆಳದ ಸನ್ಯಾಸ ಉಳಿಸಿಕೊಂಡು ತನ್ನ ಸ್ಥಿತಿ ನೋಡಿಕೊಳ್ಳುವ, ಅದನ್ನು ಬಣ್ಣಿಸುವ ಬಗೆ ಅಚ್ಚರಿ ಹುಟ್ಟಿಸುವಂಥದು .ದೇವರ ತುಳಿತಕ್ಕೆ ,ದೆವ್ವದ ತುಳಿತಕ್ಕೆ ಸಿಕ್ಕಾತ ತನ್ನ ನೋವನ್ನು ಕೃತಿಯಾಗಿಸುವ ಕೆಚ್ಚು ದಿಟ್ಟತನದ್ದು.ಈ ಕೆಚ್ಚು ಮಾತ್ರ ಮನುಷ್ಯನನ್ನು ಉಳಿಸುತ್ತದೆ.ಇದಕ್ಕೆ ಭೂತದ ,ವರ್ತಮಾನದ , ಭವಿಷ್ಯದ ಹಂಗಿಲ್ಲ.ಸ್ವರ್ಗ ,ನರಕಗಳ ಬಗ್ಗೆ ವಿಶ್ವಾಸವಿಲ್ಲ .ಇಲ್ಲಿ ಆಗುತ್ತಿರುವುದರ ಬಗ್ಗೆ ಎಚ್ಚರ ಮಾತ್ರ ಇದೆ ; ಅದನ್ನು ಎದುರಿಸುವ ದಿಟ್ಟತನವಿದೆ.ತನ್ನನ್ನು ಕ್ರಿಮಿಕೀಟವಾಗಿ ಮಾಡಿಕೊಂಡ ಮನುಷ್ಯನಲ್ಲಿ ಇರುವ' heroic' ಗುಣ ತಿಳಿಯುವುದು ಇಲ್ಲಿಯೇ.

★

ಸದಾ ಒಣಕಲು ಮೊಲೆಗಳ,ನಶಿಸುತ್ತಿರುವ ಭಿಕ್ಷುಕರ,ಭಿಕಾರಿಗಳಾದ ಜೂಜುಗಾರನ,ಕಲಾವಿದನಂತೆಯೇ ಹೊತ್ತು ಕಳೆಯಲು,ಹೊಟ್ಟೆ ಹೊರೆಯಲು ಕೊಲೆ ಕಳ್ಳತನ ಮಾಡುವವರ,ಕಾಲನ ಕತ್ತರಿಯ ನಡುವೆ ಸಿಕ್ಕ ಸುಂದರಿಯರ -ಧ್ಯಾನದಲ್ಲಿರುವಂತೆ ಕಾಣುವ ಬೋದಿಲೇರ್ ಈ ಬದುಕನ್ನು ಸಹಿಸುವ , ಅದರಿಂದ ಸೃಷ್ಟಿಸುವ ಕೆಲಸ ಮಾಡುತ್ತ 'heroism' ಸಾಧಿಸಿದ .

- ಪಿ.ಲಂಕೇಶ್

('ಪಾಪದ ಹೂವುಗಳು': ಒಂದು ಬಗೆಯ ಮುನ್ನುಡಿ: ಬೋದಿಲೇರ್ ಯಾಕೆ?)

ಸಾಹಿತ್ಯ ಸಂವಾದ : ೫೪ - ೫೫
ಲಂಕೇಶ್ ನೆನಪಿನ ಸಂಚಿಕೆ

ಸಂಪುಟ :೧೦ ಸಂಚಿಕೆ : ೨ ಎಪ್ರಿಲ್ -ಸೆಪ್ಟಂಬರ್ , ೨೦೦೦

ಅನಿವಾರ್ಯವಾದ ಕ್ಷಮಾಯಾಚನೆ - ಕೃತಜ್ಞತೆಗಳು...

ಸಾಹಿತ್ಯ ಸಂವಾದದ ಈ ಸಂಚಿಕೆ ಇಷ್ಟು ತಡವಾದದ್ದಕ್ಕೆ ನಾನು ನಿಮ್ಮಲ್ಲಿ ಕ್ಷಮೆಯನ್ನು ಯಾಚಿಸುತ್ತೇನೆ.

ಇದಕ್ಕೆ ನಾನು ವೈಯಕ್ತಿಕವಾಗಿ ಜವಾಬ್ದಾರ .ಮತ್ತು ಹೀಗಾಗಲು ನನ್ನ ಲೇಖಕ ಮಿತ್ರರ ಸಹಾಯವೂ ಲಭ್ಯವಾಗಿದೆ.

ಸಾಹಿತ್ಯ ಪತ್ರಿಕೆಗಳ ಎರಡು ಅತ್ಯಂತ ಮುಖ್ಯ ಸಮಸ್ಯೆಗಳೆಂದರೆ ಹಣಕಾಸಿನ ಮುಗ್ಗಟ್ಟು ಮತ್ತು ಅದಕ್ಕಿಂತ ಮುಖ್ಯವಾಗಿ ಲೇಖನಗಳ ಕೊರತೆ .ನಮ್ಮ ಎಲ್ಲ ಲೇಖಕ ಮಿತ್ರರು ನನ್ನಂತೆಯೇ ಸೋಮಾರಿಗಳು.ಇದಲ್ಲದೆ ಅನಿಯಮಿತತನವನ್ನು ರೂಢಿಸಿಕೊಂಡಿರುವ ಸಾಹಿತ್ಯ ಪತ್ರಿಕೆಗಳಿಗೆ ಬರೆಯುವ ಉತ್ಸಾಹವೂ ಅವರಿಗೆ ಇರುವುದಿಲ್ಲ....ಹುಚ್ಚು -ಮದುವೆಯ ಸಂಬಂಧವಿದು... ಅನಿಯಮಿತತನದ ಕಾರಣಕ್ಕಾಗಿ ಅವರು ಬರೆಯುವುದಿಲ್ಲ -ಅವರು ಬರೆಯದಿರುವುದಕ್ಕೆ ಅನಿಯಮಿತತನ ಉಂಟಾಗುತ್ತದೆ...ಹೆಳವನ ಹೆಗಲ ಮೇಲೆ ಕುರುಡ ಕುಳಿತಿದ್ದಾನೆ ...ದಾರಿ ಸಾಗುವುದೆಂತೊ ನೋಡಬೇಕು...

ಹಿರಿಯರಾದ ಡಾ. ಸಿ. ಎನ್. ರಾಮಚಂದ್ರನ್ ಅವರು, ಸ್ನೇಹಿತರಾದ ವೈದೇಹಿ, ಜಿ. ರಾಜಶೇಖರ್, ಕೆ. ಸತ್ಯನಾರಾಯಣ, ಎಚ್. ಎಸ್. ವೆಂಕಟೇಶಮೂರ್ತಿ, ಸತ್ಯನಾರಾಯಣರಾವ್ ಅಣತಿ, ಶಂಕರ ಕಟಗಿ ... ಇವರೆಲ್ಲರು ನನ್ನ ಒತ್ತಾಯಕ್ಕೆ ಬೇಗನೇ ಲೇಖನಗಳನ್ನು ಪದ್ಯಗಳನ್ನು ಕಳಿಸಿದರು. ಅವರು ಲೇಖನಗಳನ್ನು ಕಳಿಸಿ ಆರೇಳು ತಿಂಗಳೇ ಕಳೆದಿರಬಹುದು. ಅವರಲ್ಲಿ ನಾನು ಹೆಚ್ಚಿನ ಕ್ಷಮೆ ಕೇಳಬೇಕಾಗುತ್ತದೆ. ಲೇಖನಗಳನ್ನು ಬರೆದು ಅವು ಪ್ರಕಟಗೊಳ್ಳುವ ಸಂಚಿಕೆಗಳಿಗಾಗಿ ಕಾಯುವುದು ಯಾವ ಲೇಖಕನೂ ಅಷ್ಟು ಇಷ್ಟಪಡಲಾರದ ಸಂಗತಿ ಎಂದು ಬರೆಯುವ ಕೆಲಸ ಮಾಡುವ ನಾನೂ ಬಲ್ಲೆ . ಆದ್ದರಿಂದ

ಇವರೆಲ್ಲ ನನ್ನನ್ನು ಕ್ಷಮಿಸಬೇಕೆಂದು ಇನ್ನೊಮ್ಮೆ ಕೇಳಿಕೊಳ್ಳುತ್ತೇನೆ.

ಕಳೆದ ವರ್ಷದ ಜನವರಿಯಲ್ಲಿ ಲಂಕೇಶ್ ನಮ್ಮನ್ನು ಬಿಟ್ಟು ನಡೆದಾಗ ನನಗೆ ತಕ್ಷಣಕ್ಕೆ ತೀವ್ರವಾಗಿ ಅನ್ನಿಸಿದ್ದೆಂದರೆ ... ಒಂದು ನಿರ್ವಾತದ ರಂಧ್ರ ಮೂಡಿದ ಭಾವನೆ ...

ನನ್ನೊಳಗೆ ಒಬ್ಬ ಲಂಕೇಶ್ ಇದ್ದರು - ಸದಾ ನನ್ನ ಮೆಚ್ಚುಗೆಯಲ್ಲಿ ಮೀಯುತ್ತ ... ಸದಾ ನನ್ನ ಅತೃಪ್ತಿಗೆ ಈಡಾಗುತ್ತ ... ಸದಾ ನನ್ನೊಂದಿಗೆ ಜಗಳಾಡುತ್ತ ... ನನ್ನೊಳಗೊಬ್ಬ ಲಂಕೇಶ್ ಇದ್ದರು. ಆ ಲಂಕೇಶ್ ಬಾಹ್ಯದಲ್ಲಿದ್ದ, ನಿತ್ಯ ಜೀವಂತಿಕೆ ಮಿಡಿಯುವ ಲಂಕೇಶರೊಂದಿಗೆ ಜೋಡಣೆಗೊಂಡಿದ್ದರು. ಈ ಜೀವಂತ ಲಂಕೇಶ್ ಇಲ್ಲವೆಂದಾದಾಗ ನನ್ನೊಳಗೆ ತಕ್ಷಣ ಅನ್ನಿಸಿದ ಭಾವವಿದು... ಹಾಗೆಯೇ ಕನ್ನಡ ಸಾಂಸ್ಕೃತಿಕ ಲೋಕದಲ್ಲಿಯೂ ಕೂಡ ಲಂಕೇಶರ ಸಾವು ಒಂದು ನಿರ್ವಾತದ ರಂಧ್ರವನ್ನು ಮೂಡಿಸಿದೆ. ಇಂಥ ಸ್ಥಿತಿಗೆ ತೋರುವ ಒಂದು ಪ್ರತಿಕ್ರಿಯೆಯಾಗಿ **ಲಂಕೇಶ್ ನೆನಪಿನ ಸಂಚಿಕೆ** ಬರುತ್ತಿದೆ.

ಲಂಕೇಶರ ನೆನಪಿನ ಸಂಚಿಕೆಗೆ ಲೇಖನಗಳನ್ನು ಬರೆಯಲು ನಾಡಿನ ವಿದ್ವಾಂಸರನ್ನು ವಿನಂತಿಸಿಕೊಂಡಾಗ ಅವರೆಲ್ಲ ಪ್ರೀತಿಯಿಂದ ಬರೆದುಕೊಟ್ಟಿದ್ದಾರೆ. ಅವರಿಗೆಲ್ಲ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ವಿಶೇಷವಾಗಿ ಲಂಕೇಶರವರು ೧೯೮೫ರಲ್ಲಿ ಉಡುಪಿಯ 'ರಥಬೀದಿ ಗೆಳೆಯರು' ಮತ್ತು 'ಸಿರಂತನ' ದವರು ಆಯೋಜಿಸಿದ್ದ ನಾಟಕ ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಒಂದು ಬೆಲೆಯುಳ್ಳ ಭಾಷಣ ಮಾಡಿದ್ದರು. ಆ ಭಾಷಣವನ್ನು ತಮ್ಮ ಧ್ವನಿಮುದ್ರಣದ ಸಂಗ್ರಹದಿಂದ ಆಯ್ದು ಲೇಖನ ರೂಪಕ್ಕೆ ಇಳಿಸಿಕೊಟ್ಟಿದ್ದಾರೆ ಕಥೆಗಾರ್ತಿ ವೈದೇಹಿ. ಈ ವಿಶೇಷ ಸಹಾಯಕ್ಕಾಗಿ ವೈದೇಹಿ ಅವರಿಗೆ ನನ್ನ ವಿಶೇಷ ಕೃತಜ್ಞತೆಗಳು. ಹಾಗೆಯೇ ಈ ಭಾಷಣಕ್ಕೆ ಕಾರಣರಾದ ಸಂಸ್ಥೆಗಳಿಗೆ ಕೂಡ ನನ್ನ ಕೃತಜ್ಞತೆಗಳು.

ಹಾಗೆಯೇ, ಲಂಕೇಶರ ಭಾಷಣವನ್ನು ಪ್ರಕಟಿಸಲು ಅನುಮತಿ ನೀಡುವುದಲ್ಲದೇ, ತಮ್ಮ ತಂದೆಯೊಂದಿಗಿನ ಆತ್ಮೀಯ ಸಂಬಂಧವನ್ನು ಗೌರಿ ಲಂಕೇಶ್ ಅವರು ಬರೆದುಕೊಟ್ಟು ಈ ಸಂಚಿಕೆಯ ಆಪ್ತತೆಯ ಮೆರುಗು ಹೆಚ್ಚಿಸಿದ್ದಾರೆ. ಅವರಿಗೆ ನನ್ನ ವಿಶೇಷ ಕೃತಜ್ಞತೆಗಳು.

ಈ ಸಂಚಿಕೆಯ ಪ್ರಕಟಣೆಗೆ ಸಹಾಯ ಮಾಡಿದ ಎಲ್ಲರಿಗೂ -

ಅಂದವಾಗಿ ಮುದ್ರಿಸಿಕೊಟ್ಟ ಶಕ್ತಿ ಮುದ್ರಣಾಲಯದ ಗೆಳೆಯ ಚಂದ್ರೂ, ಮತ್ತು ಸಿಬ್ಬಂದಿವರ್ಗದ ಎಲ್ಲ ಮಿತ್ರರಿಗೂ ಅನಂತ ಧನ್ಯವಾದಗಳು ...

ಈ ಸಂಚಿಕೆ ಸಂಯುಕ್ತ ಸಂಚಿಕೆಯಾಗಿದೆ. ಬರುವ ಸಂಚಿಕೆಯು ಈ **ಶತಮಾನದ ಕನ್ನಡ ಕಾವ್ಯ** ಕುರಿತ ವಿಶೇಷ ಸಂಚಿಕೆಯಾಗಿದ್ದು ಅದೂ ಸಂಯುಕ್ತ ಸಂಚಿಕೆಯಾಗಿರುತ್ತದೆ. ಈ ಸಂಚಿಕೆ ಮತ್ತು ಬರುವ ಸಂಚಿಕೆ ಇವೆರಡೂ ಸೇರಿ ನಾವು ಕೊಡಬೇಕಾದ ೪೮೦ ಪುಟಗಳಿಗೆ ಯಾವ ಕೊರತೆಯೂ ಉಂಟಾಗುವುದಿಲ್ಲ ಎನ್ನುವ ವ್ಯವಹಾರದ ಮಾತನ್ನೂ ಇಲ್ಲಿ ಹೇಳಿಬಿಡುತ್ತೇನೆ.

ನಿಮ್ಮ

ಸಂಪಾದಕ

ಈ ಸಂಚಿಕೆಯಲ್ಲಿ .....

ಲಂಕೇಶ್ ...ಸೃಜನಶೀಲತೆ :

ಲಂಕೇಶ್ : ಸ್ವತಃ

ಇನ್ನಷ್ಟು ಸಂವಾದ :

ಈ ಸಂಚಿಕೆಯ ಲೇಖಕರು

- **ಡಾ.ಎಚ್.ಎಸ್.ವೆಂಕಟೇಶಮೂರ್ತಿ**, ಪೋಸ್ಟ್ ಬಾಕ್ಸ್ ನಂ.೮೫೨೩, 'ಸಂಕಲ್ಪ', ಪುಷ್ಪಗಿರಿನಗರ, ಹೊಸಕೆರೆಹಳ್ಳಿ, ನಬಶಂಕರಿ ೩ನೇ ಸ್ಟೇಜ್, ಬೆಂಗಳೂರು-೯೬
- **ಶಂಕರ ಕಟಗಿ**, 'ಬುದ್ಧ ನಿವಾಸ', ಎಲ್.ಐ.ಜಿ.-೭೧, ಹುಡ್ಕೋ ಕಾಲೊನಿ, ಜಲನಗರ, ವಿಜಾಪುರ-೧
- **ಸತ್ಯನಾರಾಯಣ ರಾವ್ ಅಣತಿ**, 'ರಚನಾ', ಶರಾವತಿನಗರ, ಹೊಸಮನೆ ಬಡಾವಣೆ, ಶಿವಮೊಗ್ಗ
- **ಗಜಾನನ ಈಶ್ವರ ಹೆಗಡೆ**, ೧೬, ಶಿವಕುಮಾರ ನಗರ, ಸಿರಿಗೆರೆ, ಚಿತ್ರದುರ್ಗ ಜಿಲ್ಲೆ
- **ಗೌರಿ ಲಂಕೇಶ್**, ನಂ.೯, ಪೂರ್ವ ಆಂಜನೇಯ ಗುಡಿ ರಸ್ತೆ, ಬಸವನಗುಡಿ, ಬೆಂಗಳೂರು -೪
- **ವೈದೇಹಿ** 'ಇರುವಂತಿಗೆ', ಅನಂತನಗರ ೨ನೇ ಹಂತ, ಮಣಿಪಾಲ -೫೭೬ ೧೧೯
- **ಬಿ.ಆರ್.ಲಕ್ಷ್ಮಣರಾವ್**, ಮಾರುತಿ ಸ್ಟುಡಿಯೋ, ಕೆ.ಆರ್. ಬಡಾವಣೆ, ಚಿಂತಾಮಣಿ-೫೬೩೧೨೫ ಕೋಲಾರ ಜಿಲ್ಲೆ
- **ಡಾ.ಶ್ರೀಪಾದ ಶೆಟ್ಟಿ**, 'ಸುನಾದ', ಪ್ರಾಧ್ಯಾಪಕರ ನಿವಾಸಗಳು, ಪ್ರಭಾತ ನಗರ, ಹೊನ್ನಾವರ-೫೮೧೩೩೪
- **ಕೆ.ಸತ್ಯನಾರಾಯಣ**, ೫೦೩/೧, ಸೆಂಟ್ರಲ್ ರೆವೆನ್ಯೂ ಕ್ವಾರ್ಟರ್ಸ್, ೧೫ನೇ ಮುಖ್ಯ ರಸ್ತೆ, ಅಣ್ಣಾನಗರ, ಚೆನ್ನೈ -೬೦೦೦೪೦
- **ಡಾ.ಆರ್.ಕೆ.ಮಣಿಪಾಲ**, ಬಿ -೧೮, ವಿದ್ಯಾನಗರ, ದಾವಣಗೆರೆ -೫೭೭೦೦೫
- **ಚಿಂತಾಮಣಿ ಕೊಡ್ಲೆಕೆರೆ**, ಜೂ. ಟೆಲಿಕಾಂ ಆಫೀಸರ್, ೬ನೇ ಮಹಡಿ, ನ್ಯೂ ಟೆಲಿಕಾಂ ಬಿಲ್ಡಿಂಗ್, ಬೆಂಗಳೂರು -೧೦
- ಡಾ.ಓ.ಎಲ್.ನಾಗಭೂಷಣ ಸ್ವಾಮಿ, ೧೧೫, 'ಅಭ್ಯುದಯ', ೧೩ನೇ ಅಡ್ಡರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು -೨೭
- **ಡಾ. ಸಿ.ಎನ್.ರಾಮಚಂದ್ರನ್**, ನಂ.೫, ಪ್ರೇಮಸಾಗರ ಅಪಾರ್ಟ್‌ಮೆಂಟ್ಸ್, ಮಣ್ಣಗುಡ್ಡ, ಮಂಗಳೂರು -೫೭೫ ೦೦೩
- **ಲಿಂಗದೇವರು ಹಳೆಮನೆ**, ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಲಾಂಗ್ವೇಜಸ್, ಹುಣಸೂರು ರಸ್ತೆ, ಮೈಸೂರು -೫೭೦ ೦೬
- **ಜಿ.ರಾಜಶೇಖರ**, ಜೀವ ವಿಮಾ ನಿಗಮ, ಉಡುಪಿ, ದ.ಕ. ಜಿಲ್ಲೆ
- **ಡಾ.ಟಿ.ಆರ್.ಚಂದ್ರಶೇಖರ**, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಕಮಲಾಪುರ ಅಂಚೆ ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ
- **ಡಾ.ಎಚ್.ಎಸ್.ರಾಘವೇಂದ್ರ ರಾವ್**, ನಂ.೭, 'ಶ್ರೀ ಮಾತಾ', ೧೫ನೇ ಅಡ್ಡರಸ್ತೆ, ೫ನೇ ಹಂತ, ಜೆ.ಪಿ.ನಗರ, ಬೆಂಗಳೂರು -೭೮
- **ಪದ್ಮಿನಿ ಹೆಗಡೆ**, ೧೬, ಶಿವಕುಮಾರ ನಗರ, ಸಿರಿಗೆರೆ, ಚಿತ್ರದುರ್ಗ ಜಿಲ್ಲೆ
- ಲಂಕೇಶ್
- **ಮಹೇಶ್ ತಿಪ್ಪಶೆಟ್ಟಿ**, ಮಹಂತ ನಗರ, ಹುನಗುಂದ, ಬಾಗಲಕೋಟೆ ಜಿಲ್ಲೆ -೫೮೭೧೧೮
- ಪ್ರಹ್ಲಾದ ಅಗಸನಕಟ್ಟೆ, ಸಾಮಾಜಿಕ ಕಾರ್ಯಕರ್ತರು, ಕರ್ನಾಟಕ ಮೆಡಿಕಲ್ ಕಾಲೇಜು, ಹುಬ್ಬಳ್ಳಿ
- **ಜಿ.ಪಿ.ಬಸವರಾಜು**, ಮುಖ್ಯ ಉಪಸಂಪಾದಕರು, ಪ್ರಜಾವಾಣಿ, ನಂ.೭೫, ಮಹಾತ್ಮಾ ಗಾಂಧಿ ರಸ್ತೆ ಬೆಂಗಳೂರು
- **ಡಾ.ಪುರುಷೋತ್ತಮ ಬಿಳಿಮಲೆ**, ಎ-೩೫, ಮಾಸೂದ್‌ಪುರ, ವಸಂತಕುಂಜ್, ನವದೆಹಲಿ-೧೧೦೦೭೦

ಸಂಪಾದಕನ ಟಿಪ್ಪಣಿಗಳು ...

ಲಂಕೇಶರೊಂದಿಗಿನ ನನ್ನ ಜಗಳ ...

ಲಂಕೇಶ್...

ಅಡಿಗ - ನೀವು - ಅನಂತಮೂರ್ತಿ - ದೇಸಾಯಿ - ಸಾಡಿಗ - ಟಿ.ಜಿ. ರಾಘವ ...ಎಷ್ಟೊಂದು ಲೇಖಕರೆಲ್ಲ ಸೇರಿ ಬರೆಯುತ್ತ - ಚರ್ಚಿಸುತ್ತ, ಒಂದು ಏಕತ್ರ ಸಾಹಿತ್ಯದ ಭಿತ್ತಿಯಂತೆ - ಒಂದು ಫಲಕದಂತೆ ಕಂಡಿದ್ದಿರಿ ನಮ್ಮಂಥವರಿಗೆ... ನಿಮ್ಮ ಕಾವಿನಲ್ಲಿ ಬೇಯದ ನಾವುಗಳು ನಿಮ್ಮನ್ನು ಕುರಿತು - ಅಡಿಗ ಮಠ - ಎಂದು ಬಾಯಲ್ಲಿ ಕಾರದ ಮಂಡಕ್ಕಿ ಕುರುಕಿದ್ದೆವು. ಇನ್ನು ನಿಮಗಿಂತ ಹಿರಿಯ ಲೇಖಕರು - ನಿಮ್ಮಿಂದ ಗುಮ್ಮಿಸಿಕೊಂಡವರು - ಅಡಿಗ ಮಠ - ಎನ್ನುತ್ತ ತಮ್ಮ ಕೃತಕ ಹಲ್ಲುಗಳನ್ನು ಕಟಕರಿಸುತ್ತಿದ್ದರು ...

ಅಲ್ಲಿ ಮುಂಬಯಿಯಲ್ಲಿ - ಗೋವೆಯಲ್ಲಿ - ಕೊಲ್ಹಾಪುರದಲ್ಲಿ, ಇಲ್ಲಿ ಮೈಸೂರಿನ ಚಾಮುಂಡಿ ಬೆಟ್ಟದ ಬದಿಯಲ್ಲಿ - ಬೆಂಗಳೂರು - ಸಾಗರ - ಉಡುಪಿಗಳಲ್ಲಿ, ಅಲ್ಲಿ ಧಾರವಾಡದ ಆಲದ ಮರಗಳ ನೆರಳುಗಳ ನಡುವಿನ ಸಂದುಗಳಲ್ಲಿ - ಅಡಿಗ - ಅನಂತಮೂರ್ತಿ - ಲಂಕೇಶ್... ನವ್ಯದ ಸಸಿಗಳನ್ನು ನೆಡುತ್ತ, ಅವುಗಳಿಗೆ ನೀರು ಮೊಗೆದು ಚುಕಿಪಡುತ್ತ, ಅವುಗಳ ಚಿಗುರು ತುರುಸಿನ ನೋಟದಿಂದ - ಗ್ಲಾಸಿಗೆ ಹೊಯ್ಯುವ ಬೀರಿನಲ್ಲಿನ ಬುದ್ಬುದದಂತೆ - ಖುಶಿ ಹೊಮ್ಮುತ್ತ ...ವಗರು ವಾಸನೆಯಾಗಿ ಸುತ್ತಲೆಲ್ಲ ಹರಡಿದವರು ನೀವುಗಳೆಲ್ಲ ... ಮಹಾತ್ಮಾಗಾಂಧಿ ರಸ್ತೆ - ಸೆಂಟ್ರಲ್ ಕಾಲೇಜುಗಳನ್ನು ಗೆದ್ದು ವಶಪಡಿಸಿಕೊಂಡು, ಬೆಳಗಾಗೆದ್ದರೆ ನಿಮ್ಮ ಸಾಮ್ರಾಜ್ಯದ ತುತ್ತೂರಿಯ ಧ್ವನಿ ಕೇಳಿಸುತ್ತ ... ಅಲ್ಲಿ ಸಾಗರದ ಮಲೆಘಟ್ಟ ಸೋಪಾನದ ತುದಿಯಲ್ಲಿ ಸಾಕ್ಷಿಯ ಧ್ವಜ ನೆಟ್ಟಿರಿ ....

ಲಂಕೇಶ್...

ಇಷ್ಟೆಲ್ಲ ಮಾಡುವುದರಲ್ಲಿ ಹುಂಗುದೊರೆಮ ತೊಡಗಿದವರು ನೀವು ... ಆಗ ಬೆನ್ನಟ್ಟಿ ಬಂದ ಕೀರ್ತಿಯೊಂದಿಗೆ ವೀರಾವೇಶದಿಂದ ಕಾದಿ ನವ್ಯದ ಮುಗುಳು ಕಾಪಾಡಿದಿರಿ. ಮೊದಲಿನಿಂದ ಹರಿದು ಬಂದದ್ದೆಲ್ಲ ಪವಿತ್ರವಾದ ಅದೊಂದೇ ಒಂದು ಎಂದು ಸಾರುತ್ತಿದ್ದ ಶಂಕರರನ್ನು ಮಿಥ್ಯಾವಾದಿಯೆಂದು ಹೆಸರಿಸಿ, ನಾವು ಬೇರೆಯೇ ಎನ್ನುವ ದ್ವೈತದ ತುರುಸು ತೋರಿದಿರಿ.

ಆದರೆ ... ಬಿರುಕು ಮೂಡಿದ್ದು ಹೇಗೆ ಲಂಕೇಶ್ ...

ನಾನು ನಿಮ್ಮನ್ನು ಕೇಳಬೇಕೆಂದುಕೊಳ್ಳುತ್ತಲೇ ಕೇಳಲಾರದೇ ಉಳಿದಿದ್ದೇನೆ ... ನೀವು ನೆಟ್ಟ ಸಸಿ ರೆಂಬೆಯೊಡೆಯದೇ - ಒಂಟಿ ದೇಟಿನ ಗಿಡವಾಗಿ ಬೆಳೆಯಿತೆ? ... ಅದರ ತುದಿಯಲ್ಲಿನ ಹೂವುಗಳು ಮಾತ್ರ ಕಾಯಿ ಕಟ್ಟಿದವೆ? ನೆರಳಿಲ್ಲದ ಗಿಡವಾಯಿತೇ ಅದು ...? ಕಣ್ಣು ತೆರೆಸಿದ ಬೆಳಕು ಕಣ್ಣು ಕುಕ್ಕಿದ್ದು ಹೇಗೆ ಲಂಕೇಶ್...

ಆ ನಂತರ...

ಬಿರಿದು ತುಂಡಾಗಿ, ನೀವು -ತೇಜಸ್ವಿ -ಚಂಪಾ...ಸೇರಿ ಒಕ್ಕೂಟ ಕಟ್ಟಿದಿರಿ. ಮಹಾತ್ಮಾ ಗಾಂಧಿರಸ್ತೆಯ ಹುಂಜದ ಪುಕ್ಕಕ್ಕೆ ಬೆಂಕಿ ಇಟ್ಟಿರಿ...ಧರ್ಮಸ್ಥಳದ ಸಮ್ಮೇಳನದಲ್ಲಿ ಸವ್ಯದ ನಾಯಕನಿಗೆ ತಣ್ಣೀರು ಉಗ್ಗಿದಿರಿ...ಬಂಡಾಯದ ದಂಡು ಕಟ್ಟಿ, ಮೇಜರನ ಪಟ್ಟ ಕಿತ್ತುಕೊಂಡಿರಿ...ನಾಡಿನ ಉದ್ದಗಲಕ್ಕೆ, ಕೈಗೆ ಸಿಕ್ಕ ನಾನಾ ನಮೂನಿಯ ಬೀಜಗಳನ್ನು ಚೆಲ್ಲಿದಿರಿ...ಎಸೆದ ಬೀಜಗಳೆಲ್ಲ ಹುಸಿಯದೆ ಮೊಳೆತು...ಎಂಥ ಸಮೃದ್ಧಿಯ ಬೆಳೆ ಬಂದಿತಲ್ಲ! ವೈವಿಧ್ಯದ ಸಸ್ಯ ಸಂಗೋಪನೆ...ವಶಿಷ್ಠನ ಮೇಲಿನ ವಿಶ್ವಾಮಿತ್ರನ ಕೋಪದ ಸ್ಥಾಯಿಯಲ್ಲಿ- 'ಎಂಥ ಚಂದದ ಬಳ್ಳಿ ಚೆಲ್ಲುವರಿದಿಹುದಿಲ್ಲಿ !'...ಬಂಡಾಯ ಸಾಹಿತ್ಯ ಸಂಘಟನೆ -ರೈತ ಚಳುವಳಿ -ಗೋಕಾಕ ವರದಿಯ ಪರವಾದ ಹೋರಾಟ...ಎಷ್ಟೊಂದು ಸಾಮಾಜಿಕ ಕ್ರಿಯಾಶೀಲತೆ ನೆಲೆಗೊಂಡದ್ದು ಅಲ್ಲಿ !...ಆಹಾ ! ಆಗಲೇ ನೀವು ಪ್ರಗತಿರಂಗದ ಬಲೂನನ್ನೂ ಆಕಾಶಕ್ಕೆ ಹಾರಿಬಿಟ್ಟಿರಿ...

ಆದರೆ ಮತ್ತೆ ಬಿರುಕು ಮೂಡಿದ್ದು ಹೇಗೆ ಲಂಕೇಶ್...

ನಾನು ನಿಮ್ಮನ್ನು ಕೇಳಬೇಕೆಂದುಕೊಳ್ಳುತ್ತಲೇ ಕೇಳಲಾರದೇ ಉಳಿದಿದ್ದೇನೆ ... ನೀವು ಬೆಳೆಸಿದ ಅಪಾರ ಸಸ್ಯ ಸಂಪತ್ತು ನಿಮಗೆ ಕಳೆ -ಕಸವೆಂದು ತೋರಿತೇ?...ಅಥವಾ ನೀವು ನೆಟ್ಟ ಸಸಿಗಳು ಅಪಾರ ರೆಂಬೆಗಳನ್ನು ಚಾಚಿ ಬೆಳೆದು - ಆ ಒಂದೊಂದು ರೆಂಬೆ ರೆಂಬೆಯ ಮೇಲೆ ಗಿಳಿ ಗೊರವಂಕ ಆದಿಯಾಗಿ ನಾನಾ ಬಣ್ಣದ ಹಕ್ಕಿಗಳು ಅಪಾರ ಸಂಖ್ಯೆಯಲ್ಲಿ ಬಂದು ಕುಂತು-ತಮ್ಮ ತಮ್ಮ ದನಿಯಲ್ಲಿ, ತಮ್ಮ ಮನದಣಿಯೆ ಹಾಡತೊಡಗಿದಾಗ...ನಿಮ್ಮ ಧ್ವನಿಗೆ ಭಂಗ ಬಂದಂತಾಯಿತೆ ಲಂಕೇಶ್?...ಅಥವಾ ನಿಮ್ಮ ಏಕಾಗ್ರತೆಯ ಸೃಷ್ಟಿಕ್ರಿಯೆಯ ಹುತ್ತಗಟ್ಟುವ ಕ್ರಿಯೆಗೆ ಈ ಹಕ್ಕಿಗಳ ಹಾಡುಗಳು ಭಂಗ ತಂದವೆ?...ಏನಾಯಿತು ಲಂಕೇಶ್... ಬಂಡಾಯ ಡಂಬಾಯವಾಗಿ -ಪರಿಸರ ಚಳುವಳಿಗಳು ಹಿಮ್ಮುಖದ ಚಲನೆಯಾಗಿ ಕಂಡು- ರೈತ ಚಳುವಳಿಯ ಸಕೀಲ ಸಂಬಂಧ ಸಡಿಲುಗೊಂಡದ್ದು ಏಕೆ? ಎಲ್ಲಿ ...ನೀವು ಹಾರಿಬಿಟ್ಟ ಆ ಪ್ರಗತಿರಂಗದ ಬಲೂನು...!

ಆಗ ಮತ್ತೆ ಹಚ್ಚಿದಿರಿ ಜಾಗೃತಿಯ ಹಿಲಾಲು...

ಪಾರ್ಶ್ವವಾಯು ಪೀಡಿತ ಅಡಿಗರನ್ನು ಮತ್ತೆ ಕರೆತಂದಿರಿ ರಂಗಮಂಟಪಕೆ!..ಸಾವಿನ ಅಂಚಿನಲ್ಲಿ ನಿಂತ ಅಡಿಗರು -ಸಾಹಿತ್ಯದ ಶ್ರೇಷ್ಠತೆ ನನ್ನ ಜೀವನ್ಮರಣದ ಪ್ರಶ್ನೆ ಎಂದು ಘೋಷಿಸಿದಾಗ ಅವರ ಪಕ್ಕದಲ್ಲಿ ಕುಳಿತ ನೀವು ರೋಮಾಂಚನಗೊಂಡಂತೆ ಸಂಭ್ರಮಿಸಿದಿರಿ...ಆಗಿನ ನಿಮ್ಮ ಸಂಭ್ರಮ ನನ್ನ ಕಣ್ಣಿಗೆ ಕಟ್ಟಿಂದಂತಿದೆ...

ಆದರೆ ...ಮತ್ತೆ ಬಿರುಕು ಕಾಣಿಸಿಕೊಂಡಿತಲ್ಲ ಲಂಕೇಶ್...

ಸಾಹಿತ್ಯದ ಶ್ರೇಷ್ಠತೆಗೆ ಹಾತೊರೆದ ನಿಮ್ಮದೇ ಸ್ವಂತದ ಪತ್ರಿಕೆಯಲ್ಲಿ, ಎಷ್ಟೊಂದು ಎಳೆಯರ ಒಳ್ಳೆಯ ಕೃತಿಗಳನ್ನು-ಕೊಂಬು ಬೆಳೆಸಿಕೊಂಡ ನಿಮ್ಮ ಗರಡಿಯ ಆಳುಗಳು, ಕೆಂಪು ಬಟ್ಟೆಯನ್ನು ಧರಿಸಿದವರನ್ನು ಕಂಡ ಇರುಕಲು ಎತ್ತುಗಳಂತೆ ಗುಟುರು ಹಾಕಿ ಚಿಂದಿ ಮಾಡಲು ನುಗ್ಗಿದರಲ್ಲ...ಕೃತಿಗಳಲ್ಲಿ ಇಲ್ಲದ ಸಂಗತಿಗಳನ್ನು ಇವೆ ಎಂದು ದಾಖಲಿಸುತ್ತ, ಅಂಥ

ಸಂಗತಿಗಳನ್ನು ಉಲ್ಲೇಖಿಸುತ್ತ ಕೃತಿಗಳ ಅಪಕರ್ಷಣಗೈಯುವ ಕೆಲಸ ಮಾಡಿದ್ದು ನಿಮ್ಮ ಆಶೀರ್ವಾದದಿಂದಲೇ ಅಲ್ಲವೇ? ನಿಮ್ಮ ಗರಡಿಯ ಆಳುಗಳು ನಿಮ್ಮ ಮಾತಿಲ್ಲದೆ ಹಾಗೆ ನಡೆದುಕೊಂಡಾವೆಯೇ...?

ಈ ಬಿರುಕು ಹೇಗೆ ಬಂದಿತು ಲಂಕೇಶ್...

ನಾನು ನಿಮ್ಮನ್ನು ಕೇಳಬೇಕೆಂದುಕೊಳ್ಳುತ್ತಲೇ ಕೇಳಲಾರದೇ ಉಳಿದುಬಿಟ್ಟೆ...

ನನಗನ್ನಿಸುತ್ತದೆ ಲಂಕೇಶ್...

ನೀವು ಕನ್ನಡ ಸಾಹಿತ್ಯ ಲೋಕದ ಯಯಾತಿ!

ಎಲ್ಲ ಸುಂದರವಾದ - ಎಲ್ಲ ಶ್ರೇಷ್ಠವಾದದ್ದನ್ನು ಭೋಗಿಸುವ ಯೌವ್ವನವನ್ನು ಸದಾ ಜಾಗೃತವಾಗಿಟ್ಟುಕೊಳ್ಳಲು ಅಪೇಕ್ಷಿಸಿದಿರಿ. ನಿಮ್ಮ ಯೌವ್ವನ ಇಳಿಮುಖಗೊಳ್ಳುತ್ತಿದೆ ಎಂಬ ಸಂಶಯದಿಂದಲೇ ನೀವು ಉದ್ವಿಗ್ನರಾಗುತ್ತಿದ್ದಿರಿ....'ಪುರು'ಗಳ ಯೌವ್ವನವನ್ನು ಕಸಿದುಕೊಳ್ಳಲು ಹಾತೊರೆಯುತ್ತಿದ್ದಿರಿ...

o

o

ನೆನಪಿದೆಯೆ ನಿಮಗೆ..

ಮಲ್ಲಾಡಿಹಳ್ಳಿಗೆ ಪ್ರಗತಿರಂಗದ ಸಭೆಗೆ ಬಂದಾಗ, ಮುಂದಿನ ಚನ್ನಗಿರಿಯ ಸಭೆಯಲ್ಲಿ ನಿಮ್ಮೊಂದಿಗೆ ನನಗೂ ಭಾಗವಹಿಸಲು ಹೇಳಿದ್ದು; ನಾನು ಅಲ್ಲಿ ನಿಮ್ಮ ಸರ್ಕಾರಗಳು ಶಿಕ್ಷಣದ ಬಗ್ಗೆ ಹೊಂದಿರುವ ಉಡಾಫೆಯ ಬಗೆಗೆ ಏನೋ ನಾಲ್ಕು ಮಾತನಾಡಿದ್ದು; ಅದಾದ ಮೇಲೆ ಮುಂದೆ ಒಂದೆರಡು ಸಲ ಬೆಂಗಳೂರಿನಲ್ಲಿ- ದಾವಣಗೆರೆಯಲ್ಲಿ - ಒಂದೆರಡು ನಿಮಿಷಗಳ ಭೇಟಿ - ನಮಸ್ಕಾರ ... ನಮಸ್ಕಾರ ... ಯಾವಾಗ ಬಂದಿರಿ ... ನೀವು ... ಆಯ್ತು. ಹೀಗೇ ಸಭಾಂಗಣಕ್ಕೆ ಹೋಗುವ ಮೊದಲು... ಬಾಗಿಲಲ್ಲಿ... ಆಗೆಲ್ಲಿ ಕೇಳಲಾಗುತ್ತದೆ ಹೇಳಿ - ನಿಮ್ಮನ್ನು ಕೇಳಬೇಕೆಂದಿದ್ದ ಬಿರುಕಿನ ಪ್ರಶ್ನೆಯನ್ನು?...

ಆಮೇಲೆ...೧೯೯೯ರಲ್ಲಿ - ನನ್ನ ದೇಶಗತಿ ಕಥಾಸಂಕಲನದ ಕೆಲಸಕ್ಕೆ ಬೆಂಗಳೂರಿಗೆ ಬಂದಿದ್ದೆ. ನೀವು ಅನಾರೋಗ್ಯದಿಂದ ಆಸ್ಪತ್ರೆಗೆ ಸೇರಿ ಆವಾಗತಾನೇ ಮನೆಗೆ ಮರಳಿದ್ದಿರಿ. ನಿಮ್ಮನ್ನು ಭೆಟ್ಟಿಯಾಗಿ ನಿಮ್ಮ ಆರೋಗ್ಯದ ಬಗೆಗೆ ವಿಚಾರಿಸಬೇಕೆನ್ನಿಸಿತು....ನಿಮ್ಮ ಕಚೇರಿಗೆ ಫೋನ್ ಮಾಡಿದೆ. ನಿಮ್ಮ ಸುತ್ತ ಇರುತ್ತಿದ್ದ ನಿಮ್ಮ ಗರಡಿಯ ಆಳುಗಳಲ್ಲಿ ಒಬ್ಬ ಫೋನನ್ನು ತೆಗೆದುಕೊಂಡ...ನಾನು- ಲಂಕೇಶರ ಆರೋಗ್ಯ ವಿಚಾರಿಸಲು ಬರಬೇಕೆಂದುಕೊಂಡಿದ್ದೇನೆ- ಎಂದು ತಿಳಿಸಿದೆ. ತಕ್ಷಣವೇ ಆ ಗರಡಿಯ ಆಳು ನನಗೆ ಉತ್ತರಿಸಿದ - ಲಂಕೇಶರ ಆರೋಗ್ಯ ಈಗ ಚೆನ್ನಾಗಿದೆ...ನೀವೇನೂ ಬರುವುದು ಬೇಡ !...ನಿಮ್ಮ ಗರಡಿಯ ಆಳಿನ ಈ ವಿನಂತಿಯನ್ನು ಕೇಳಿದ ಮೇಲೆ ನೀವು ಎಂತಹ ಅದ್ಭುತವಾದ security ಯನ್ನು ಕಟ್ಟಿಕೊಂಡಿದ್ದೀರಿ ಎನ್ನುವುದು ಮನದಟ್ಟಾಯಿತು...ಪುರು ಯಯಾತಿಗಳು...! ಆಮೇಲೆ ನಾನು ನಿಮ್ಮನ್ನು ಎಂದೂ ಭೆಟ್ಟಿಯಾಗುವ ಬಗ್ಗೆ ಯೋಚಿಸಲಿಲ್ಲ.

ಅಂತೂ....ನಿಮ್ಮನ್ನು ಕೇಳಬೇಕೆಂದುಕೊಂಡಿದ್ದ ಬಿರುಕಿನ ಬಗೆಗಿನ ನನ್ನ ಪ್ರಶ್ನೆ

ನನ್ನಲ್ಲಿಯೇ ಉಳಿಯಿತು...

ಆದರೆ ಅದರ ಉತ್ತರ ನನ್ನಲ್ಲಿ ಹೊಳೆಯದಿರಲಿಲ್ಲ...

ಯಯಾತಿ ತೀವ್ರವಾದ ವ್ಯಕ್ತಿವಾದಿ!

ಆತ ಎಷ್ಟರ ಮಟ್ಟಿಗೆ ಬಿರುಕುಗೊಂಡ ವೈಯಕ್ತಿಕ ಪ್ರಜ್ಞೆಯವನೆಂದರೆ - ಅವನಲ್ಲಿ ಶರೀರ - ಮನಸ್ಸುಗಳು ಕೂಡ ಪರಸ್ಪರ ಬಿರುಕುಗೊಂಡು ಬೇರ್ಪಟ್ಟಿದ್ದವು! ದೇಹದ ಅನುಭೋಗ ದೇಹಕ್ಕೆ ಮಾತ್ರ ಅಂದುಕೊಂಡವನವನು... ಅಂತಲೇ ಶರೀರದ ಮುಪ್ಪನ್ನು ಮಾನಸಿಕ ಕ್ರಿಯಾಶೀಲತೆಯಿಂದ ಸರಿದೂಗಿಸಿಕೊಳ್ಳುವುದರ ಸಾಧ್ಯತೆಯನ್ನು ನಂಬಲಾರದವನು. ಇಂಥ ಧಗಧಗಿಸುವ ವ್ಯಕ್ತಿವಾದವು ಕರಾರುಸಹಿತವಾಗಿ ಮಾತ್ರ ಸಮಷ್ಟಿಯೊಂದಿಗೆ ಸಹಯೋಗ ಸಾಧಿಸಬಲ್ಲದು. ಯಾವಾಗ ಕರಾರು ಭಗ್ನಗೊಳ್ಳುತ್ತದೆಯೋ ಆವಾಗ ಬಿರುಕು ಕಾಣಿಸಿಕೊಳ್ಳದಿರದು....

ಲಂಕೇಶ್...

ಬೋದಿಲೇರ್ ನಿಮಗೆ ಅತ್ಯಂತ ಪ್ರಿಯನಾದವನು. ನಿಮ್ಮ ವ್ಯಕ್ತಿವಾದೀ ನಿಲುವಿಗೆ ಅಷ್ಟೇ ಅಲ್ಲ - ನಿಮ್ಮ ತಳಮಳದ ಮನಸ್ಸಿಗೆ - ನಿಮ್ಮ ಕುದಿಯುತ್ತಿರುವ ಜೀವಕ್ಕೆ ಅಂತರಂಗದ ಸಂಗಾತಿಯಾಗಿ ಒದಗಿಬಂದವನು ಈ ಬೋದಿಲೇರ್... ನೀವು ಬಾದಿಲೇರ್‌ನ ಪಾಪದ ಹೂವುಗಳನ್ನು ಭಾಷಾಂತರಿಸಿದ ಕ್ರಿಯೆ ಕೇವಲ ಆಕಸ್ಮಿಕವಾದುದೆಂದು ನಾನು ಭಾವಿಸುವುದಿಲ್ಲ... ಆ ಪಾಪದ ಹೂವುಗಳು ನಿಮ್ಮ ಮನಸ್ಸಿನ ತಳಮಳವನ್ನು ಬಿಂಬಿಸುವ ನಿಗಿ ನಿಗಿ ಕೆಂಡಗಳು... ಬಾದಿಲೇರ್ ನಿಮ್ಮ ಮನಸ್ಸಿನ ತಳಮಳಗಳನ್ನೇ ಹೇಳಿದವನು !

ಇಂಥ ವ್ಯಕ್ತಿವಾದೀ ಪ್ರತಿಭೆಯೇ ಅನನ್ಯತೆಯನ್ನು ಸಾಧಿಸಬಲ್ಲದು... ಸುತ್ತಲಿದ್ದ ಎಲ್ಲದರೊಂದಿಗಿನ ಢಕ್ಕಾ - ಢಿಕ್ಕಿಯಿಂದ, ಅವೆಲ್ಲವುಗಳಿಂದ ಯಾವತ್ತಿಗೂ ಭಿನ್ನವಾಗಿ ಉಳಿಯುವ ಪ್ರತಿಭೆ ನಿಮ್ಮದು... ಎಲ್ಲ ನವ್ಯರಂತೆ ನೀವೂ ಅಪ್ಪಟ ದ್ವೈತ ಮನೋಭಾವದ ಲೇಖಕರು... ಯಾವತ್ತಿಗೂ 'ಅದರಿಂದ' ನಾನು ಬೇರೆ ಎಂದೆನ್ನುವವರು.

ನೀವು ಬದುಕು - ಬರೆಹಗಳೆಲ್ಲದರಲ್ಲಿಯೂ ಪ್ರಯೋಗಗಳನ್ನು ನಡೆಸುತ್ತ ನಿಮ್ಮ ವಿಶಿಷ್ಟತೆಯನ್ನು ನಿಮಗೆ ನೀವೇ ಮನಗಾಣುತ್ತ ಬಂದವರು. ನಿಮ್ಮ ಪ್ರಯೋಗಗಳ ಸಮಷ್ಟಿಯ ಸ್ವರೂಪವು ಅಂತಿಮವಾಗಿ ನಿಮ್ಮ ವ್ಯಕ್ತಿತ್ವದಲ್ಲಿಯೇ ಲೀನಗೊಳ್ಳಬೇಕಾದಂತಹದು.

o

o

ಲಂಕೇಶ್ ...

ನಿಮಗೆ ಇಷ್ಟವಾಗಬಹುದಾದ, (ಬಾದಿಲೇರ್‌ನ ಕಾವ್ಯ ಮತ್ತು ವ್ಯಕ್ತಿತ್ವವನ್ನು ಇಡಿಯಾಗಿ ಇಷ್ಟಪಟ್ಟವರು ನೀವು...), ನೀವು ಅನುವಾದಿಸಿರುವ ಬಾದಿಲೆನ 'ಸದಾ ಕುಡಿದಿರು' ಎನ್ನುವ ಕವಿತೆಯನ್ನು ಓದಲಾ?... ಓದುತ್ತೇನೆ ಕೇಳಿ -

ಮನುಷ್ಯ ಸದಾ ಕುಡಿದ ಸ್ಥಿತಿಯಲ್ಲಿರಬೇಕು. ಅದೊಂದೇ - ಒಂದೇ ಪರಿಹಾರ ಸಮಸ್ಯೆಗೆ ; ಕಾಲನ ಅಸಹ್ಯ ಭಾರ ನಿನ್ನ ಭುಜಗಳನ್ನು ಮುರಿಯದಂತೆ, ನಿನ್ನ ತಲೆಯನ್ನು ತಗ್ಗಿಸದಂತೆ ನೋಡಿಕೊಳ್ಳುವುದಕ್ಕಾಗಿ, ಬಿಡದೆ ಸುಮ್ಮನೇ ಕುಡಿಯುತ್ತಿರು.

ಏನನ್ನು ಕುಡಿಯುವುದು ? ವೈನ್, ಕಾವ್ಯ, ಋಜುತ್ವ, ಯಾವುದನ್ನಾದರೂ ; ಕುಡಿಯಬೇಕು ಮಾತ್ರ.

ಕುಡಿದು ಎಚ್ಚರಗೊಂಡಾಗ, ಅರಮನೆಯ ಮೆಟ್ಟಿಲ ಮೇಲೆ, ಹೊಂಡದ ಹಸಿರು ದಡದ ಮೇಲೆ, ದರಿದ್ರ ಒಬ್ಬಂಟತನದ ನಿನ್ನ ರೂಮಲ್ಲಿ ನಿನಗೆ ಎಚ್ಚರವಾದಾಗ ಕೇಳು - ಗಾಳಿಯನ್ನ, ಅಲೆಗಳನ್ನ, ನಕ್ಷತ್ರಗಳನ್ನ, ಹಕ್ಕಿಗಳನ್ನ, ಗಡಿಯಾರಗಳನ್ನ, ಸದ್ದುಮಾಡುವ, ಕೂಗಾಡುವ, ನಡೆದಾಡುವ, ಹಾಡುವ ಎಲ್ಲದನ್ನ ಕೇಳು - ಆಗ ವೇಳೆ ಎಷ್ಟೆಂದು ಕೇಳು ; ಗಾಳಿ, ಅಲೆ, ನಕ್ಷತ್ರ, ಹಕ್ಕಿ, ಗಡಿಯಾರ ಇವೆಲ್ಲ ಆಗ ಉತ್ತರಿಸುತ್ತವೆ : ''ಇದು ಕುಡಿಯುವ ವೇಳೆ, ಕಾಲಕ್ಕೆ ಅನ್ಯಾಯವಾಗಿ ಹುತಾತ್ಮನಾಗುವ ಬದಲು ಕುಡಿ, ಬಿಡದೆ ಕುಡೀ. ವೈನ್, ಕಾವ್ಯ, ಋಜುತ್ವ, ನಿನಗೆ ಇಷ್ಟ ಬಂದದ್ದನ್ನು ಕುಡಿ''.

ಎಷ್ಟು ಚೆನ್ನಾಗಿ ಹೇಳಿದ್ದಾನೆ ನೋಡಿ... ಖಂಡಿತವಾಗಿ ನಿಮ್ಮ ಪರವಾಗಿಯೇ ಬಾದಿಲೆ ಇದನ್ನು ಹೇಳುತ್ತಿದ್ದಂತಿದ್ದಾನೆ.... ವೈನ್ - ಕಾವ್ಯ - ಋಜುತ್ವವನ್ನು ಸದಾ ಕುಡಿಯುತ್ತಿರಬೇಕು! (ಇನ್ನೊಂದು ಸೇರಿಸಬೇಕಿದ್ದಿತು : ಹೆಣ್ಣು! ... ಬಾದಿಲೇರ್ ಯಾಕೋ ಬಿಟ್ಟಿದ್ದಾನೆ).

O

O

ಲಂಕೇಶ್ ...

ನಿಮಗಿಷ್ಟವಾಗದ ಮನುಷ್ಯನ ದೌರ್ಬಲ್ಯವೆಂದರೆ - ಹಿಪಾಕ್ರಸಿ...

ಆದರೆ ಒಟ್ಟು ಸಮಾಜದಲ್ಲಿ operative ಆಗಿರುವ ಸಭ್ಯತೆಯ ಹಿಂದೆ ಇರುವುದು ಈ ಹಿಪಾಕ್ರಸಿಯೇ! ಸಾಮಾಜಿಕ ಸಭ್ಯತೆಯು ಹಿಪಾಕ್ರಸಿಯನ್ನು ಒಂದು practical ಮೌಲ್ಯವನ್ನಾಗಿಸಿ ಬಿಟ್ಟಿದೆ. ನೀವು ಇದರಿಂದ ಖತಿಗೊಂಡದ್ದು ಅಚ್ಚರಿಯಲ್ಲ... ಆದರೆ ತಮಾಷೆಯ (ನಿಜವಾಗಿಯೂ ವಿಷಾದದ) ಸಂಗತಿಯೆಂದರೆ, ನೀವು ಹಿಪಾಕ್ರಸಿಯನ್ನು ಹೊಡೆಯಲು ಉದ್ದೇಶಿಸಿ ನಿಮ್ಮ ಕೃತಿಗಳ ದಂಡವನ್ನು ಬೀಸಿ ಬೀಸಿ ಹೊಡೆದದ್ದು ಸಾಮಾಜಿಕ ಸಭ್ಯತೆಯನ್ನಾಗಿತ್ತು. ಈ ಸಾಮಾಜಿಕ ಸಭ್ಯತೆ ಕೇವಲ operative ಸಭ್ಯತೆಯಾಗಿರದೇ ಬಹಳಷ್ಟು ಸಲ ನಿಜವಾದ ಸಾಮಾಜಿಕ ಸಭ್ಯತೆಯೇ ಆಗಿದ್ದಿತು...

ನೀವು ಈ ಸಾಮಾಜಿಕ ಸಭ್ಯತೆಯನ್ನು ಘಾಸಿಗೊಳಿಸಲು ಅನೇಕಸಲ evilನ್ನು ಆವಾಹಿಸುತ್ತಿದ್ದಿರಿ. ಕನ್ನಡ ಸಾಹಿತ್ಯದಲ್ಲಿ evilನ್ನು ಅತ್ಯಂತ ಕ್ರಿಯಾಶೀಲವಾಗಿ ಬಳಸಿದ ಲೇಖಕರು ನೀವು... ಬಾದಿಲೇರ್‌ನಂತೆ, ನೀವೂ ಕೂಡ ನಿಮ್ಮ ಬಲ ಹಸ್ತದಲ್ಲಿ ಸೇಟನ್ನಿನ ಎಡ ಹಸ್ತವನ್ನು ಅದುಮಿ ಹಿಡಿದುಕೊಂಡು ಹೆಜ್ಜೆ ಹಾಕಿದವರು...

ಲಂಕೇಶ್...

ನೀವು ಪಶ್ಚಿಮದ ಲಿಬರಲ್ ವ್ಯಕ್ತಿವಾದೀ ತತ್ವವನ್ನು ನಂಬಿದವರಾದರೂ ಅದಕ್ಕೆ ನಿಮ್ಮನ್ನು ಸಂಪೂರ್ಣವಾಗಿ ತೆತ್ತುಕೊಂಡವರಲ್ಲ. ಅದನ್ನು ಭಾರತೀಯ ಅಂತರಂಗದ ಕೆಚ್ಚಿನೊಂದಿಗೆ ಮಿಳಿತಗೊಳಿಸಿಕೊಂಡವರು. ಭಾರತೀಯ ಅಂತರಂಗವು, ಆಳದಲ್ಲಿ ಲೌಕಿಕ 'ಆಳ್ವಿಕೆ' ಯನ್ನು (governance) ಧಿಃಕರಿಸುವಂತಹದು.(ಪಶ್ಚಿಮದ ಅಂತರಂಗವು ಡೆಮಾಕ್ರಸಿಯನ್ನು ಬೋಧಿಸುವುದಾದರೂ ಅದು ಆಳುವಿಕೆಯ ವಿಶೇಷ ಅಸ್ತಿತ್ವವನ್ನು ಗುರುತಿಸಿಕೊಂಡಿರುವಂತಹದು ಮತ್ತು ಅದಕ್ಕೆ ಪೂರಕವಾಗಿ ಚಿಂತಿಸುವಂತಹದು)... ನೀವೂ ಎಲ್ಲ ಆಳುವಿಕೆಯ ಬಗೆಗೆ-ವ್ಯವಸ್ಥೆಯ ಬಗೆಗೆ ಸದಾ ಅಸಹನೆ ತೋರಿದವರು. ನಿಮ್ಮ ಅಸಹನೆ ಅನೇಕಸಲ ಡೆಮಾಕ್ರಸಿಯನ್ನು ಕೂಡ ಸಹಿಸದ ನಿಲುವಿನಂತೆ ವ್ಯಕ್ತವಾದದ್ದಿದೆ.

ಲಂಕೇಶ್...

ನಿಮ್ಮಷ್ಟಕ್ಕೆ ನೀವು ಇರುವಂತಿದ್ದರು ಕೂಡ...

ನಿಮ್ಮ ಹಿರಿಯರಿಗೆ-ಸಮಕಾಲೀನರಿಗೆ -ಮತ್ತು ನಮ್ಮಂತಹ ಕಿರಿಯರಿಗೆ... ಸಾಹಿತ್ಯ - ಸಂಸ್ಕೃತಿಗಳ ಲೋಕದಲ್ಲಿದ್ದ ಎಲ್ಲರಿಗೂ -ನೀವು ಸದಾ ಸವಾಲಾದವರು...

ನಿಮ್ಮ ಸ್ಪಟಿಕದ ಶಲಾಕದಂತಹ -ಪಾರದರ್ಶಕವಾದರೂ ತನ್ನ ಪದರು ಪದರುಗಳನ್ನು ಘನವಾಗಿ ತೋರುವ ಭಾಷೆ, ಕತ್ತಿಯ ಅಲುಗಿನಂತಹ ಅದರ ಅಂಚು, ಹಳ್ಳಿ -ನಗರಗಳನ್ನೆಲ್ಲ ಆವರಿಸಿಕೊಳ್ಳುವ ಜೀವನಾನುಭವದ ವಸ್ತು - ವೈಚಾರಿಕ ವ್ಯಾಪ್ತಿ, ಮತ್ತು... ಇವುಗಳನ್ನೆಲ್ಲ ನಡೆಸಿಕೊಂಡು ಹೊರಡುವ ಸೇಟನ್ನನ ಸೃಜನಶೀಲ ಪಯಣ !... ನಿಮ್ಮ ಕೃತಿಗಳು ಎಂತಹದಾದರೂ ವಿಮರ್ಶಾತ್ಮಕ ಟೀಕೆಯನ್ನು ಅನುಭವಿಸಿರಬಹುದು. ಆದರೆ, ಅವು ಯಾವಾಗಲೂ ತಮ್ಮ ವಿಕ್ಷಿಪ್ತ ಪ್ರಯೋಗಶೀಲತೆಯ ಮೂಲಕ, ತಮ್ಮ ಹೊಸತನದಿಂದ ನಮ್ಮೆಲ್ಲರನ್ನು ಕಾಡಿಸಿವೆ.

ಲಂಕೇಶ್....

ಕನ್ನಡ ಸಂಸ್ಕೃತಿ ಪ್ರಪಂಚವು ನಿಮ್ಮ ಅಸ್ತಿತ್ವದಿಂದ ಸಂಭ್ರಮಗೊಳ್ಳುತ್ತಿದ್ದಿತು...

ನಿಮ್ಮ ಅಸ್ತಿತ್ವ ಹೊರಡಿಸುತ್ತಿದ್ದ ಕಂಪನಗಳು ಈ ಸಂಸ್ಕೃತಿ ಲೋಕದ ಆತ್ಮವನ್ನು -ಅದರ ಜೀವವನ್ನು-ಅದರ ಮಂಗಳ -ಅಮಂಗಳ ಸ್ವರೂಪಗಳನ್ನು... ಎಲ್ಲವುಗಳನ್ನೂ-'ಧಗ್' ಎಂದು ಹೊತ್ತಿಕೊಂಡು ಉರಿಯುವಂತೆ ಮಾಡಿ-ಅದರ ಇರುವಿನ ಅರಿವನ್ನು ಎಲ್ಲರಿಗೆ ಮಾಡಿಸುತ್ತಿದ್ದವು...

ಆದ್ದರಿಂದಲೇ

ಲಂಕೇಶ್...

ನೀವು ಹೊರಟು ಹೋದದ್ದು ಇಲ್ಲಿನ ಸಾಂಸ್ಕೃತಿಕ ಲೋಕದಲ್ಲಿ ಒಂದು ದೊಡ್ಡ ನಿರ್ವಾತದ ರಂಧ್ರವನ್ನು ಮೂಡಿಸಿದೆ .

ಇದರ ಜೊತೆಗೆ

ನಿಮಗೇ ಗೊತ್ತಲ್ಲ -

ನಿಮ್ಮ ಸುತ್ತ ತಿರುಗುತ್ತಿದ್ದ ಎಷ್ಟೊಂದು ಉಪಗ್ರಹಗಳು... ಪಾಪ ...
ಅವೆಲ್ಲ ನಿಮ್ಮ ಪ್ರಸ್ಥಾನದಿಂದ ಅನಾಥಗೊಂಡಿವೆ ...

ಲಂಕೇಶ್...

ನೀವು **ನಮ್ಮನ್ನು** ಬಿಟ್ಟು ಹೋದಂತೆ - ನೀವು **ನಮಗಾಗಿ** ಸಾಕಷ್ಟು ಬಿಟ್ಟೂ ಹೋಗಿದ್ದೀರಿ...
ಅವುದರೊಂದಿಗೆ ಹೋರಾಡುತ್ತ - ಹೊಡೆದಾಡುತ್ತ ನಾವು ಬೆಳೆಯುತ್ತೇವೆ -

ಮತ್ತು ಕನ್ನಡ ಸಂಸ್ಕೃತಿಯನ್ನು ಬೆಳೆಸುತ್ತೇವೆ...

ನನಗೆ ಖಂಡಿತವಾಗಿ ಗೊತ್ತು...
ನಿಮಗೆ ನಮ್ಮ ಬಗ್ಗೆ ಆಳದಲ್ಲಿ ಅಚಲವಾದ ನಂಬಿಕೆ ಇದೆ ಎಂದು...

ಲಂಕೇಶ್...
ನಿಮಗೆ ನಮಸ್ಕಾರಗಳು !

-ರಾಘವೇಂದ್ರ ಪಾಟೀಲ

ಕಾವ್ಯಾಂಜಲಿ

ಲಂಕೇಶ್‌ಗೆ .....

-೧-

''ಇವರು, ಗೊತ್ತಿರಬೇಕಲ್ಲ ನಿಮಗೆ?''
ಗೊತ್ತಿಲ್ಲದುಂಟೆ ಗಟ್ಟಿ ಕತೆಗಾರ, ನಾಟಕ ಕರ್ತೃ, ಕವಿ,
''ಇವರು ...'' ಎಂದಾಗ ಉಭಯ ಸಾಮಾನ್ಯ ಗೆಳೆಯ - ನೀವಂದಿರಿ;
''ಕರ್ನಾಟಕದ ಮುಕ್ಕೋಟಿಯಲ್ಲೊಬ್ಬರು .. ಸರಿಯೆ?''

ಕತ್ತರಿಸುವಂಥ ವ್ಯಂಗ್ಯ ನಿಮ್ಮ ಮಾತಲ್ಲಿ!
ಎದುರಿಗಿದ್ದವ ಬಚ್ಚ. ಎಸೆಯಬೇಕಿರಲಿಲ್ಲ ಗೆರೆಯ ದೂರಕ್ಕೆ.
ಮತ್ತೊಬ್ಬರನ್ನು ಚುಚ್ಚುವುದರಲ್ಲೇ ಕೆಲವರಿಗೆ ಖುಷಿ.
ಹೆಜ್ಜಾಲಿ ಸದಾ ಮುಂದು ಕೈ ಕುಲಕಲಿಕ್ಕೆ.

-೨-

ಏಕಾಂಕ ಓದುವಾಗ ನಿಮ್ಮ ವ್ಯಂಗ್ಯ ಮರೆತೇ ಹೋಗಿ
ಹೃದಯ ತಿರುಚುವಂತಿತ್ತು ಇಳಿದ ಹನಿ ಹನಿ ನೋವು
ಫರಂಗಿ ಮರವೇರಿದ್ದ ಫಕೀರ ಹೀಗೇ ತಿರುಚುತ್ತಿದ್ದ ಹಣ್ಣು.
ಹಳೆಯ ಕಥೆ. ಆಗೆಲ್ಲಾ ಸಣ್ಣ ಹುಡುಗರು ನಾವು.

ಒಳ್ಳೆ ಕೃತಿ, ಬರೆದವನನ್ನ ಕರಗಿಸಿ ಬಿಡುತ್ತೆ!
ಅಷ್ಟೇ ಚೆನ್ನಾಗಿ ಓದುವವನನ್ನೂ!
ನಿಮ್ಮನ್ನು ದ್ವೇಷಿಸಲೋ ಪ್ರೀತಿಸಲೋ ಗೊಂದಲ.
ಹಾಗುಂಟು ಉರಿ ಬೆಳಕು - ಭರ್ಚಿ ಕಣ್ಣು.

ಸಾಹಿತ್ಯ ಸಂವಾದ : ೫೪-೫೫

- ೩ -

ಗಾಂಧಿ ಬಜಾರಲ್ಲಿ ಹೊಗೆಯೂದುತ್ತಾ ನಡೆವ ಧಿಮಾಕು -
ಹಿಂದಿದ್ದವರೆಲ್ಲ ಹಿಂಬಾಲಕರೆನ್ನುವಂತೆ .
ಒಂದು ಕ್ಷಣ ಸಂಭ್ರಾಂತಿ ನನಗೆ . ಚಂದ್ರಮುಖಕ್ಕೆ ತಿವಿಯುವಂತಿತ್ತು
ಸೂರ್ಯಪಂಜು . ಎದೆ ನಡುಗಿ ಪಕ್ಕಕ್ಕೆ ಸರಿದು ನಿಂತೆ .

ಓದಿ 'ಕಂಚಿನ ತೇರ' ಮೆಚ್ಚಿ , ಮಾತಾಡಿದ್ದು ಮರೆತೆ ಬಿಟ್ಟಿರಿ ;
ನಾನಂತು ಮರೆತಿಲ್ಲ ತಂತಿಯಲಿ ಹರಿದುದನ್ನು .
'ದಪ್ಪವಾಗಿದ್ದೀರಿ' - ಎಂದು ನಕ್ಕಿರಿ ಕೊನೆಗೆ . ನೆನಪು
ನೇಗಿಲ ಕೊಂಕು ; ಹಣಿದ ಮಚ್ಚು .

- ೪ -

ಬಂಡೆಗೇ ಡಿಢಿಕ್ಕಿ ಕೊಡುವ ಉದ್ಧತ ರೋಪು !
ಮೊದಲಿಂದಲೂ ಅಚ್ಚು ಮೆಚ್ಚು ನನಗೆ .
ಎಲ್ಲೆಲ್ಲಿ ಕಲ್ಲೋ ಅಲ್ಲೆಲ್ಲ ರಕ್ತದ ಗೀಚು ರುಜು .
ಚೆಕ್ಕೆ ಹಾರಿದ್ದುಂಟು ಬಡಪಾಯಿಗಳ ತಲೆಗೆ .

ನಮ್ಮ ರಕ್ತವ ನಮಗೂ ತೋರಿಸಿದ ಗುರುವೇ ...
ಕವಿತೆ ಬೆವರಿನದಲ್ಲ ; ರಕ್ತಾಂಗ ಪಿಂಡ .
ಯಾರೊ ಅಂಟಿಸಿದ ಬೆಲೆ ಚೀಟಿ ಕಿತ್ತೆಸೆಯುವರು , ಹಾಗೂ ಗುಂಡು ಪಿನ್ನ
-ಕೊಂಡ ಜನ ಎದೆ ತುಂಬ ತೊಡುವ ಮುನ್ನ .

- ಎಚ್.ಎಸ್.ವೆಂಕಟೇಶಮೂರ್ತಿ

ಕುತೂಹಲಗಳ ಬೆನ್ನ ಹಿಂದೆ

ಹುಳಿ ಮಾವಿನ ಮರ
ಹೂ ಬಿಡುವ ಕಾಲ ...★
ದೊಡ್ಡ ಕೌದಿಯಲಿ
ಬಿದ್ದ ಕನಸುಗಳ ಹರಡಿ
ಹೊತ್ತ ಬುತ್ತಿಯನು ಹಾದಿ
ಬದಿಗೇ ಇಟ್ಟು , ನರಳದೇ ತೆರಳಿದಿರಿ

(★ ಲಂಕೇಶರು ತೀರಿಹೋದ ಮರುದಿನ ಬರೆದ ಪದ್ಯ : ಆಗ ಮಾವು ಹೂ ಬಿಡುವ ಕಾಲ)

'ಅವ್ವ'ನ ಫಲವತ್ತಾದ ಕಪ್ಪು ನೆಲಕೆ.

ಪಾತಿ ಮಾಡಿದಿರಿ ತೋಟ
ವಾಟೆ ಬಿತ್ತಿದಿರಿ ಮತ್ತೆ
ಹಕ್ಕಿಗಳ ರೆಕ್ಕೆಯಲಿ ತೇಲುವ ಮಾರುತಕೆ
ಕೊರಳ ಹಾಡಿಗೆ ಕೈಮಾಡಿ ಬೇಡಿದಿರಿ
ಹುಳಿ ಮಾವಿನ ಹೂ ಹೀಚು
ಕಾಯಾಗಿ, ಹಣ್ಣಾಗುವ ಮುನ್ನ

ಉಗುರು ತಾಗಿದರೆ ಬಸಿವ
ನೆತ್ತರ ಎಲೆ - ಚಿಗುರ ವಾಟೆಗೆ
ಈರ್ಷ್ಯೆಯಲ್ಲಿಯೇ -
ಬದುಕ ನೀಗಿದಿರಿ ಬಗಲ ವಾಸನೆ ಹಾಗೆ
ಚೌಕಟ್ ಗುಲಾಮ ಎಲೆ ಚಿಕ್ಕೆಸ್ಸ್‌ನಲ್ಲಿಯೇ
ಹುಲಿ ಹೊಡೆವ ಸಾಹಸ ನಿಮ್ಮದು
ಆದರೂ ಅನುಮಾನ
ಸಂಜೆ ಸೇರುವ ವ್ಹಿಸ್ಕೀ ಕಲ್ಪನೆಗಳಲ್ಲಿ

ನೂರೆಂಟು ಬಿರುಕಿನಲಿ
ಕರಕಿ ಬೇರಿನ ತವಕ
ನಕ್ಕಾಗಲೂ, ಬಿಕ್ಕಿದಾಗಲೂ ನೀವು
ಜಲ ಉಕ್ಕಿಸುವ ನೆಲ

ಇರುಳ ಸೂರಿನಲಿ
ಕವಿದ ಮೌನದ ಹಡದಿ ಹಾಸಿ
ಕುತೂಹಲಗಳ ಬೆನ್ನ ಹಿಂದೆ ...ಹಿಂದೆ...
ಅಂಬೆಗಾಲಿಕ್ಕುವ ಮಗುವಿನ ಹಾಗೆ
ಸಾಗಿದಿರಿ ನೀವು

ಹೋಗಿದ್ದೀರಿ ...?
ಎಂದೆನ್ನಿಸುವುದೇ ಇಲ್ಲ ನನಗೆ!

– ಶಂಕರ ಕಟಗಿ

ಅಕ್ಷರ ಸಾಕ್ಷಿ

ಹುಲಿ ಕಿರುಬ ನರಿ ತೋಳಗಳ ನಡುವೆ
ಒಂಟಿ ಸಲಗನ ನಡಿಗೆ ; ಕಣ್ಣುಮುಚ್ಚಾಲೆ
ತುಂಟಾಟ. ಕಪ್ಪು ಬಿಳುಪು , ಬೆರಗು ಬಿನ್ನಾಣ
ನಿಟ್ಟುಸಿರ ಜೀವ ಭಾವ ನೋವುಗಳ

ತೆರೆದು ತೋರಿಸಲೆಂದು ತೊಟ್ಟ ಹಲವು ವೇಷ
ಹೆಣ್ಣಾಗಿ ಗಂಡಾಗಿ , ಕನಸು ಕಾಣ್ಕೆಗಳ ಕಣ್ಣಾಗಿ
ಮಾತು ಕತೆಯಾಗಿ , ಚಿತ್ರ ಚಿತ್ತಾರವಾಗಿ
ಖುರಪುಟದ ಛಂದಕ್ಕೆ ಚಿತ್ತ ಚಪಲನಾಗಿ

ನಾನು ಕಂಡ ಮೊಲಕ್ಕೆ ಮೂರು ಕೊಂಬು
ಳಿದದ್ದೆಲ್ಲಾ ಹುಂಬು ಎಂದೇ ವಾದಿಸುತ್ತಾ
ಸ್ನೇಹಕ್ಕು ದ್ವೇಷಕ್ಕು ಮಾನಾಪಮಾನಕ್ಕೂ
ಮಾತು ಮಾನಧನ , ಅಕ್ಷರ ಸತ್ಯ ಸಾಧಕ

ನಿನ್ನ ಮುಗಿಲ ಮಲ್ಲಿಗೆ ಮನಸ್ಸು ಬಿತ್ತಿದ್ದು
ನೂರಾರು ಕನಸುಗಳು , ಹಚ್ಚಿದ್ದು ಹಣತೆಗಳು
ನೀಲುವಿನ ಕುಚ ನಿತಂಬದಲಿ ರತಿ ಪರವಶತೆ
ಬೋದಿಲೇರನ ಒರತೆ ; ಮಘಮಘಿಪ ಹೂಗಂಪು

ಹುಳಿ ಮಾವು , ಚೈತ್ರದ ಕಾವು , ಉಜ್ಜನ ಅಳಲು
ನಾದಿರನ ನೋವು . ಹಚ್ಚಿ ಉಪ್ಪು ಖಾರ
ರುಚಿ ಲೋಟಿಗೆ . ಕಚಗುಳಿ ಇಡುತ್ತಾ , ನಿಷ್ಠುರದ
ನಿಲುವು . ಅವ್ವನಭಿಮಾನ ಛಲ ಜಾಯಮಾನ

ರಂಗದಂತರ್ಮುಖಿ ; ಕಾಡು ಹಕ್ಕಿಯ ಹಾಡು
ಗುಲ್ಮೊಹರಿನ ಜಾಡು. ಪ್ರೀತಿ ಅಂತಃಕರಣ
ರಕ್ತ ಮಾಂಸ ಮಜ್ಜೆ ನುಡಿಯಾಗಿ , ನರ ನಾಡಿ
ಧಮನಿಗಳಲ್ಲಿ ಹರಿದ ಹದ್ದು ಕಣ್ಣಿನ ಸಾಕ್ಷಿ

- ಸತ್ಯನಾರಾಯಣ ರಾವ್ ಅಣತಿ

ಲಂಕೇಶ

ಹರೆಯ ಉಕ್ಕುವ ಘಳಿಗೆ
ವೃತ್ತಿ ಆರಂಭ ;
ತುಂಬಿ ಸೂಸುವ ಕನಸ ಕಣ್ಣು
ತರಗತಿಯ ಮೊದಲದಿನ
ತನ್ನ ತಾ ಗುರುತಿಸಿಕೊಂಡದ್ದು-
'ಆಯೆಮ್ ಎ ಬ್ಯಾಚುಲರ್'
ಘೋಷಣೆಯ ಗತ್ತು
ಕಿಸಕ್ - ಕಿಲಿಕಿಲಿ ನಗೆಯ ಅಲೆ
ಸತ್ಯ ಸುಳ್ಳು ಹಾಸಿದ ಗೆರೆಯ
ಮಿಣಿ ಮಿಣಿ ಮಿಣುಕ ಜರಿ -
ಯಂಚ ಸೆರಗ ಮೋಡಿ
ಶಿವಮೊಗ್ಗೆಯಿಂದ ತೇಲಿ
ಬರಲಿಲ್ಲ ನವನೀತ

ಹಾರುವುದು ಲಂಕೇಶ ಜಾಯಮಾನ
ಎಲ್ಲ ಕಾಲದ ಮಳೆಗು ಮೈಗೊಡುವ
ಬೆಂಗಳೂರು
ಲಂಕೇಶ ಬೀಜ ಬೇರಿಳಿದು
ಕಾವ್ಯ ಕವಲೊಡೆದು ಮುಗಿಲತ್ತ
ಗದ್ಯ ರಂಬೆಕೊಂಬೆ ಚಾಚಿ
ಕಾದಂಬರಿಯ ಮೊಗ್ಗು ಜಗ್ಗಿ
ಹೂ ನಾಟಕದ ನೆಲೆಯಾಯ್ತು
ಹಣತೆ ತಿಕ್ಕಿದ ಹಾಗೆ
ಸಾವು ಹುಟ್ಟುಗಳ ಹಗ್ಗಕ್ಕೆ
ಉಯ್ಯಲಾಡುವ ಬದುಕ
ತೆರೆದಿಟ್ಟ ಬಗೆ ನವಿರು ಹತ್ತಾರು.

ಶಬ್ದವಶಿ ಲಂಕೇಶ
ಪತ್ರಿಕೆಯೊ ಜನಮನದ ನಾಡಿ
ಸತ್ಯ ಹಸಿರು ಹನಿ

ನುಡಿ ಬೆರಳ ಸ್ಪರ್ಶಕ್ಕೆ ಬಾಡುವುದು
ಜನರ ನಡು ನಡುವೆ ನುಡಿ-
ಬೆನ್ನೇರಿ ಬೆರೆತ ಲಂಕೇಶ

ಅಲ್ಲೆಲ್ಲ ತನ್ನ ಸತ್ಯ ಅಸತ್ಯ ಹುಡುಕಿ ಕನ್ನ
ಡಿಗ -
ರೆದೆ ಭ್ರಮರ .

-ಗಜಾನನ ಈಶ್ವರ ಹೆಗಡೆ

ಯಾವ ಅನುಭವ ನನ್ನಲ್ಲಿ ಅರ್ಥಪೂರ್ಣವಾಗಿ ಬೆಳೆದಿದೆ ಎಂದು ಯಾರಾದರೂ ಕೇಳಿದರೆ ನಾನು ಗೊಂದಲದಲ್ಲಿ ಬೀಳುವುದು ಖಂಡಿತ. ಇಂಗ್ಲಿಷ್ ಭಾಷೆಯಲ್ಲಿ ಸಾಹಿತ್ಯ ಓದಲು ಆರಂಭಿಸಿದಾಗ ಆದ ಮುಜುಗರವೇ ಆ ಭಾಷೆಯಲ್ಲಿ ಪಾಠ ಹೇಳಲು ಶುರುಮಾಡಿದಾಗಲೂ ಆಯಿತು. ನಾನು ಯಾವುದೇ ಮ್ಯಾಪು, ದಿಕ್ಸೂಚಿ ಇಲ್ಲದೇ ಹಡಗಿನಲ್ಲಿ ಕೂತು ಸಾಗುತ್ತಿದ್ದಂತಿತ್ತು. ಥೇಮ್ಸ್ ಎಂಬ ಮಾತನ್ನು ನಾನು ಹೇಳಿದಾಗ ನನಗೆ ಮತ್ತು ನನ್ನ ವಿದ್ಯಾರ್ಥಿಗಳಿಗೆ ಆಗುತ್ತಿದ್ದ ಅನುಭವಕ್ಕೂ ಇಂಗ್ಲೆಂಡಿನ ಹುಡುಗರು, ಅಧ್ಯಾಪಕರು ಥೇಮ್ಸ್ ಎಂದೊಡನೆ ಕಾಣಬಹುದಾದ ನದಿ, ಅದರ ಕತೆ, ಅದರ ಪುರಾಣಕ್ಕೂ ವ್ಯತ್ಯಾಸವಿದೆ ಎಂದು ಗೊತ್ತಾದಂತೆಲ್ಲ ಈ ದಿಗಿಲು ಹೆಚ್ಚಾಯಿತು. ಯಾವನೇ ಒಬ್ಬ ವಿಮರ್ಶಕನೂ ಚರಿತ್ರಕಾರನೂ ಪುರಾಣಪಟುವೂ ನನ್ನ ಗೊಂದಲ ಮತ್ತು ಹಿಂಜರಿಕೆಗಳನ್ನು ಪರಿಹರಿಸಲಾರ ಎನ್ನಿಸಿತು. ಅದಕ್ಕೆ ಕ್ರಮೇಣವಾಗಿ ನನ್ನಲ್ಲೇ ಪರಿಹಾರ ದೊರೆಯಿತು. ಥೇಮ್ಸ್ ನದಿಯಾಗಲೀ, ಸ್ಕಾಟ್ಲೆಂಡಿನ ಬರ್ನ್ಸ್ ಕವಿಯಾಗಲೀ, ಅಮೆರಿಕದ ಮಾರ್ಕ್‌ಟ್ವೇನ್ ಎಂಬ ಕಥೆಗಾರನಾಗಲೀ- ನನ್ನ ಅನುಭವಕ್ಕೆ ಹೇಗೆ ಹತ್ತಿರ ,ಹೇಗೆ ದೂರ ಮತ್ತು ನಾವೆಲ್ಲರೂ ಒಂದೇ ಬಗೆಯಲ್ಲಿ ಸಾವು, ನೋವು, ಪ್ರೇಮ, ವಿರಹ, ವ್ಯಸನ, ಶೌರ್ಯ, ಸಂಕೋಚಗಳನ್ನು ಅನುಭವಿಸುವವರಾದ್ದರಿಂದ ಈ ಸಾಹಿತ್ಯದ ಅನುಭವಗಳಲ್ಲಿ ಯಾವುದು ದಿಟ. ಯಾವುದು ಸುಳ್ಳು ಎಂದು ಒಂದು ಮಿತಿಯಲ್ಲಿ ಸಾಹಿತ್ಯವನ್ನು ಬೋಧಿಸತೊಡಗಿದೆ. ಅದರಿಂದ ಮತ್ತೆ ನನ್ನ ಗೊಂದಲಗಳೆಲ್ಲ ಕಡಿಮೆಯಾಗಿ ಯಶಸ್ಸಿನ ಹುಂಬತನ ನನ್ನನ್ನು ತುಂಬತೊಡಗಿದಾಗ ಅಧ್ಯಾಪಕ ವೃತ್ತಿಯನ್ನು ಬಿಟ್ಟುಬಿಟ್ಟೆ.

- ಲಂಕೇಶ್

(ಟೀಕೆ ಟಿಪ್ಪಣಿ : ಐವತ್ತರ ಸೇತುವೆ ಮೇಲೆ)

ನನ್ನ ಅಪ್ಪ ತೀರಾ ಸಾಮಾನ್ಯ ಮನುಷ್ಯನಾಗಿದ್ದ. ಅತ್ಯಂತ ಮೌನದ ವ್ಯಕ್ತಿಯಾಗಿದ್ದ. ಎಂದೂ ಯಾರೊಂದಿಗೂ ಜಗಳಾಡದ ಮನುಷ್ಯನಾಗಿದ್ದ. ಇಲ್ಲಿಗೆ ಸರಿಯಾಗಿ ಹತ್ತೊಂಭತ್ತು ವರ್ಷದ ಹಿಂದೆ ಸತ್ತ ನನ್ನವ್ವ ಕೊಂಚ ಸಿಡುಕಿನ ವ್ಯಕ್ತಿ. ಜಗಳಗಂಟಿ. ಈಕೆ ತನ್ನ ಗಂಡನ ಬಗ್ಗೆ ಮಾತ ತೆಗೆದಾಗೆಲ್ಲ ಈತ ಮುಖ ಇಳಿಬಿಟ್ಟುಕೊಂಡು ಕೂರುತ್ತಿದ್ದ. ಬಹಳ ಮಾತಾಡುತ್ತಿರಲಿಲ್ಲ. ಆದರೆ ಇಬ್ಬರೂ ಹೊಲದಲ್ಲಿ, ಗದ್ದೆಗಳಲ್ಲಿ ನಿತ್ಯ ಕೆಲಸ ಮಾಡುತ್ತಿದ್ದ ರೀತಿ ಮಾತ್ರ ಇವತ್ತಿಗೂ ನನಗೆ ಪಾಠ. ಎಂದೂ ಸುಮ್ಮನೆ ಕೂರದ ಈ ನನ್ನ ಹೆತ್ತವರು ತಮ್ಮ ಐದು ಮಕ್ಕಳನ್ನು ಹೊತ್ತು ಸಾಕಿದ ರೀತಿ, ದುಡಿದು ಉಣ್ಣುತ್ತಿದ್ದ ರೀತಿ, ಊರ ''ಬುದ್ಧಿವಂತ''ನಾದ ಅಪ್ಪ ಊರವರ ಕತೆಗಳನ್ನೆಲ್ಲ, ಗೋಳುಗಳನ್ನೆಲ್ಲ ಕೇಳುತ್ತ ಕೌಲೆ ಬಸವನಂತೆ ಗೋಣು ಹಾಕುತ್ತ ಕಷ್ಟಗಳನ್ನು ಪರಿಹರಿಸುತ್ತಿದ್ದ ರೀತಿ, ಮಾತಾಡುತ್ತಲೇ ಹಗ್ಗ ಹೊಸೆಯುತ್ತ, ಕಣ್ಣಿ ಮಾಡುತ್ತ ವೇಳೆಯನ್ನು ಹಾಳು ಮಾಡದೆ ಬದುಕಿದ ರೀತಿ ನೆನಪಾಗುತ್ತಿದೆ. ಇವುಗಳ ಜೊತೆಗೆ ಊರೊಟ್ಟಿನ ಕೆಲಸಗಳು, ಕಾಲರಾ ಬಂದಾಗ ಊರೂರು ತಿರುಗಿ ಡಾಕ್ಟರನ್ನು ಕರೆತರುವಲ್ಲಿ, ಮೂವತ್ತು ಮನೆಗಳ ನಮ್ಮೂರಲ್ಲಿ ಹತ್ತಾರು ಜನ ಗೋತಾ ಹೊಡೆದದ್ದು, ನಲವತ್ತೇಳನೆ ಇಸವಿಯಲ್ಲಿ ಇಲಿಗಳು ಸಾಯತೊಡಗಿದಾಗ ಇವರೆಲ್ಲ ದೇವರನ್ನು ಹೊರಡಿಸಿ ಪರಿಹಾರ ಕಂಡುಕೊಳ್ಳುತ್ತಿದ್ದಂತೆ ಜನಗಳು ಸ್ಮಶಾನ ಸೇರತೊಡಗಿದ್ದು, ಎಲ್ಲಕ್ಕೆ ಹೆದರಿಕೊಂಡು ರೈಲು ರಸ್ತೆಯ ಆಚೆಗೆ ಮಳೆಗಾಲಪಿಡೀ ''ಕ್ಯಾಂಪ್'' ಸೇರಿ ಹಿಂದಿರುಗಿದೊಡನೆ ನನ್ನ ಮಿತ್ರರೆಲ್ಲ ಪ್ಲೇಗಿಗೆ ತುತ್ತಾಗಿ ಕಣ್ಮರೆಯಾದದ್ದು ...ಎಲ್ಲ ನೆನಪಾಗುತ್ತಿದೆ. ನನಗೆ ಪ್ಲೇಗ್ ತಗುಲಿ ಇಡೀ ಊರಲ್ಲಿ ಪ್ಲೇಗ್ ಬಂದು ಬದುಕಿದ ವ್ಯಕ್ತಿ ನಾನೊಬ್ಬನೇ ...

''ನನ್ಮಗ ಸತ್ತಿದ್ರೆ, ನಾನು ಕೆರೆ ಬಾವಿ ಹಾರಿಕಳ್ತಿದ್ದೆ'' ಅಂದಳು ಅವ್ವ, ಕಣದ ಹುಲ್ಲು ಬಣವೆಯ ಪಕ್ಕದಲ್ಲಿ ಅಪ್ಪ ಕೂತು ರೊಟ್ಟಿ ತಿನ್ನುತ್ತಿದ್ದಾಗ.

''ಹೇಳೋದೆಲ್ಲ ಹಂಗೇ... ಯಾರೂ ಇನ್ನೊಬ್ಬರಿಗಾಗಿ ಸಾಯಾಕಿಲ್ಲ'' ಅಂದ ಅಪ್ಪ.

- ಲಂಕೇಶ್

(ಟೀಕೆ ಟಿಪ್ಪಣಿ: ಅಪ್ಪನ ನೆನಪು)

ಲಂಕೇಶ್ ...

ಒಂದಿಷ್ಟು ಹತ್ತಿರ - ಒಂದಿಷ್ಟು ದೂರ
ಒಂದಿಷ್ಟು ಲೋಕಾಭಿರಾಮ ...

ನಾನು ಇಷ್ಟಪಡದ ನನ್ನ ಇನ್ನೊಂದು ಕೆಟ್ಟ ಗುಣ - ಜಬಿಪಾರ ಅಥವಾ ಪೋಲಿ ಜನರ ಮಾತು ಕೇಳಿದೊಡನೆ ನನ್ನ ತುಟಿಯಂಚಿನಲ್ಲಿ ಸುಳಿವ ಕೊಂಕು ನಗೆ ನಾನು ಪರೀಕ್ಷೆಗೆ ಪ್ರಬಂಧವನ್ನು ಸಿದ್ಧಪಡಿಸುತ್ತಿದ್ದಾಗ ಪ್ರೊಫೆಸರ್‌ರೊಬ್ಬರು 'ಭಾರತದ ಮೀಮಾಂಸೆಯ ದಿಗಂತ'' ಜಗತ್ತಿಗೆ ಆದರ್ಶದ ತತ್ವ ' ಇತ್ಯಾದಿಯಾಗಿ ಮಾತಾಡುವಾಗೆಲ್ಲ ನನ್ನ ಕಡೆ ನೋಡಿ ,'' ಯಾಕೆ ನಗುತ್ತಿದ್ದೀರಿ?'' ಎಂದು ಕೇಳಿ,''ಸರಿ, ಇನ್ನು ಹೋಗಿ, ನಿಮ್ಮಿಂದ ಈ ಪ್ರಬಂಧ ಬರೆಯೋಕೆ ಆಗೋಲ್ಲ'' ಎಂದು ನನ್ನನ್ನು ಹೊರಗೆ ಕಳಿಸುತ್ತಿದ್ದರು. ನನ್ನ ವ್ಯಂಗ್ಯದ ನಗೆಯಿಂದಾಗಿ ನನಗೂ ಅವರಿಗೂ ವಿಶ್ವಾಸ ಬೆಳೆಯಲೇ ಇಲ್ಲ. ನನ್ನ ವಿಚಿತ್ರ ನಂಬಿಕೆಯ ಪ್ರಕಾರ ಒಬ್ಬ ಮನುಷ್ಯ ಬಳಸುವ ಸಾಚಾ ಅಥವಾ ಖೋಟಾ ಭಾಷೆ ಆತನ ಸಾಚಾ ಅಥವಾ ಖೋಟಾ ಗುಣಕ್ಕೆ ಹಿಡಿದ ಕನ್ನಡಿ ; ಅಲ್ಲದೆ ತೀರಾ ದೊಡ್ಡ ಮಾತಾಡುವ ಪ್ರತಿಯೊಬ್ಬನೂ ಆ ಮಾತಿನ ಶಬ್ದಕ್ಕೆ ಮಾರುಹೋಗಿ ಮೋಸದ ವ್ಯಕ್ತಿತ್ವ ಕಟ್ಟಿಕೊಂಡಿರುತ್ತಾನೆ.

ನನಗೆ ಇಷ್ಟವಾಗದ ಇನ್ನೆರಡು ನನ್ನ ಕಲ್ಯಾಣ ಗುಣಗಳೆಂದರೆ, ಸಿಟ್ಟು ಮತ್ತು ರೋಮ್ಯಾಂಟಿಕ್ ಸಾಹಸದ ಚಟ. ನಾನು ಸಿಟ್ಟಿನವನೆಂಬ ಪ್ರಚಾರ ಮತ್ತು ಅಪಪ್ರಚಾರ ಎಷ್ಟಿದೆಯೆಂದರೆ, ಕೆಲವರು ನನ್ನೊಡನೆ ಮಾತಾಡಲೂ ಹಿಂಜರಿಯುತ್ತಾರೆ. ಆದರೆ ನಿಜ ಹೇಳಬೇಕೆಂದರೆ, ನಾನು ತುಂಬ ಪ್ರಶಾಂತನಾದ ಮನುಷ್ಯ. ಇದಕ್ಕೆ ಭೌತಿಕ ಉದಾಹರಣೆ ಕೊಡಬೇಕೆಂದರೆ, ನನ್ನಷ್ಟು ತೂಕವುಳ್ಳ ಮತ್ತು ಪುರುಸೊತ್ತಿಲ್ಲದ ಮನುಷ್ಯನ ರಕ್ತದ ಒತ್ತಡ ಸ್ವಾಭಾವಿಕ ಮತ್ತು ಸನ್ಯಾಸಿಯ ರಕ್ತದೊತ್ತಡಕ್ಕೆ ಹತ್ತಿರವಿರುವುದು ನನ್ನೊಬ್ಬನದೇ ಎಂದು ಕಾಣುತ್ತದೆ ಮೊನ್ನೆ ನನ್ನ ರಕ್ತದೊತ್ತಡ ಪರೀಕ್ಷಿಸಿದ ಡಾಕ್ಟರು ''ಆಶ್ಚರ್ಯ! ನಿಮ್ಮ ದೇಹಕ್ಕೆ ನಿಮ್ಮ ರಕ್ತದೊತ್ತಡ ವಿರುದ್ಧವಾಗಿದೆ. ನಿಮಗೆ ಬ್ಲಡ್ ಪ್ರೆಶರ್ ಬರಲು ಸಾಧ್ಯವೇ ಇಲ್ಲ'' ಅಂದರು. ಆದರೆ ಜನರ ಗದ್ದಲ, ತೀರಾ ಅಪ್ರಸ್ತುತ ವಿಷಯದ ಬಗ್ಗೆ ಕೊರೆಯುವ ಜನ. ತೀರಾ ಸೂಕ್ಷ್ಮವಾಗಿ ಮಾತಾಡುವ ಜನರೆಂದರೆ ನನಗಾಗದು...

- ಲಂಕೇಶ್

(ಟೀಕೆ ಟಿಪ್ಪಣಿ : ನಾನೊಲ್ಲದ ನನ್ನ ಗುಣ)

ನನ್ನಪ್ಪ...

○ ಗೌರಿ ಲಂಕೇಶ್

ದಿನಾಂಕ : ೨೫ -೧ - ೨೦೦೧

.... ಇವತ್ತಿಗೆ ನನ್ನಪ್ಪ ನಮ್ಮನ್ನೆಲ್ಲ ಅಗಲಿ ಸರಿಯಾಗಿ ಒಂದು ವರ್ಷವಾಯಿತು. ಕಳೆದ ೨೪ನೇ ಜನವರಿ ಸೋಮವಾರವಾಗಿದ್ದಿತು...ನಾಲ್ಕೈದು ದಿನಗಳಿಂದ ಜ್ವರ ಬಂದಿದ್ದ ಅಪ್ಪನನ್ನು ಆಸ್ಪತ್ರೆಗೆ ಸೇರಿಸಲು ನನ್ನ ತಂಗಿ ಬೇಬಿ ಪ್ರಯತ್ನ ಮಾಡಿದ್ದಳು. ಕೊನೆಗೂ ಒಪ್ಪಿದ ಅಪ್ಪ ಸೋಮವಾರದಂದು 'ಪತ್ರಿಕೆ 'ಯ ಕೆಲಸ ಮುಗಿಸಬೇಕಾಗಿದ್ದರಿಂದ ಮಾರನೆಯ ದಿನ ಅಂದರೆ -ಮಂಗಳವಾರದಂದು ''...ನಾವೆಲ್ಲರೂ ಆಸ್ಪತ್ರೆ ಸೇರೋಣ ...'' ಅಂದಿದ್ದರು. ಅಪ್ಪ ಆಸ್ಪತ್ರೆ ಸೇರುವುದೆಂದರೆ ನಾವೆಲ್ಲರೂ ಆಸ್ಪತ್ರೆ ಸೇರಿದಂತೆ !... ಅಪ್ಪನೊಂದಿಗೆ ಅವರ ತಲೆದಿಂಬು ಮಾತ್ರವಲ್ಲ -ಅವರ ಹೊದಿಕೆ, ಅಪ್ಪ -ಅಮ್ಮ ಮದುವೆಯಾದಾಗ ಅಮ್ಮ ತನ್ನೊಂದಿಗೆ ತಂದಿದ್ದ ಸ್ಟೀಲ್ ಲೋಟ ಮತ್ತು ತಟ್ಟೆ ... ಅಪ್ಪನ ಪುಸ್ತಕಗಳು, ಅವುಗಳೊಂದಿಗೆ ಅವರ ಟೀವಿ -ವಿಡಿಯೊ -ಅವರಿಗೆ ಪ್ರಿಯವಾಗಿದ್ದ ಸಿನೆಮಾ ಕ್ಯಾಸೆಟ್‌ಗಳು... ಎಲ್ಲವನ್ನೂ ಆಸ್ಪತ್ರೆಗೆ ವರ್ಗಾಯಿಸಬೇಕಿತ್ತು. ಅದರೊಂದಿಗೆ ಅಮ್ಮ , ನಾನು, ಬೇಬಿ ಮತ್ತು ಅಜಿತು... ನಮ್ಮೆಲ್ಲರ ಜೀವನ ಸ್ಥಗಿತಗೊಂಡಂತೆಯೇ! ಆದ್ದರಿಂದಲೇ ಅಪ್ಪ ತಾನು ಆಸ್ಪತ್ರೆಗೆ ಸೇರುತ್ತೇನೆ ಎನ್ನುತ್ತಿರಲಿಲ್ಲ , ಬದಲಾಗಿ ಅವರು ಹೇಳುತ್ತಿದ್ದುದು-''... ಆಸ್ಪತ್ರೆಗೆ ಸೇರೋಣ'' ಎಂದು.

ಆದರೆ ಸೋಮವಾರ ನಮ್ಮೆಲ್ಲರನ್ನು ಯಾವುದೋ ಆತಂಕ ಕಾಡಿತ್ತು... ದೆಹಲಿಯಲ್ಲಿದ್ದ ನಾನು ಸೋಮವಾರ ಬೆಳಿಗ್ಗೆ ಅಪ್ಪನಿಗೆ ಫೋನ್ ಮಾಡಿ ಮಾತನಾಡಿದ ನಂತರ , ಅವರು ಅನುಭವಿಸುತ್ತಿದ್ದ ನೋವು ನನ್ನನ್ನು ಎಷ್ಟು ಅಪ್‌ಸೆಟ್ ಮಾಡಿತ್ತೆಂದರೆ , ನಾನು ಮತ್ತೆ ರಾತ್ರಿ ೮.೩೦ಕ್ಕೆ ಅಪ್ಪನಿಗೆ ಫೋನ್ ಮಾಡಿ -''ನಾಳೆ ಆಸ್ಪತ್ರೆಗೆ ಅಡ್ಮಿಟ್ ಆಗುತ್ತೀದ್ದೀಯ ಅಂತ ಬೇಬಿ ಹೇಳಿದಳು...If you need me,I will come back'' ಅಂದೆ . ಆದರೆ ಸಂಚಿಕೆಯ ಒತ್ತಡ ಮತ್ತು ತನ್ನ ದೇಹ ಅನುಭವಿಸುತ್ತಿದ್ದ ನೋವು, ಇವುಗಳ

ಮಧ್ಯೆ ತನ್ನ ಎಲ್ಲ ಬರಹಗಳನ್ನು ಮುಗಿಸುತ್ತಿದ್ದ ಅಪ್ಪ, "No,I don't need anybody" ಎಂದು ತನ್ನ ಸ್ವಾವಲಂಬಿತನವನ್ನು ಪ್ರದರ್ಶಿಸಿದರು. ನಂತರ ಬೇಬಿ ಕೂಡ 'ಪತ್ರಿಕೆ'ಗೆ ರಾತ್ರಿ ೯.೩೦ರಷ್ಟೊತ್ತಿಗೆ ಬಂದು, ಅಪ್ಪನಿಗೆ ಮಾರನೆಯ ದಿನ ಆಸ್ಪತ್ರೆ ಸೇರುವುದರ ಬಗ್ಗೆ ನೆನಪಿಸಿ, 'ದೇವೀರಿ' ಯ ಬಗ್ಗೆ ಮಾತಾಡುತ್ತ ಸ್ವಲ್ಪ ಹೊತ್ತು ಅಪ್ಪನೊಂದಿಗೆ ಕಳೆದು ಮನೆಗೆ ಹಿಂದಿರುಗಿದಳು. ರಾತ್ರಿ ೧೦.೩೦ರಷ್ಟೊತ್ತಿಗೆ 'ಪತ್ರಿಕೆ'ಯಿಂದ ಮನೆಗೆ ಹೊರಟ ಅಪ್ಪನನ್ನು ಕಾರಿನ ತನಕ ಬಿಡಲು ಅಜಿತು ಹೋದನು. ತನಗೆ ಸುಸ್ತಾಗಿದ್ದರೂ ಅಪ್ಪ ಅಜಿತು ಹೆಗಲ ಮೇಲೆ ಕೈಹಾಕಿ ಅವನೊಂದಿಗೆ ಮಾತನಾಡುತ್ತಾ ನಿಂತರು. ಕೊನೆಗೆ ಕಾರು ಹತ್ತುವಾಗ ಅಪ್ಪ "I don't think I will come out of this one" ಎಂದಾಗ ಅಜಿತು "ಏನೂ ಆಗಲ್ಲ. ಮನೆಗೆ ಹೋಗಿ ಮಾತ್ರೆಗಳನ್ನು ತೆಗೆದುಕೊಂಡು ಮಲಗು. ನಾಳೆ ಏಳು ಗಂಟೆಗೆ ಬಿಪಿ ಚೆಕ್ ಮಾಡುತ್ತೇನೆ. ಆಮೇಲೆ ಆಸ್ಪತ್ರೆಗೆ ಹೋಗಿ ಅಡ್ಮಿಟ್ ಆಗೋಣ" ಎಂದು ಹೇಳಿದ.

ಮನೆಗೆ ಹಿಂತಿರುಗಿದ ಅಪ್ಪ ಊಟ ಮಾಡಿ ತನ್ನ ರೂಮ್‌ಗೆ ಹೋಗುವ ಮುನ್ನ ಊರಿಗೆ ಹೋಗಿದ್ದ ಅಮ್ಮನ ಬಗ್ಗೆ ಕೆಲಸದವಳ ಬಳಿ "ಅಮ್ಮ ಬಂದಿಲ್ವಾ...? ಯಾವತ್ತು ಬರುತ್ತೇ?" ಎಂದು ಕೇಳಿದರು. ಅಪ್ಪ ನುಡಿದ ಕೊನೆಯ ವಾಕ್ಯ ಅದು!

ಮರುದಿನ ಬೆಳಗ್ಗೆ ಅಜಿತು ಅಪ್ಪನ ಬಿಪಿ ಚೆಕ್ ಮಾಡಲು ಹೋದಾಗ ಎಲ್ಲವೂ ಮುಗಿದು ಹೋಗಿತ್ತು!

ಅಪ್ಪನಿಲ್ಲದ ಈ ವರ್ಷ ನಾವು ಪಟ್ಟಿರುವ ದುಃಖ ಎಷ್ಟು ಅಪಾರವೋ ಅಷ್ಟೇ ಅಪಾರ ಅಪ್ಪನ ನೆನಪುಗಳು. ಅವರ ಕೋಪ ಮತ್ತು ಸಿಡುಕು ಮೋರೆ; ಅವರ ಹಾಸ್ಯ ಚಟಾಕಿಗಳು ಮತ್ತು ನಗು; ಅವರ ಚಿಂತನೆ ಮತ್ತು ಕಾಳಜಿ ...ಎಲ್ಲವನ್ನೂ ನೆನಪಿಗೆ ತರಿಸುವ ನೂರಾರು ಘಟನೆಗಳು ...! ಎಲ್ಲ ನಮ್ಮ ಅಂತರಾಳದಲ್ಲಿ ಬೇರು ಬಿಟ್ಟಿವೆ... ಯಾವುದನ್ನು ಹೇಳಲಿ ... ಯಾವುದನ್ನು ಬಿಡಲಿ ...!? ಯಾವುದನ್ನು ಬಿಡುವುದೂ ಬಹಳ ಕಷ್ಟ ...!

ಆದರೆ ಈ ಲೇಖನದ ಉದ್ದೇಶ ಅಪ್ಪ ಮತ್ತು ಮಗಳ ಸಂಬಂಧವನ್ನು ಚಿತ್ರಿಸುವುದಾದ್ದರಿಂದ, ಇಲ್ಲಿ ಅಪ್ಪ ನನಗೆ ಬರೆದಿದ್ದ ಹಲವು ಪತ್ರಗಳನ್ನು ಆಯ್ದು ಬರೆಯುತ್ತಿದ್ದೇನೆ. ಅಪ್ಪ ನನಗೆ ಬರೆದ ಪತ್ರಗಳೆಲ್ಲವೂ ಇಂಗ್ಲಿಷ್‌ನಲ್ಲಿವೆ... ಅನಿವಾರ್ಯವಾಗಿ ಅನುವಾದಿಸುತ್ತಿದ್ದೇನೆ. ಅನುವಾದದಲ್ಲಿ ಅವುಗಳು ಸ್ವಲ್ಪಮಟ್ಟಿಗೆ ತಮ್ಮ ಸ್ವಾರಸ್ಯವನ್ನು ಕಳೆದುಕೊಂಡಾವೆನ್ನುವ ಭಯ ನನಗಿದೆ. ಆದರೂ ನನ್ನ ಭಯ ಮೀರಿ ಅವುಗಳಲ್ಲಿ ನನ್ನಪ್ಪ ಮೂಡಿಬರುತ್ತಾರೆ ಎಂದು ನಂಬಿದ್ದೇನೆ.

ಇಲ್ಲಿ ನಾನು ಆಯ್ದು ಅನುವಾದಿಸಿಕೊಡುತ್ತಿರುವ ಪತ್ರಗಳಲ್ಲಿ ಕೆಲವು ನಾನು ಪ್ಯಾರೀಸ್‌ನಲ್ಲಿದ್ದಾಗ ಬರೆದವುಗಳು.

★★★

೧೯.೧೦.೯೩

ಪ್ರೀತಿಯ ಗೌರು,

ನಿನ್ನ ಪತ್ರ, . Sorry.... ಕಳೆದ ಮೂರು ದಿನಗಳಿಂದ ಉತ್ತರ ಬರೆಯಲು ಸಮಯ

ಸಿಕ್ಕಿರಲಿಲ್ಲ.

ಆ ಯುರೋಪ್‌ನ ದೇಶಗಳು ಎಷ್ಟು ಸಜ್ಜಾಗಿ ವ್ಯವಸ್ಥಿತವಾಗಿವೆ ಎಂಬುದು ನನಗೆ ಗೊತ್ತು. ಆದರೆ ನಮ್ಮಂಥವರಿಗೆ ಅವರ ಪಿತ್ರಾರ್ಜಿತ ಕಲಾವಸ್ತುಗಳು ಉಸಿರುಗಟ್ಟಿಸುವಂತೆ ಇರುತ್ತವೆ. ಹಾಗೆಯೇ ಅವುಗಳಲ್ಲಿ ಅವರಿಗಿರುವ ಉತ್ಸಾಹ ಹಾಸ್ಯಾಸ್ಪದವಾಗಿ ಕಾಣುತ್ತದೆ.

ಆದರೆ ಪ್ಯಾರೀಸ್‌ನಂತಹ ನಗರ (ಈಗ ಅಲ್ಲಿಂದ ಜಗತ್‌ಪ್ರಖ್ಯಾತ ಮೇಧಾವಿಗಳು ಸಂಪೂರ್ಣವಾಗಿ ಮಾಯವಾಗಿದ್ದಾರೆ ಎಂದೆನಿಸುತ್ತದೆ) ನಿನಗೆ "Moveable Feast" (ಇದು ಏರ್ನೆಸ್ಟ್ ಹೆಮಿಂಗ್ವೆನ ಪುಸ್ತಕದ ಟೈಟಲ್ - ಗೌರಿ ಲಂಕೇಶ್) ಆಗುವುದು ಯಾವಾಗ ಅಂದರೆ, ನೀನು ಅದರ ಲಯವನ್ನು ಗ್ರಹಿಸಿದಾಗ ; ಗೆಳೆಯರೊಂದಿಗೆ ಆ ನಗರವನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ; ಇವೆಲ್ಲ ಅನೇಕದಿನ ನೀನು ಅಲ್ಲಿ ತಂಗಿದಾಗ ಮಾತ್ರ ಸಾಧ್ಯವಾಗುತ್ತದೆ.

ನೀನು ನಿನ್ನ ಕೋರ್ಸ್‌ನ್ನು ಇಷ್ಟಪಡುತ್ತಿರುವೆ ಎಂದು ನಂಬಿದ್ದೇನೆ. ಸಮಯವಾದಾಗ ಪ್ಯಾರೀಸ್‌ನಿಂದ ಹೊರಗೆ ಹೋಗಿ ಆ ದೇಶದ ಗ್ರಾಮ ಪ್ರದೇಶಗಳನ್ನು ನೋಡು.

ಈ ದೇಶ ಇದ್ದಹಾಗೇ ಇದೆ ; ಹಲವು ದುರಂತಗಳನ್ನು ಹೊರತುಪಡಿಸಿದರೆ. ಭೂಕಂಪ, ಕಾಂಗ್ರೆಸ್ ಪಕ್ಷದ ದುರಾಡಳಿತ ...ಎಲ್ಲವೂ ಅಸಹ್ಯಕರವಾಗಿವೆ .

ನಾನು ಆರೋಗ್ಯವಾಗಿದ್ದೇನೆ. ಎಲ್ಲರೂ ಸೌಖ್ಯ .

ನಿನ್ನ ಪ್ರೀತಿಯ
ಅಪ್ಪ

೨.೧೧.೯೩
ಪ್ರೀತಿಯ ಗೌರು,

ಹತ್ತು ದಿನಗಳ ಹಿಂದೆ ನಾನು ಬರೆದ ಪತ್ರ ತಲುಪಿದೆ ಎಂದು ನಂಬಿರುವೆ. ಇಲ್ಲಿಂದ ಯಾರೂ ಪತ್ರ ಬರೆದಿಲ್ಲ ಎಂದು ನಿನಗೆ ಬೇಸರವಾಗಿದೆ ಎಂದು ಕೇಳಿದೆ. ಒಂದನ್ನು ನೆನಪಿನಲ್ಲಿಟ್ಟಕೋ. ಜನರು ಮೂಲಭೂತವಾಗಿ ಸ್ವಾರ್ಥಿಗಳಾಗಿರುತ್ತಾರೆ, ಯಾರಿಂದಲೂ ಯಾವುದನ್ನೂ ನಿರೀಕ್ಷಿಸುವುದು ತಪ್ಪು. ನೀನು ಇದನ್ನು ಅರಿತರೆ ಜೀವನದಲ್ಲಿ ಹೊರೆ ಕಡಿಮೆಯಾದಂತಾಗುತ್ತದೆ. ಸಾಕು ಈ ಉಪದೇಶಗಳು!

ಹೇಗಿದ್ದೀ? ಇಷ್ಟೊತ್ತಿಗಾಗಲೇ ನಿನಗೆ ಪ್ಯಾರಿಸ್ ಇಷ್ಟವಾಗಿರಬೇಕು. ಇಲ್ಲಿ ಮೊನ್ನೆಯವರೆಗೂ ಮಳೆ ಬರುತ್ತಿತ್ತು. ಆದರೆ ಈ ದಿನ ಸುಂದರವಾಗಿದೆ, bright, cool & thrilling! ಸದ್ಯದಲ್ಲೇ ಚಳಿಗಾಲ ಬರಲಿದೆ. ಈ ಬಾರಿಯ ದಸರಾ ಮತ್ತು ಗಣೇಶ ಹಬ್ಬಗಳು ತುಂಬಾ ಗದ್ದಲಮಯವಾಗಿದ್ದವು. ಈ ಗದ್ದಲಗಳ ನಡುವೆಯೇ ೧೯೭೦ರಲ್ಲಿ ಪ್ರಥಮವಾಗಿ ಪ್ರಕಟವಾಗಿದ್ದ ನನ್ನ ''ಅಕ್ಷರ ಹೊಸಕಾವ್ಯ''ದ ಮರುಮುದ್ರಿಕೆಯನ್ನು ಹೊರತಂದೆವು.

ನಿನ್ನ ಪ್ರೀತಿಯ
ಅಪ್ಪ

೩.೧.೯೪

ಪ್ರೀತಿಯ ಗೌರು,

ಇಸ್ತಾಂಬುಲ್‌ನಿಂದ ನೀನು ಕಳುಹಿಸಿದ ಕಾರ್ಡ್ ಮತ್ತು ಪ್ಯಾರೀಸ್‌ನಿಂದ ನೀನು ಬರೆದ ಪತ್ರ ತಲುಪಿದವು. ನಾನು ನಿನಗೆ ಬರೆದ ಕಾಗದ ತಲುಪಿತೋ ಇಲ್ಲವೋ ಗೊತ್ತಿಲ್ಲ.

ನ್ಯೂಸ್ ವೀಕ್‌ನಲ್ಲಿ 'Remains of the day' ಆಧಾರಿತ ಸಿನೆಮಾದ ವಿಮರ್ಶೆ ಬಹಳ ಸೊಗಸಾಗಿತ್ತು. ಆದರೆ ಟೈಮ್ ಮ್ಯಾಗಜಿನ್‌ನವರು ಹಾಪ್‌ಕೀನ್ಸ್ ಬಗ್ಗೆ ತುಂಬಾ ಭಾವುಕವಾಗಿ ಬರೆದಿದ್ದರು. ನ್ಯೂಸ್‌ವೀಕ್‌ನವರು 'Remains ..'ನ ಮಿತಿಗಳ ಬಗ್ಗೆ ವಿಶ್ಲೇಷಿಸಿ ಹಾಪ್‌ಕೀನ್ಸ್ ವ್ಯಕ್ತಿತ್ವದ ಹಾಸ್ಯ ಮತ್ತು ವ್ಯಂಗ್ಯಗಳು ಸಿನೆಮಾದಲ್ಲಿ ಮೂಡಿಬರದಿದ್ದರೆ ಅದು ವಿಫಲವಾಗುತ್ತದೆ ಎಂದು ಬರೆದಿದ್ದಾರೆ(ಪಿ.ಜಿ.ವುಡ್‌ಹೌಸ್ ಹೇಗೆ ಜೀವ್ಸ್ ಎಂಬ ಬಟ್ಲರ್‌ನನ್ನು ಆತನ ಯಜಮಾನನಿಗಿಂತ ಬುದ್ಧಿವಂತನನ್ನಾಗಿಸುತ್ತಾನೋ ಹಾಗೆಯೇ). ಅದು ನಿಜ ಎಂದು ನನಗನಿಸುತ್ತದೆ.

ಈಗ ಫ್ರಾನ್ಸ್‌ನಲ್ಲಿ ಚಳಿಗಾಲ ಶುರುವಾಗಿ ತುಂಬ ಚಳಿ ಇರಬಹುದು. ಆದರೆ ಇಂಗ್ಲಂಡ್‌ನಲ್ಲಿ gulf streamನಿಂದಾಗಿ ಅಷ್ಟು ಚಳಿ ಇರಲಾರದು - ನನ್ನ ಭೂಗೋಳ ಜ್ಞಾನ ಸರಿಯಿದ್ದರೆ.

ಅಂದಹಾಗೆ ನೀನು ಮತ್ತೆ ಇಂಗ್ಲಂಡ್‌ಗೆ ಹೋದರೆ ಜೆಫ್ರಿ ಬರ್ನಾರ್ಡ್‌ನ (ಈತ Spectator ಪತ್ರಿಕೆಯ ಅಂಕಣಕಾರ) ಎಲ್ಲ ಪುಸ್ತಕಗಳನ್ನು ಖರೀದಿಸು. ಅವನ ಬಗ್ಗೆ ಒಂದು ನಾಟಕವನ್ನೂ ಬರೆದಿದ್ದಾರೆ. (ಅವನು ಇನ್ನೂ ಬದುಕಿದ್ದಾನೆಯೇ?) ಅವನನ್ನೂ ತೆಗೆದುಕೊಂಡು ಬಾ. ಹಾಗೆಯೇ ಬರ್ನಾರ್ಡ್ ಲೆವಿನ್(ಆತನೂ ಪ್ರಖ್ಯಾತ ಅಂಕಣಕಾರ)ನ ಆಯ್ದ ಅಂಕಣಗಳ ಪುಸ್ತಕವನ್ನೂ ತೆಗೆದುಕೊಂಡು ಬಾ.

ಇಲ್ಲಿಯ ಹವಾಮಾನ ರಮಣೀಯವಾಗಿ ತಂಪಾಗಿದೆ. ಆದರೆ ಬೆಂಗಳೂರು ದಿನದಿಂದ ದಿನಕ್ಕೆ ಹೊಲಸೆದ್ದು ಹೋಗುತ್ತಿದೆ. ಇವತ್ತು ಬೆಳಗ್ಗೆ ವಾಕಿಂಗ್ ಹೋಗಿದ್ದಾಗ ಎಲ್ಲೆಲ್ಲಿಯೂ ಗಲೀಜು ತುಂಬಿರುವುದನ್ನು ಕಂಡು ಅಸಹ್ಯವಾಯಿತು...

ಅಜಿತು ಎಲ್ಲರೂ ಸೌಖ್ಯವಾಗಿದ್ದಾರೆ.

ಅಂದಹಾಗೆ ನನಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಈಗ ತಾನೇ ಬಂದ ಸುದ್ದಿ ಇದು.

ನಿನ್ನ ಪ್ರೀತಿಯ
ಅಪ್ಪ

೭.೪.೧೯೯೪

ಪ್ರೀತಿಯ ಗೌರು,

ಇದೇ ಕೊನೆಯ ಕಾಗದ - ನೀನು ಪ್ಯಾರೀಸ್‌ನಿಂದ ಭಾರತಕ್ಕೆ ಹಿಂದಿರುಗುವ ಮುನ್ನ ಅನ್ನಿಸುತ್ತದೆ. ನೀನು ಟರ್ಕಿ ದೇಶದ ಜನರ ಬಗ್ಗೆ ಬರೆದದ್ದು ಕುತೂಹಲಕಾರಿಯಾಗಿತ್ತು. ಅವರು

ಯುರೋಪಿಯನ್ ದೇಶದವರಿಗಿಂತ curteousಎಂದು ಬರೆದಿದ್ದೀ. ಆದರೆ ನ್ಯೂಸ್‌ವೀಕ್‌ನಲ್ಲಿ ಇತ್ತೀಚೆಗೆ ಮುಸ್ಲಿಂ ಮೂಲಭೂತವಾದಿಗಳು ಅಲ್ಜೀರಿಯ ಮತ್ತು ಈಜಿಪ್ಟ್ ದೇಶಗಳಲ್ಲಿಯಂತೆ ಟರ್ಕಿಯಲ್ಲಿಯೂ ತಮ್ಮ ಕಿತಾಪತಿ ಶುರು ಮಾಡಿದ್ದಾರೆ ಎಂದು ವರದಿಯಾಗಿತ್ತು. ಅದೊಂದು ದೊಡ್ಡ ದುರಂತ. ಯಾಕೆಂದರೆ, ಕಮಲ್ ಅತಾರುಕ್‌ನ ದೊಡ್ಡ ಸಾಧನೆ ಏನೆಂದರೆ, ಆತ ಟರ್ಕಿ ದೇಶವನ್ನು ಜಾತ್ಯತೀತ ರಾಜ್ಯವನ್ನಾಗಿಸಿದ್ದ. ಆದ್ದರಿಂದಲೇ ಟರ್ಕಿ ಯುರೋಪಿಗೆ ಹತ್ತಿರವಾಗಿತ್ತು.

ಈಗ ಫ್ರಾನ್ಸ್‌ನಲ್ಲಿ ವಸಂತ ಋತುಗಾಲ... ಪಶ್ಚಿಮ ಯುರೋಪ್ ದೇಶಗಳು ಈ ಸುಂದರವಾದ ಋತುಗಾಲಕ್ಕಾಗಿಯೇ ಹೇಳಿ ಮಾಡಿಸಿದಂತಿರಬೇಕು! ಅದರಲ್ಲಿಯೂ ಮೇ ತಿಂಗಳಂತೂ ಅತ್ಯಂತ ಆನಂದದಾಯಕವಾಗಿರುತ್ತದೆ ಎಂದು ಕೇಳಿದ್ದೇನೆ.

ನೀನು ಹಿಂದಿರುಗುವಾಗ ಮರೆಯದೇ ಒಂದೆರಡು ಸ್ಕಾಚ್ ಬಾಟಲ್‌ಗಳನ್ನು ತೆಗೆದುಕೊಂಡು ಬಾ. ತುಂಬಾ ದುಬಾರಿಯಾದದ್ದೇನೂ ಬೇಡ.

ನಿಜ, ನನಗೆ ಸಣ್ಣ ಸ್ಟ್ರೋಕ್ ಆಗಿತ್ತು. ಆದರೆ ಈಗ ಪರವಾ ಇಲ್ಲ... ಡಾಲರ್‌ನಷ್ಟೇ ಸ್ಥಿರವಾಗಿದ್ದೇನೆ. (ಆದರೆ ಡಾಲರ್ ಮಾತ್ರ ಕುಸಿಯುತ್ತಿದೆಯಂತೆ!)

ಪುಸ್ತಕಗಳ ಬಗ್ಗೆ ಕೇಳಿದ್ದೀ. ಆದಷ್ಟು ಪುಸ್ತಕಗಳನ್ನು ತಗೊಂಡು ಬಾ. ಐಯೊನೆಸ್ಕೊ ತೀರಿಹೋದದ್ದು ಕೇಳಿ ಬೇಸರವಾಯಿತು. ಅವನು lovely fellow. ಆಲ್ಬರ್ಟ್ ಕಾಮು ಅಮೇರಿಕಾಕ್ಕೆ ಹೋಗಿ ಫಾಕ್‌ನರ್‌ನನ್ನು ಭೆಟ್ಟಿಯಾಗಿದ್ದರ ಪುಸ್ತಕ ಸಿಕ್ಕರೆ ತಗೊಂಡು ಬಾ. (ಅದರ ಹೆಸರು ಸದ್ಯಕ್ಕೆ ನೆನಪಿಗೆ ಬರುತ್ತಿಲ್ಲ).

ನಿನ್ನ ಪ್ರೀತಿಯ
ಅಪ್ಪ

೨೯.೪.೧೯೯೪
ಪ್ರೀತಿಯ ಗೌರು,
ಇಂಗ್ಲಂಡ್‌ಗೆ ಮತ್ತೆ ಹೋದಾಗ ಒಂದು ಒಳ್ಳೆಯ ಅಂಗಡಿಗೆ ಹೋಗಿ, ಜಾರ್ಜ್III ಬಗ್ಗೆ ಪ್ರಕಟವಾಗಿರುವ ನಾಟಕದ ಪುಸ್ತಕವನ್ನು ಮರೆಯದೇ ತಗೊಂಡು ಬಾ. ಜಾರ್ಜ್III ಎಂಬ ರಾಜನಿಗೆ ಅಮೇರಿಕಾದ ಸ್ವಾತಂತ್ರ್ಯ ಯುದ್ಧ ನಡೆಯುತ್ತಿರುವಾಗ ಹುಚ್ಚು ಹಿಡಿದಿತ್ತು. ಅವನು ಒಳ್ಳೆಯವನಾಗಿದ್ದರೂ ಅವನ ಸುತ್ತಲೂ ಇದ್ದ ಜನ ಅವನಿಗೆ ಹುಚ್ಚು ಹಿಡಿಸಿದ್ದರು! ಅವನ ಕಥೆ ಒಂದು ಒಳ್ಳೆಯ ನಾಟಕವಾಗಿ ಮೂಡಿಬಂದಿದೆಯಂತೆ. (ಆ ನಾಟಕದ ಪ್ರದರ್ಶನ ಈಗ ಇಂಗ್ಲಂಡ್‌ನಲ್ಲಿ ಆಗುತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಬಹುಶಃ ನಾನು ಅಮೇರಿಕಾದಲ್ಲಿನ ಪ್ರದರ್ಶನದ ಬಗ್ಗೆ ವಿಮರ್ಶೆ ಓದಿರಬೇಕು). ಆ ನಾಟಕದ ಪುಸ್ತಕ ಸಿಕ್ಕರೆ ಮರೆಯದೇ ತಗೊಂಡು ಬಾ.

ನಾನೀಗ ಆರಾಮವಾಗಿದ್ದೇನೆ. rest, meditation ಮತ್ತು will powerಗಳಿಂದಾಗಿ!

ನೀ ಹೇಗಿದ್ದೀ ? ಫ್ರಾನ್ಸ್ ಹೇಗಿದೆ ? ನೀನು ನಿನ್ನ ಗೆಳೆಯರೊಂದಿಗೆ ಇರುವ ಹಲವು ಫೋಟೋಗಳನ್ನು ನೋಡಿದೆ. ನೀನು ಚೆನ್ನಾಗಿ ಕಾಣಿಸುತ್ತೀ...

ಚಿದು ಕಾಗದ ಬರೆದಿದ್ದ. ಬೇರೆ ದೇಶಗಳಿಗೆ ಒಮ್ಮೆ ಪ್ರಯಾಣ ಮಾಡಿ ಎಂದು ಸೂಚಿಸಿದ್ದ. ಆದರೆ ನನಗೆ ಪ್ರಯಾಣ ಮಾಡುವಷ್ಟು ಆರೋಗ್ಯ ಇಲ್ಲ. ಹಾಗೆಯೇ ಈ ಟೂರಿಸ್ಟ್ ಜಾಗಗಳನ್ನು ಕಂಡರೆ ನನಗೆ ಅಸಹ್ಯ!

ಬೆಂಗಳೂರಿನಲ್ಲಿ ಇಲ್ಲಿಯವರೆಗೆ ಮಳೆಯಾಗಿಲ್ಲ. ಬಹಳ ಸೆಖೆ. ಸಾಮಾನ್ಯವಾಗಿ ಎಪ್ರಿಲ್ ಕೊನೆಯ ಭಾಗದಲ್ಲಿ ಬೆಂಗಳೂರಿನಲ್ಲಿ ಮಳೆಯಾಗುತ್ತದೆ. ಅದಾದ ನಂತರ ಬೆಂಗಳೂರು ಟರ್ಫ್ ಕ್ಲಬ್‌ನವರು ರೇಸ್‌ಗಳಿಗೆ ತಮ್ಮ ಟ್ರ್ಯಾಕ್‌ಗಳನ್ನು ಸಿದ್ಧಪಡಿಸುತ್ತಾರೆ. ಈ ಬಾರಿ ಅದು doubtful.

ನಿನ್ನ ಪ್ರೀತಿಯ
ಅಪ್ಪ

★★★

...ಹೀಗೆ
ಹೀಗೆ ತನ್ನ ಆಸಕ್ತಿಗಳನ್ನು ವ್ಯಕ್ತಪಡಿಸುತ್ತಾ -
ಅವುಗಳ ಬಗ್ಗೆ ಕುತೂಹಲ ತಾಳುವಂತೆ ಮಾಡುತ್ತಿದ್ದರು ಅಪ್ಪ;
ಬೆಂಗಳೂರಿನಲ್ಲೇ ಕೂತಿದ್ದರೂ, ನಾನು ಹೋಗುತ್ತಿದ್ದ ದೇಶಗಳನ್ನು ತಮ್ಮ ಕಣ್ಣುಗಳ ಮೂಲಕ ನನಗೆ ತೋರಿಸುತ್ತಿದ್ದರು ನನ್ನ ಅಪ್ಪ;
ಚಿಕ್ಕವಳಾಗಿದ್ದಾಗ ನನ್ನ ಕೈ ಹಿಡಿದು ನಡೆಸುತ್ತಿದ್ದ ಅಪ್ಪ
ಕೊನೆಯವರೆಗೂ ಮಾರ್ಗದರ್ಶಿಯಾಗಿದ್ದರು;
ಎಲ್ಲರೊಂದಿಗೆ, ನನಗೂ 'ಮೇಷ್ಟ್ರು' ಆಗಿದ್ದವರು -
ಅದರೊಂದಿಗೇ ಅಪ್ಪನೂ ಆಗಿದ್ದರು ...

ಇಷ್ಟು ಹೇಳಿದ ಮೇಲೆ -
ಇನ್ನು ಏನು ಹೇಳಿದರೂ
ನಿರರ್ಥಕ
ಅಲ್ಲವೇ...?

ಗೆಳತಿ : ಲಂಕೇಶ್

೦ ವೈದೇಹಿ

'ಸಮಗ್ರ' ಎಂಬುದು ವ್ಯಕ್ತಿತ್ವ ವರ್ಣನೆಯಲ್ಲಿ ಅರ್ಥ ಪಡೆಯುವುದಿಲ್ಲ. ಸಮಗ್ರವಾಗಿ ಯಾರನ್ನೂ ಹಿಡಿಯಲು, ಸ್ವತಃ ತನ್ನನ್ನೂ - ಅಂತಿರುವಾಗ, ಇದು ಆ ಪ್ರಯತ್ನವಲ್ಲ...

ಮಲಯಾಳಿ ಕಟ್ಟು ಮಸ್ತು - ಕಾಂತಿ ಎಣ್ಣೆಗಪ್ಪು - ದಿಟ್ಟ ಹರಿತ ದೃಷ್ಟಿ - ನೇರ, ಒರಟು ಗಂಡುಮಟ್ಟು - ಸಿಡಿ ಸಿಡಿ - ಚಡಪಡಿ- ಸಂಕೋಚ. ತೀವ್ರ ವ್ಯಾಮೋಹಿಯಾದ ಈತ ತನ್ನ ಮುಗುಳ್ನಗೆ ಹುಬ್ಬುಗಂಟುಗಳ ಹೊತ್ತುಗೊತ್ತನ್ನು ಕೊನೆಯವರೆಗೂ ಬಿಟ್ಟುಕೊಡದೇ ಹೋದ. ಆ ಕ್ಷಣದ ಪ್ರತಿಕ್ರಿಯೆಯಾಗಿ ಚಿಮ್ಮುವ ಮರುಕ್ಷಣದಲ್ಲಿಯೇ ಮತ್ತೆ ಇನ್ನೊಂದೇ ಆಯಾಮಕ್ಕೆ ಮುಖಮಾಡಿ ಚಿಂತಿಸುವ ಲಂಕೇಶ್ ನಾನು ಕಂಡ ಅತ್ಯಂತ ಮನುಷ್ಯ ಸಹಜ - ಮನುಷ್ಯರಲ್ಲೊಬ್ಬರು. ವಿಚಿತ್ರ ಗೈರತ್ತಿನ ಬರೆಹಗಾರ . ತನ್ನ ಗೈರತ್ತಿಗೆ ತಾನೇ ಅಂಜಿ ದೂರ ನಿಂತು ನೋಡುವ ಪುಕ್ಕ . ಒಂದೆಡೆ ಉಗ್ರರೂಪಿ ಆಗಿ ತಿಕ್ಕಲು ಆಗಿ ಕಾಣುತ್ತಿದ್ದಂತೆಯೇ ಇನ್ನೊಂದೆಡೆ ಪ್ರೀತಿ ಪ್ರೇಮದ ಕುರಿತ ಮೆಲುನುಡಿಗಳಲ್ಲಿ ಕಳೆದುಹೋಗುವ- ಕ್ರೋಧೋನ್ಮತ್ತನಾಗಿ ಜರೆಯುತ್ತಿದ್ದ ಪುಟದ ಆಚೆ ಬದಿಯಲ್ಲಿಯೇ ಪುಟ್ಟ ಗರಿಕೆಯೊಂದರ ಕುರಿತು ಪ್ರಶಾಂತ ಮುದ್ರೆಯಲ್ಲಿ ಧ್ಯಾನಿಸುವ - ಹೀಗೆ ಕುಶಾಗ್ರ ಕಂಪನದಿಂದ ಹಿಡಿದು ಸೂಕ್ಷ್ಮಾತಿಸೂಕ್ಷ್ಮ ಬಿಸುಸುಯ್ಯಲು, ಆಟ - ಓಟ - ಬೀಸು - ರೇಸು - ಮನಸು - ದೇಹ - ಹೂವು - ಹಕ್ಕಿ- ಪ್ರಾಣಿ - ಕೀಟ - ರಾಜಕೀಯ ...ಎಲ್ಲವೂ , ಪ್ರಪಂಚದಲ್ಲಿ ತನಗೆ ದಕ್ಕುವ ಎಲ್ಲವೂ , ಸಾಹಿತ್ಯ ಸೃಷ್ಟಿಯಲ್ಲಿ ಜೀವ ತಾಳಬೇಕು ಎನ್ನುವ ಪರಮ ಸೂಕ್ಷ್ಮ ಸಾಹಿತಿ .

★ ★ ★

ಸಾಹಿತಿಯಾದವ ಒಳ್ಳೆಯ ಭಾಷಣಕಾರನೂ ಆಗಿರಬೇಕು ಅಂತ ನಾನೇ ಊಹಿಸಿಕೊಂಡಿದ್ದ ಕಾಲವದು. ನನಗೆ ಸಂದರ್ಭ ನೆನಪಾಗುತ್ತಿಲ್ಲ. ಶಿವಮೊಗ್ಗ ನಗರ ಸಭೆಯ

ಆವರಣದಲ್ಲಿ ಲಂಕೇಶ್ ಭಾಷಣವಿತ್ತು. ಜನ ದಟ್ಟ ಸೇರಿದ್ದರು. ಅಷ್ಟ ತಿಷ್ಟ ವಾಕ್ಯಗಳಲ್ಲಿ ಭಾಷಣ ಆರಂಭವಾಯ್ತು. ಮುಂದೆ ಹೋಗುತ್ತ ಹಿಂದೆ ಬರುವ ಮತ್ತೆ ಮುಂದೆ ಹೋಗುವ ಜಿಗ್ ಜಾಗ್ ನಡಿಗೆಯ ಭಾಷಣ ಹಾಗೆಯೇ ಸಾಗಿತು. ಸಾಗಿತು, ಮುಗಿಯಿತು. ಅವತ್ತೇ ನಾನವರನ್ನು ಮೊದಲು ನೋಡಿದ್ದು. ದೂರದಿಂದ ಕಾಣುತ್ತಿರಲಿಲ್ಲ. ಕಾಣುತಿದರೆ ಮುಖಮಾತ್ರ - ಅದೂ ಸ್ಪಷ್ಟವಾಗಿ ಅಲ್ಲ, ಕಾಣುತ್ತಿತ್ತು. ಆಗ ಅವರು ನನಗೆ ಇದ್ದದ್ದೂ ಹಾಗೆಯೇ. ದೂರದ ಲೇಖಕನಾಗಿ, ಒಬ್ಬ ಲೇಖಕನಾಗಿ ಮಾತ್ರ. (ಅಷ್ಟು ಮಾತ್ರನಾಗಿ ಅಥವಾ ಬರಕೊಂಡು, ಸಿನೆಮಾ ಮಾಡಿಕೊಂಡು, ಪದ್ಯ - ನಾಟಕ ಅಂತ ಬ್ಯಾತಿಗೊಂಡು ಅಷ್ಟಕ್ಕೇ ಇದ್ದುಕೊಂಡಿದ್ದರೆ ಈಗಿರುವ ಲಂಕೇಶ್ ಚಿತ್ರವೇ ಬೇರೆ ಇರುತ್ತಿತ್ತಲ್ಲವೆ!). ಬರೆದವರನ್ನು ಓದದೆಯೂ, ನಾಡಿನಲ್ಲಿ ಲೇಖಕರು ಅಂತ ಹೆಸರಾದವರನ್ನು ನಾವೂ 'ಲೇಖಕರು' ಅಂತ ಒಪ್ಪಿಕೊಂಡು ಬಿಡುತ್ತೇವಲ್ಲ. ಹಾಗೆ ಆಗ ಅವರ ಬೆರಳೆಣಿಕೆಯ ಕಥೆಗಳನ್ನಷ್ಟೇ ಓದಿಕೊಂಡಿದ್ದರೂ ನಾನವರನ್ನು ಅದಕ್ಕಿಂತ ಮುಂಚೆಯೇ ದೊಡ್ಡ ಲೇಖಕ ಅಂತ ಒಪ್ಪಿಕೊಂಡು ಆಗಿತ್ತು. ಅಷ್ಟೇ ಅಲ್ಲ, ಭಾಷಣವೆಂದರೆ ನಿರರ್ಗಳವಾಗಿರಬೇಕು, ಮನರಂಜನೆಯಂತಿರಬೇಕು, ಚಪ್ಪಾಳೆಗಳ ನಡುವೆ ಸಾಗಬೇಕು ಅಂತೆಲ್ಲ ಹೇಗೋ ನನ್ನ ಭಾವನೆ ಆಗಿತ್ತು. ಮಾತೆಂಬುದು ಅತಿ ಕಷ್ಟ, ಅದು ತಲ್ಲಣ, ತಳಮಳ, ನೋವು, ಚಿಂತನೆ ಅನುಮಾನಗಳನ್ನು ಆ ಕ್ಷಣದಲ್ಲಿ ಮತಿಗಳವಡಿಸಿ ಹೇಳಲು ಹೊರಡುವ ಸಾಹಸ ಎಂಬ ಕಲ್ಪನೆ ಸುಳಿದಿರಲು ಕೂಡ ಇಲ್ಲ. ಅಂದು ಆತ ಶಬ್ದದೊಳಗಿನ ನಿಶ್ಶಬ್ದವನ್ನು ಸೂಚಿಸುವ ಶಬ್ದಕ್ಕಾಗಿ ತಡಕಾಡುತ್ತಿದ್ದುದು (ಅಂತ ಅರಿವಾದದ್ದು ಬಹಳ ನಂತರದ ಕಾಲದಲ್ಲಿ) ಈಗಲೂ ಕಣ್ಣಿಗೆ ಕಟ್ಟಿದಂತಿದೆ. ನಾನು ಈತ ಬರೆಯುವುದಷ್ಟೇ - ಮಾತಾಡಲು ತಿಳಿಯದವ ಅಂತಂದುಕೊಂಡೆ!

★ ★ ★

ಮುಂದಾದರೂ ನಾನವರನ್ನು ಪ್ರತ್ಯಕ್ಷ ಕಂಡದ್ದು ಮಾತಾಡಿದ್ದು ಸ್ವಲ್ಪವೇ-ಸಂಕ್ಷಿಪ್ತವೇ. ಸಂಪಾದಕ - ಲೇಖಕನಾಗಿ ದೂರವೇ ಇದ್ದ ಲಂಕೇಶರಿಂದ ಒಮ್ಮೆ ಅನಿರೀಕ್ಷಿತವಾಗಿ ಒಂದು ಪತ್ರ ಬಂತು-''ಚೆನ್ನಾಗಿ ಬರೆಯುತ್ತೀರಿ. ಪತ್ರಿಕೆಗೆ ಬರೀರಿ'' ಅಂತ. ವಾರಕ್ಕೋ ಹದಿನೈದು ದಿನಕ್ಕೋ ಕಾಲಂ ಬರೀರಿ-'ಗೆಳತಿ' ಕಾಲಂಗೆ. ನೀವು ಕಂಡದ್ದು- ನಿಮ್ಮನ್ನು ಕಲಕಿದ್ದು - ನಿಮ್ಮ ಸಂತೋಷ, ನೋವು, ಕಾಳಜಿ - ಏನು ಬರೆದರೂ ಸರಿಯೇ. ತಿಂಗಳಿಗೆ ಇಂತಿಷ್ಟು ಕೊಡುತ್ತೇನೆ ; ಇದು ನನ್ನಕ್ಕೆ ; ಹೀಗೆ ನನ್ನ ಒಂದು ಕಥೆ ಮೆಚ್ಚಿ ಬರೆದಿದ್ದರು. ಅದೇ ಸಮಯದಲ್ಲಿ ಉಡುಪಿಯಲ್ಲಿ ಚಿರಂತನ ಬಳಗದವರು ಏರ್ಪಡಿಸಿದ ರಂಗಭೂಮಿ ಕುರಿತ ಸಂಕಿರಣವನ್ನು ಉದ್ಘಾಟಿಸಲು ಬಂದಿದ್ದರು. ''ಮುಖತಃ ಭೇಟಿ'' ಅಂತ ಆದದ್ದು ಆಗಲೇ. ''ಕಥೆ ಕಳಿಸಲು ಹೇಳಿದ್ದಿರಿ. ಆಗುತ್ತದೋ ಇಲ್ಲವೋ''- ಎಂದೆ.

''ಇಲ್ಲ ಆಗುತ್ತೆ. ಬರೀರಿ''.

ಲಂಕೇಶರೊಂದಿಗಿನ ಭೇಟಿ ಎಲ್ಲವೂ ಇಷ್ಟೇ. ಕೆಲವೇ ಮಾತು. ಸ್ವಲ್ಪವೇ ಹೊತ್ತು ಸಂಕ್ಷಿಪ್ತ. ಹೊತ್ತು ತುಸು ದೀರ್ಘವಾದರೂ ನಾನು ಆಲಿಸಿದ್ದೇ ಹೆಚ್ಚು ಹೊರತು ಮಾತಿಗಿಳಿದದ್ದು ಕಡಿಮೆ. ನನ್ನ ತಾಯಿ (ಜೋರಿನ ಶಿಸ್ತಿನ ತಾಯಿ ಅವಳು) ತೀರಿಕೊಂಡ ಸಮಯದಲ್ಲೊಮ್ಮೆ ಬೆಂಗಳೂರಿಗೆ ಹೋಗಿದ್ದಾಗ ಅವರ ಕಛೇರಿಗೂ ಹೋಗಿದ್ದೆ. 'ನಿಮ್ಮ ಕಂಠ ಜೀಗಿದೆ. ನನಗೆ ಗೊತ್ತದು ಏನು ಅಂತ. ತಾಯಿ ಅಂದ್ರೆ ನಂಗೂ ಬಹಳ ಇತ್ತು. ಆದರೆ ಅಷ್ಟೆಲ್ಲ ಹಚ್ಚಿಕೋ ಬೇಡಿ. ಕಂಠದಲ್ಲಿ ದುಃಖ ಕಟ್ಟಿಕೊಳ್ಳೋದಕ್ಕಿಂತ ಅತ್ತು ಬಿಡಿ ಒಳ್ಳೇದು' ಎಂದರು. ನನ್ನ ಕಂಠ ಹೊರಗೆ ಕಾಣುವಷ್ಟು ಬಿಗಿದಿರುವುದು ತಿಳಿದದ್ದು ನನಗೆ ಆಗಲೇ.

ಹೀಗೆ ಒಟ್ಟು ಸೇರಿಸಿದರೆ ಎಂಟೊಂಭತ್ತು ಬಾರಿ ಮಾತ್ರ ಪ್ರತ್ಯಕ್ಷ ಭೇಟಿ ಆಗಿರಬಹುದೇನೋ. ಪ್ರಗತಿ ರಂಗದ ಭಾಷಣಗಳಿಗಾಗಿ ಬಂದಾಗ ನಮ್ಮ ಮನೆಗೂ ಬಂದಿದ್ದರು. ನಾವು ಮುಂಚೆ ವಾಸಿಸುತ್ತಿದ್ದ ಮನೆಯದು. ವಿಶಾಲ ವಠಾರ- ನಲವತ್ತೆಂಟು ಮನೆಗಳು ! ಅಲ್ಲಲ್ಲಿ ಮಾವಿನ ಮರ. ನಮ್ಮ ಮನೆಯ ಮುಂದಿನ ಮಾವಿನಮರದಡಿ ಕಾರು ನಿಲ್ಲಿಸಿ ಅವರು ಗೆಳೆಯ ರಾಮದಾಸ್, ತೇಜಸ್ವಿನಿ (ಮತ್ತೆ ಒಬ್ಬರು ಜೊತೆಗಿದ್ದರು, ಯಾರು ಅಂತ ನೆನಪಾಗುತ್ತಿಲ್ಲ) ಯವರ ಜೊತೆಗೆ ಅದೇ ಆ ಲಕ್ಷಣವಂತ ಮಲೆಯಾಳೀ 'ತಿಳಿನಗು ಕೂಡಿಸು ಗಾಂಭೀರ್ಯ'ದಲ್ಲಿ ನಡೆದು ಬಂದದ್ದು ನೆನಪಾಗುತ್ತಿದೆ. ಅಂದು ಮನೆಯ ಎಲ್ಲರೂ ಮನೆಯಲ್ಲೇ ಇದ್ದೆವು. ಜೊತೆಗೆ ನನ್ನ ಅಣ್ಣನೂ ಇದ್ದ. ಎಲ್ಲರೊಡನೆ ಖುಶಿಯಾಗಿ ಸಹಜವಾಗಿ ಬೆರೆತು ಮಾತಾಡಿಕೊಂಡಿದ್ದು ಮತ್ತೆ ಮತ್ತೆ ಆ ಮಾವಿನ ಮರಗಳ ಕುರಿತು ಕೇಳಿದ್ದು, ಅವು ನಮ್ಮ ಕೋ. ಲ. ಕಾರಂತರ ತೋಟದ್ದು ಎಂದಾಗ ಅವರ ಕುರಿತು ಆಸಕ್ತಿಯಿಂದ ವಿಚಾರಿಸಿದ್ದು, ಅವರ ಪುಸ್ತಕ ''ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು'' ಮತ್ತು ಫುಕುವೋಕಾನ ಕುರಿತೆಲ್ಲ ತೀರ ಲೋಕಾಭಿರಾಮ ಮಾತುಕತೆಗಳ ಮೂಲಕವೇ ನೆಗೆದು ಗಂಭೀರರಾದದ್ದು ಎಲ್ಲ ನೆನಪಿನಲ್ಲಿ ಕುಳಿತಿದೆ. ಅಂದು ಸುಮಾರು ಅರ್ಧಗಂಟೆಗೂ ಮಿಕ್ಕಿ ನಮ್ಮೊಂದಿಗೆ ಇದ್ದು ಮುಂದೆ ಕುಂದಾಪುರದಲ್ಲಿ ನಡೆವ ಸಭೆಗಾಗಿ ಅವರು ಹೊರಟು ಹೋದರು.

★ ★ ★

ಕಾಲಂ ಬರೀರಿ, ತಿಂಗಳಿಗೆ ಇಂತಿಷ್ಟು ಕೊಡುತ್ತೇನೆ ಅಂದರಲ್ಲವೆ? ತಿಂಗಳು ತಿಂಗಳು ಅದು ಕರಾರುವಾಕ್ಕಾಗಿ ಬಂದೇ ಬಂತು. ಅಷ್ಟೇ ಅಲ್ಲ, ನಿರಂತರವಾಗಿ ಕೆಲಕಾಲ ಬರೆದ ಮೇಲೆ ವೈಯಕ್ತಿಕ ಕಿರಿಕಿರಿ ಹಾಗೂ ಹರಬುಗಳ ನಡುವೆ ಅಷ್ಟು ನಿರಂತರವಾಗಿ ಬರೆಯಲು ಆಗದೇ ನಾನು ಸುಮ್ಮನಿದ್ದಾಗಲೂ ದುಡ್ಡು ಮಾತ್ರ ಬರುತ್ತಲೇ ಇತ್ತು. ''ದಯಮಾಡಿ ಹೀಗೊಂದು ಮಾಡಬೇಡಿ. ನಾನು ಬರೆದಾಗ ಕಳಿಸಿದರೆ ಸಾಕು''.

''ಈಡಿಯಟ್...''

ಮೂರು ನಾಲ್ಕು ಬಾರಿ ಕೇಳಿಕೊಂಡ ಮೇಲೆ ದುಡ್ಡು ನಿಂತಿತು. ಹೀಗೆ ಪತ್ರಿಕೆಯ ಲೇಖಕರನೇಕರ ಅನುಭವ ಅಂತ ಕೇಳಿದೆ.

ನನ್ನ ಮಗಳು ನಯನಾಳ ಮದುವೆ ನಿಶ್ಚಯವಾದಾಗ -''ದುಡ್ಡು ಗಿಡ್ಡು ಬೇಕ ?

ಸಂಕೋಚ ಮಾಡ್ಕೋಬೇಡಿ''

- ಈ ಅನಿರೀಕ್ಷಿತ ಫೋನಿಗೆ ಒಮ್ಮೆ ಬವರಿ ಹೋದೆ. ಇವರ ವರೆಗೆ ಇದು ತಲುಪಿದ್ದು ಹೇಗೆ... ಆತ ಅದನ್ನು ಪತ್ತೆ ಹಚ್ಚಿದವರಂತೆ ''ಅಷ್ಟು ಆತಂಕ ಪಟ್ಕೋಬೇಡಿ. ಇದೆಲ್ಲ ನಾನು ದಾಟಿಕೊಂಡೇ ಬಂದವ್ನು. ಬೇಕಿದ್ದರೆ ಏನೂ ಸಂಕೋಚ ಬೇಡ. ಕೇಳಿ''-

ಮೆಲ್ಲಗೆ ಉತ್ತರಿಸಿದೆ- ಆಚೆಂದ -

''ಈಡಿಯಟ್...''

ದುಡ್ಡಿನ ಅಗತ್ಯವೊಂದು ಕಷ್ಟ ಅಲ್ಲ - ಅಲ್ಲವೆ? ಸಮಸ್ಯೆ ; ಪರಿಹಾರ ಇದ್ದೀತು....

''ಗುಡ್''. ಗಡಿಬಿಡಿಯ ಗುಡ್. ಗಡಿಬಿಡಿಯ ಮಾತು- ನಗೆ. ತನ್ನ ಆರೋಗ್ಯದ ಸಮಾಚಾರ ; ಸೂಕ್ಷ್ಮ ಇಲ್ಲದವರು ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ ಹೋದರೂ ಏನೂ ಬರೆಯಲಾರರು; ಸೂಕ್ಷ್ಮವಂತರು ನಮ್ಮ ಆಫೀಸಿಂದ ಮಲ್ಲೇಶ್ವರಂವರೆಗೆ ಹೋಗಿ ಬಂದರೂ ಸಾಕು. ಕಾದಂಬರೀನೇ ಬರೀಬಹುದು... ಏಲ್ಲ ಕಾಯುವ ಕ್ರಮ, ಗ್ರಹಿಸುವ ತೀವ್ರತೆ - ಅಂತೆಲ್ಲ ಮುಂದೆ ...

... ಆಗ ಆತಂಕಗೊಳಿಸಿದ ಆ ಫೋನಿನ ನೆನಪಿಂದ ಈಗ ಏನೆ ನೆನೆಯುತ್ತಿದೆ. ಈತನೊಂದಿಗಿನ ಕೆಲವೇ ಭೇಟಿ, ಕೆಲವೇ ಮಾತುಗಳಾಚೆ ನಾನು ಕಂಡದ್ದು (ನೇರವಾಗಿ ನನಗೇ ಮುಖಾಮುಖಿಯಾಗಿದ್ದು) ಮಾತ್ರ ಆತನ ಮಮತೆ.. ವಿಶ್ವಾಸ ಸ್ನೇಹಮಯ ಅಂತಃಕರಣ...

★ ★ ★

ಪ್ರಿಯ ಲಂಕೇಶ್, ಇದು ಮಾತ್ರ ಖಂಡಿತ. ನೀವು ಅಂದು ಹೇಳಿ ಕಾಲಂ ಬರೆಸದಿದ್ದಲ್ಲಿ, ನೀವು ಮತ್ತು ಶ್ರೀ ಸುಬ್ಬಣ್ಣ ಒತ್ತಾಸೆ ನೀಡದಿದ್ದಲ್ಲಿ ಈಗ ಬರೆದಿರುವಷ್ಟನ್ನೂ ನಾನು ಬರೆಯುತ್ತಿರಲಿಲ್ಲ. ನೀವು ನನ್ನ ಬರವಣಿಗೆ ಕುರಿತೇ ಬರೆದಿರಿ. ಅದುವರೆಗೆ ಲೇಖಕರ ಕುರಿತೇ ಪುಟಗಟ್ಟಲೆ ಓದಿ ನಾವೆಲ್ಲ ''ಚರ್ಚಿಸಲ್ಪಡತಕ್ಕವರಲ್ಲ'' - ಎಂಬ ಭಾವನೆ ಸುಪ್ತಮನದಲ್ಲಿ ಅಡಗಿದ್ದಕ್ಕೋ ಏನೋ, ನನಗದು ಓದಿ ಶಾಕ್ ಆಗಿತ್ತು. ಫೋನಿನಲ್ಲಿಯೂ, ನನ್ನ ಬರಹ ಓದಿದ ತಕ್ಷಣ, ಪ್ರತಿಕ್ರಿಯಿಸುತ್ತಿದ್ದಿರಿ. ಎಲ್ಲ ನೆನಪಾಗುತ್ತಿದೆ. ಇದೆಲ್ಲ ಕಷ್ಟವೇ. ಕರಿಯರು, ದಲಿತರು, ಮಹಿಳೆಯರು - ಬೇರೆಯವರನ್ನೇ ನೋಡುತ್ತ ಕೇಳುತ್ತ ಅವರೆಲ್ಲ ಹೌದು - ನಾವು ಅಲ್ಲ ಎಂಬ ಮಾಯೆಗೊಳಗಾಗಿ ಬೆಳೆದವರು. ನಮ್ಮನ್ನು ಮರೆತುಕೊಳ್ಳುವವರು. ನಮ್ಮಂಥವರಿಗೆ ಮೆಚ್ಚುಗೆಯನ್ನು ನಿರ್ವ್ಯಾಜವಾಗಿ ನೇರವಾಗಿ ತಿಳಿಸಲು ಮನಸ್ಸು ಬರುವುದು ಅಂಥಾ ಅಪರೂಪದ ಸಂಗತಿ. ಇದು ಒಂದಾದರೆ, ಹೇಳಿದರೆ ಹಿಗ್ಗಿಯಾರು ಅಂತ, ಅಹಂಕಾರ ಬಂದೀತು ಅಂತ, ಬರವಣಿಗೆ ಅಲ್ಲಿಯೇ ನಿಂತೀತು ಅಂತ, ಮತ್ತಷ್ಟು ಬರೆದಾರು ಎಂಬ ಅಸೂಯೆ, ದೋಷವೇ ಕಾಣುವುದು ಒಂದು, ಈಕೆ ಮಹಿಳೆ ಎಂದಾಗ ತಂತಾನೇ ಏಳುವ ಅವಜ್ಞೆಯೊಂದು, ಸಮಕಾಲೀನರ ಸಾಹಿತ್ಯವನ್ನು ಓದುವ ವ್ಯವಧಾನವೇ ಇಲ್ಲದಿರುವುದು ಒಂದು, ಮೆಚ್ಚಿದರೆ ಸ್ವಂತಕ್ಕೆ ಏನೂ ಉಪಯೋಗವಿಲ್ಲದೇ ಇರುವುದೊಂದು - ಹೀಗೆ ಕಾರಣಗಳು ಅನೇಕ. ಆದರೆ ಈ ಕಾರಣಗಳಾವುವೂ ನಿಮ್ಮನ್ನು

ನನ್ನ ಮಟ್ಟಿಗೆ ಸಾಧಿಸಲೇ ಇಲ್ಲ. ನನ್ನಲ್ಲಿರುವ ಲೇಖಕಿಯಲ್ಲಿ ಅಕೃತ್ರಿಮ ಅಚಲ ವಿಶ್ವಾಸ ಇಟ್ಟಿರಿ. ಒಂದಕ್ಷರವನ್ನೂ ತೆಗೆಯದೇ ಪೂರ್ಣಸಂಪೂರ್ಣ ಪ್ರಕಟಿಸಿದಿರಿ. ಇದು ನನ್ನ ಆತ್ಮ ವಿಶ್ವಾಸಕ್ಕೆ ಹೆಚ್ಚಿನ ಬಲ ಕೊಟ್ಟಿತೆಂದು ನೀವು ಬಲ್ಲಿರಿ.

ತನ್ನಲ್ಲಿ ತನಗೇ ಗುರುತು ಸಿಗದ ತನ್ನನ್ನು ತೋರಿಸಿ ಕೊಟ್ಟಲ್ಲಿ ಅದು ಯಾವುದೇ ಕಲಾವಿದನ ಪುಣ್ಯ ತಾನೆ? ನೀವು ಅನೇಕರಿಗೆ ಅದನ್ನು ಮಾಡಿದಿರಿ.

ಶ್ರೀಮತಿ ಸರಸ್ವತೀ ಬಾಯಿ ರಾಜವಾಡೆ ಒಮ್ಮೆ ಒಂದು ಸಂಗತಿ ಹೇಳಿದ್ದು ನೆನಪಾಗುತ್ತಿದೆ. ಅವರನ್ನು ನೋಯಿಸಿದ ಸಂಗತಿ ಅದು. ದ.ಕ. ಜಿಲ್ಲಾ ಸಾಹಿತ್ಯ ಸಮ್ಮೇಳನವೊಂದರಲ್ಲಿ ಅವರಿಗೆ ಸನ್ಮಾನ ಮಾಡಿದರು. ಈ ಸುದ್ದಿ ಕೇಳಿದ ಕನ್ನಡದ ಹಿರಿಯ ಸಾಹಿತಿಯೊಬ್ಬರು -''ಆ ಹೆಂಗಸು ಇನ್ನೂ ಇದೆಯೇ!?'' ಎಂದು ಉದ್ಗರಿಸಿದರಂತೆ. ಇದು ಆಕೆಯ ಕಿವಿ ತಲುಪಿ ಸಂಕಟ ಪಟ್ಟಿದ್ದರು. ಆತ ನಿಮ್ಮನ್ನು ಛೇಡಿಸುವ ಅಥವಾ ಅಗೌರವಿಸುವ ಉದ್ದೇಶದಿಂದ ಹೇಳಿರಲಿಕ್ಕಿಲ್ಲ. ಖಂಡಿತ ಆತ ಅಂಥವರಲ್ಲ. ಮಾತಿನಂಶವಾಗಿ ಹೊಮ್ಮಿದ ಅಚ್ಚರಿ ಆಗಿರಬಹುದು ಅದು ಅಂತ ಸಮಾಧಾನ ಮಾಡಿದರೆ ಆಕೆಗೆ ಸಮಾಧಾನ ಆಗಬೇಕಲ್ಲ! ''ಆ ಮಾತು ಅಷ್ಟು ಅಮಾಯಕವಲ್ಲರೀ. ತನ್ನ ಕಾಲದ ಲೇಖಕಿಯೊಬ್ಬಳ ಕಡೆಗೆ ಯಾವ ಗಮನವನ್ನೂ ಕೊಡದೆ ತಮ್ಮ ನೇರಕ್ಕ ತಮ್ಮದೇ ವರ್ತುಳದವರೊಂದಿಗೆ ಬರಕೊಂಡು, ವಿಮರ್ಶಿಸಿಕೊಂಡು ಹೊರಟವರು ಮಾತ್ರ ಹೀಗೆ ಉದ್ಗರಿಸಲು ಸಾಧ್ಯ. ಅದೊಂದು ಬಗೆಯ ನಿರ್ಲಕ್ಷ್ಯ, ಅನಾದರ. ಅಲ್ಲವೆಂದರೆ ನಾನವರಿಗೆ 'ಆ ಗಂಡಸು ಇನ್ನೂ ಇದೆಯೆ?' -ಅಂತನ್ನಲು ಯಾಕೆ ಸಾಧ್ಯವಾಗುವುದಿಲ್ಲ ?'' ಎಂದು ಮರುಪ್ರಶ್ನೆ ಹಾಕಿದ್ದರು ರಾಜವಾಡೆ. ''ದಾಕ್ಷಿಣ್ಯಕ್ಕೋ, ಸಹಾನುಭೂತಿಗೋ, ನಾಲ್ಕು ಸಾಲು ಕವನದಲ್ಲೋ, ಎದುರಾದಾಗ ಬೆನ್ನು ತಟ್ಟಿಯೋ-ಮಾತಾಡಿಬಿಟ್ಟರೆ ಸಾಲದು. ಬರವಣಿಗೆಯನ್ನು ನಾನು ನಿಲ್ಲಿಸಿದ ಕಾರಣಗಳಲ್ಲಿ ಇದೂ ಒಂದು. ನಾನು ಎಲ್ಲಿ ಇದ್ದೇನೆ ಅಂತಲೇ ತಿಳಿಯದೇ ಹೋದದ್ದು, ಬರವಣಿಗೆ ಬೆಳೆಯಲು ತಡಕಾಡಿ ಸಾಕಾದದ್ದು. ಆ ಕಾಲದಲ್ಲಿ ದೊಡ್ಡ ಲೇಖಕರು, ವಿಮರ್ಶಕರು ಇದ್ದರು ನಿಜ; ಆದರೆ ಅವರೆಲ್ಲ ಈ ಲೆಕ್ಕದಲ್ಲಿ ಮಾತ್ರ ಬರೀ ಬೂಸು. ನಮ್ಮನ್ನು ಅವರು ಸೇರಿಸಿಕೊಳ್ಳಲೇ ಇಲ್ಲ. ಯಾವುದಕ್ಕೂ ನಮಗವರು ಒದಗಿ ಬರಲಿಲ್ಲ. ಆಗ ನಮಗೆ ಅದು ಅಗತ್ಯವಾಗಿತ್ತು'' -ಎಂದಿದ್ದರು.

ಪ್ರತಿಭೆ ಇರುವವರು ಯಾರ ಶಿಫಾರಸನ್ನೂ ಕಾಯದೆ ಬರೆಯುತ್ತಾರೆ ಅಂತ ಸುಲಭದಲ್ಲೊಂದು ಮಾತು ಒಗೆದು ಬಿಡಬಹುದು. ಆದರೆ ರಾಜವಾಡೆಯವರ ಮಾತಿನಲ್ಲಿ ಅಡಗಿರುವ ಸೂಕ್ಷ್ಮಾಂಶಗಳನ್ನು ಎಂದಿಗೂ ಅಲ್ಲಗಳೆಯುವಂತಿಲ್ಲ ಅಲ್ಲವೆ? ನಾನು ಕೇಳಿದ ಪ್ರಕಾರ -ಪಂಜಾಬಿನಲ್ಲಿ ಹೀಗಾಗಲಿಲ್ಲ. ಬಂಗಾಳದಲ್ಲಿ ಹೀಗಾಗಲಿಲ್ಲ. ಕೇರಳದಲ್ಲಿಯೂ.

ನಮ್ಮನ್ನು ಬುಡಮಟ್ಟ ಅಲ್ಲಾಡಿಸುವುದು ಹಸಿವೆಯಲ್ಲ, ಬಡತನವಲ್ಲ; ಅವಮಾನ, ಅಲಕ್ಷ್ಯ, ವ್ಯಕ್ತಿಗತ ನೋವು -ಅಂತ ನೀವೆನ್ನುತಿದ್ದದ್ದು ನೆನಪಾಗುತ್ತಿದೆ. ಚೋಮನ ದುಡಿಯನ್ನು ವಿಮರ್ಶಿಸುತ್ತ ಆತನ ಸ್ವಂತ ಭೂಮಿಯ ಆಸೆಗಿಂತ ಅವನಿಗಾದ ಅವಮಾನ ಹಾಗೂ ನೋವನ್ನು ಅರಿತು ಆಡಿದ ಮಾತೂ ...

★ ★ ★

ಸಮಕಾಲೀನ ಲೇಖಕಿಯರನ್ನು ಗುರುತಿಸಿ ಬರೆಯಲು ಪತ್ರಿಕೆ ಪುಟಕೊಟ್ಟಿತು. ಈಕೆ ಮಹಿಳೆ ಅಂತಲ್ಲ, ಮುಸ್ಲಿಂ ಅಂತಲ್ಲ, ದಲಿತಳು ಅಂತಲ್ಲ. ಅಥವಾ ಅಂತಷ್ಟಕ್ಕೇ ಅಲ್ಲ. ಬರೆಹದಲ್ಲಿ ಆಕೆ ತನ್ನ ಅನುಭವದಲ್ಲಿ ನಿಜಗೊಂಡ ಏನನ್ನೋ ಹೇಳಲು ಯತ್ನಿಸುತ್ತಿದ್ದಾಳೆ, ಚಿಂತಿಸುತ್ತಿದ್ದಾಳೆ ಅಂತ ತುಸು ಕಂಡರೂ ಅದು ಪ್ರಕಟವಾಗುತ್ತಿತ್ತು. ಹೀಗೆ ಕನ್ನಡ ಸಾಹಿತ್ಯಕ್ಕೆ ಹೊಸ ದನಿ, ಸಂವೇದನೆ ಸೇರಿ ಬಂತು. ಬರವಣಿಗೆ ಎಂಬುದು ನಿಲುಕದ ನಕ್ಷತ್ರ ಎಂದು ದೂರವಿದ್ದ ಅನೇಕರು ಅದನ್ನು ನಿಲುಕಿಸಿಕೊಳ್ಳುವ ದಾರಿ ಹಿಡಿದರು. ಮಹಿಳೆಯರ ಮೇಲಿನ ದೌರ್ಜನ್ಯ ವರದಿಗಾಗಿ ಇಡಿ ಇಡೀ ಪುಟಗಳನ್ನೇ ಮೀಸಲಾಗಿಟ್ಟರು ಲಂಕೇಶ್. ಸ್ತ್ರೀ ಪರ ಅಥವಾ ದಲಿತಪರ, ಮುಸ್ಲಿಂ ಪರ ಎಂಬ ಸೀಮಿತ ಚೌಕಟ್ಟು ಮೀರಿ, ಜೀವಪರತೆಯಿಂದ, ಸ್ವಾತಂತ್ರ್ಯಪರ ಧೋರಣೆಯಿಂದ. ಮಹಿಳೆಯರ ಕುರಿತ ಪ್ರಸಂಗಗಳೆಲ್ಲ ಪತ್ರಿಕೆಗಳಿಗೆ ಹಣ ತರುವ ಸರಕಾಗಿ ಓದುಗರೆಂಬ 'ಗ್ರಾಹಕ'ರಿಗೆ ಒದಗಿಸುವ ರೋಚಕ 'ಗ್ರಾಸ'ಗಳಾಗಿ ರೆಕ್ಕೆ ಪುಕ್ಕಗಳೊಂದಿಗೆ ಬೇಕಿದ್ದರೆ ಮುಖಪುಟದ ಸೆಳೆತಗಳಾಗಿಯೂ ಹೊರ ಬೀಳುವ ಸಂದರ್ಭದಲ್ಲಿ ನೈಜ ಮಾನವೀಯ ಕಾಳಜಿಯಿಂದ ಘಟನೆಗಳ ಅಂತರ್ಯ ಶೋಧಿಸಿ ಬರೆಸಿ, ಒಂದು ಬಗೆಯ ಸೈದ್ಧಾಂತಿಕ ಹೋರಾಟವನ್ನು ಆ ಹೆಸರು ಕೊಡದೆಯೇ ನಡೆಸಿದರು ಲಂಕೇಶ್. ಪತ್ರಿಕೆಗಳೆಂದರೆ ರಾತ್ರಿ ಹಾಗೂ ಮಧ್ಯಾಹ್ನದ ನಿದ್ದೆಯ ಮುಂಚಿನ ಓದುವ ಸಾಮಗ್ರಿ ಮಾತ್ರವಾಗಿರುವಲ್ಲಿ - ಪತ್ರಿಕೆಯ ಓದು ಎಂಬುದು ಒಂದು ಸಾಮಾಜಿಕ ರಾಜಕೀಯ ಎಚ್ಚರ - ಚರ್ಚೆ - ಚಕಮಕಿ - ಶಿಕ್ಷಣ - ಓದು - ಸಂವಾದ - ಅದೊಂದು ಆತ್ಮ ಸಂಬಂಧೀ ಕ್ರಿಯೆಯನ್ನಾಗಿ ಪರಿವರ್ತಿಸಿದರು. ಕಮರ್ಷಿಯಲ್ ಪತ್ರಿಕೆಗಳಿಂದ ಭಿನ್ನವಾಗಿ ಸಂಪಾದಕನ ಜಾಗದಲ್ಲಿ ಇಲ್ಲೊಬ್ಬ ಕೇಳುಗನಿದ್ದ. ಓದುಗನಿದ್ದ. ವಿಮರ್ಶಕನಿದ್ದ. ಕಠಿಣತೆ - ಮುಗ್ಧತೆ - ಆತಂಕ - ಅಸೂಯೆ - ಜಗಳಕೋರತನ, ಮೃದುತ್ವ - ಪ್ರೀತಿ - ಸ್ಪಂದನಶೀಲತೆ - ಸೂಕ್ಷ್ಮತೆ - ಎಲ್ಲವನ್ನೂ ಆಳದ ಸೃಜನಶೀಲ ಮನದಲ್ಲಿ ಕಾಪಿಟ್ಟುಕೊಂಡ ಅಪ್ರತಿಮ ಲೇಖಕನಿದ್ದ.

ಒಂದು ಪತ್ರಿಕೆಗೆ ಜೀವಂತಿಕೆಯಿಂದ ಸ್ಪಂದಿಸುವ ಗ್ರಹಿಕೆಯನ್ನು ಕನ್ನಡ ಓದುಗ ಸಮುದಾಯಕ್ಕೆ ತಂದು ಕೊಟ್ಟರು ಲಂಕೇಶ್. ಪತ್ರಿಕೆ ಮುಖಾಂತರ ತಾವು ಓದಿದ ಕೇಳಿದ ಇಷ್ಟದ ಆಸಕ್ತಿಯ - ಪ್ರಪಂಚ ಸಾಹಿತ್ಯದಿಂದ ಮೊದಲುಗೊಂಡು ಎಲ್ಲವನ್ನೂ ಸರಳಕನ್ನಡದಲ್ಲಿ ಸಂಗ್ರಹವಾಗಿ ಒಳನೋಟದೊಂದಿಗೆ ಓದುಗರಿಗೆ ಒದಗಿಸುವವರು. ಸಾಹಿತ್ಯದ ವಿದ್ಯಾರ್ಥಿಗಳಾಗಿ ಎಕಾಡೆಮಿಕ್ ಶಿಸ್ತಿನಲ್ಲಿ ಧಂಡಿಯಾಗಿ ಓದಿಕೊಂಡವರಿಗೆ ಹೇಗೋ ತಿಳಿಯದು. ನನ್ನಂತಹ ಸಂಪೂರ್ಣವಾಗಿ ಬದುಕಿನ ಹೊಯ್ದಾಟದಲ್ಲಿಯೇ ಅಂತರಂಗದ ಲೋಕ ಕಟ್ಟಿಕೊಳ್ಳುವ ಅಸಂಖ್ಯಾತ ಮಂದಿಗೆ ಇದು ಕೊಡುತ್ತಿದ್ದ ಪುಷ್ಟಿಯನ್ನಿಲ್ಲಿ ಹೇಳಲೇಬೇಕು. ಈ ದೃಷ್ಟಿಯಿಂದ ಆತ ಕರ್ನಾಟಕಕ್ಕೇ ದೊರೆತ ಅಪರೂಪದ ಮೇಷ್ಟ್ರು ಕೂಡ. ಹಾಗೆ ಅವರು ನನಗೂ ಮೇಷ್ಟ್ರೇ ಆಗಿದ್ದರು. ಆದರೆ ಅವರನ್ನು ಎಲ್ಲರಂತೆ 'ಮೇಷ್ಟ್ರು' ಅಂತ ಕರೆಯಲು ಮಾತ್ರ ನನ್ನಿಂದ ಆಗಲಿಲ್ಲ. ಕ್ಲಾಸಿನಲ್ಲಿ ನನಗೆ ಪಾಠ ಹೇಳಿದವರಲ್ಲಿ ಅಂತವೋ ಹಾಗೆ ಹೇಳಿದವರಿಗೆ ಮಾತ್ರ 'ಮಾಷ್ಟ್ರು' ಎಂಬ ಅಭ್ಯಾಸವೋ, ಹಾಗೆ ಕರೆಯುವ

ರೂಢಿಯೇ ನಮ್ಮಲ್ಲಿಲ್ಲದ ಕಾರಣವೋ...

ಪತ್ರಿಕೆಯ ಸಂಪಾದಕನಾಗಿ ಸ್ವತಃ ತನ್ನ ವ್ಯಕ್ತಿತ್ವವನ್ನು ಪಾರದರ್ಶಕಗೊಳಿಸಿಕೊಂಡರು ಲಂಕೇಶ್. ಪತ್ರಿಕೆ ದೀರ್ಘ ಇಪ್ಪತ್ತು ವರ್ಷಗಳ ಕಾಲ ಕರ್ನಾಟಕದ ಸಾಮಾನ್ಯ ಓದುಗರಿಂದ ಅಸಾಮಾನ್ಯ ಚಿಂತಕರವರೆಗೂ ನಾನಾ ರೀತಿಯಲ್ಲಿ ನಾನಾ ಅಭಿಮತ ಮಾತು ಮೌನ ಚರ್ಚೆಗಳಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಭಾಗ ಪಡೆಯುತ್ತ ಸೆಣೆಸುತ್ತ ಹೋಗಿದ್ದು, ಲಂಕೇಶ್ ಸಂಪಾದಕನಾಗಿಯೂ ಸೃಜನಶೀಲ ಬರಹಗಾರನಾಗಿಯೂ ಕೈಯಾರೆ ಬರೆದು ನಡೆಸಿದ ಬರಹಯಜ್ಞ - ಈ ಎಲ್ಲದಕ್ಕೂ ನಮ್ಮ ಪೀಳಿಗೆ ಸಾಕ್ಷಿಯೆನ್ನಬಹುದು. ಈ ಪ್ರಕ್ರಿಯೆಯಲ್ಲಿ ಅವರು ಸ್ನೇಹಿತರನ್ನು ಪಡೆದರು, ಕಳೆದರು. ಎಂತಹ ಪ್ರೀತಿಯವರನ್ನೂ ಬರೆಯುವ ಹೊತ್ತಿಗೆ ಆ ಪ್ರೀತಿಯ ಲೆಕ್ಕವನ್ನೇ ಇಡದೆ ತನ್ನ ಅನಿಸಿಕೆಯ ನೇರಕ್ಕೇ ಬರೆದು ತಳ್ಳಿಕೊಂಡರು. ಅವರಿಂದಲೂ ದೂರವಾದರು. ಇವೆಲ್ಲವನ್ನು ತನ್ನ ಪುಟದಲ್ಲಿ ನೆನೆದರು. ಸ್ನೇಹಗಳಿಸುವುದು, ಕಳೆಯುವುದು ತನಗೊಂದು ಆಟ ಎಂಬಂತೆಯೂ ಕಾಣುವಂತೆ ನಟಿಸಿದರೇನೊ- ಕೆಲವೊಮ್ಮೆ ಈ ಮೂಲಕ ನೋವನ್ನು ತಾನಾಗಿ ಸೃಷ್ಟಿಸಿಕೊಂಡು ಬರೆದರೇನೋ ಎಂಬಂತೆಯೂ ತೋರಿದರು. ಒಮ್ಮೊಮ್ಮೆ (ಅವರದೇ ಪ್ರಿಯ ಶಬ್ದ!) 'ಈಡಿಯಟ್' ಆಗಿಯೂ...

ಪ್ರಿಯ ಲಂಕೇಶ್, ಯೋಚಿಸಿ ನೋಡಿದರೆ ನೀವು ನನಗೊಬ್ಬ ಹಿರಿಯ ಗೆಳತಿಯೂ ಆಗಿದ್ದಿರಿ. ಅದು ನೀವು ತೀರಿಕೊಂಡಮೇಲೆಯೇ ನನಗೆ ಹೆಚ್ಚು ಗೋಚರವಾದದ್ದು. ಹಿರಿಯ ಗೆಳತಿಯರ ಬಳಿ ಹೆಚ್ಚು ಸಲುಗೆ ಇರಲ್ಲ. ಸಲುಗೆಯೇ ಇಲ್ಲ ಎನ್ನುವ ಹಾಗೂ ಇರಲ್ಲ. ಹೇಳುವುದನ್ನು ಹೇಳಿಕೊಳ್ಳಲು ಸ್ವಲ್ಪ ಹಿಂಜರಿಕೆ ಕಂಡರೂ ಅಸಾಧ್ಯವಾಗಿರುವುದಿಲ್ಲ. ನಡುವೆ ಸ್ನೇಹದ ಗೌರವದ ಸೇತುವೆ ಇರುವುದರಿಂದ ಅಪಾರ್ಥಮಾಡದೆ ಪರಸ್ಪರ ಆಲಿಸುವ ಗುಣವೂ ಇರುತ್ತದೆ- ಬಹುಶಃ ಆದ್ದರಿಂದಲೇ ನಾನು ನಿಮ್ಮೊಡನೆ ನನಗನಿಸಿದ್ದನ್ನು ಒಳಗಿಟ್ಟುಕೊಳ್ಳದೆ ನಿಧಾನವಾಗಿಯಾದರೂ ಹೇಳಿ ಬಿಡುತ್ತಿದ್ದೆ.

ನೀವು ಮತ್ತು ಸಾಹಿತಿ ಸ್ನೇಹಿತರ ನಡುವೆ ಎದ್ದ ವಾದವಿವಾದಗಳ ಆ ಮಟ್ಟಿನ ತೀವ್ರತೆ - ಸತ್ಯಾಸತ್ಯತೆ ಅದೇನೇ ಇರಲಿ - ನಮಗಂತೂ ಎಂದೂ ಸುಖ ನೀಡಿದ್ದಲ್ಲ. ದೊಡ್ಡವರ ದೊಡ್ಡ ಸಂಘರ್ಷ ನೋಡುತ್ತ ಅಸ್ವಸ್ಥಗೊಳ್ಳುವವರಂತೆ ನಾವು ಅಸ್ವಸ್ಥರಾಗುತ್ತಿದ್ದೆವು. ನಿಮ್ಮೆದುರು ಒಮ್ಮೆ ಭಾಷಣಮಾಡುತ್ತ ಇದನ್ನು ಹೇಳಿಕೊಂಡಿದ್ದೆನಲ್ಲವೆ?

ಪತ್ರಿಕೆಯಲ್ಲಿನ ಆಕ್ರೋಶ ವಾಚಾಮಗೋಚರವಾದಾಗ, ವಿಮರ್ಶೆ ಬೈಗುಳದಂತೆ ಕಂಡಾಗ- ಹಾಗೆ ನನಗೆ ಅನಿಸಿದಾಗ ಆ ಸಮಯದಲ್ಲೇ ಎಲ್ಲಾದರೂ ನಿಮ್ಮ ಫೋನು 'ಏನು ನಡೀತಿದೆ, ಲೇಖನ ಕಳಿಸಿ' - ಅಂತ ಬಂದಾಗಲಂತೂ ನೀವು ಕೇಳದೆಯೂ ನನ್ನ ತಳಮಳ ಹೇಳಿಬಿಡುತ್ತಿದ್ದೆ. 'ನಿಮಗಿದೆಲ್ಲ ಅರ್ಥ ಆಗಲ್ಲ, ಆ ವಿಚಾರ ಬಿಡಿ' - ಅಂತ ನಗುತ್ತಿದ್ದಿರಿ. 'ನಾವೆಲ್ಲ ದುಷ್ಟರು, ನಮ್ಮ ಭಾಷೆಯೇ ಹಾಗೆ. ಅದನ್ನೆಲ್ಲ ಅಷ್ಟು ಸೀರಿಯಸ್ ತಗೋಬೇಡಿ' - ಎನ್ನುತ್ತಿದ್ದಿರಿ. (ಬರೆಯುತ್ತಿದ್ದಂತೆ ಅಂದು ಹಾಗೆ ಹೇಳುತ್ತಿದ್ದ ನಿಮ್ಮ ಸ್ವರ, ಹಿಂದೆಯೇ ಬರುತ್ತಿದ್ದ ನಗೆ ಈಗ ಮತ್ತೆ ಕೇಳಿಸಿದ ಹಾಗೆ ಆಗುತ್ತಿದೆ ...)

ಶತ್ರುಗಳೊಂದಿಗೂ ಮಾತಾಡುವ ಭಾಷೆಯೊಂದಿದೆ ಎಂದು ನಂಬಿಕೊಂಡವಳು ನಾನು. ನಮಗಾಗದವರನ್ನು, ತಪ್ಪು ಎಸಗಿದವರನ್ನು, ವಂಚಕರನ್ನು, ಭ್ರಷ್ಟರನ್ನು ಛೇಡಿಸುವ, ಭಂಗಿಸುವ, ಸದೆ ಬಡಿಯುವ, ಮಟ್ಟ ಹಾಕುವ ಮಾತಲ್ಲಿ ತರ-ತಮದ ಕಲ್ಪನೆಯೊಂದಿಗೆ ಭಾಷೆಯೊಂದು ವಿಶೇಷವಾಗಿ ದುಡಿಯುವ, ಶಬ್ದ ಹೆಕ್ಕಿಕೊಳ್ಳುವ ಅಗತ್ಯವಿದೆ ಅಂತಲೂ. ಆಕ್ರೋಶವನ್ನು ಜನರಿಗೆ ತಲುಪಿಸುವುದಷ್ಟೇ, ಭ್ರಷ್ಟನ ಭ್ರಷ್ಟತನವನ್ನು ಎಲ್ಲರೆದುರು ಬಯಲು ಮಾಡುವುದಷ್ಟೇ ಉದ್ದೇಶ ಆಗಿದ್ದರೆ ಸರಿಯೇ. ಆದರೆ ಅದು ಅಷ್ಟೇ ಅಲ್ಲವಲ್ಲ. ಯಾರನ್ನು ಕುರಿತು ನಿರಾಸೆಯೋ, ದುಃಖವೋ, ಸಿಟ್ಟೋ ಪ್ರತಿಭಟನೆಯೋ ಆ ವ್ಯಕ್ತಿ ಅಥವಾ ಸಂಘಟನಾ ಮುಖಂಡರಿಗೆ ತಮ್ಮ ಅಂತರಂಗದ ಒಳಾ ಒಳ ಕೋಣೆಯಲ್ಲಾದರೂ ತಮ್ಮನ್ನು ಪ್ರಶ್ನೆಗೀಡು ಮಾಡಿ ಉತ್ತರ ಪಡೆಯಲು ಪ್ರೇರಣೆ ಹುಟ್ಟಬೇಕು. ಆತ್ಮಸಾಕ್ಷಿ ಸತ್ತೇ ಹೋದಂತಿದ್ದರೂ ಜೀವ ತಳೆದೆದ್ದು ಮಿಡಿಯುವಂತಾಗಬೇಕು. (ಮನುಷ್ಯನ ಆತ್ಮಸಾಕ್ಷಿ ಯಾವತ್ತೂ ಸಾಯುವುದೇ ಇಲ್ಲ. ಅದು ಮರೆಯಾಗಿರುತ್ತದೆ. ಅಥವಾ ಮುಸುಕೋ, ಮಬ್ಬೋ ಆಗಿರುತ್ತದೆ - ಎಂದು ನೀವೇ ಹೇಳಿದ್ದನ್ನು ಓದಿದ ನೆನಪು). ಆ ತುದಿಯಿಂದಲೂ 'ಅದ್ದಿನ ಸುಳ್ಳು - ನಿಜ' ಏನಿದ್ದರೂ ಹೊರಬೀಳುವ ಸ್ಥಿತಿ ಸೃಷ್ಟಿಯಾಗಬೇಕು. ತಕ್ಷಣವಲ್ಲದಿದ್ದರೆ, ತಡವಾದರೂ. ಸ್ವತಃ ನನ್ನೊಳಗೇ ಒಂದು ವಿಚಿತ್ರ ಬಗೆಯ ಚಕಮಕಿಯೂ ನಡೆಯುತ್ತಿರ ಬೇಕು ಅಲ್ಲವೆ? ಇಲ್ಲವಾದಲ್ಲಿ ಎಂತಹ ಉರಿಕೆಂಡದಂತಹ ನುಡಿಯೂ, ಸತ್ಯಕ್ಕೆ ಸತ್ಯವೂ ಶುದ್ಧೀಕರಿಸುವ ಬದಲು ಬರಿದೆ ಉರಿದು ಬೂದಿಯಾಗುವ ಅಪಾಯವಿರುತ್ತದೆ. ಯಾವುದರ ಕುರಿತು ಪ್ರಕೃತ ಪ್ರಶ್ನೆ ಎದ್ದಿದೆಯೋ, ಅಲ್ಲಿ ಯಾವುದೇ ರಚನಾತ್ಮಕ ಪರಿಣಾಮವೂ ಆಗದೆ ಎಲ್ಲವೂ ನಿಂತಲ್ಲೇ ನಿಂತಿರುವ ಸ್ಥಿತಿ ಅಥವಾ ವಾದಕ್ಕೆ ಪ್ರತಿವಾದ, ಆಕ್ರೋಶಕ್ಕೆ ಪ್ರತ್ಯಾಕ್ರೋಶ ಅಥವಾ ನಿರ್ಲಕ್ಷ್ಯ - ಅಂತೂ ಇವೆಲ್ಲ ತನ್ನ ವಿರುದ್ಧ ಬೇಕೆಂದೇ ಹೂಡಿದ ಬಾಣವೆಂದೋ, ಅದಕ್ಕೀಗ ತಾವು ಪ್ರತಿಬಾಣ ಹೂಡಬೇಕೆಂದೋ - ಹೀಗೆ ಮಿಥ್ಯಾಸ್ಥಿತಿ ಉಂಟಾಗುತ್ತದೆ. ಅಥವಾ ಎಲ್ಲವೂ ಮತ್ತಷ್ಟು ಅಪಾರದರ್ಶಕತೆಯ ಉಪಾಯ ಹುಡುಕುತ್ತವೆ - ಅಂತೆಲ್ಲ ನಿಮಗೆ ಗೊತ್ತಿಲ್ಲವೆಂದೆ? ಪ್ರಖರವಾಗಿಯೂ ಕಟುವಾಗಿಯೂ ಮರ್ಮಾಂತಿಕವಾಗಿಯೂ ಹೇಳಲು ಯುಕ್ತ ಭಾಷಾ ಪ್ರಯೋಗವೊಂದಿದೆ ಎಂಬುದಕ್ಕೆ ನಿಮ್ಮ ಟೀಕಟಿಪ್ಪಣಿ ಪುಟದಲ್ಲಿಯೇ ಎಷ್ಟು ಉದಾಹರಣೆಗಳಿವೆ! ನೇರ ಸ್ಪಷ್ಟ ಹಾಗೂ ತಾಜಾತನದಿಂದ ಕೂಡಿದ ಪ್ರೀತಿಯೊಡಲಿಂದ, ಪ್ರೌಢತೆಯ ಅಂಚು ಮೀರದೆ ಶುದ್ಧ ಕಾರಂಜಿಯಂತೆ ಚಿಮ್ಮಿದ ಪುಟಗಳು ಅವೆಲ್ಲ. ಆದರೂ ಯಾಕೋ, ಪತ್ರಿಕೆಯಲ್ಲಿ ಶಬ್ದಗಳ ದುಂದು ವೆಚ್ಚವಾ ಕೆಲವು ಬಾರಿ ವಿಜೃಂಭಿಸಿತು. ಶಬ್ದಗಳ ದುಂದು ವೆಚ್ಚದ ಕುರಿತು ಚಿಂತನೆ ನಡೆವಲ್ಲೇ ಇಂಥದೂ ಜರುಗಿ ಹೋಯಿತು! ಒಮ್ಮೊಮ್ಮೆ ಅನಗತ್ಯವಾಗಿಯೂ ಪತ್ರಿಕೆಯನ್ನು ಕತ್ತಿಯಂತೆ ಝಳಪಿಸಿದ ಪ್ರಮಾದವೂ! ಇವೆಲ್ಲ ಅನಿವಾರ್ಯ, ಸಹಜ, ಎನ್ನುವಿರ ? ಅಥವಾ - 'ನಿನಗೆ ಇವೆಲ್ಲ ಅರ್ಥವಾಗಲ್ಲ, ಈಡಿಯಟ್!''...?

★ ★ ★

ಚಿಕ್ಕಂದಿನಲ್ಲಿ ರಾಮಾಯಣ ಪುಸ್ತಕದಲ್ಲಿ ನಾನೊಂದು ಚಿತ್ರ ಕಂಡಿದ್ದೆ. ಅದು ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ ಕುಳಿತೇ ಇದೆ. ಲಂಕಾದಹನ ಮಾಡಿದನಂತರ (ರಾಮಾಯಣದ ಮಹಾ ಪಾತ್ರಗಳಲ್ಲಿ ಒಂದಾದ) ಹನುಮಂತ ಸಮುದ್ರದಲ್ಲಿ ಬೆಂಕಿ ನಂದಿಸಿಕೊಂಡು ನಡುಬಂಡೆಯ ಮೇಲೆ ಚಿಂತಾಕ್ರಾಂತನಾಗಿ ಕುಳಿತ ಚಿತ್ರವದು: ರಾವಣಪುರಕ್ಕೆ ಬೆಂಕಿಕೊಟ್ಟದ್ದು ಆಯಿತು. ಆದರೆ ಆ ಬೆಂಕಿಯಲ್ಲಿ ಸೀತೆ (ಎಂಬ ಕೋಮಲತೆ, ಚಾರಿತ್ರ್ಯ, ಋಜುತ್ವ, ಮಾನ-ಅಭಿಮಾನ) ಸುಟ್ಟು ಹೋಗಿರಲಿಕ್ಕಿಲ್ಲವಷ್ಟೆ? ಒಂದು ವೇಳೆ ಸೀತೆ ಆಹುತಿಯಾಗಿದ್ದರೆ ರಾಮನಿಗೆ ತಾನು ಏನು ಉತ್ತರ ಕೊಡಲಿ?

ನಿಮ್ಮ ಈ ಭಂಗಿಯನ್ನು ನಿಮ್ಮ ನುಡಿಗಳಲ್ಲಿ ನಾನು ಕಂಡದ್ದಿದೆ. ೧೯೯೯ರ ದಶಂಬರದಲ್ಲಿ ಪತ್ರಿಕೆ -೨೦ ವಾರ್ಷಿಕದ ಶಿವಮೊಗ್ಗ ಸಭೆಯಲ್ಲಿ ಇದನ್ನು ಹೇಳಿದ್ದೆನಲ್ಲವೆ? ನೀವು ಜೋರಿನ ತಾಯಿ. ನಿಷ್ಠುರ ಮಾಯಿ. ಅಷ್ಟೇ ಅಲ್ಲ, ನೀವು ಸುತ್ತಲೂ ಸಮಾಜದ ಕುರಿತು ನಾನಾ ಬಗೆಯಲ್ಲಿ ಪದ್ಯಕಟ್ಟಿ ಹಾಡಿದ ಅನುಭಾವಿಗಳಂತಹ ಆಧುನಿಕ ಅನುಭಾವಿ ಕೂಡ - ಅಂತಲೂ.

ಭಾರತೀಯ ವೇದ ಪುರಾಣ ಪುಣ್ಯ ಕಥನ ವೇದಾಂತ ತತ್ವಜ್ಞಾನಗಳೆಲ್ಲವೂ ಹೇಳುವ ಒಂದು ಸಾಮಾನ್ಯ ಮಾತಿದೆ. ಅದನ್ನೇ ಅತಿ ಕಡಿಮೆ ಶಬ್ದಗಳಲ್ಲಿ, ಅಪ್ಪಟ ಕನ್ನಡದಲ್ಲಿ ನಮ್ಮ ದಾಸವರೇಣ್ಯ ಪುರಂದರದಾಸರು ಹೇಳಿದ್ದಾರೆ: 'ಸುಲಭನೋ ಹರಿ'. ಹರಿ ಎಂಬವ ಸುಲಭ. ಭಕ್ತಿಗೆ ಪ್ರೀತಿಗೆ ಒಲಿಯುವವ. ಆದರೆ ಅವನನ್ನು ''ಒಲಿಸಲರಿಯದೆ ಪಾಮರರು ಬಳಲುವರು ಭವದೊಳಗೆ'' - ಅಂತ. ಅವರವರ ಪರಮೋಚ್ಚ ಇಷ್ಟವೇ ಅವರವರ ಹರಿ - ಸೈಯಷ್ಟೆ! ಬರವಣಿಗೆಯವರಿಗೆ ಬರವಣಿಗೆಯೇ ಹರಿ. ಈ ಸುಲಭ ಹರಿಯನ್ನು ಒಲಿಸಿಕೊಳ್ಳುವುದು ಎಷ್ಟು ಕಷ್ಟ! ಸರಳವಾಗಿರೋದನ್ನ ಸಂಕೀರ್ಣಗೊಳಿಸಲು ಹೋಗಬೇಡಿ. ಸಂಕೀರ್ಣವನ್ನು ಸರಳಗೊಳಿಸಲೂ. ಆಳದ ಮುಗ್ಧತೆ ಎಲ್ಲ ಕಲಾವಿದರ ಸಂಪತ್ತು. ಭಕ್ತಿಯ ಪ್ರೀತಿಯ ಮೂಲದಲ್ಲಿರುವುದೂ ಇದೇ. ನಮ್ಮ ನಮ್ಮ ಏಕಾಂತವನ್ನೆದುರಿಸಿಕೊಂಡು, ನಮ್ಮ ನಮ್ಮ ಸಂಕೋಚ ವೇದನೆ ತಳಮಳ ಸಂತೋಷಗಳಿಗೆ ನೇರವಾಗಿ ಸ್ಪಂದಿಸುತ್ತ ಬರೆದರೆ ಮಾತ್ರ ಬರವಣಿಗೆಗೆ ವಿಚಿತ್ರ ಹೊಳಪು ಬರುತ್ತದೆ. ಇಲ್ಲವಾದಲ್ಲಿ ಅದು ಒಲಿಯದೆ ಕೊನೆಗೂ ಕೃತಕವಾಗುಳಿಯುತ್ತದೆ ಎಂದಿರಿ ನೀವು.

- ಹಾಗೆ ನೋಡಿದರೆ ನೀವು ಹೇಳಿದ ಯಾವ ಮಾತಿನಲ್ಲಿಯೂ ಹೊಸತೇನಿರಲಿಲ್ಲ. ಆದರೆ ಹೇಳುವ ಮಾತಿನಲ್ಲಿ ಅಪೂರ್ವ ನಿಷ್ಠತೆ ಇತ್ತು. ಎಂತಲೇ ನಿಮ್ಮದೇ ಶಬ್ದದಲ್ಲಿ ಬಣ್ಣಿಸಬೇಕೆಂದರೆ - ಅದಕ್ಕೆ ''ಮಾಂತ್ರಿಕ ಶಕ್ತಿ'' ಲಭ್ಯವಾಯ್ತು. ಅನೂಹ್ಯವಾದೊಂದು ಕಾಂತಿಯಿಂದ ಅದು ಓದುಗರ ಮನದ ಮಜ್ಜೆಗೇ ತಲುಪುತ್ತಿತ್ತು.

- ಹಾಂ, ನೀವು ಬೆಕರ್‌ನಂತೆ ಸ್ಟೆಫಿಯಂತೆ ಆಯಾ ಕ್ಷಣದ ಹೊಡೆತಕ್ಕೆ ಅನುಗುಣವಾಗಿ ಖುಶಿಪಡುವ ಸಂಭ್ರಮಿಸುವ ಗದರಿಕೊಳ್ಳುವ, ಮುಖ ಕೊಡಹಿ, ತನ್ನ ತಾನೇ ಖಂಡಿಸಿ, ಮತ್ತೆ ಹೊಸ ಆಟಕ್ಕೆ ಹುರುಪುಗೂಡಿ ಸಜ್ಜಾಗುವ ಪರಿ ಕಂಡದ್ದನ್ನೂ ಹೇಳದಿದ್ದರೆ ಹೇಗೆ?...

★ ★ ★

ಕೊನೆಯವರೆಗೂ , ಅವರ ತೀವ್ರ ವ್ಯಾಮೋಹಿತನದ , ಅಸೂಯೆಪಡಲು ಹಾತೊರೆಯುವ , ಅಸೂಯೆ ಉಕ್ಕಿಸುವಂತೆ ಬರೆಯಿರಿ ಎನ್ನುವ ಚೇತನ ಮಸುಕಾಗಲಿಲ್ಲ. ಉಡುಪಿಯಲ್ಲಿ ಅಂದು ರಂಗಭೂಮಿ ಕುರಿತ ಸಂಕಿರಣ ಉದ್ಘಾಟಿಸಲು ಬಂದ ಲಂಕೇಶ್ ಕೊನೆಗೆ ಹೇಳಿದ್ದೇ ಈ ಮಾತು -''ಹುಡುಗ್ರು ನೀವು ಬರೀಬೇಕು. ನೀವು ಎಷ್ಟು ಬರೀಬೇಕು ಅಂತ ಹೇಳಿದ್ರೆ ನನಗೆ ಹೊಟ್ಟೆಕಿಚ್ಚು ಆಗ್ಬೇಕು. ಹೊಟ್ಟೆಕಿಚ್ಚು ಒಂದು ರೀತಿಯ ಸ್ಫೂರ್ತಿ! ನಾನಿವತ್ತು ಸಮಕಾಲೀನ ಪ್ರಜ್ಞೆಯಲ್ಲಿ ನಮಗೇನನ್ನಿಸುತ್ತದೋ, ಈ ದೇಶಕ್ಕೆ ಯಾವ ಜಾಡ್ಯ ಅಂಟಿದೆಯೋ, ಈ ಜಾಡ್ಯ ಗುಣವಾಗದಿದ್ದರೂ ಕೂಡ ಗುಣವಾಗದ ಗುಣವನ್ನು ಕೂಡ ಹೇಳುವ ತಾಕತ್ತು ,ಒಂದು ಧೈರ್ಯ ಘನತೆ ನಮ್ಮಲ್ಲಿ ಮೂಡಿಸಿಕೊಳ್ಳಬೇಕಾಗಿದೆ.''

-ಕಳೆದ ವರ್ಷ ಪತ್ರಿಕೆಗೆ ಇಪ್ಪತ್ತು ತುಂಬಿದ ಪ್ರಯುಕ್ತ ಮಂಗಳೂರು ಮತ್ತು ಶಿವಮೊಗ್ಗೆಯಲ್ಲಿ ನಡೆದ ಸಮಾರಂಭಗಳಲ್ಲಿಯೂ ಆತ ಮತ್ತೆ ಮತ್ತೆ ಮಾತಾಡಿದ್ದು ಕನಸೇ ಸತ್ತ ದೇಶದ ಕುರಿತು. ಅಸೂಯೆಯಾಗುವಂತೆ ಬರೆಯುವುದರ ಕುರಿತು. ದುಃಗ್ರತೆ ಸಂಕೋಚಗಳನ್ನು ಅವಗುಣಗಳೆಂದು ಬಗೆಯದೇ ಕಾಪಾಡಿಕೊಳ್ಳುವ ಕುರಿತು.

ಸೋಜಿಗವೆನಿಸುತ್ತಿದೆ -

ಆತನ ಮೊದಲ ಭಾಷಣ ಕೇಳಿದ್ದು ಶಿವಮೊಗ್ಗೆಯಲ್ಲಿಯೇ. ಕೊನೆಯ ಭಾಷಣವನ್ನೂ... ಮೊದಲ ಸಲ ಎಲ್ಲೋ ನಿಂತು ಇಣುಕಿ ಇಣುಕಿ ಆತನ ಮುಖವನ್ನು ಅಸ್ಪಷ್ಟ ಕಂಡವಳು, ಕಳೆದ ದಸಂಬರದ ಕೊನೆಯ ಸಭೆಯಲ್ಲಿ ಪಕ್ಕದಲ್ಲೇ ಕುಳಿತಿದ್ದೆ. ಅವತ್ತಿನಂತೆಯೇ -ಸರಾಗವಾಗಿ ಬಡಬಡಿಸದೆ, ಸಾವಧಾನವಾಗಿ ಚಿಂತಿಸುತ್ತ ತನ್ನ ಒಳಗೊಳಗೇ ಇಳಿಯುತ್ತ ಹೋಗುವ, ಸ್ವಗತದಂತಿದ್ದೂ ಸಭೆಯನ್ನೂ ಒಳಗೊಳ್ಳುವ, ಒಡಲಿಂದ ಬರುವ ಅವರ ಮಾತುಗಳು -ಅವೇ, ಶಬ್ದ -ನಿಶ್ಶಬ್ದದ ನಡುವೆ ಓಡಾಡುತ್ತ ರೂಪುಗೊಳ್ಳುವ ವಾಕ್ಯಗಳು ....

★ ★ ★

ಲಂಕೇಶ್, ಬರೆಯುತ್ತಿದ್ದಂತೆ ನೀವು -'ಸಾಕು ಸಾಕು' ಎಂದ ಹಾಗಾಗುತ್ತಿದೆ. ತನ್ನ ಕುರಿತು ಕೇಳಲು ಗುಟ್ಟನಲ್ಲಿ ಇಷ್ಟಪಡುವ, ಗುಟ್ಟನಲ್ಲಿ ಅಸಹ್ಯಪಡುವ ಜೀವ ನೀವು. ದೀರ್ಘ ಬರೆದ ಹಾಗೂ ಸಂಶಯ ಪಡುವರೂ ...

ನೀವು ನನಗೆ ತೋರಿದ ಮಮತೆ ಹಾಗೂ ವಿಶ್ವಾಸವನ್ನು ನೆನೆಯುತ್ತಿದ್ದಂತೆ ಮತ್ತೆ ಕಂಠ ಬಿಗಿದು ಬರುತ್ತಿದೆ ...

ಗೊತ್ತೆ ನಿಮಗೆ, ತಾಯಿ ತೀರಿದ ಮೇಲೆ ಆ ಮನೆಯಲ್ಲಿ ಎಲ್ಲವೂ ಯಥಾ ಪ್ರಕಾರ ಇರುತ್ತದೆ- ಪ್ರೀತಿ, ಊಟ, ತಿಂಡಿ... ಜಾ ಇರು -ಎಲ್ಲವೂ. ಆದರೆ ತಾಯಿ ಇಲ್ಲ ಎಂಬುದು ಎಷ್ಟು ಎದ್ದು ತೋರುತ್ತಿರುತ್ತದೆ. ಆ ಶೂನ್ಯ, ಏನದು ಅಂತ ನಾನು ಕೇಳಿಕೊಳ್ಳುತ್ತ ಇರುತ್ತೇನೆ. ಈ ನನ್ನ ಪ್ರಶ್ನೆ ಸದಾ ಕಾಲದ್ದು. ಉತ್ತರ ತಂದವರು ಇಲ್ಲ...

ಲಂಕೇಶರ ಸ್ನೇಹ ಗರಗಸದಲ್ಲಿ

○ ಬಿ.ಆರ್.ಲಕ್ಷ್ಮಣ ರಾವ್

ಲಂಕೇಶ್ ಅವರನ್ನು ನಾನು ಮೊಟ್ಟಮೊದಲ ಬಾರಿಗೆ ಕಂಡಾಗಿನಿಂದ ಈ ವರೆಗೂ ಉಳಿದುಕೊಂಡೇ ಬಂದಿರುವ ಒಂದು ಭಾವನೆ - awe - ಒಂದು ರೀತಿಯ ಭಯ ಗೌರವ ಮೆಚ್ಚುಗೆಗಳ ವಿಚಿತ್ರ ಮಿಶ್ರಣ. ಅವರದು ದೈತ್ಯ ಪ್ರತಿಭೆ ಎಂಬುದರಲ್ಲಿ ಸಂಶಯವಿಲ್ಲ. ಅವರು ಮುಟ್ಟಿದ ಸಾಹಿತ್ಯ ಮತ್ತು ಇತರ ಕಲಾ ಪ್ರಕಾರಗಳೆಲ್ಲ ಚಿನ್ನವಾಗಿ ಬೆಳಗಿದವು. ಆ ಪ್ರತಿಭೆಯ ಬೆಳಕಲ್ಲಿ ಬೆಳೆದವನು ನಾನು. ಆದ್ದರಿಂದ ಕವಿಯಾಗಿ ನಾನು ಏನಾದರೂ ಒಂದಿಷ್ಟು ಗಮನಾರ್ಹ ಸಾಧನೆ ಮಾಡಿದ್ದಲ್ಲಿ, ಅದರ ಹಿಂದಿನ ಪ್ರಮುಖ ಸ್ಫೂರ್ತಿ ಮತ್ತು ಪ್ರಭಾವ ಲಂಕೇಶರದ್ದು. ಇದಕ್ಕಾಗಿ ನಾನು ಅವರಿಗೆ ಸದಾ ಋಣಿ.

೧೯೬೪ರಲ್ಲಿ ನಾನು ಬಿ.ಎ. ಮಾಡಲು ಬೆಂಗಳೂರಿನ ಗ್ಯಾಸ್ ಕಾಲೇಜೆಂದೇ ಹೆಸರಾಗಿದ್ದ(!) ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸೇರಿದೆ. ಸಾಹಿತ್ಯವನ್ನು ಅಭ್ಯಾಸ ಮಾಡಲೆಂದೇ ದಾವಣಗೆರೆಯಿಂದ ಬಿ.ಎಸ್ಸಿ.ಯನ್ನು ಅರ್ಧಕ್ಕೆ ಬಿಟ್ಟು ಬಂದಿದ್ದೆ. ನಿಸಾರ್ ಅಹಮದ್ ಅವರು ಅದೇ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ಅವರ ಪರಿಚಯ ಮಾಡಿಕೊಂಡು ನನ್ನ ಒಂದೆರಡು ಕವನಗಳನ್ನು ಅವರಿಗೆ ತೋರಿಸಿದೆ. ಮೆಚ್ಚಿ ಪ್ರೋತ್ಸಾಹಿಸಿದರು. ಲಂಕೇಶರಿಗೆ ನನ್ನನ್ನು ಪರಿಚಯಿಸಿದರು. ಪರಿಚಯ ಬಹುಬೇಗ ಗಾಢ ಆತ್ಮೀಯತೆಯಾಗಿ ಬೆಳೆಯಿತು. ನಾನು ಲಂಕೇಶರ ಪಟ್ಟ ಶಿಷ್ಯನಾದೆ. ಲಂಕೇಶ್ ನನಗೆ ಮೇಸ್ಟರಾಗಿದ್ದು ಒಂದು ವರ್ಷ ಮಾತ್ರ. ನಂತರ ಅವರು ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಕ್ಕೆ ಹೋದರು. ಆ ವಿಭಾಗ ಆಗ ನನ್ನ ಕಾಲೇಜಿನ ಎದುರಿಗೇ ಇದ್ದ ಸೆಂಟ್ರಲ್ ಕಾಲೇಜಿನಲ್ಲಿ ಇದ್ದದ್ದರಿಂದ ನಾನು ಲಂಕೇಶರಿಂದ ದೂರವಾಗಬೇಕಾಗಲಿಲ್ಲ. ನನ್ನ ಹೆಚ್ಚಿನ ವೇಳೆಯನ್ನು ಸೆಂಟ್ರಲ್ ಕಾಲೇಜಿನಲ್ಲಿ ಕಳೆಯತೊಡಗಿದೆ, ಅಷ್ಟೇ.

ನನಗೆ ಮೇಸ್ಟ್ರು ಆಗಿದ್ದ ಒಂದು ವರ್ಷದಲ್ಲಿ ಲಂಕೇಶ್ ನಾಲ್ಕೈದು ಕ್ಲಾಸ್‌ಗಳನ್ನು

ಮಾತ್ರ ತೆಗೆದುಕೊಂಡಿದ್ದ ನೆನಪು. ಪಾಠ ಮಾಡುತ್ತಾ ಮಾಡುತ್ತಾ ಅವರು ತಮ್ಮಲ್ಲೇ ಕಳೆದುಹೋಗಿ ಬಿಡುತ್ತಿದ್ದರು. ಮಾತುಗಳು ವಿಚಾರಗಳೊಂದಿಗೆ ತಾಕಲಾಡಿ ತಡೆ ತಡೆದು ಬರುತ್ತಿದ್ದವು. ತಮ್ಮ ವಿಚಾರಗಳು ವಿದ್ಯಾರ್ಥಿಗಳಿಗೆ ಮುಟ್ಟುತ್ತವೆಯೋ ಇಲ್ಲವೋ ಎಂಬ ಸಂಶಯ ಮೂಡಿದಂತೆ ಅವರು ಥಟ್ಟನೆ 'Self conscious' ಆಗಿಬಿಡುತ್ತಿದ್ದರು. ಜನಪ್ರಿಯ ಉಪನ್ಯಾಸಕರ ನಿರರ್ಗಳ ವಾಗ್ವೈಖರಿ, ಒಂದು ರೀತಿಯ ಉಡಾಫೆ ಅವರಲ್ಲಿ ಕಂಡು ಬರುತ್ತಿರಲಿಲ್ಲ. ಹೀಗಾಗಿ ಅವರು ಅಂಥ ಜನಪ್ರಿಯ ಉಪನ್ಯಾಸಕರಾಗಿರಲಿಲ್ಲ. ಆದರೆ ಖಾಸಗಿಯಾಗಿ ಕುಳಿತು ಸಾಹಿತ್ಯದ ಬಗ್ಗೆ ಚರ್ಚಿಸುವಾಗ, ಅನೇಕ 'Brilliant and Original' ವಿಚಾರಗಳು ಲೀಲಾಜಾಲವಾಗಿ ಅವರಿಂದ ಹೊರಹೊಮ್ಮುತ್ತಿದ್ದವು. ಇಂಥ ಹಲವು ಸಂದರ್ಭಗಳ ಲಾಭ ನಾನು ಪಡೆದಿದ್ದೇನೆ.

ಲಂಕೇಶ್ ತಾವು ಹೋದಲ್ಲೆಲ್ಲ ಬಾಲಂಗೋಚಿಯಂತೆ ನನ್ನನ್ನು ಕರೆದೊಯ್ಯುತ್ತಿದ್ದರು. ಇದರಿಂದ ವೈಎನ್ಕೆಯವರ ಪರಿಚಯ ನನಗಾಯಿತು. ಇವರಿಬ್ಬರೂ ನನಗೆ ನೂರಾರು ಉತ್ತಮ ಪುಸ್ತಕಗಳನ್ನು ಕೊಟ್ಟು ಓದಿಸಿದರು. ನನ್ನ ಸಾಹಿತ್ಯಾಭಿರುಚಿಯನ್ನು ತಿದ್ದಿ ಬೆಳೆಸಿದರು. ಇವರಿಬ್ಬರಿಂದ ನನಗೆ ಅಂದಿನ ಕನ್ನಡ ಸಾಹಿತ್ಯ ರಂಗದ ಎಲ್ಲ ಪ್ರಮುಖ ಲೇಖಕರ ಪರಿಚಯವಾಯಿತು. ಆಗ ನಾನು ಬರೆಯುತ್ತಿದ್ದ ಕತೆ - ಕವನಗಳನ್ನು ಇವರಿಬ್ಬರಿಗೆ ತೋರಿಸುವ ಧೈರ್ಯ ನನಗಿರಲಿಲ್ಲ. ಇವರೇ ನನ್ನನ್ನು ಒತ್ತಾಯಿಸಿ ನನ್ನ ಕತೆ ಕವನಗಳನ್ನು ನನ್ನಿಂದ ಓದಿಸಿ ಕೇಳಿ ಪ್ರಕಟಣೆಗೆ ಕಳುಹಿಸಲು ಹುರಿದುಂಬಿಸುತ್ತಿದ್ದರು. ನನ್ನ ಕವನಗಳು 'ಗೋಕುಲ', 'ಲಹರಿ', 'ಸಂಕ್ರಮಣ' ಮತ್ತು ಆ ನಂತರ 'ಪ್ರಜಾವಾಣಿ'ಯಲ್ಲೂ ಪ್ರಕಟವಾಗತೊಡಗಿದವು. ನನ್ನಲ್ಲಿ ಮೆಲ್ಲ ಮೆಲ್ಲನೆ ಆತ್ಮ ವಿಶ್ವಾಸ ಕುದುರತೊಡಗಿತು.

ನಾನು ಮೊಟ್ಟ ಮೊದಲು 'ಗುಂಡು' ಹಾಕಿದ್ದೂ ಲಂಕೇಶ್ ಮತ್ತು ವೈಎನ್ಕೆ ಜೊತೆಗೆ. ಆ ಘಟನೆ ಇಂದಿಗೂ ನನಗೆ ಚೆನ್ನಾಗಿ ನೆನಪಿದೆ. ಅಂದು ಮಧ್ಯಾಹ್ನ ಲಂಕೇಶ್ ನನ್ನನ್ನು ಪ್ರಜಾವಾಣಿಗೆ ಕರೆದೊಯ್ದರು. ಲಂಕೇಶ್ ಮತ್ತು ವೈಎನ್ಕೆ ಗುಂಡು ಹಾಕಲು ಹೋಗುವ ಬಗ್ಗೆ ಆಲೋಚಿಸುತ್ತಿದ್ದರು. 'ಈ ಹುಡುಗನೂ ಬರ್ತಾನಾ?' ವೈಎನ್ಕೆ ಲಂಕೇಶರನ್ನು ಪಿಸುಮಾತಲ್ಲಿ ಕೇಳಿದರು. 'ಗುಂಡು ಹಾಕ್ತೀಯೇನೋ ಲಕ್ಷ್ಮಣ?' ಲಂಕೇಶ್ ಕೇಳಿದರು. 'ಹಾಗಂದ್ರೆ, ಏನು?' ನಾನು ನನ್ನ ಅಜ್ಞಾನ ಪ್ರದರ್ಶಿಸಿದೆ. ಈ ಹುಡುಗನಿಗೆ ಅಕ್ಷರಮಾಲೆಯಿಂದ ಪಾಠ ಶುರು ಮಾಡಬೇಕು ಎಂದು ವೈಎನ್ಕೆ ನಕ್ಕರು. 'ಬ್ರಿಜ್' ರೆಸ್ಟೋರೆಂಟಿನ ಬಾರಿನಲ್ಲಿ ಮೊದಲ ಬಾರಿಗೇ ನಾಕಷ್ಟು ಬಿಯರ್ ಕುಡಿಸಿದರು. ಅಂಥ ಅಮಲೇನೂ ಏರಲಿಲ್ಲ. ಸಂಕೋಚದ ತೆರೆ ಹರಿಯಿತು. ಅಷ್ಟೇ.

ನಾನು ೧೯೬೦ರಲ್ಲಿ ಬಿ.ಎ. ಮುಗಿಸಿದ ನಂತರ ನನ್ನನ್ನು ಎಂ.ಎ.ಗೆ ಕಳಿಸಲು ನನ್ನ ತಂದೆ ಒಪ್ಪಲಿಲ್ಲ. ಮನೆಬಿಟ್ಟು ಬಂದು ಬೆಂಗಳೂರಿನಲ್ಲಿ ಇದ್ದುಕೊಂಡು ಹೇಗೋ ಕಷ್ಟಪಟ್ಟು ಎಂ.ಎ. ಮುಗಿಸಬೇಕೆನ್ನುವುದು ನನ್ನ ಆಸೆ. ಆದರೆ ವೈಎನ್ಕೆ ಹೇಳಿದರು - 'ಇಷ್ಟೆಲ್ಲ ಕಷ್ಟಪಟ್ಟು ಎಂ.ಎ. ಮಾಡಿದರೂ ಸಾಹಿತ್ಯಿಕವಾಗಿ ನಿನಗೆ ಅಂಥ ಪ್ರಯೋಜನವೇನೂ ಆಗಲಾರದು. ಊರಲ್ಲಿದ್ದುಕೊಂಡೇ ಸ್ವಂತವಾಗಿ ಓದಿಕೋ, ಸಾಕು'. ಲಂಕೇಶ್ ಹೇಳಿದರು- 'ಎಂ.ಎ. ಮಾಡಿ,

ಯೂನಿವರ್ಸಿಟಿಯಲ್ಲೋ ಅಥವಾ ಯಾವುದಾದರೂ ಕಾಲೇಜಿನಲ್ಲೋ ಲೆಕ್ಚರರ್ ಆದರೆ, ನೀನು ಸಹ ಅದೆಷ್ಟೋ ಮಂದಿಯಂತೆ ಅಕಾಡೆಮಿಕ್ ಸಾಹಿತಿ ಆಗಿಬಿಡಬಹುದು. ಅದಕ್ಕೆ ಬದಲು ಆರಾಮಾಗಿ ಊರಲ್ಲಿದ್ದುಕೊಂಡು ಸ್ವಂತವಾಗಿ ಓದಿಕೋ. ಸ್ವಂತವಾಗಿ ಬೆಳೆ'. ಇವರಿಬ್ಬರ ಸಲಹೆಯಂತೆ ನಾನು ಊರಲ್ಲೇ ಉಳಿದೆ. ಅಲ್ಲೇ ಒಂದು ಖಾಸಗಿ ಪ್ರೌಢಶಾಲೆಯಲ್ಲಿ ಉಪಾಧ್ಯಾಯನಾಗಿ ಸೇರಿಕೊಂಡೆ. ಎಂ. ಎ. ಮಾಡದೆ ಹೋದ ಬಗ್ಗೆ ನನಗೆ ಪಶ್ಚಾತ್ತಾಪವೇನೂ ಆಗಿಲ್ಲ.

ಲಂಕೇಶರೊಂದಿಗಿನ ನನ್ನ ನಿಕಟ ಸಂಪರ್ಕ, ಒಡನಾಟ ೧೯೬೪ರಿಂದ ೭೪ರವರೆಗೆ ಹತ್ತು ವರ್ಷಗಳ ಕಾಲ ನಿರಂತರವಾಗಿತ್ತು. ಈ ಅವಧಿಯಲ್ಲಿ ಅವರು ನನ್ನ ವ್ಯಕ್ತಿತ್ವದ ರೆಕ್ಕೆ ಬಲಿಯುವಂತೆ ಪೋಷಿಸಿ ಹಾರಾಡಲು ಕಲಿಸಿದರು. ನಂತರ ನಾನು ಸ್ವತಂತ್ರನಾಗಿ ಹಾರಾಡಬಲ್ಲವನಾದೆ.

'ಅಕ್ಷರ ಹೊಸ ಕಾವ್ಯ'ಕ್ಕಾಗಿ ನನ್ನ ಕವನಗಳನ್ನು ಲಂಕೇಶ್ ಆಹ್ವಾನಿಸಿದಾಗ ನನಗೆ ಸಂತೋಷದ ಜೊತೆಗೆ ಅಳುಕು ಉಂಟಾಯಿತು. ಆ ವೇಳೆಗೆ ನನ್ನ ಒಂದು ಕವನ ಸಂಕಲನ ಕೂಡ ಪ್ರಕಟವಾಗಿರಲಿಲ್ಲ. 'ಅಕ್ಷರ ಹೊಸ ಕಾವ್ಯ'ದಲ್ಲಿ ಅವರು ನನ್ನ ಕೆಲವು ಕವನಗಳನ್ನು ಪ್ರಕಟಿಸಿ, ಮುನ್ನುಡಿಯಲ್ಲಿ ನನ್ನ ಬಗ್ಗೆ ಉತ್ಸಾಹದ ಮಾತುಗಳನ್ನು ಬರೆದರು. ಇದರಿಂದ ಕೆಲವು ವಿಮರ್ಶಕರ ಟೀಕೆಗೆ ಗುರಿಯಾಗಬೇಕಾಯಿತು. ಲಂಕೇಶ್ ನನ್ನಲ್ಲಿ ತೋರಿದ್ದ ಭರವಸೆಯನ್ನು ನನ್ನ ಮುಂದಿನ ಕವನಸಂಕಲನಗಳಲ್ಲಿ ನಾನು ತೀರಾ ಹುಸಿಗೊಳಿಸಲಿಲ್ಲವೆಂಬ ಸಮಾಧಾನ ನನಗಿದೆ.

ನನ್ನ ಮೊದಲ ಕವನ ಸಂಕಲನ 'ಗೋಪಿ ಮತ್ತು ಗಾಂಡಲೀನ'ಕ್ಕೆ ಲಂಕೇಶ್ ಬರೆದ ಆತ್ಮೀಯವಾದರೂ ತೂಕದ ವಿಮರ್ಶಾತ್ಮಕ ಮುನ್ನುಡಿ ಅವರ ಅತ್ಯುತ್ತಮ ಲೇಖನಗಳಲ್ಲಿ ಒಂದಾಗಿ ಉಳಿದಿದೆ. ನಿನ್ನ ಕವನಗಳಿಗಿಂತಲೂ ಲಂಕೇಶರ ಮುನ್ನುಡಿಯೇ ಚೆನ್ನಾಗಿದೆ ಎಂದು ಎಷ್ಟೋ ಮಂದಿ ಹೇಳಿದಾಗ ನನಗೆ ಕೊಂಚವೂ ಬೇಸರವಾಗಲಿಲ್ಲ. ಅವರಷ್ಟು ಆಪ್ತವಾಗಿ, ಆಕರ್ಷಕವಾಗಿ, ವೀರ್ಯವತ್ತಾಗಿ ಕನ್ನಡದಲ್ಲಿ ಬರೆಯಬಲ್ಲವರು ಎಷ್ಟು ಮಂದಿ ಇದ್ದಾರೆ?

೧೯೭೫ರಲ್ಲಿ ನಾನು ಮದುವೆಯಾದೆ. ಬೆಂಗಳೂರಿಗೆ ತಿಂಗಳಿಗೆ ಒಂದೆರಡು ಬಾರಿ ನಾನು ನೀಡುತ್ತಿದ್ದ ಮಾಮೂಲಿ ಭೇಟಿ ಅನಿವಾರ್ಯವಾಗಿ ನಿಂತಿತು. ಜೊತೆಗೆ ಲಂಕೇಶ್ ಆವೇಳೆಗೆ ಸಿನೆಮಾ ನಿರ್ಮಾಣ -ನಿರ್ದೇಶನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಆ ಕ್ಷೇತ್ರದಲ್ಲಿ ನಾನು ಅವರೊಂದಿಗೆ ಸೇರಲು ಸಾಧ್ಯವಿರಲಿಲ್ಲ. ಹೀಗಾಗಿ ನಮ್ಮ ನಿಕಟ ಸಂಪರ್ಕ ಕ್ರಮೇಣ ಕಡಿದು ಬಿತ್ತು.

'ಲಂಕೇಶ್ ಪತ್ರಿಕೆ'ಯ ಪ್ರಕಟಣೆ ಪ್ರಾರಂಭವಾದ ನಂತರವೂ ಲಂಕೇಶರೊಂದಿಗಿನ ನನ್ನ ಸಂಪರ್ಕ ಮತ್ತೆ ಚಿಸಿಲೊಡೆಯಲಿಲ್ಲ. ಈ ವಾರಪತ್ರಿಕೆಯ ಹೊಸತನ ಮತ್ತು ಸಮಕಾಲೀನ ಅರ್ಥವಂತಿಕೆಯ ಬಗ್ಗೆ ನನಗೆ ನಿಜಕ್ಕೂ ಮೆಚ್ಚುಗೆಯಿದೆ. ರಾಜಕೀಯ ಮತ್ತು ಸಾಮಾಜಿಕ ಭ್ರಷ್ಟಾಚಾರ ಮತ್ತು ಅನ್ಯಾಯಗಳ ವಿರುದ್ಧ ಈ ಪತ್ರಿಕೆಯ ದಿಟ್ಟ-ನಿಷ್ಪಕ್ಷಪಾತ ಲೇಖನಗಳನ್ನು ಹಾಗೂ ಲಂಕೇಶರ ಅನನ್ಯ ಶೈಲಿಯ ಅನೇಕ ಸಂಪಾದಕೀಯಗಳನ್ನು ಮೆಚ್ಚಿ

ಆಗಾಗ್ಗೆ ಪತ್ರ ಬರೆದು ಅವರನ್ನು ಅಭಿನಂದಿಸಿದ್ದೇನೆ. ಆದರೆ ಇಂಥ ವಿಷಯಗಳಲ್ಲಿ ಎಂದೂ ನನ್ನನ್ನು ನಾನು ತೊಡಗಿಸಿಕೊಂಡವನಲ್ಲ. ಹೀಗಾಗಿ ಲಂಕೇಶ್ ಪತ್ರಿಕೆಯ ಲೇಖಕ ಬಳಗಕ್ಕೆ ಸೇರಲು ನನಗೆ ಸಾಧ್ಯವಾಗಲಿಲ್ಲ. ನನ್ನೊಂದೆರಡು ಕವನಗಳು ಅಲ್ಲಿ ಅಚ್ಚಾದವು, ಅಷ್ಟೇ.

ಲಂಕೇಶರೊಂದಿಗಿನ ನನ್ನ ಹಾರ್ದಿಕ ಸಂಬಂಧ ಈಗಲೂ ಮೊದಲಿನಂತೆಯೇ ಉಳಿದಿದೆ. ಆದರೆ ನಮ್ಮ ದಾರಿಗಳು ಕವಲೊಡೆದಿವೆ, ನಮ್ಮನ್ನು ಪರಸ್ಪರ ದೂರವಾಗಿಸಿವೆ. ಪತ್ರಿಕೆ ಪ್ರಾರಂಭವಾದ ನಂತರ ನಾನು ಒಂದೆರಡು ಬಾರಿ ಲಂಕೇಶರನ್ನು ಭೇಟಿಯಾಗಿದ್ದೆ. ಮೊದಲಿನಂತೆಯೇ ಪ್ರೀತಿಯಿಂದ ಮಾತಾಡಿದರು. ಒಂದು ಸಂಜೆ 'ಪ್ರೆಸ್ ಕ್ಲಬ್'ಗೆ ನನ್ನನ್ನು ತಮ್ಮ ಕಾರಲ್ಲಿ ಕರೆದೊಯ್ದು 'ಗುಂಡು' ಹಾಕಿಸಿ, ರಾತ್ರಿ ಹನ್ನೆರಡರವರೆಗೆ ಖುಷಿಕೊಟ್ಟು ಮಾತಾಡಿದರು. ಆದರೆ ಆನಂತರ ಭೇಟಿಯಾದಾಗಲೆಲ್ಲ ತಮ್ಮ 'ಪತ್ರಿಕೆ'ಯ ಕೆಲಸಗಳಲ್ಲಿ 'ಬಿಸಿ'ಯಾಗಿರುತ್ತಿದ್ದರು. ಜೊತೆಗೆ ನಮ್ಮ ನಡುವೆ ಮಾತುಕತೆಗೆ ಈಗ ಸಮಾನ ಆಸಕ್ತಿಯ ವಿಷಯಗಳಿರಲಿಲ್ಲ. ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ಮಾತನಾಡಲು ನನಗೆ ಸಾಧ್ಯವಿರಲಿಲ್ಲ. ಸಾಹಿತ್ಯ , ಸಿನೆಮಾ, ಕ್ರಿಕೆಟ್ ಇತ್ಯಾದಿಗಳ ಬಗ್ಗೆ ಮಾತನಾಡುವ ಉತ್ಸಾಹ ಅವರಿಗಿರಲಿಲ್ಲ. ಹೀಗಾಗಿ ನಮ್ಮ ನಡುವೆ ದೊಡ್ಡ ಕಂದರ ಬಾಯ್ತೆರೆದಿತ್ತು. ಅವರಿಗೆ ಬೇಸರ, ಮುಜುಗರ ಉಂಟಾದೀತೆಂದು ನಾನು ಅವರನ್ನು ಭೇಟಿಯಾಗುವುದನ್ನು ನಿಲ್ಲಿಸಿದೆ. ಲಂಕೇಶ್ ಪತ್ರಿಕೋದ್ಯಮದಲ್ಲಿ ಗಳಿಸಿರುವ ಪ್ರಚಂಡ ಯಶಸ್ಸಿನ ಬಗ್ಗೆ ನನಗೆ ಹೆಮ್ಮೆ ಅಭಿಮಾನವಿದೆ. ತುಂಬ ಅರ್ಥಪೂರ್ಣವಾದ , ಸೃಷ್ಟಿಶೀಲವೂ ಆದ ಕಾರ್ಯದಲ್ಲಿ ಅವರು ತೊಡಗಿದ್ದಾರೆಂಬುದೂ ನಿಜ.

ಲಂಕೇಶರ ವ್ಯಕ್ತಿತ್ವ ತುಂಬ ಸಂಕೀರ್ಣವಾದದ್ದು. ವೈರುಧ್ಯಗಳಿಂದ ಕೂಡಿರುವಂಥದು. ಜೊತೆಗೆ ಅವರು ತುಂಬಾ 'ಮೂಡಿ' ವ್ಯಕ್ತಿ. ಆದ್ದರಿಂದಲೇ ಅವರನ್ನು ಪ್ರೀತಿಸಲು - ದ್ವೇಷಿಸಲು, ಅನುಮಾನಿಸಲು - ನಂಬಲು, ಮೆಚ್ಚಲು ನಮಗೆ ಸಾಧ್ಯವಾಗುತ್ತದೆ. ಅವರಿಂದ ಅದೆಷ್ಟೋ ಸಲ ನಾನು ಬೈಸಿಕೊಂಡಿದ್ದೇನೆ; ಅವರೊಂದಿಗೆ ಜಗಳಾಡಿದ್ದೇನೆ; ಈಗ ದೂರವೂ ಆಗಿದ್ದೇನೆ. ಇಷ್ಟಾದರೂ ಅವರಲ್ಲಿ ಪ್ರೀತಿ , ಅಭಿಮಾನ ಎಂದೂ ಮಾಸಿಲ್ಲ, ಮಾಸುವುದೂ ಇಲ್ಲ.

ಒಮ್ಮೆ ಬಿ.ವಿ.ಕಾರಂತರ ನಿರ್ದೇಶನದ 'ಹಯವದನ' ನಾಟಕ ನೋಡಿ ಲಂಕೇಶರ ಮನೆಗೆ ಹೋಗಿದ್ದೆ. 'ನಾಟಕ ಹೇಗಿತ್ತು?' ಎಂದು ಕೇಳಿದರು. 'ನನಗೆ ತುಂಬಾ ಇಷ್ಟವಾಯಿತು' ಎಂದೆ. 'ನೀನೊಂದು ಹಯ. ಆ ಕೆಟ್ಟ ಪ್ರದರ್ಶನ ಇಷ್ಟವಾಯಿತು ಅಂತೀಯಲ್ಲ!' ಎಂದರು. 'ನನಗೆ ಅನಿಸಿದ್ದನ್ನು ನಾನು ಹೇಳಿದೆ' ಎಂದು ಅವರಿಂದ ಕಲಿತಿದ್ದ ಅಸ್ತ್ರವನ್ನು ಅವರ ಮೇಲೇ ಪ್ರಯೋಗಿಸಿದೆ. 'ಅಲ್ಲಿನ ಹಾಡು ಕುಣಿತ ಎಲ್ಲ ಗಿಮಿಕ್ಸ್' ಎಂದರು. 'ನನಗೇನೂ ಹಾಗನ್ನಿಸಲಿಲ್ಲ. ಅವುಗಳಿಂದ ನಾಟಕದ ಪರಿಣಾಮ ಹೆಚ್ಚಾಯಿತೆಂದೇ ನನಗನ್ನಿಸಿತು' ಎಂದೆ. ಕೊಂಚ ಹೊತ್ತು ಸುಮ್ಮನಿದ್ದು ನಂತರ 'ಬಹುಶಃ ನಿನ್ನ ಅಭಿಪ್ರಾಯವೇ ಸರಿ ಇರಬಹುದು. I may be prejudiced' ಎಂದರು.

ಇನ್ನೊಮ್ಮೆ 'ಅರ್ಜೆಂಟಾಗಿ ಹಣ ಬೇಕಾಗಿದೆ. ಕೂಡಲೇ ರೂ.೨೫೦ ಕಳಿಸಿಕೊಡು'

ಎಂದು ಪತ್ರ ಬರೆದಿದ್ದರು. ಯಾಕೋ ಏನೋ ಎಂದು ಕೂಡಲೇ ಹಣ ಕಳಿಸಿಕೊಟ್ಟೆ. ನಂತರ ಗೊತ್ತಾಯಿತು - ಆ ಹಣವನ್ನು ಕುದುರೆ ಬಾಲಕ್ಕೆ ಕಟ್ಟಿ ಕಳೆದಿದ್ದರು. ಹಣ ಹಿಂದಿರುಗಿಸಲಿಲ್ಲ. ಕೇಳಿದ್ದಕ್ಕೆ ರೇಗಾಡಿದರು. ತಪ್ಪಾಗಾದೆ. ನಂತರ ಅವರೇ ನನ್ನನ್ನು ಕರೆಸಿಕೊಂಡು, ರೇಗಾಡಿದ್ದಕ್ಕೆ ನೊಂದುಕೊಂಡು, ಹಣ ಹಿಂದಿರುಗಿಸಿದರು.

ಲಂಕೇಶ್ ದಿಲ್ಲಗಿ ಮನುಷ್ಯ. ಜೀವನ ಪ್ರೇಮಿ. ಸಾಹಸಿ. ಎಷ್ಟೆಲ್ಲ ಸುಶಿಕ್ಷಿತರಾದರೂ, ಪಾಂಡಿತ್ಯ ಗಳಿಸಿದರೂ ತಮ್ಮ ಆ ಹಳ್ಳಿಗನ ಸಹಜ ಮುಗ್ಧತೆ, ಸರಳತೆ, ತಾದಾತ್ಮ್ಯತೆಯ ಬೆರಗು, ಜೊತೆಗೆ ನಿರ್ಭಿಡೆಯ ನೇರತನ, ಒಡ್ಡತನ - ಇವುಗಳನ್ನು ಅವರೆಂದೂ ಕಳೆದುಕೊಳ್ಳಲಿಲ್ಲ. ಅವರ ಬರವಣಿಗೆಯಲ್ಲಿನ ತಾಜಾತನ ಮತ್ತು ಕಸುವಿಗೆ ಇದು ಮುಖ್ಯ ಕಾರಣ ಎನ್ನುವುದು ನನ್ನ ಅನಿಸಿಕೆ. ಒಮ್ಮೆ ಅವರು ಹೇಳಿದ ಮಾತನ್ನು ನಾನು ಇನ್ನೂ ಮರೆತಿಲ್ಲ : 'ವ್ಯಭಿಚಾರ ಮಾಡದವನು ಕವಿಯಾಗಲಾರ!' ಮನಸ್ಸಿನ ಮಟ್ಟಿಗಾದರೂ ಈ ಮಾತು ನಿಜವಲ್ಲವೆ...?

o

o

ಮೇಲ್ಕಂಡ ಲೇಖನವನ್ನು ನಾನು ಬರೆದದ್ದು ಲಂಕೇಶರಿಗೆ ಐವತ್ತು ತುಂಬಿದ ಸಂದರ್ಭದಲ್ಲಿ ಅಗ್ರಹಾರ ಕೃಷ್ಣಮೂರ್ತಿ ಮತ್ತವರ ಗೆಳೆಯರು ಹೊರತರಲು ಬಯಸಿದ್ದ ಅಭಿನಂದನೆಯ ಗ್ರಂಥಕ್ಕಾಗಿ. ಆದರೆ ಕಾರಣಾಂತರಗಳಿಂದ ಅಭಿನಂದನಾ ಗ್ರಂಥ ಆಗ ಹೊರಬರಲಿಲ್ಲ. ಲಂಕೇಶರಿಗೆ ಅರವತ್ತು ತುಂಬಿದ ನಂತರ ಗಂಗಾಧರ ಕುಷ್ಟಗಿ ಅವರ ಸಂಪಾದಕತ್ವದಲ್ಲಿ ಪ್ರಕಟವಾದ 'ತಲೆಮಾರಿನ ತಳಮಳ' ಎಂಬ ಸಂಕಲನದಲ್ಲಿ ಈ ಲೇಖನ ಪ್ರಕಟವಾಗಿದೆ.

ಇದೀಗ ಲಂಕೇಶ್ ತೀರಿಕೊಂಡಿದ್ದಾರೆ. ಅವರ ಪತ್ರಿಕೆ ಪ್ರಾರಂಭವಾದ ನಂತರ ನಾನು ಅವರನ್ನು ಮುಖಾಮುಖಿ ಭೇಟಿಯಾದದ್ದು ಎಲ್ಲೋ ಕೆಲವು ಸಲ ಮಾತ್ರ. ಆಗಲೂ ನನಗಾದದ್ದು ಬಹುತೇಕ ಮನಸ್ಸನ್ನು ಮುದುರಿಸುವಂತಹ ಕಹಿ ಅನುಭವಗಳೇ. ೧೯೮೭ರಲ್ಲಿ, ನನ್ನ 'ಶಾಂಗ್ರಿ-ಲಾ' ಎಂಬ ಕವನ ಸಂಕಲನವನ್ನು 'ಪತ್ರಿಕೆ' ಪ್ರಕಾಶನದಿಂದ ಪ್ರಕಟಿಸಲು ಸಾಧ್ಯವೇ ಎಂದು ಕೇಳಿ ನಾನು ಅವರಿಗೆ ಪತ್ರ ಬರೆದಿದ್ದೆ. ಅವರಿಂದ ಉತ್ತರ ಬರಲಿಲ್ಲ. ರಾಮಚಂದ್ರ ಶರ್ಮರು, 'ಪತ್ರಿಕೆ'ಯ ಕಚೇರಿಯಲ್ಲಿ ನನ್ನ ಪತ್ರ ಕಂಡರಂತೆ. ಅವರು, 'ನಾನು ಲಂಕೇಶ್‌ಗೆ ಹೇಳ್ತೇನೆ. ಮುಖಾಮುಖಿ ಮಾತಾಡೋಣ. ಅವರ ಕಚೇರಿಗೆ ಬಾ' ಎಂದು ನನಗೆ ಹೇಳಿದರು. ಅದರಂತೆ ಒಂದು ಭಾನುವಾರ, ಆತ್ಮೀಯ ಗೆಳೆಯ, ಕವಿ , ಎಚ್. ಎಸ್. ವೆಂಕಟೇಶಮೂರ್ತಿಯವರೊಂದಿಗೆ ನಾನು ಲಂಕೇಶರ ಕಚೇರಿಗೆ ಹೋದೆ. ಇಸ್ಪೀಟಾಟ ಮುಗಿಸಿಬಂದ ಲಂಕೇಶ್ ರಾಯಲ್ ಚಾಲೆಂಜ್ ವಿಸ್ಕಿಯನ್ನು ಕುಡಿಯಲು ಕೊಟ್ಟು, ತಾವೂ ಅದನ್ನು ಸವಿಯುತ್ತ, ಸಿಗರೇಟ್ ಎಳೆಯುತ್ತ, 'ನಿನ್ನ ಕವನ ಸಂಕಲನ ನಮ್ಮ ಪ್ರಕಾಶನದಲ್ಲಿ ಪ್ರಕಟಿಸಲು ಸಾಧ್ಯವಿಲ್ಲ ಕಣಯ್ಯ' ಎಂದರು. ನಾನು ಪೆಚ್ಚಾದೆ. 'Take it easy. ಯಾಕೆ ಪ್ರಕಟಿಸೋಲ್ಲ ಅಂದ್ರೆ, ನನ್ನ ಪ್ರಕಾರ ಕಳೆದ ಹತ್ತು ವರ್ಷಗಳಲ್ಲಿ ಕನ್ನಡದಲ್ಲಿ ಒಳ್ಳೇ ಕಾವ್ಯವೇ

ಬಂದಿಲ್ಲ' ಎಂದರು. ಅದು ಪರೋಕ್ಷವಾಗಿ ವೆಂಕಟೇಶಮೂರ್ತಿಯ ಕಾವ್ಯದ ಬಗ್ಗೆಯೂ comment ಇದ್ದಂತಿತ್ತು. ಮೂರ್ತಿ ಹೇಳಿಕೇಳೀ ಆತ್ಮಾಭಿಮಾನಿ. ಆದರೆ ಸಂಕೋಚದ, ಸಜ್ಜನಿಕೆಯ ವ್ಯಕ್ತಿ. ಆದ್ದರಿಂದ ಅವನು ಮೌನ ವಹಿಸಿದ. ಹೀಗೆ ಇತರರನ್ನು ತಮ್ಮ ಕಟು ಟೀಕೆಗಳಿಂದ ನೋಯಿಸುವುದರಲ್ಲಿ ಲಂಕೇಶ್ ವಿಲಕ್ಷಣ ಆನಂದ ಪಡೆಯುತ್ತಿದ್ದುದು ಸಾಮಾನ್ಯ ಸಂಗತಿ. ಆದರೆ ತಮಾಷೆಯೆಂದರೆ, ಹೀಗೆ ಹೇಳಿದ ಮರುಕ್ಷಣವೇ ಅವರೆಂದರು, 'ಈಗ ನಿಮಗಿಬ್ಬರಿಗೂ ಒಂದು ಸಂತೋಷದ ಸಂಗತಿ. ಪತ್ರಿಕೆಯ ದೀಪಾವಳಿ ವಿಶೇಷಾಂಕ ಬರ್ತಾ ಇದೆ. ಇಬ್ಬರೂ ಕವಿತೆ ಕಳಿಸಿಕೊಡಿ.' ನಮ್ಮಂಥ ಕುಕವಿಗಳಿಂದ ಇವರೇಕೆ ಕವಿತೆ ಆಹ್ವಾನಿಸುತ್ತಿದ್ದಾರೆಂದು ನಮಗೆ ಆಶ್ಚರ್ಯವಾಯಿತಾದರೂ ಮೌನವಾಗಿ ಎದ್ದು ಬಂದೆವು. ನಾನೇನೋ ಗುರುಗಳೆಂಬ ಕೃತಜ್ಞತೆಯಿಂದ ಕವಿತೆ ಕಳಿಸಿಕೊಟ್ಟೆ. ಆದರೆ ಮೂರ್ತಿ ಕಳಿಸಲಿಲ್ಲ. ಅವನಿಗೆ ಅಂಥ ಯಾವದೇ ಮುಲಾಜುಗಳಿರಲಿಲ್ಲ.

ಲಂಕೇಶರ ವೈರುಧ್ಯಗಳಿಗೆ ಉದಾಹರಣೆಯಾಗಿ ನನ್ನ ಅರಿವಿಗೆ ಬಂದ ಒಂದು ಘಟನೆ ಹೀಗಿದೆ : 'ನಿತ್ಯೋತ್ಸವ'ದ ಮೂಲಕ ಸುಗಮ ಸಂಗೀತ ಕ್ಷೇತ್ರದಲ್ಲಿ 'ಕ್ಯಾಸೆಟ್ ಯುಗ' ಆರಂಭವಾಗಿತ್ತು. ನಿಸಾರ್ ಅಹಮದ್, ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ಬೇಂದ್ರೆ, ಶಿವರುದ್ರಪ್ಪ, ಲಕ್ಷ್ಮೀನಾರಾಯಣ ಭಟ್ಟ, ದೊಡ್ಡರಂಗೇಗೌಡ ಮುಂತಾದವರ ಭಾವಗೀತೆಗಳು ಧ್ವನಿಸುರುಳಿಗಳ ಮೂಲಕ ನಾಡಿನ ಮೂಲೆ ಮೂಲೆ ತಲುಪಿದ್ದವು. ಈ ಕವಿಗಳ ಸಾಲಿಗೆ ವೆಂಕಟೇಶಮೂರ್ತಿ, ಎಂ.ಎನ್. ವ್ಯಾಸರಾವ್ ಮತ್ತು ನಾನು ಹೊಸದಾಗಿ ಸೇರಿಕೊಂಡೆವು. ಆಗ ನಮ್ಮನ್ನು 'ದಾಸಕೂಟ'ವೆಂದು ರಾಮಚಂದ್ರಶರ್ಮರು, 'ಕ್ಯಾಸೆಟ್ ಕವಿಗಳು' ಎಂದು ಲಂಕೇಶರು ಲೇವಡಿ ಮಾಡುತ್ತಿದ್ದರು. ಏರನಿಯೆಂದರೆ, ಒಮ್ಮೆ ಒಕ್ಕಾಗ ಗೆಳೆಯ ವ್ಯಾಸ್ ನನಗೆ ಹೇಳಿದ, 'ಲಕ್ಷ್ಮಣಾ... ಲಂಕೇಶ್ ಫೋನ್ ಮಾಡಿದ್ದರು. ಹೋಗಿದ್ದೆ. ಏನು ಹೇಳಿದರು ಗೊತ್ತ?... ವ್ಯಾಸ್ ನನ್ನದೂ ಕೆಲವು ಹಾಡುಗಳವೆ. ಕ್ಯಾಸೆಟ್ ಮಾಡಿಸಬೇಕು ಕಣಯ್ಯ. ಯಾರಿಂದ ಮ್ಯೂಸಿಕ್ ಮಾಡಿಸೋಣ? ಈ ವಿಚಾರದಲ್ಲಿ ನೀನು ಕೊಂಚ ಅಸಿಸ್ಟ್ ಮಾಡಬೇಕಲ್ಲ...'. ಯಾಕೋ ಆಮೇಲೆ ಲಂಕೇಶ್ ಆ ವಿಚಾರ ಕೈಬಿಟ್ಟರು.

'ಲಂಕೇಶ್ ಪತ್ರಿಕೆ'ಯ ಯಶಸ್ಸಿನಿಂದ ಸ್ಫೂರ್ತಿ ಪಡೆದು ಅಂಥ ಹಲವಾರು tabloidಗಳು ಇಂದು ಕನ್ನಡ ನಾಡಿನಾದ್ಯಂತ ಹುಟ್ಟಿಕೊಂಡಿವೆ. ಈ ಎಲ್ಲದರ ಭಾಷೆ, ಶೈಲಿ, ಧೋರಣೆ, ವರಸೆ ಸುಮಾರಾಗಿ ಒಂದೇ ರೀತಿಯಲ್ಲಿವೆ. ಕಾಮ, ಕ್ರೌರ್ಯ, ಹಿಂಸೆ, ಅಪರಾಧ ಎಲ್ಲೆಡೆ ವೈಭವೀಕರಣಗೊಳ್ಳುತ್ತಿವೆ. ಇದರಿಂದ ಏನು ಸಮಾಜೋದ್ಧಾರ ವಾಗುತ್ತಿದೆಯೋ ನನಗಂತೂ ಗೊತ್ತಾಗುತ್ತಿಲ್ಲ. ಕಳೆದ ಇಪ್ಪತ್ತು ವರ್ಷಗಳಲ್ಲಿ ಸಾಹಿತ್ಯವೂ ಸೇರಿದಂತೆ ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ಭ್ರಷ್ಟಾಚಾರ, ವಶೀಲಿಬಾಜಿ ಮತ್ತು ಭಯೋತ್ಪಾದನೆ ಇನ್ನಷ್ಟು ಹೆಚ್ಚು ಆಗುತ್ತಿರುವಂತೆಯೇ ತೋರುತ್ತಿದೆ. ಧಿಡೀರ್ ಪ್ರಚಾರ, ಪ್ರಸಿದ್ಧಿ ಮತ್ತು ಹಣಗಳಿಕೆಯ ಒಂದು ಸುಲಭೋಪಾಯವಾಗಿ ಇಂಥ ಪತ್ರಿಕೆಗಳು ಹುಟ್ಟಿಕೊಳ್ಳುತ್ತಿರಬಹುದೆಂಬ ಗುಮಾನಿ ಮೂಡುತ್ತಿದೆ. ಸಾಹಿತ್ಯ ರಚನೆ ಒಂದು ಸಮಾಜವಿರೋಧಿ ಚಟುವಟಿಕೆಯೇನೋ ಎಂಬಂತೆ ಕಟುವಿಮರ್ಶೆಗಳು ಪ್ರಕಟವಾಗುತ್ತಿವೆ.

ಎಲ್ಲೆಡೆಯೂ ಅಸಹನೆ, ಸಿನಿಕತೆ , ಬಿರುನುಡಿಗಳು ಉಸಿರುಕಟ್ಟಿಸುತ್ತಿವೆ. ಸಾತ್ವಿಕತೆ, ಸಜ್ಜನಿಕೆ ಮತ್ತು ಮಲುಮಾತು ದೌರ್ಬಲ್ಯಗಳೆಂಬಂತೆ ನಗೆಪಾಟಲಿಗೆ ಈಡಾಗುತ್ತಿವೆ. 'ಲಂಕೇಶ್ ಪತ್ರಿಕೆ'ಯಿಂದ ಎಷ್ಟೆಲ್ಲ ಒಳ್ಳೆಯದಾಗಿರುವುದು ಹೌದಾದರೂ ಇಂದಿನ ಈ ವಿಕೃತಿಗೆ ಅದರ ಕೊಡುಗೆಯೂ ತಕ್ಕ ಮಟ್ಟಗಿರುವುದನ್ನು ಅಲ್ಲಗಳೆಯುವುದು ಕಷ್ಟ .

ಲಂಕೇಶ್ ತೀರಿಕೊಳ್ಳುವುದಕ್ಕೆ ಒಂದು ತಿಂಗಳ ಹಿಂದೆ, ಡಿಸೆಂಬರ್ ೨೬ರಂದು ನಾನು ಅವರನ್ನು ಭೇಟಿಯಾಗಬಹುದಾಗಿದ್ದ ಅವಕಾಶವೊಂದು ಕೂಂಚದರಲ್ಲಿ ತಪ್ಪಿಹೋಯಿತು. ಗೆಳೆಯ ಕವಿ ಡುಂಡಿರಾಜ್ 'ಹಾಸ್ಯೋತ್ಸವ'ಕ್ಕೆಂದು ಬೆಂಗಳೂರಿಗೆ ಬಂದಿದ್ದ. ಕೆಲಸವೊಂದರ ನಿಮಿತ್ತ ನಾವಿಬ್ಬರೂ ಅಂದು ಗಾಂಧಿ ಬಜಾರಿಗೆ ಹೋಗಿದ್ದೆವು. ಹಾಗೆಯೇ ಹೋಗಿ ಲಂಕೇಶರನ್ನು ಕಂಡುಬರೋಣವೆಂದುಹೊರಟಿದ್ದವರು ಬೇಡವೆಂದು ನಿರ್ಧರಿಸಿ ಹಿಂತಿರುಗಿದೆವು. ಏಕೆಂದರೆ, ಹೀಗೆಯೇ ೧೯೯೮ರಲ್ಲಿ ಒಮ್ಮೆ ನಾವಿಬ್ಬರೂ ಲಂಕೇಶರಲ್ಲಿಗೆ ಹೋಗಿದ್ದೆವು. ಸಂತೋಷದಿಂದ ಬರಮಾಡಿಕೊಂಡು ಕಾಫಿ ತರಿಸಿ, ಸುಮಾರು ಒಂದು ಗಂಟೆ ಕಾಲ ನಮ್ಮೊಂದಿಗೆ ಹಾರ್ದಿಕವಾಗಿ ಅದೂ ಇದೂ ಮಾತಾಡಿದ್ದರು. ತಮ್ಮ ಕ್ಯಾಮರಾದಲ್ಲಿ ತಾವೇ ಖುದ್ದಾಗಿ ನಮ್ಮಿಬ್ಬರ ಫೋಟೋಗಳನ್ನು ತೆಗೆದರು. ಖುಷಿಯಿಂದ ಹೊರಬಂದೆವು. ಆದರೆ ನಮಗೆ shock ಆದದ್ದು ಮುಂದಿನ ವಾರದ 'ಪತ್ರಿಕೆ' ಕಂಡಾಗ. ಅದರಲ್ಲಿ ಲಂಕೇಶ್ ನಮ್ಮ ಭೇಟಿಯನ್ನು ಪ್ರಸ್ತಾಪಿಸಿ ತಮ್ಮದೇ ಕಾರಣಗಳಿಗಾಗಿ ನಮ್ಮಿಬ್ಬರನ್ನು ಯದ್ವಾತದ್ವಾ ಟೀಕಿಸಿದ್ದರು. ಈ ಬಾರಿಯೂ ಹಾಗೇ ಆದೀತೆಂದು ಹೆದರಿ ನಾವು ಅವರನ್ನು ಭೇಟಿಯಾಗದೇ ಹಿಂತಿರುಗಿದ್ದೆವು. ಹೀಗೆ ಲಂಕೇಶರ ವಿಲಕ್ಷಣ ಸ್ವಭಾವವೇ ಕಾರಣವಾಗಿ, ನಾವು ಅವರನ್ನು ಕೊನೆಯಬಾರಿ ಭೇಟಿಯಾಗಬಹುದಾಗಿದ್ದ ಅವಕಾಶ ತಪ್ಪಿಸಿಕೊಂಡೆವು. ಈ ಬಗ್ಗೆ ಈಗ ನನಗೆ ನೆನಪಿಸಿಕೊಂಡರೆ ನಿಜಕ್ಕೂ ಹೃದಯ ಭಾರವಾಗುತ್ತೆ.

ಲಂಕೇಶರೊಂದಿಗೆ ಏಗುವುದು ಎಂಥವರಿಗಾದರೂ ತುಂಬಾ ಪ್ರಯಾಸವೇ. ಕೆಲವರಿಗೆ ಅದು ಅಗತ್ಯವಾಗಿತ್ತು , ಅನಿವಾರ್ಯವಾಗಿತ್ತು. ಸುದೈವದಿಂದ ಅಂಥ ದುಃಸ್ಥಿತಿ ನನಗೆ ಒದಗಲಿಲ್ಲ. ನಾನು ಅವರಿಂದ, ಅವರ 'ಆಸ್ಥಾನ 'ದಿಂದ ಸಾಕಷ್ಟು ದೂರವಾಗಿಯೇ ಉಳಿದೆ . ಅದರಿಂದ ನನಗೇನಾದರೂ ನಷ್ಟವಾಗಿದ್ದರೆ ಆ ಬಗ್ಗೆ ನನಗೆ ವಿಷಾದವಂತೂ ಖಂಡಿತ ಇಲ್ಲ.

ಅಗಲಿ ಹೋದ ನನ್ನ 'ಗುರು' ಲಂಕೇಶರಿಗೆ ನನ್ನ ಕಾವ್ಯ ನಮನ ಸಲ್ಲಿಸುತ್ತಿದ್ದೇನೆ :

ಗುರುವಿಗೆ ಕೃತಜ್ಞತೆಯಿಂದ

ಗುರುವೇ,
ನೀವೊಂದು ಧಗ ಧಗ ಉರಿದ
ಅಗ್ನಿ ಕುಂಡ,
ಮಾನವ ರೂಪಿ
ಮಾರ್ತಾಂಡ :
ನಮ್ಮ ಒಳಹೊರಗಿನ ಮುಚ್ಚುಮರೆಗಳನ್ನೆಲ್ಲ
ಬೆಳಕು ರಾಚಿ ತೋರಿದಿರಿ ;

ಸೂಕ್ಷ್ಮಾತಿ ಸೂಕ್ಷ್ಮಗಳ ಮೇಲೂ
ಕ್ಷ ಕಿರಣ ಬೀರಿದಿರಿ ;
ನಿಮಗೆ ಸರಿ ತೋರದ ಎಲ್ಲದರ ವಿರುದ್ಧ
ನಿರಂತರ ಯುದ್ಧ ಸಾರಿದಿರಿ ;
ಸಿಕ್ಕಿ ಬಿದ್ದ ಕತ್ತಲ ಗುಟ್ಟುಗಳನ್ನೆಲ್ಲ
ಸಂತೆಯಲ್ಲಿಟ್ಟು ಮಾರಿದಿರಿ ;
ನಿಮಗೇ ಕನ್ನಡಿ ಹಿಡಿಯಲು ಬಂದ
ಎಂಟೆದೆಯ ಭಂಟರ ಮೇಲೆ
ಕೆಂಡ ಕಾರಿದಿರಿ ;
ಇಂಧನ ತೀರುವ ತನಕ
ಏಕಾಂಗಿ ಹೋರಿದಿರಿ ;
ಕಾಲನಿಗಷ್ಟೇ ತಲೆ ಬಾಗಿ
ಇದೀಗ ಆರಿದಿರಿ ...
ಇತಿಹಾಸ ಸೇರಿದಿರಿ.
ಇನ್ನಾದರೂ ನಿಮ್ಮ ಜೀವ ತಣ್ಣಗಿರಲಿ.

★

ನಿಮ್ಮ ಸೆಳೆತಕ್ಕೆ ಸಿಕ್ಕಿ
ನಿಮ್ಮ ಸುತ್ತ
ಪರಿಭ್ರಮಿಸುತ್ತ
ತೀರಾ ಹತ್ತಿರಾದವರು
ಸುಟ್ಟು ಕರಕಾದರು ;
ತೀರಾ ದೂರಾದವರು
ಹಿಮಗಟ್ಟಿ ಮುರುಟಿದರು ;
ತಕ್ಕ ದೂರದಲ್ಲಿದ್ದವರಷ್ಟೇ,
ಈ ಭೂಮಿಯಂತೆ,
ತಮ್ಮ ಸುತ್ತ ತಮ್ಮದೇ
ವಾತಾವರಣ ತಳೆದು,
ನಿಮ್ಮಿಂದ ಬೆಳಕು ಬಿಸಿ
ಸೋಸಿ ಪಡೆದು,
ಬಾಳಿ ಬದುಕಿದ್ದಾರೆ -
ನಿಮ್ಮನ್ನು ಕೃತಜ್ಞತೆಯಿಂದ ನೆನೆದು,
ತಮ್ಮ ತಮ್ಮ ದಾರಿಯಲ್ಲಿ
ತಾವು ಮುಂದುವರಿದು ...

ಲಂಕೇಶ್ ನೆನಪು :
ಜಗಳ - ಆತ್ಮೀಯತೆ - ಲೋಕಾಭಿರಾಮ...

○ ಶ್ರೀಪಾದ ಶೆಟ್ಟಿ

ತಮ್ಮದೇ ಆದ ಅನನ್ಯ ವಿಶಿಷ್ಟತೆಯನ್ನು ಉಳಿಸಿಕೊಂಡು ಬಂದ ಅಪರೂಪದ ಪ್ರತಿಭೆ ಪಿ.ಲಂಕೇಶ್. ಎಲ್ಲರೊಡನಿದ್ದರೂ ಎಲ್ಲರಂತಾಗದೇ ಸದಾ ಏನೋ ಒಂದು ಬಗೆಯ ಹುಡುಕಾಟ, ತಳಮಳ, ಚಿಂತೆ, ಚಿಂತನೆ, ಕೊರಗು, ಪ್ರತಿಭಟನೆ, ಸಿನಿಕತನ, ಅನಾಥ ಪ್ರಜ್ಞೆ, ಅದಮ್ಯ ಜೀವನ ಪ್ರೀತಿ ...ಇವುಗಳನ್ನೆಲ್ಲ ಒಂದೆಡೆ ಕಲೆಹಾಕುವ ಮೂಲಕವಾಗಿ ತಮ್ಮೊಳಗಿನ ಸತ್ವವನ್ನು ಹುಡುಕಾಡಲು ಅವಿರತವಾಗಿ ಶ್ರಮಿಸುತ್ತಾ ಬಂದ ಲಂಕೇಶ್ ತಮ್ಮ ಪಯಣದ ಕೊನೆಯ ದಿನದವರೆಗೂ ಅಂಥ ಒಂದು ಹುಡುಕಾಟದಲ್ಲಿ ಗರ್ಕಾಗಿದ್ದ ವ್ಯಕ್ತಿ. ಹೇಳುವುದನ್ನು ಹೇಗೆ ಹೇಗೋ ಹೇಳದೇ, ತಮಗೆ ಅನಿಸಿದ್ದನ್ನು ಹೊಸ ನಮೂನೆಯಲ್ಲಿ ಹೇಳಬೇಕೆನ್ನುವ ಹಂಬಲವನ್ನು, ಬರೆಯುವುದನ್ನು ಕಾಟಾಚಾರಕ್ಕೆ ಬರೆಯದೇ ಆ ಬರವಣಿಗೆಯಲ್ಲಿ ತಮ್ಮ ಇಡೀ ವ್ಯಕ್ತಿತ್ವದ, ಪ್ರಜ್ಞೆಯ ಎರಕ ಹೊಯ್ದು ಆ ಬರವಣಿಗೆಯಲ್ಲಿ ಜೀವಶಕ್ತಿಯನ್ನು ತುಂಬುತ್ತಿದ್ದರು ಲಂಕೇಶ್. ಒಂದು ಕತೆ ಅಥವಾ ಒಂದು ಕಾದಂಬರಿಯನ್ನು ಬರೆದಾಗ ತನ್ನ ಶಕ್ತಿ ಸೋರಿ ಹೋಗಿದೆ, ಅದಕ್ಕಾಗಿ ಮತ್ತೆ ಶಕ್ತಿಯನ್ನು ತುಂಬಿಕೊಳ್ಳಬೇಕು ಎಂಬ ವಿಚಿತ್ರ ನಂಬಿಕೆಯನ್ನು ಅವರು ರೂಢಿಸಿಕೊಂಡದ್ದನ್ನು ಲಂಕೇಶ್ ಪತ್ರಿಕೆಯಲ್ಲಿನ ಅವರ ಟೀಕೆ ಟಿಪ್ಪಣಿಗಳು ಸ್ಪಷ್ಟಪಡಿಸುತ್ತವೆ.

ಶಿವಮೊಗ್ಗೆಯ ಪರಿಸರದಲ್ಲಿ ತಮ್ಮ ಬಾಲ್ಯ ಮತ್ತು ಯೌವ್ವನಗಳನ್ನು ಕಟ್ಟಿಕೊಂಡ ಲಂಕೇಶ್ ತಮ್ಮ ವೃತ್ತಿಜೀವನವನ್ನು ಬೆಂಗಳೂರಿನಲ್ಲಿ ಆರಂಭಿಸಿ ಅಲ್ಲಿಯವರಾಗಿಬಿಟ್ಟರು. ಮೊದಲಿನಿಂದಲೂ ನಿಷ್ಠುರ ನಿಲುವಿನ, ಖಂಡಿತವಾದಿಯಾದ ಲಂಕೇಶ್ ಎಲ್ಲರನ್ನೂ, ಎಲ್ಲವನ್ನೂ ಗುಮಾನಿಯಿಂದ ನೋಡುವ ಪ್ರಕೃತಿಯವರು. ಅವರ ಸ್ವಭಾವದ ಈ ಎಳೆಗಳು ಅವರ ಕಲಾಕೃತಿಗಳಲ್ಲಿ ಸಮರ್ಥವಾಗಿ ಒಡಮೂಡಿರುವುದನ್ನು ನಾವು ಕಾಣುತ್ತೇವೆ.

ಕಾಲೇಜಿನ ಅಧ್ಯಾಪಕ ವೃತ್ತಿಯಿಂದ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯವರೆಗೆ ನಡೆದುಬಂದ ಲಂಕೇಶ್, ಯಾವತ್ತಿಗೂ ಸ್ಥಗಿತತೆ - ಸ್ಥಾವರಗೊಳ್ಳುವುದನ್ನು ವಿರೋಧಿಸುತ್ತ ಬಂದವರು. ''ಅನ್ಯರೊರೆದುದನೆ ಬರೆದುದನೆ ಬರೆ ಬರೆದು ಜಿಣ್ಣಗಾಗಿದೆ ಎನ್ನ ಮನ'' ಎಂಬ ಅಡಿಗರ ಕಾವ್ಯದಲ್ಲಿನ ಒಂದು ವಿಷಾದದಂತೆ ಲಂಕೇಶ್ ಅಂತಿಮವಾಗಿ ತಮ್ಮ ಅಧ್ಯಾಪಕ ವೃತ್ತಿಯಲ್ಲಿಯೂ ಆಸಕ್ತಿಯನ್ನು ಕಳೆದುಕೊಂಡು, ಹೊಸ ಚಲನಶೀಲತೆಯನ್ನು ಸಾಧಿಸಲು ಪ್ರಯತ್ನಿಸಿದವರು. ಕಾವ್ಯ, ನಾಟಕ, ಸಿನೆಮಾ, ಅಂಕಣ ಬರಹ ...ಹೀಗೆ ಹತ್ತಾರು ಕೆಲಸಗಳ ನಡುವೆ ತೊಡಗಿಕೊಂಡು ಅದಕ್ಕೆಲ್ಲ ತಮ್ಮ ವ್ಯಕ್ತಿ ವೈಶಿಷ್ಟ್ಯದ ಛಾಪು ಒತ್ತಿದವರು.

೦

೦

ಲಂಕೇಶ್ ಪರಿಚಯ ನನಗಾದದ್ದು ಧಾರವಾಡದ ಗೆಳೆಯ ವಿಜಯ ಪಾಟೀಲ್ ಹೊರತಂದ, ನಮ್ಮೆಲ್ಲರ ಕವನಗಳ ಸಂಕಲನ - ''ಕಪ್ಪು ಜನರ ಕೆಂಪು ಕಾವ್ಯ'' ಎಂಬ ಕವನಸಂಕಲನಕ್ಕೆ ಅವರು ಬರೆದ ಕವಿತೆಯ ರೂಪದ ಹಿನ್ನುಡಿಯ ಮೂಲಕ. ''ಗೆಳೆಯರೆ ನಿಮ್ಮ ಕವಿತೆಗಳು ತಲುಪಿವೆ. ಕವನವಿರಲಿ ಕತ್ತಿ ಕೂಡ ತಲುಪದ ಸ್ಥಿತಿ ನಮ್ಮದು '' ಎನ್ನುತ್ತ ''ಸುಳ್ಳುಗಳ ದಲಿತೋದ್ಧಾರ ಮಾಡಿ ಕಾವ್ಯದ ಹೆಣ್ಣಿನ ತೊಡೆಯಲ್ಲಿ ಮುಖವಿಟ್ಟು ಬಿಕ್ಕಿ ಬಿಕ್ಕಿ ಅಳುವುದನ್ನು ನಾವು ಬಯಸಿರಲಿಲ್ಲ''...ಇಂಥ ಸಾಲುಗಳ ಮೂಲಕ ನಮ್ಮ ಆಕ್ರೋಶಕ್ಕೆ ತುತ್ತಾಗುತ್ತ ಪರಿಚಯವಾದವರು ಲಂಕೇಶ್. ಪರಿಚಯದೊಂದಿಗೇ ನಮ್ಮ ಅಮಿತ ಉತ್ಸಾಹಕ್ಕೆ ವಾಸ್ತವದ ಸಕೃದ್ದರ್ಶನ ಮಾಡಿಸಿದ್ದರು.

೧೯೭೭ರಲ್ಲಿ ಲಂಕೇಶ್ ಅವರನ್ನು ಧಾರವಾಡಕ್ಕೆ ಬರಮಾಡಿಕೊಂಡೆವು. ಆಗ ಇಂಗ್ಲಿಷ್ ಪ್ರಾಧ್ಯಾಪಕನ ನಾತೆ, ಮತ್ತು ಒಕ್ಕೂಟದ ಆದರ್ಶ ಹೀಗೆ ಏನೇನೋ ಸಂಬಂಧ ಹಾಗೂ ಬಂಧಗಳ ಮೂಲಕ ಪಿ. ಲಂಕೇಶ್ ಮತ್ತು ಚಂಪಾ (ಪ್ರೊ. ಚಂದ್ರಶೇಖರ ಪಾಟೀಲ) ತುಂಬಾ ಅನ್ಯೋನ್ಯವಾಗಿದ್ದರು. ಚಂಪಾ ಅವರ 'ಸಂಕ್ರಮಣ ವೇದಿಕೆ ' ಮತ್ತು, ಕವಿಮಿತ್ರ ಸಿದ್ಧಲಿಂಗ ದೇಸಾಯಿ ಮತ್ತು ನಾನು ಇಬ್ಬರೂ ಸೇರಿ ಹುಟ್ಟುಹಾಕಿದ್ದ 'ಆಲೋಚನಾ ವೇದಿಕೆ' ಇವುಗಳ ಸಂಯುಕ್ತ ಆಶ್ರಯದಲ್ಲಿ ಲಂಕೇಶ್ ರವರ ಉಪನ್ಯಾಸವನ್ನು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಏರ್ಪಡಿಸಿದ್ದೆವು. ಅಂದಿನ ಕಾರ್ಯಕ್ರಮದಲ್ಲಿ ಲಂಕೇಶ್ ರವರನ್ನು ಪರಿಚಯಿಸುವ ಅವಕಾಶ ನನ್ನದಾಗಿತ್ತು...ನಾನು ಲಂಕೇಶರನ್ನು ರಾವಣನೊಂದಿಗೆ ಸಮೀಕರಿಸಿ ಅವರ ಪರಿಚಯ ಮಾಡಿಕೊಟ್ಟೆ. ''...ಕನ್ನಡ ಸಾಹಿತ್ಯ ಈಗ ಪಂಪನಿಂದ ಚಂಪಾನ ವರೆಗೆ, ಮುದ್ದಣನಿಂದ ಬುದ್ದಣ್ಣನವರೆಗೆ ಬಂದು ನಿಂತುಬಿಟ್ಟಿದೆ. ಧಾರವಾಡದ ಈ ಮೇಲೆ ಹೇಳಿದ ಇಬ್ಬರು ಕವಿಗಳು ಉಳಿದವರನ್ನೆಲ್ಲ ಜರಡಿ ಹಿಡಿದು ಸಾಗಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ನಮ್ಮೆದುರು ಆಧುನಿಕ ಕನ್ನಡ ಸಾಹಿತ್ಯದ ಅಭಿನವ ರಾವಣ - ಲಂಕೇಶ್ ಇದ್ದಾರೆ. ರಾವಣನಿಗೆ ಹತ್ತು ಮುಖಗಳಿದ್ದಂತೆ ಈ ಲಂಕೇಶನಿಗೆ - ಕಾವ್ಯ, ಕಥೆ, ಕಾದಂಬರಿ, ವಿಮರ್ಶೆ, ನಾಟಕ, ನಟನೆ, ನಿರ್ದೇಶನ, ಸಿನೆಮಾ, ಪತ್ರಿಕಾ ಬರವಣಿಗೆ, ಸಂಘಟನೆ - ಹೀಗೆ ಹತ್ತು ಮುಖಗಳು...'' ಎಂದು ಪರಿಚಯಿಸಿದೆ. (ಆಗಿನ್ನೂ ಅವರ ಪತ್ರಿಕೆಯ ಸಂಪಾದನೆಯ ಕೆಲಸ

ಆರಂಭವಾಗಿರಲಿಲ್ಲ). ಅಂದು ಲಂಕೇಶ್ ತುಂಬ ಉತ್ಸಾಹದಿಂದ ಮಾತನಾಡಿದರು. ಜೊತೆಗೆ ಚರ್ಚೆ ನಡೆಯಲಿ ಎಂದು ಪ್ರಶ್ನೆಗಳನ್ನು ಆಹ್ವಾನಿಸಿದರು. ಆಗ ಸಭಿಕರೊಂದಿಗೆ ಇದ್ದ ನಾನು ಎದ್ದು ನಿಂತು - ''ಸರ್, ನೀವು ಅಡಿಗರನ್ನು ಒಂದು ಜನಾಂಗದ ಕಣ್ಣು ತೆರೆಸಿದ ಕವಿ ಎಂದು ಕರೆದಿದ್ದೀರಿ. ಇಂದಿಗೆ ಆ ಮಾತು ಎಷ್ಟರ ಮಟ್ಟಿಗೆ ಸತ್ಯ?'' ಎಂದು ಪ್ರಶ್ನೆ ಕೇಳಿದೆ. ಲಂಕೇಶ್ ಕೆರಳಿ ಕೆಂಡಾಮಂಡಲವಾದರು... ಅವರನ್ನು ಪರಿಚಯಿಸಿದವನು ನಾನೇ ಎಂಬುದನ್ನು ಅವರು ಮರೆತಂತಿತ್ತು. ಅವರು ನನ್ನನ್ನು ಬಡಿದು ಕೂರಿಸುವಂತೆ ಉತ್ತರ ಕೊಡತೊಡಗಿದರು- ''ಯಾರ್ರೀ ನೀವು...? ಏನ್ರೀ ನಾನು ಹೋದಲ್ಲೆಲ್ಲ ಬರುತ್ತೀರಿ. ಎಲ್ಲಾ ಕಡೆಯಲ್ಲಿಯೂ ಇದೇ ಪ್ರಶ್ನೆಯನ್ನು ಕೇಳುತ್ತೀರಿ.... ನಿಮ್ಮ ಉದ್ದೇಶವೇನ್ರೀ...? ಯಾಕೆ ಈ ವಿತಂಡವಾದ?'' ಎಂದೆಲ್ಲಾ ಗುಡುಗಿದರು. ಇನ್ನು ಯಾರಾದರೂ ಆಗಿದ್ದರೆ ಜಂಘಾಬಲವೇ ಉಡುಗಿ ಸುಮ್ಮನೇ ಕೂರುತ್ತಿದ್ದರೇನೋ! ನಾನು ತಕ್ಷಣ ಪ್ರತಿಕ್ರಿಯಿಸಿದೆ ...''ಸ್ವಾಮೀ ಲಂಕೇಶ್ ಅವರೇ, ಇದು ನಾಟಕವಲ್ಲ. ಸಿನೆಮಾನೂ ಅಲ್ಲ. ನೀವು ತಟ್ಟಿ ಕುಳ್ಳಿರಿಸಿದರೆ ಕೂಡುವ ಪೈಕಿಯವ ನಾನಲ್ಲ... ನಾನು ನಿಮ್ಮನ್ನು ನೋಡುತ್ತಿರುವುದೇ ಇದು ಮೊದಲ ಸಲ. ಇನ್ನು ನೀವು ಹೋದಲ್ಲೆಲ್ಲ ನಿಮ್ಮ ಬೆನ್ನಿಗೆ ಬಿದ್ದು ಹೋಗಲು ನನಗೇನೂ ಪುರುಸೊತ್ತಿಲ್ಲ...ಈ ಗಿಮಿಕ್ಕುಗಳೆಲ್ಲಾ ಯಾಕೆ...? ನಿಮಗೆ ನನ್ನ ಪ್ರಶ್ನೆಗೆ ಉತ್ತರ ಹೇಳಲು ಸಾಧ್ಯವಿಲ್ಲದಿದ್ದರೆ ಬಿಟ್ಟು ಬಿಡಿ'' ಎಂದೆ. ಆಗ ಲಂಕೇಶ್ ''ಓಹೋ ಹಾಗೋ...ಹಾಗಿದ್ದರೆ ಕೇಳಿ ....ಅಡಿಗರು ಒಂದೇ ಜನಾಂಗದ ಕಣ್ಣು ತೆರೆಸಿದ ಕವಿ'' ಎಂದು ತಮ್ಮ ವಾದವನ್ನು ಹೇಳಿದರು.

ಆ ನಂತರ ನಾನು ಲಂಕೇಶ್‌ರವರನ್ನು ಮತ್ತೆ ಕಂಡಿದ್ದು ೧೯೮೨ರಲ್ಲಿ. ಲಂಕೇಶ್ ಪತ್ರಿಕೆಯನ್ನು ಆರಂಭಿಸಿದ ಹೊಸ ಹುರುಪಿನಲ್ಲಿದ್ದ ಅವರು ಅಂಕೋಲೆಗೆ ಬಂದಿದ್ದರು. ಅಂಬಾರಕೊಡ್ಲದಿಂದ ನಾವು - ಅವರು ದಿನಕರರು ಕಟ್ಟಿದ ಗೋಖಲೆ ಜನ್ಮ ಶತಾಬ್ದಿ ಮಹಾವಿದ್ಯಾಲಯಕ್ಕೆ ಬಂದೆವು... ಲಂಕೇಶ್ ಕಾಲೇಜ್ ಕ್ಯಾಂಪಸ್ಸಿನಲ್ಲಿದ್ದ ದಟ್ಟ ಗಿಡಮರಗಳನ್ನು ಕಂಡು ಅಚ್ಚರಿಗೊಂಡರು... ಯಾವ ಯಾವುದೋ ಕೋನದಲ್ಲಿ ನಿಂತು ಕಾಲೇಜಿನ ಫೋಟೋ ತೆಗೆಯಲು ಹೆಣಗಾಡಿದರು. ಕೊನೆಗೂ ಆ ದಟ್ಟ ಮರಗಿಡಗಳ ಕಾರಣದಿಂದ ಸರಿಯಾದ ಫೋಟೋ ತೆಗೆಯಲಾಗದೇ ಅದನ್ನು ತಮ್ಮ ಟೀಕೆ ಟಿಪ್ಪಣಿಯಲ್ಲಿ ಉಲ್ಲೇಖಿಸಿ - ದಿನಕರ ದೇಸಾಯಿಯವರ ಗಿಡಮರಗಳ ಬಗೆಗಿನ ಗಾಢವಾದ ಪ್ರೀತಿಯನ್ನು ಶ್ಲಾಘಿಸಿದರು.

ಮತ್ತೆ ಲಂಕೇಶ್ ಅಂಕೋಲೆಗೆ ಬಂದಿದ್ದು ೧೯೮೭ರಲ್ಲಿ. ''ಪ್ರಗತಿರಂಗ'' ಎಂಬ ರಾಜಕೀಯ ಪಕ್ಷವೊಂದರ ಸ್ಥಾಪನೆಯ ಕನಸು ಹೊಂದಿದ್ದ ಲಂಕೇಶ್ ಕನ್ನಡನಾಡಿನಾದ್ಯಂತ ಸ್ವಯಂ ಪ್ರೇರಣೆಯಿಂದ ಪ್ರವಾಸಕ್ಕೆ ಹೊರಟಿದ್ದರು. ಹೊನ್ನಾವರ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನಕ್ಕೆ ಬಂದಿದ್ದ ಅವರನ್ನು, ಅಂಕೋಲಾದಲ್ಲಿ ನಾನು ಸಂಘಟಿಸಿದ್ದ 'ಆಲೋಚನಾ ವೇದಿಕೆ'ಯ ಆಶ್ರಯದಲ್ಲಿ ಅವರ ಭಾಷಣಕ್ಕೆ ಏರ್ಪಾಡು ಮಾಡಿದೆ... ಕರ್ನಾಟಕದ ರಾಜಕೀಯ ವಿದ್ಯಮಾನಗಳ ಕಠೋರ ವಾಸ್ತವದ ಕರಾಳ ಚಿತ್ರವನ್ನು ಜನರ ಮುಂದೆ ಬಿಡಿಸಿಟ್ಟರು. ''ಪ್ರೀತಿಯಿಲ್ಲದ ನಾಯಕತ್ವ ಅಪಾಯದ್ದು'' ಎನ್ನುವ ಅವರ ಮಾತು

ಪತ್ರಿಕೆಗಳಲ್ಲಿ ಮರುದಿನ ಪ್ರಧಾನ ತಲೆಬರೆಹವಾಗಿ ಪ್ರಕಟಗೊಂಡಿತು...ಕಾರ್ಯಕ್ರಮ ಮುಗಿಸಿ ನನ್ನ ಬಾಡಿಗೆಯ ಬಿಡಾರದ ಮುಂದಿನ ಮಾವಿನ ಮರದ ಕೆಳಗೆ ಕಾರನ್ನು ನಿಲ್ಲಿಸಿ ನನ್ನ ಮನೆಗೆ ಬಂದಿದ್ದರು. ಆಗ ಅವರು ''ಇಲ್ಲಿ ಕಾರು ನಿಲ್ಲಿಸಿ ನಿಮ್ಮ ಮನೆಗೆ ಬಂದದ್ದರ ಕಾರಣವೆಂದರೆ ಇಲ್ಲಿ ಈ ಮಾವಿ ಮರವಿದೆಯಲ್ಲಾ! ಅದಕ್ಕೇ'' ಎಂದಿದ್ದರು...ನಾನು ಆಗ ''ಸಂಯುಕ್ತ ಕರ್ನಾಟಕ''ದ ಜನಮನ ವಿಭಾಗದಲ್ಲಿ ಬರೆದ ''ಬಂಡಾಯದ ಪುರೋಹಿತರು ಮತ್ತು ಅಂತ್ಯಕ್ರಿಯೆ'' ಎಂಬ ವಿಚಾರವನ್ನು ಓದಿ, ಬಂಡಾಯ ಸಂಘಟನೆಯಲ್ಲಿ ಉಂಟಾದ ಶ್ರೇಣೀಕೃತ ವ್ಯವಸ್ಥೆಯ ಇತಿವೃತ್ತವನ್ನು ನಾನು ನಿರೂಪಿಸಿದ್ದನ್ನು ಇಷ್ಟಪಟ್ಟು ಹೇಳಿದರು... ''ಶ್ರೀಪಾದ್ ...ನಮ್ಮ ನೋವು, ನಿರಾಸೆ, ಅಸಮಾನತೆ ಹಾಗೂ ವಿಪಾಕ್ಷಿಕತೆಯ ಬಗೆಗಿನ ನಮ್ಮ ಅನುಭವ ನಮ್ಮನ್ನು ಬೆಳೆಸಬೇಕು...'' ಎಂದು ಆತ್ಮೀಯವಾಗಿ ಮಾತಾಡಿದರು.

...ಮುಂದೆ ...ಅವರಿಗೆ ಅರ್ಧಾಂಗವಾಯು ಆದಾಗ ನಾನು ಅವರಿಗೆ ಅವಶ್ಯವಿದ್ದಲ್ಲಿ, ಅವರು ಇಷ್ಟಪಡುವುದಾದರೆ, ನಾನು ಅಂಕೋಲಾದ ಜೇಂಬಾರದ ತೈಲವನ್ನು ಕಳಿಸುವುದಾಗಿ ಪತ್ರ ಬರೆದೆ. ಆದರೆ ನನ್ನ ಪತ್ರಕ್ಕೆ ಉತ್ತರ ಬಾರದೇ ಇದ್ದದ್ದಕ್ಕೆ ನಾನು ಸುಮ್ಮನಾದೆ.

...ಇವು ನಾನು ಲಂಕೇಶ್ ಅವರೊಂದಿಗೆ ಹೊಂದಿದ್ದ ಸಂಬಂಧದ ತೆಳ್ಳಗಿನ ಎಳೆಗಳು...

★★★

'ಲಂಕೇಶ್ ಪತ್ರಿಕೆ' ನನಗೆ ಶೇಷಪ್ಪನವರ 'ಕಿಡಿ' ಪತ್ರಿಕೆಯ ಮಾರ್ಪಾಡಿನಂತೆ ತೋರಿದೆ. ಪತ್ರಿಕೆಯಲ್ಲಿ ಅನ್ಯಾಯ, ಅಸಮಾನತೆ, ಭ್ರಷ್ಟಾಚಾರ, ಜಾತೀಯತೆ, ಸ್ವಜನಪಕ್ಷಪಾತ ಇವುಗಳ ವಿರುದ್ಧ ಕಿಡಿಕಾರುತ್ತ ಲಂಕೇಶರು ಇವುಗಳ ಬಗೆಗಿನ ತಮ್ಮ ಅನಿಸಿಕೆಯನ್ನು ಸಮರ್ಥವಾಗಿ ದಾಖಲಿಸಿದರು. ಇದರಲ್ಲಿನ 'ಈ ಸಂಚಿಕೆ', ಟೀಕೆ ಟಿಪ್ಪಣಿ, 'ಮರೆಯುವ ಮುನ್ನ' ಮುಂತಾದ ಕಾಲಂಗಳು ಲಂಕೇಶರ ಜೀವಂತಿಕೆ, ಲವಲವಿಕೆ ಹಾಗೂ ಸೃಜನಶೀಲತೆಯ ಚಾಚಿಕೊಳ್ಳುವಿಕೆಯನ್ನು ತೋರಿಸುತ್ತವೆ. ಪತ್ರಿಕೆ ಆರಂಭಿಸಿದ ಮೇಲೆ ಲಂಕೇಶ್ ತಮ್ಮ ಆರ್ಥಿಕ ಸಂಕಷ್ಟಗಳನ್ನೆಲ್ಲ ದೂರೀಕರಿಸಿಕೊಂಡರು. ಒಂದೆರಡು ಸಲ ಲಂಕೇಶ್ ಬ್ಲ್ಯಾಕ್‌ಮೇಲ್ ಮಾಡಿ ಪ್ರಸಿದ್ಧ ಗುತ್ತಿಗೆದಾರರಿಂದ ಹಣ ಪಡೆದರು- ಆ ಗುತ್ತಿಗೆದಾರರ ಬಗ್ಗೆ ಒಂದು ಸಂಚಿಕೆಯಲ್ಲಿ ಮುಂದಿನ ಸಂಚಿಕೆ ನೋಡಿರಿ ಎಂದು ಸೂಚನೆ ನೀಡಿ ಮುಂದಿನ ಸಂಚಿಕೆಯಲ್ಲಿ ಅವರ ಬಗ್ಗೆ ಬರೆಯಲಿಲ್ಲ ಎನ್ನುವ ಗುಸುಗುಸು ಸುದ್ದಿಯೊಂದು ೮೦ರ ದಶಕದಲ್ಲಿ ಪ್ರಜ್ಞಾವಂತರ ವಲಯದಲ್ಲಿ ಹಬ್ಬಿದ್ದೂ ಇದೆ. ಅದರ ಸತ್ಯಾಸತ್ಯತೆ ಏನೇ ಇರಲಿ. ಲಂಕೇಶ್ ಈ ತಂತ್ರವನ್ನೇ ಹಣ ಗಳಿಕೆಗಾಗಿ, ಸ್ವಂತ ಉದ್ಧಾರದ ವೃತ್ತಿಯನ್ನಾಗಿ ಮಾಡಿಕೊಳ್ಳಲಿಲ್ಲವೆನ್ನುವುದನ್ನು ಅವರನ್ನು ಟೀಕಿಸುವವರೂ ಒಪ್ಪಿಕೊಳ್ಳುತ್ತಾರೆ.

ಯಾವುದೇ ವಿಷಯವನ್ನು ಸೀರಿಯಸ್ಸಾಗಿ ಗಮನಿಸಿ ಅದಕ್ಕೆ ಕಳಕಳಿಯಿಂದ ಸ್ಪಂದಿಸುತ್ತಿದ್ದ ಲಂಕೇಶ್ ಕೆಲವೊಮ್ಮೆ ಪ್ರವಾದಿಯಂತೆ ಮಾತನಾಡುತ್ತಿದ್ದರು. ಕೆಲವೊಮ್ಮೆ ಇದು

ವಿಪರೀತಕ್ಕೇರಿ ಅವರ ದೌರ್ಬಲ್ಯ ಎನ್ನುವಷ್ಟು ಢಾಳವಾಗಿ ಬಿಡುತ್ತಿತ್ತು. ಒಂದು ಸ್ವಸ್ಥ ಸಮಾಜದ ಪರಿಕಲ್ಪನೆಯನ್ನು ಒಳಗೊಂಡ, ಒಳನೋಟಗಳಿಂದ ಕೂಡಿದ ಆರೋಗ್ಯವಂತ ಮನಸ್ಸಿಗಾಗಿ ಲಂಕೇಶ್ ಚಡಪಡಿಸುತ್ತಿದ್ದರು. ಹಾಗಂತಲೇ ಎಲ್ಲದರಂತಲ್ಲದ ಒಂದು ಹೊಸನಮೂನೆಯ ಪತ್ರಿಕೆಯನ್ನು ನೀಡಲು ಅವರಿಗೆ ಸಾಧ್ಯವಾಯಿತು.

ವ್ಯಕ್ತಿಪೂಜೆ ಹಾಗೂ ಆರಾಧಕ ಮನೋಭಾವದಿಂದ ಸದಾ ದೂರದಲ್ಲುಳಿದ ಲಂಕೇಶ್ ಗುಣಕ್ಕಿಂತ ಹೆಚ್ಚಾಗಿ ದೋಷಗಳನ್ನೇ ಕಾಣುವವರಾಗಿದ್ದರೇನೋ ಎನ್ನಿಸುತ್ತದೆ. ಅವರು ಕೊನೆಯತನಕ ತಮ್ಮ ವೊನಚನ್ನು ಉಳಿಸಿಕೊಂಡರು. ಲಂಕೇಶರ ದೋಣಿಯಿಂದಿಳಿದ ಬಂಡಾಯ ಸಾಹಿತಿ ಚಂಪಾರವರು ತಮ್ಮ ಸಂಕ್ರಮಣದ ಕಿಡಿಗೇಡಿ ಕಾಲಂನಲ್ಲಿ ಒಂದಿಲ್ಲೊಂದು ನೆಪ ಮಾಡಿಕೊಂಡು ಲಂಕೇಶ್ ಬಗ್ಗೆ ಬರೆಯುತ್ತಾ ಹೀಗಳೆಯುತ್ತಾ ಹೋದರೂ ಲಂಕೇಶ್ ಅದಕ್ಕೆ ಕ್ಯಾರೇ ಎನ್ನಲಿಲ್ಲ. ಅವರ ಸತ್ಯಸಂಧತೆ, ನಿಷ್ಠುರತೆ, ಹಟಮಾರಿತನ ಮತ್ತು ಯಾರೊಂದಿಗೂ ರಾಜಿ ಮಾಡಿಕೊಳ್ಳದ ಸ್ವಭಾವಗಳಿಂದ ಅವರಿಗೆ ದೊರೆಯಬೇಕಾಗಿದ್ದಷ್ಟು ಮನ್ನಣೆಯು ದೊರೆಯದೇ ಹೋಯಿತೇನೋ ಎಂದೆನಿಸುತ್ತದೆ. ಲಂಕೇಶ್ ಅನೇಕಸಲ ಜಗಳಗಂಟುತನವನ್ನೇ ನಿಜವನ್ನು-ಋತವನ್ನು ಆಡುವ ಒಂದು ಉಪಾಧಿಯೆಂದು ನಂಬಿದ್ದರೇನೋ ಎನ್ನಿಸುತ್ತದೆ. ಸಿನಿಕತನ ಸದಾ ಅವರ ಬೆನ್ನಿಗಂಟಿಕೊಂಡು ಇದ್ದಂತಿರುತ್ತಿತ್ತು.

ಆರಂಭದ ದಿನಗಳಲ್ಲಿ ನವ್ಯದ ದಟ್ಟ ಪ್ರಭಾವಕ್ಕೆ ಒಳಗಾಗಿದ್ದ ಲಂಕೇಶ್ ಕ್ರಮೇಣ ಮಾಗುತ್ತ ಸಾಮಾಜಿಕ ಅರಿವಿನ ಕಡೆಗೆ ಕಣ್ಣುಚಾಚಿದರು. ಆದರೂ ಅವರು ನವ್ಯರ ಆತ್ಮರತಿಯಿಂದ ಸಂಪೂರ್ಣವಾಗಿ ಹೊರಬರಲು ಸಾಧ್ಯವಾಗಲಿಲ್ಲ. ಅವರ ಆತ್ಮರತಿ ಪತ್ರಿಕೆಯ ಬರವಣಿಗೆಯಲ್ಲಿಯೂ ಮೂಗುತೂರಿಸಿದ್ದು ಇದೆ. ಎಲ್ಲವನ್ನೂ ವ್ಯಕ್ತಿಕೇಂದ್ರಿತ ದೃಷ್ಟಿಕೋನದಿಂದಲೇ ನೋಡುವ, ತನ್ನ ದೃಷ್ಟಿಕೋನದಲ್ಲಿಯೇ ಎಲ್ಲವನ್ನೂ ಕಂಡರಿಸುವ ಲಂಕೇಶ್ ಅನೇಕಸಲ ವಿಷಯದ ಹರವನ್ನು ಕುಬ್ಜಗೊಳಿಸುತ್ತಾರೇನೋ ಎನಿಸುತ್ತಿತ್ತು. ಇಂಥದರ ನಡುವೆಯೂ ಅವರ ಆತ್ಮರತಿಯಿಂದಲೇ ಅವರ ಬರವಣಿಗೆಗೆ ಒಂದು ಒಗರು ಲಭ್ಯವಾಗುತ್ತಿದೆಯೇನೋ ಎನ್ನುವ ಭಾವನೆಯೂ ಉಂಟಾಗುತ್ತದೆ. ಅಂತಲೇ ಅವರ ಆತ್ಮ ಚರಿತ್ರೆಯು ನಿಜವಾದ ಅರ್ಥದಲ್ಲಿ ''ಹುಳಿಮಾವಿನ ಮರ''ವಾಗಿದೆ. ಇಲ್ಲಿ ಲಂಕೇಶರು ತಮ್ಮನ್ನು ಆತ್ಮನಿರೀಕ್ಷೆಯ ನಿಕಷಕ್ಕೆ ಒಡ್ಡಿಕೊಳ್ಳದೇ, ಓದುಗರಲ್ಲಿ ತಮ್ಮ ಇಮೇಜಿನ ಕುರಿತಾಗಿ ಇದ್ದ ಉನ್ನತ ಕಲ್ಪನೆಗಳು ಮುಕ್ಕಾಗದಂತೆ ನೋಡಿಕೊಳ್ಳುತ್ತಾರೆ. ಕೆಲವು ಸಂದರ್ಭದಲ್ಲಿ ಆತ್ಮವಂಚನೆಯು ಹಣಿಕಿದೆಯೇನೋ ಎನ್ನಿಸುತ್ತದೆ.

★★★

ಲಂಕೇಶ್ ಈಗ ನಮ್ಮ ನಡುವಿಲ್ಲ; ಅವರ ವರ್ಣಮಯ ವ್ಯಕ್ತಿತ್ವದ ಸ್ಥಾನವನ್ನು ತುಂಬುವವರೂ ಕಾಣುತ್ತಿಲ್ಲ.... ನಮ್ಮ ನಡುವಿದ್ದ ಗ್ರಹವೊಂದು ತನ್ನ ಕಕ್ಷೆಯಿಂದ ಸರಿದು ಹೋಗಿಬಿಟ್ಟಂತೆ ಲಂಕೇಶ್ ತಮ್ಮ ಸಾವಿನಮೂಲಕ ಒಂದು ಶೂನ್ಯವನ್ನು ಸೃಷ್ಟಿಸಿ ಹೋಗಿದ್ದಾರೆ. ಸಾವು ಅನಿವಾರ್ಯ. ಈ ಸಾವನ್ನು ಕುರಿತು ಅವರು ತಮ್ಮ ಟೀಕೆ ಟಿಪ್ಪಣಿಗಳಲ್ಲಿ

ಸಾಕಷ್ಟು ಗಂಭೀರ ಚಿಂತನೆ ನಡೆಸಿದ್ದಾರೆ. ತಮ್ಮ ತೀವ್ರ ಅನಾರೋಗ್ಯದ ನಡುವೆ ಲಂಕೇಶ್ ಸಾವಿಗಾಗಿ ಸಿದ್ಧತೆಯನ್ನು ನಡೆಸಿಕೊಂಡಿದ್ದರೇನೋ!...ನಂದಿಹೋಗುವ ಮುನ್ನ ದೀಪವು ಪ್ರಖರವಾಗಿ ಉರಿಯುವಂತೆ ಲಂಕೇಶರು ತಮ್ಮ ಕೊನೆಯ ದಿನಗಳಲ್ಲಿ ತುಂಬಾ ಗಂಭೀರವಾದ ಹೊಸ ಒಳನೋಟಗಳ ತಾತ್ವಿಕ ಜಿಜ್ಞಾಸೆಯನ್ನು ನಡೆಸಿದರು. ಬರೆಯುತ್ತ ಬರೆಯುತ್ತ ನಾಡಿನ ಜನತೆಯೊಂದಿಗೆ ಬೆರೆಯುತ್ತ, ನಿಲುವಿನ ಕಹಿತೆ, ನಿಮ್ಮಿಯ ಕಾಲಂನ ಕೆಲವೊಮ್ಮೆ ತಿವಿಯುತ್ತ, ಕೆಲವೊಮ್ಮೆ ಉದ್ದೀಪನಗೊಳಿಸುತ್ತ, ಇನ್ನು ಕೆಲವೊಮ್ಮೆ ಕೊರೆಯುತ್ತ...ಲಂಕೇಶ್ ಇನ್ನಿಲ್ಲವಾದರು...

"ಕಪಿ ನಡೆವ ದಾರಿ ಯೋಧ ನಡೆವ ದಾರಿಕೂಡ" ಎನ್ನುತ್ತಾನೆ ಪಂಪ.
ಈ ಕಪಿವಾಣಿಯನ್ನು ದಿಟಗೊಳಿಸಿದವರು ಲಂಕೇಶ್!

ನನ್ನ ಕೆಲವು ಗುಣಗಳೊಂದಿಗೆ ಹೇಳಬೇಕಾದ ಒಂದು ಗುಣವಿದೆ. ಇದು ನನಗೇ ಅಚ್ಚರಿ ಹುಟ್ಟಿಸುತ್ತದೆ. ರಾಜಕಾರಣಿಗಳು, ಸಿನಿಮಾದವರು, ಅಪ್ರಾಮಾಣಿಕ ಕಲಾಕಾರರು ಇತ್ಯಾದಿ ಜನರ ಬಗ್ಗೆ ಬರೆಯುವ, ಮಾತಾಡುವ ನನಗೆ ರಾಜಕೀಯ ಆಕಾಂಕ್ಷೆಗಳೇ ಇಲ್ಲ. **ಅಧಿಕಾರ ಬೇಕೆಂದು ನನಗನ್ನಿಸಿಯೇ ಇಲ್ಲ. ಅಧಿಕಾರದ ಸವಲತ್ತುಗಳು ನನ್ನನ್ನು ಆಕರ್ಷಿಸಿಲ್ಲ.** ಇದಕ್ಕೆ ಮುಖ್ಯ ಕಾರಣ ನಾನು ನೇರವಾಗಿರಬೇಕು, ಸರಳವಾಗಿರಬೇಕು ಎಂಬ ನನ್ನ ಆಸೆ ಇರಬಹುದು; ಜನರ ಗುಂಪುಗಳನ್ನು, ಅಪರಿಚಿತರನ್ನು ಕಾಣಕೂಡದು ಎನ್ನುವಂಥ ನನ್ನ ಗುಣವಿರಬಹುದು. ಅಥವಾ ಜೋಸೆಫ್ ಕಾನ್ರಾಡ್ ಹೇಳಿದಂತೆ 'ಆದರ್ಶಗಳು ಮನಸ್ಸಿನಲ್ಲಿದ್ದಾಗಲೇ ಶುದ್ಧ. ಕ್ರಿಯೆಯಲ್ಲಿ ಅವೆಲ್ಲ ಮಲಿನವಾಗುತ್ತವೆ' ಎಂಬ ಎಚ್ಚರಿಕೆ ಕಾರಣವಿರಬಹುದು.

ಸ್ವಂತ ಗುಣಗಳ ಬಗ್ಗೆ ಮಾತಾಡುವಾಗ ಹಾಸ್ಯಪ್ರಜ್ಞೆ, ಪ್ರೇಮ, ದೇಶಭಕ್ತಿ, ಉದಾರ ಗುಣಗಳೆಲ್ಲ ಮಾತಾಡಿಕೊಳ್ಳುವ ಆಸೆ ಇರುತ್ತದೆ. ಆದರೆ ಈ ಗುಣಗಳೇ ಆ ವ್ಯಕ್ತಿಯೊಬ್ಬನ ದುರ್ಗುಣಗಳಾಗುವ ಅವಕಾಶವಿದೆ. ಯಾಕೆಂದರೆ ಪ್ರೇಮಿ ಪ್ರೇಮ ಯಾರಿಗೂ ಬೇಡವಾದಾಗ ಆತ ಹಾಸ್ಯಾಸ್ಪದನಾಗುತ್ತಾನೆ ಅಥವಾ ಕ್ರೂರಿಯಾಗುತ್ತಾನೆ; ದೇಶಭಕ್ತಿ ಅತಿಯಾದಾಗಲೂ ತಮಾಷೆಯ ವ್ಯಕ್ತಿಯಾಗುತ್ತಾನೆ. ಔದಾರ್ಯ ಅತಿ ಮೀರಿದಾಗ ಮೂರ್ಖನಾಗುತ್ತಾನೆ. ಆದ್ದರಿಂದ ಈ ಎರಡು ಅಲಗಿನ, ಎರಡು ಮುಖದ ಗುಣಗಳ ಬಗ್ಗೆ ಮಾತಾಡದೇ ನನಗನ್ನಿಸಿದ ದೌರ್ಬಲ್ಯಗಳ ಬಗ್ಗೆ ಮಾತ್ರ ಹೇಳಬಹುದು. ಮೇಲಿನ ಅನೇಕ ನಾನೊಪ್ಪದ ಗುಣಗಳ ಜೊತೆಗೆ ನನಗೆ ವ್ಯವಹಾರ ಜ್ಞಾನ ಕಡಿಮೆ ಎಂಬುದನ್ನೂ ಸೇರಿಸಬೇಕು. ಒಂದು ದೊಡ್ಡ ಸಂಸ್ಥೆಯನ್ನು ವ್ಯವಸ್ಥೆಗೊಳಿಸಬಲ್ಲೆ ಎಂದು ತೋರಿಸುವ ಅಲ್ಲಿಯ ಲೆಕ್ಕಪತ್ರ, ವ್ಯಾಪಾರದ ಸೂಕ್ಷ್ಮಗಳು, ತಿಪ್ಪಳಿಸಿ - ಇವೆಲ್ಲ ನನ್ನನ್ನು ಮೀರಿದವೆಂದು ಒಪ್ಪಿಕೊಂಡು ಸುಮ್ಮನಾಗಿದ್ದೇನೆ. ಅದಕ್ಕೇ ಕೆಲವರು ಕೇಳುತ್ತಾರೆ, "ಈ ರಾಜಕಾರಣಿಗಳನ್ನು ಟೀಕಿಸುವ ನೀನು ರಾಜಕಾರಣಿಯಾಗಿದ್ದರೆ ಸರ್ವಸಮರ್ಥನಾಗಿ ಇರುತ್ತಿದ್ದೆಯೋ?" ಅದಕ್ಕೆ ಉತ್ತರ ಸುಲಭ: ನನಗೆ ರಾಜಕಾರಣದ ಆಕಾಂಕ್ಷೆ ಇಲ್ಲ.

-ಲಂಕೇಶ್

(ಟೀಕೆ ಟಿಪ್ಪಣಿ: ನಾನೊಲ್ಲದ ನನ್ನ ಗುಣ)
ಸಾಹಿತ್ಯ ಸಂವಾದ: ೫೪-೫೫

ಲಂಕೇಶ್ ...

ಒಂದು ಸಾಂಸ್ಕೃತಿಕ ವಿದ್ಯಮಾನ

ಎಂಟು ನೂರು ವರ್ಷಗಳ ಹಿಂದೆ ಕರ್ನಾಟಕದ ಮೊತ್ತಮೊದಲ ಸೋಷಲಿಸ್ಟ್ ಆಗಿದ್ದ ಬಸವಣ್ಣನ ಹೆಸರನ್ನು ಹೇಳಲು ಹೇಸದ "ಏಕಾತ್ಮತಾ ಯಜ್ಞ"ದ ಜನ ಈ ರಾಷ್ಟ್ರದ ಅತ್ಯಂತ ಶ್ರೇಷ್ಠ ಹಿಂದುವಾಗಿದ್ದ ಗಾಂಧೀಜಿಯ ಹೆಸರನ್ನು ಹೇಳದಿರುವುದು ಅರ್ಥಪೂರ್ಣವಾಗಿದೆ. ಗಾಂಧೀಜಿಗೆ ತಾವು ಹಿಂದೂ ಎಂದು ಹೇಳಿಕೊಳ್ಳಲು ನಾಚಿಕೆಯಾಗುತ್ತಿರಲಿಲ್ಲ. ಏಕೆಂದರೆ ಇವರು ನಿಜಕ್ಕೂ ರಾಮಾಯಣ ಕಾಲದ ಕ್ರಿಯಾಶೀಲ ಹಿಂದುವಾಗಿದ್ದರು. ಕ್ರಿಶ್ಚಿಯನ್ನರು, ಮುಸ್ಲಿಮರು, ಯಹೂದ್ಯರು, ಪಾರ್ಸಿಗಳು, ಹಿಂದೂಗಳು ಎಲ್ಲರೂ ಗಾಂಧೀಜಿಗೆ ಈ ನಾಡಿನ ಕಂದಾಚಾರ, ಸ್ವಾರ್ಥ, ಸ್ವಪ್ರತಿಷ್ಠೆ ಮತ್ತು ಸಣ್ಣತನದಲ್ಲಿ ನಿರ್ನಾಮವಾಗಿರುವ ಜನರಂತೆ ಕಾಣುತ್ತಿದ್ದರು. ಇವರು ಸಾವಿರಾರು ವರ್ಷ ಬದುಕಿಬಂದ ರೀತಿಯಿಂದಾಗಿ ನಿರ್ವೀರ್ಯರೂ, ಕೊಳಕರೂ, ಮೂಢನಂಬಿಕೆಯವರೂ, ತಮ್ಮ ಸಣ್ಣಪುಟ್ಟ ಗುಂಪುಗಳಾಚೆ ನೋಡಲೂ ಆಗದ ದುರ್ಬಲರೂ ಆಗಿದ್ದು ಸ್ವಾತಂತ್ರ್ಯವನ್ನು ಸ್ವೀಕರಿಸಲೂ ಅನರ್ಹರಾಗಿದ್ದರು. ಆದ್ದರಿಂದಲೇ ಗಾಂಧೀಜಿ ಮೊದಲು ಈ ಜನಕ್ಕೆ ದುಡಿದುಣ್ಣುವ ರೀತಿಯ ಬಗ್ಗೆ, ಆತ್ಮ ಗೌರವದ ಮೂಲ ಪಾಠಗಳ ಬಗ್ಗೆ, ಬೇರೆ ಬೇರೆ ಧರ್ಮಗಳನ್ನು ಸಹಿಸುವ ಬಗ್ಗೆ, ಎಲ್ಲ ಧರ್ಮಗಳ ಮೂಲಕ್ಕಿರುವ ದಯೆ, ಕುತೂಹಲ, ಹೊಣೆಗಾರಿಕೆಯ ಬಗ್ಗೆ ಕಲಿಸತೊಡಗಿದರು. ಗಾಂಧೀಜಿ ಕಟ್ಟಬೇಕೆಂದಿದ್ದ ನವೀನ ರಾಷ್ಟ್ರದಲ್ಲಿ ಧರ್ಮ ಖಾಸಗಿಯಾಗಿರಬೇಕು, ಆಡಳಿತದ ಜವಾಬ್ದಾರಿ ಎಲ್ಲ ಹೊಣೆಯರಿತ ಮಾನವರ ಮೇಲೆ ಬೀಳಬೇಕು, ಅಲ್ಲಿ ಜಾತೀಯತೆ, ಕಂದಾಚಾರ, ಮೂಢನಂಬಿಕೆಗೆ ಜಾಗವಿರಬಾರದು ; ಈ ರಾಷ್ಟ್ರದ ಪ್ರತಿಯೊಬ್ಬನೂ ತನ್ನ ಕ್ರಿಯಾಶೀಲತೆಯಿಂದ ನಾಡಿನ ಮುನ್ನಡೆಗೆ ಕಾಣಿಕೆ ಸಲ್ಲಿಸುವಂತಾಗಬೇಕು...

- ಲಂಕೇಶ್

(ಟೀಕೆ ಟಿಪ್ಪಣಿ : ಧರ್ಮದ ಗಂಧವಿಲ್ಲದವರು)

ಸಾಂಸ್ಕೃತಿಕ ವಿದ್ಯಮಾನವಾಗಿ ಪಿ.ಲಂಕೇಶ್

○ ಕೆ.ಸತ್ಯನಾರಾಯಣ

ಲಂಕೇಶರು ನಮ್ಮ ಕಾಲದ ಸಾರ್ವಜನಿಕ ಜೀವನದ ಮೇಲೆ ಬೀರಿದ ಪ್ರಭಾವವು ಕೇವಲ ಒಳ್ಳೆಯ ಲೇಖಕನೊಬ್ಬ ಬೀರುವಂತಹ ಪ್ರಭಾವ ಮಾತ್ರವಲ್ಲ. ಅವರ ಸರೀಕರಲ್ಲೇ ಅವರಿಗಿಂತ ಒಳ್ಳೆಯ ಕತೆಗಾರರು, ಕವಿಗಳು, ಕಾದಂಬರಿಕಾರರು, ನಾಟಕಕಾರರು ಇರಬಹುದು; ಇದ್ದಾರೆ. ಆದರೆ ಒಳ್ಳೆಯ ಲೇಖಕರೆಲ್ಲರೂ ಅವರವರು ಬದುಕಿದ ಕಾಲದ ಸಾಂಸ್ಕೃತಿಕ ವಿದ್ಯಮಾನವಾಗುವುದು, ಹಾಗಾಗಿ ಸಾರ್ವಜನಿಕ ಜೀವನದ ಮೇಲೆ ಪ್ರಭಾವ ಬೀರುವುದು ಅಷ್ಟು ಸುಲಭದ ಮಾತಲ್ಲ. ಲಂಕೇಶ್ ನಮ್ಮ ಕಾಲದ ಸಾಂಸ್ಕೃತಿಕ ವಿದ್ಯಮಾನವಾಗಲು ಕಾರಣ ಅವರು ಪತ್ರಕರ್ತರಾಗಿದ್ದರಿಂದ ಮಾತ್ರವಲ್ಲವೇ ಅಲ್ಲ. ಪತ್ರಕರ್ತರಾಗಿ ಕೂಡ ಅವರನ್ನು ನಿಯಂತ್ರಿಸಿದ್ದು ಲೇಖಕರಾಗಿ ಅವರಿಗಿದ್ದ ಮನೋಧರ್ಮ ಮತ್ತು ಗ್ರಹಿಕೆಯ ಕ್ರಮಗಳೇ. ಅವರ ಪತ್ರಕರ್ತ ವ್ಯಕ್ತಿತ್ವವೇ ಬೇರೆ, ಲೇಖಕ ವ್ಯಕ್ತಿತ್ವವೇ ಬೇರೆ ಎಂದು ಭಾವಿಸಿ ವಿಶ್ಲೇಷಿಸುವುದು ಮತ್ತು ಈ ಕಾರಣಕ್ಕೆ ಅವರಿಗೆ ಪತ್ರಕರ್ತರಾಗಿ ಏನೇ ಮಿತಿಗಳಿರಲಿ, ಅವರೊಬ್ಬ ಉತ್ತಮ ಲೇಖಕರು ಎಂದು ಹೇಳುವುದು ಬೇಜವಾಬ್ದಾರಿಯ ಮಾತಾಗುತ್ತದೆ. ಎರಡೂ ಸಂಗತಿಗಳನ್ನು ಒಟ್ಟಾಗಿಯೇ ನೋಡಬೇಕು. ಪತ್ರಕರ್ತನ ಕಾರ್ಯವಿಧಾನ, ಪ್ರಭಾವದ ವ್ಯಾಪ್ತಿ ಎರಡೂ ಕೂಡ ಲಂಕೇಶರಿಗೆ ತಮ್ಮ ಲೇಖಕ ವ್ಯಕ್ತಿತ್ವವನ್ನು ವಿಸ್ತರಿಸಿಕೊಳ್ಳಲು ನೆರವಾಗಿವೆ. ಅವರು, ತಾವು ಬಹುವಾಗಿ ಮೆಚ್ಚುತ್ತಿದ್ದ ಇಂಗ್ಲಿಷ್ ಕಾದಂಬರಿಕಾರ, ಅಂಕಣಕಾರ ಜಾರ್ಜ್ ಆರ್ವೆಲ್‌ನ ಒಂದು ರೀತಿಯ ರೋಲ್ ಮಾಡೆಲ್ ಆಗಿ ಕೆಲಸ ಮಾಡಿದಂತಿದೆ. ಒಂದೇ ವ್ಯತ್ಯಾಸವೆಂದರೆ ಆರ್ವೆಲ್‌ಗೆ ಅಂಕಣಕಾರನ, ಪತ್ರಕರ್ತನ ಜೀವನ ತನ್ನ ಉನ್ನತ ಹುದ್ದೆ, ಸಾಮಾಜಿಕ ಪ್ರತಿಷ್ಠೆ ಇವುಗಳನ್ನೆಲ್ಲ ಕಳೆದುಕೊಳ್ಳುವ, ತನ್ನಿಂದ ತಾನೇ ಬಿಡುಗಡೆ ಪಡೆಯುವ ಒಂದು ಮಾರ್ಗವಾಗಿ ಸಾಧ್ಯವಾದರೆ, ಲಂಕೇಶರ ವಿಷಯದಲ್ಲಿ

ಪತ್ರಿಕಾ ಬರವಣಿಗೆ ಕೆಲವೊಮ್ಮೆ ಬೌದ್ಧಿಕ ಸಾಹಸವಾಗಿ, ಕೆಲವೊಮ್ಮೆ ಲೇಖಕ ತನ್ನ ವ್ಯಕ್ತಿತ್ವವನ್ನು ವಿಸ್ತರಿಸಿಕೊಳ್ಳುವ ಉಪಾಯವಾಗಿ ಕೆಲಸ ಮಾಡಿದಂತಿದೆ.

ಲೇಖಕ ಅಥವಾ ಕಲಾವಿದನೊಬ್ಬ ಸಾಂಸ್ಕೃತಿಕ ವಿದ್ಯಮಾನವಾಗಿ ಪರಿವರ್ತನೆ ಹೊಂದುವ, ಹಾಗೆ ಪರಿವರ್ತನೆ ಹೊಂದಿ ಸಾರ್ವಜನಿಕರಿಂದಲೂ ಸ್ವೀಕೃತವಾಗುವ ಪ್ರಕ್ರಿಯೆಯೆ ಸೋಜಿಗವಾದದ್ದು. ಎಲ್ಲಕ್ಕಿಂತ ಮುಖ್ಯವಾಗಿ ಲೇಖಕನಿಗೆ, ಕಲಾವಿದನಿಗೆ ತಾನು ಸಾಂಸ್ಕೃತಿಕ ವಿದ್ಯಮಾನವಾಗಬೇಕೆಂಬ ಆಸೆಯಿರಬೇಕು. ಸಾಂಸ್ಕೃತಿಕ ವಿದ್ಯಮಾನವಾಗುವುದೆಂದರೆ ತಾನು ಆರಿಸಿಕೊಂಡ ಅಥವಾ ತನಗೆ ಒಲಿದಿರುವ ಸಾಹಿತ್ಯಿಕ ಅಥವಾ ಕಲಾಪ್ರಕಾರದಲ್ಲಿ ಶ್ರೇಷ್ಠ ಕೃತಿಗಳನ್ನು ರಚಿಸುವುದು ಮಾತ್ರವಷ್ಟೇ ಅಲ್ಲ. ತನ್ನ ಕಾಲದ ಸಾಮಾಜಿಕ ನಿಲುವುಗಳನ್ನೂ, ಒಲವುಗಳನ್ನೂ ರೂಪಿಸಲು, ತಿದ್ದಲು ಕೂಡ ಪ್ರಯತ್ನಿಸಬೇಕಾಗುತ್ತದೆ. ಎಷ್ಟೋ ಒಳ್ಳೆಯ ಲೇಖಕರಿಗೆ ಈ ಕೆಲಸ ಅನಗತ್ಯ ಅಧಿಕ ಪ್ರಸಂಗವೆನಿಸಿ, ಅಂತವರೆಲ್ಲ ತುಂಬಾ ಖಾಸಗಿ ವ್ಯಕ್ತಿಗಳಾಗಿ ಉಳಿದುಬಿಡಬಹುದು.

ಸಂಸರಂತಹ ನಾಟಕಕಾರರಾಗಲೀ, ಶಂಭಾರಂತಹ ಸಂಶೋಧಕರಾಗಲೀ ಸಾರ್ವಜನಿಕ ಜೀವನದಲ್ಲಿ ದಿನನಿತ್ಯವೂ ಭಾಗವಹಿಸುತ್ತಾ ಸಾಂಸ್ಕೃತಿಕ ವಿದ್ಯಮಾನವಾಗುವುದು ಸಾಧ್ಯವೇನು? ಕಾರಂತ, ಡಿ.ವಿ.ಜಿ., ಅ.ನ.ಕೃ., ಲಂಕೇಶ್ ಇಂತವರೆಲ್ಲ ಪ್ರಯತ್ನಪಟ್ಟರೂ ಖಾಸಗಿ ವ್ಯಕ್ತಿಗಳಾಗಿ ಉಳಿಯುವುದು ಕಷ್ಟ. ಲಂಕೇಶರ ಪತ್ರಿಕಾ ಬರಹಗಳನ್ನೂ, ಆತ್ಮಚರಿತ್ರೆಯನ್ನೂ ಗಮನಿಸಿದರೆ ಪ್ರಾರಂಭದಿಂದಲೂ ಅವರಿಗೆ ಕೇವಲ ಒಳ್ಳೆಯ ಸಾಹಿತಿಯಾಗುವ ಆಸೆ ಮಾತ್ರವಷ್ಟೇ ಇರಲಿಲ್ಲವೆಂಬುದು ಗೊತ್ತಾಗುತ್ತದೆ. ಸಾರ್ವಜನಿಕ ಜೀವನದಲ್ಲಿ ಅದರಲ್ಲೂ ವಿಶೇಷವಾಗಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಆತ್ಮವಿಶ್ವಾಸದಿಂದ, ಸ್ವೋಪಜ್ಞತೆಯಿಂದ ತಮ್ಮ-ತಮ್ಮ ಅಭಿಪ್ರಾಯಗಳ ಮಂಡಿಸುವ, ಮಂಡಿಸಿ ಸಮಾಜದ ಒಪ್ಪಿಗೆ ಗಮನ ಪಡೆಯುವವರ ಸಂಖ್ಯೆ ಯಾವಾಗಲೂ ಕಡಿಮೆಯಿರುತ್ತದೆ. ಹೀಗಾಗಿ ಸಾಂಸ್ಕೃತಿಕ ವಿದ್ಯಮಾನವಾಗಲು ಬಯಸುವ ಲೇಖಕ ಸತತವಾಗಿ ತನ್ನ ಅಭಿಪ್ರಾಯಗಳನ್ನೂ, ನಿಲುವುಗಳನ್ನೂ ಮಂಡಿಸುತ್ತ ಸಾರ್ವಜನಿಕರ ಗಮನವನ್ನು ಯಾವಾಗಲೂ ತನ್ನೆಡೆಗೆ ಸೆಳೆದುಕೊಳ್ಳಲು ಪ್ರಯತ್ನಿಸುತ್ತಿರುತ್ತಾನೆ. ನವ್ಯ ಸಾಹಿತ್ಯ, ನವ್ಯಕಾವ್ಯ ಇವೆಲ್ಲವೂ ಸಾಂಸ್ಕೃತಿಕ ವಲಯದಲ್ಲಿ ಸ್ವೀಕೃತವಾಗುವಂತಹ ವಾತಾವರಣ ನಿರ್ಮಾಣವಾಗಲು ಲಂಕೇಶರ ರಿವ್ಯೂಗಳು, ಪತ್ರಿಕಾಬರಹಗಳು, ವಿಮರ್ಶಾ ಲೇಖನಗಳು ಕೂಡ ಸಾಕಷ್ಟು ಕಾರಣವಾಗಿವೆ ಎಂಬುದು ಈಗ ಇತಿಹಾಸದ ಸಂಗತಿ. 'ಪ್ರಸ್ತುತ' ಮತ್ತು 'ಕಂಡದ್ದು ಕಂಡ ಹಾಗೆ' ಸಂಕಲನಗಳ ಲೇಖನಗಳಲ್ಲಿ ನಮಗೆ ಕಾಣುವುದು ಹೀಗೆ ಸಾಂಸ್ಕೃತಿಕ ವಿದ್ಯಮಾನವಾಗುವ ಮೊದಲ ಹೆಜ್ಜೆಗಳೇ ಹೊರತು ಅನಂತಮೂರ್ತಿ, ಎಂ.ಜಿ.ಕೆ., ಜಿ.ಎಚ್.ನಾಯಕ್ ಮುಂತಾದ ನವ್ಯ ವಿಮರ್ಶಕರ ವಿಮರ್ಶಾ ವಸ್ತು ಅಥವಾ ತಾತ್ವಿಕ ಖಚಿತತೆಯಲ್ಲ. ಕುರ್ತಕೋಟಿಯವರ ಜೊತೆ ಲಂಕೇಶ್ ನಡೆಸಿದ ವಾಗ್ವಾದ ಅಥವಾ ನವ್ಯಕತೆ ಕುರಿತು ಬರೆಯುವ ಪರಿಚಯಾತ್ಮಕ ಬರಹ ಇವುಗಳನ್ನು ಗಮನಿಸಿದರೆ ನನ್ನ ಮಾತಿನ ಅರ್ಥ ಸ್ಪಷ್ಟವಾಗುತ್ತದೆ.

ಸಾಂಸ್ಕೃತಿಕ ವಿದ್ಯಮಾನವಾಗಬೇಕೆಂಬ, ಪ್ರಭಾವಶಾಲಿಯಾಗಬೇಕೆಂಬ ಆಸೆ ಯಾರಿಗೆ

ಇರುವುದಿಲ್ಲ? ಆದರೆ ಆಸೆಯಿದ್ದರೆ ಮಾತ್ರ ಸಾಲದು. ಇಂತಹ ಆಸೆ ಇರುವ ಲೇಖಕನಿಗೆ ಕಲಾವಿದನ ಜೀವನವನ್ನು ಕುರಿತಂತೆ ನಿರ್ದಿಷ್ಟವಾದ ಶೈಲಿಯ ಬಗ್ಗೆ ಒಲವಿರುತ್ತದೆ, ನಂಬಿಕೆಯಿರುತ್ತದೆ. ಈ ಒಲವು ನಂಬಿಕೆಗನುಗುಣವಾಗಿ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಅವನಿಗೆ ಕುತೂಹಲವಿರುತ್ತದೆ, ಆಸಕ್ತಿಯಿರುತ್ತದೆ. ಕೃಷಿ, ಕ್ರೀಡೆ, ಪರಿಸರ, ರಾಜಕೀಯ, ಸಿನೆಮಾ, ಮೌಲಿಕವಾದ್ದು, ಕೊಳಕಾದ್ದು, ಗಂಭೀರವಾದ್ದು, ಜಾಣತನದಿಂದ ಕೂಡಿದ್ದು, ಬೇರೆ ಬೇರೆ ತಲೆಮಾರುಗಳಿಗೆ ಸೇರಿದವರ ಆಸಕ್ತಿಗಳು- ಹೀಗೆ ಎಲ್ಲದರ ಬಗ್ಗೆಯೂ ಆತ ಪ್ರಾಮಾಣಿಕವಾಗಿ ಆಸಕ್ತಿ ಹೊಂದಿದವನಾಗಿ ಅವುಗಳೆಲ್ಲದರ ಬಗ್ಗೆ ನಿರ್ದಿಷ್ಟವಾದ ರುಚಿ, ನಿಲುವು ಹೊಂದಿದವನಾಗಿರುತ್ತಾನೆ. ಈ ನಿಲುವು ಮತ್ತು ರುಚಿಯೇ ಶ್ರೇಷ್ಠವಾದ್ದು ಮತ್ತು ಹಾಗೆಂದು ಸಾರ್ವಜನಿಕರು ಒಪ್ಪಿಕೊಂಡಿದ್ದಾರೆ ಎಂಬ ಭ್ರಮೆಯೂ ಕೊಂಚ ಇರಬೇಕಾಗುತ್ತದೆ. ಹೀಗಲ್ಲದಿದ್ದರೆ ಎಲ್ಲ ವಿದ್ಯಮಾನಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಜುಲುಮೆಯಾದರೂ ಯಾರಿಗೆ ಬೇಕು. ತನ್ನ ನಿಲುವು ಅಥವಾ ರುಚಿಗೆ ಪೆಟ್ಟು ಬಿದ್ದು ಬಿಟ್ಟರೆ ಏನಾಗಬಹುದೆಂಬ ಭಯದಿಂದಲೇ ಆರ್ವೆಲ್ ಅಂತವರು '೧೯೮೪' ಮತ್ತು 'ಆನಿಮಲ್ ಫಾರ್ಮ್' ಅಂತಹ ಭ್ರಮೆ ಮತ್ತು ಕಲ್ಪನೆ ಬೆರೆಸಿದ ಕಾದಂಬರಿಗಳನ್ನು ರಚಿಸಿಬಿಟ್ಟರು.

ಆದರೆ ಎಷ್ಟು ಜನ ಸಾಹಿತಿಗಳಿಗೆ ಕಲಾವಿದರಿಗೆ ಇಂತಹ ವೈವಿಧ್ಯಮಯ ಆಸಕ್ತಿಗಳಿರಲು ಸಾಧ್ಯ? ಇದ್ದರೂ ಕೇವಲ ಮೇಲುಸ್ತರದ್ದು, ಸಣ್ಣ ಕುತೂಹಲದ್ದು. ಸಮಾಜದ ಒಟ್ಟು ಬದುಕಿಗೆ, ಆರೋಗ್ಯಕ್ಕೆ ತಾನು ಬರೆಯುತ್ತಿರುವ ಕತೆ ಕಾದಂಬರಿಯಷ್ಟೆ ಕೃಷಿ, ಕ್ರೀಡೆ, ರಾಜಕೀಯವೂ ಮುಖ್ಯ ಎಂದು ತಿಳಿದುಕೊಂಡಿರುವ ಲೇಖಕರು ಯಾವಾಗಲೂ ಕಡಿಮೆಯೇ. ಅಬ್ಬಬ್ಬ ಎಂದರೆ ಸಾಹಿತಿಯೊಬ್ಬನಿಗೆ ಸಂಗೀತದಲ್ಲೊ, ನೃತ್ಯದಲ್ಲೊ ಅಥವಾ ಕಲಾವಿದನೊಬ್ಬನಿಗೆ ಸಿನಿಮಾದಲ್ಲೊ ಆಸಕ್ತಿಯಿರಬಹುದು ಅಷ್ಟೆ. ಬಹುಮುಖಿ ಜೀವಂತ ಆಸಕ್ತಿಯ ಪ್ರತೀಕಗಳಾಗಿ ಹಿಂದಿನ ತಲೆಮಾರಿನಲ್ಲಿ ಕಾರಂತ, ಡಿ. ವಿ. ಜಿ. ಯವರಿದ್ದರೆನಮ್ಮ ಕಾಲದಲ್ಲಿ ಲಂಕೇಶರೊಬ್ಬರೆ. ಮೇಜರ್ ಲೇಖಕನೊಬ್ಬನಿಗೆ ಮಾತ್ರ ಸಹಜವಾಗಿ ಸಾಧ್ಯವಾಗುವಂತಹ ನಿರ್ದಿಷ್ಟ ಜೀವನ ಶೈಲಿಯ ಕಲ್ಪನೆ ಮಾತ್ರ ಸಾಹಿತಿಯೊಬ್ಬನನ್ನು ಸಾಂಸ್ಕೃತಿಕ ವಿದ್ಯಮಾನವನ್ನಾಗಿ ಪರಿವರ್ತಿಸುತ್ತದೆ.

ಸಾರ್ವಜನಿಕ ಜೀವನದ ನಿಲುವು ಒಲವುಗಳನ್ನು ರೂಪಿಸುವ, ತಿದ್ದುವ ಪತ್ರಿಕಾ ಪ್ರಪಂಚಕ್ಕೆ ಲಂಕೇಶರು ಆಕರ್ಷಿತರಾಗಿದ್ದು ಕಿಂಚಿತ್ತೂ ಆಕಸ್ಮಿಕವಲ್ಲ. ಅವರ ಆತ್ಮಚರಿತ್ರೆಯಲ್ಲಿ ಹೇಳಿಕೊಂಡಿರುವಂತೆ ಕಾಲೇಜು ದಿನಗಳಲ್ಲೇ ಅವರಿಗೆ ಪತ್ರಕರ್ತರ ಸಂಪರ್ಕವಿತ್ತು. ಯಾವ ಯಾವ ಪತ್ರಕರ್ತರ ಪ್ರತಿಭೆ ಯಾವ ಸ್ವರೂಪದ್ದು ಎಂಬುದೆಲ್ಲ ತಿಳಿದಿತ್ತು ಮಾತ್ರವಲ್ಲ, ಯೌವನದ ದಿನಗಳಲ್ಲೇ ಲಂಕೇಶರು ಅಂಕಣಗಳನ್ನೂ ಬರೆದದ್ದುಂಟು. ಹಾಗೆ ಅಂಕಣಗಳನ್ನು ಬರೆಯಲು ಅವಕಾಶ ಕೊಟ್ಟವರ ಬಗ್ಗೆ ಲಂಕೇಶ್, ತಮ್ಮ ಸ್ವಭಾವಕ್ಕೆ ಅಪರೂಪವಾದ, ಪ್ರೀತಿಯ ಮತ್ತು ಕೃತಜ್ಞತೆಯ ಮಾತುಗಳನ್ನೂ ಕೂಡ ಹೇಳಿದ್ದಾರೆ. (ಹುಳಿಮಾವಿನ ಮರ - ಪುಟ :೧೪೪-೧೪೫). ನವ್ಯ ಸಾಹಿತ್ಯ ಚಳುವಳಿಯ ಆಶಯಗಳನ್ನು ಸ್ಥಾಪಿಸುವಲ್ಲಿ ಪ್ರಜಾವಾಣಿ- ವೈಎನ್‌ಕೆ ವಹಿಸಿದ್ದ ಪಾತ್ರವನ್ನು ಹತ್ತಿರದಿಂದ ಕಂಡಿದ್ದ ಲಂಕೇಶರಿಗೆ ಪತ್ರಿಕೆಯ

ಮಹತ್ವ-ಪ್ರಭಾವದ ಅರಿವು ಕೂಡ ಸಾರ್ವಜನಿಕ ವ್ಯಕ್ತಿಯಾಗಲು ಪ್ರೇರಣೆ ನೀಡಿರಬಹುದು. ಬರಹಗಾರ ಲಂಕೇಶರಲ್ಲಿ ಇಂತಹ ಪ್ರವೃತ್ತಿಯೊಂದನ್ನು ಅಡಿಗರು ಗಮನಿಸಿರಬಹುದೆಂಬುದಕ್ಕೆ 'ನಾನಲ್ಲ' ಕಥಾ ಸಂಕಲನಕ್ಕೆ ಅವರು ಬರೆದಿರುವ ಮುನ್ನುಡಿಯಲ್ಲಿ ಸೂಚನೆ ಸಿಗುತ್ತದೆ.'ಈ ಅಸಾಧಾರಣ ಲೇಖಕನ ಉದ್ವಿಗ್ನ ಬದುಕು-ಮನಸ್ಸಿನ ಸಮಚಿತ್ತ ಲಭಿಸಿ ಕೃತಾರ್ಥವಾಗಲಿ; ಜನಮನ್ನಣೆಯಿಂದ ತಣಿಯಲಿ ಎಂದು ಹಾರೈಸುತ್ತೇನೆ.'

ಸಾಂಸ್ಕೃತಿಕ ವಿದ್ಯಮಾನವಾಗಿ ಲಂಕೇಶ್ ಬೀರಿದಂತಹ ಪ್ರಭಾವದ ಬಗ್ಗೆ ಉತ್ಸಾಹದ ಮಾತುಗಳನ್ನು ಮಾತ್ರವೇ ಆಡುವುದು ಕಷ್ಟವಾಗುತ್ತದೆ. ಕ್ರೆಡಿಬಿಲಿಟಿ ಮತ್ತು ಅಬ್ಜೆಕ್ಟಿವಿಟಿ ಹಾಗೂ ಸರ್ವಜನಪ್ರಿಯತೆಯನ್ನು ನೆಚ್ಚಬೇಕಾದಂತಹ ಸ್ಥಾಪಿತ ಪತ್ರಿಕಾವಲಯದಿಂದ ಲಂಕೇಶ್ ಪತ್ರಿಕೆಯಂತದ್ದು ಹೊರಬರುವುದು ಸಾಧ್ಯವೇ ಇಲ್ಲ- ಯಾವತ್ತಿಗೂ. ಓದುಗರನ್ನು ತನ್ನ ಭಾಷೆ, ಸುದ್ದಿ, ವಿನ್ಯಾಸ ಮತ್ತು ವಸ್ತು ವೈವಿಧ್ಯದಿಂದ ಪತ್ರಿಕೆ ಆಕರ್ಷಿಸಿತು ಎಂದು ಹೇಳುವುದು ಪೂರ್ಣ ಸತ್ಯವಲ್ಲ. ಓದುಗರನ್ನು ಅದು ಬೆಳೆಸಿತು ಕೂಡ. ಈ ಓದುಗರು ಇತರ ಕನ್ನಡ ಪತ್ರಿಕೆಗಳ ಓದುಗರೂ ಕೂಡ ಆಗಿದ್ದರಿಂದ ಪ್ರತ್ಯಕ್ಷವಾಗಿ - ಪರೋಕ್ಷವಾಗಿ ಲಂಕೇಶ್ ಕೂಡ ಓದುಗರ ಅಪೇಕ್ಷೆ- ಅಭಿರುಚಿಗಳನ್ನು ತಿದ್ದಿದರೆಂಬುದನ್ನೂ, ಆ ಮೂಲಕ ಪರೋಕ್ಷವಾಗಿಯಾದರೂ ಕನ್ನಡ ಪತ್ರಿಕಾ ಪ್ರಪಂಚದ ಮೇಲೆ ಪ್ರಭಾವ ಬೀರಿದರೆಂಬುದನ್ನೂ ಒಪ್ಪಿಕೊಳ್ಳಲೇಬೇಕು.

ಪತ್ರಿಕೆಗಿದ್ದ ಪ್ರಚಾರ - ಪ್ರಸಾರ, ಲಂಕೇಶರಿಗಿದ್ದ ಲೇಖಕ ವ್ಯಕ್ತಿತ್ವ, ಇವುಗಳ ಹಿನ್ನೆಲೆಯಲ್ಲಿ ಲಂಕೇಶ್ ಸಾರ್ವಜನಿಕ ಜೀವನದ ಮೇಲೆ ಬೀರಿದ ಪ್ರಭಾವ ಎಂತಹದ್ದು? ಇದಕ್ಕೆ ಉತ್ತರ ಹಲವು ಸ್ತರಗಳದ್ದು. ಪ್ರಾರಂಭದ ವರ್ಷಗಳಲ್ಲಿ ಪತ್ರಿಕೆಗಿದ್ದ ಆಕರ್ಷಣೆ ಮತ್ತು ಹೊಸತನದಿಂದಾಗಿ ಸಂಪಾದಕರಿಗೂ ಒಂದು ವಿಶೇಷವಾದ ಪ್ರಭೆ ಓದುಗರಿಂದ ದತ್ತವಾಗಿತ್ತು. ಗೋಕಾಕ್ ಚಳುವಳಿ, ರೈತ ಚಳುವಳಿ, ಕರ್ನಾಟಕದಲ್ಲಿ ಮೊದಲ ಕಾಂಗ್ರೆಸ್ಸೇತರ ಸರಕಾರದ ಸ್ಥಾಪನೆ -ಇಂತಹ ಸಂದರ್ಭಗಳಲ್ಲಿ ಪತ್ರಿಕೆಯ ನಿಲುವು, ಓದುಗರ ಒಲವು, ಸಾರ್ವಜನಿಕ ಅಭಿಪ್ರಾಯ ಎಲ್ಲವೂ ಒಂದೇ ಆಗಿತ್ತು. ಸ್ಥಾಪಿತ ಪತ್ರಿಕೆಗಳು ಗುರುತಿಸಲು ಹಿಂಜರಿಯುವಂತಹ ಅನೇಕ ಬರಹಗಳನ್ನು- ಬರಹಗಾರರನ್ನು ಪತ್ರಿಕೆ ಬೆಳಕಿಗೆ ತಂದಿತು. ಈ ಬರಹಗಾರರಲ್ಲಿ ಅನೇಕರು ಅಪ್ರತಿಷ್ಠಿತ ವರ್ಗಗಳಿಂದ ಬಂದಿದ್ದ ಮೊದಲ ಪೀಳಿಗೆಯ ಲೇಖಕರೂ ಆಗಿದ್ದರು. ಇಷ್ಟೇ ಮುಖ್ಯವಾದ ಸಂಗತಿಯೆಂದರೆ, ಪತ್ರಿಕೆ ಆಗಾಗ್ಗೆಯಾದರೂ ಶ್ರೇಷ್ಠ ಸಾಹಿತ್ಯಿಕ ಅಭಿರುಚಿಯ ಕೆಲವು ಅಂಕಣಗಳನ್ನು ಪ್ರಕಟಿಸಿತು ಎಂಬುದು. ಕ್ಲಾಸಿಕ್ ಕನ್ನಡ ಕತೆಗಳು, ಸಾಹಿತ್ಯಿಕ ವ್ಯಕ್ತಿ ಚಿತ್ರಗಳು- ತಕ್ಷಣ ನೆನಪಿಗೆ ಬರುವಂತಹವು. ಆದರೆ ಲಂಕೇಶ್ ಈ ಸೋಪಜ್ಞತೆಯನ್ನು ತಮ್ಮ ಸರೀಕ ಬರಹಗಾರರ ಬಗ್ಗೆಯೂ, ಹೊಸ ತಲೆಮಾರಿನ ಪ್ರತಿಭಾವಂತ ಬರಹಗಾರರ ಬಗ್ಗೆಯೂ ತೋರದೆ ಹೋದರು. ಇಂತವರನ್ನು ಕುರಿತ ಅವರ ಬರವಣಿಗೆ ಉದ್ಧಟತನ, ಅಸಾಹಿತ್ಯಿಕತೆ ಮತ್ತು ಕುತ್ಸಿತ ಮನೋಭಾವದಿಂದ ಕೂಡಿದುದು ಆಗಿತ್ತು. ತಾನು ಗುರುತಿಸಿದರೆ ಮಾತ್ರ ಪ್ರತಿಭಾವಂತರು, ಇತರರು ಗುರುತಿಸಿದರೆ ಅಂಥವರು ಸಾಧಾರಣರು ಎಂಬ ಸರ್ವಾಧಿಕಾರಿ ನಿಲುವನ್ನು ಕೂಡ ಅವರು ತಳೆದರು. ಇದೆಲ್ಲಕ್ಕಿಂತ

ಮುಖ್ಯವಾಗಿ ಪತ್ರಿಕೆಗಳಲ್ಲಿ ಅಥವಾ ಸಮೂಹ ಮಾಧ್ಯಮಗಳಲ್ಲಿ ಬರೆಯಲಾಗದ ಎಷ್ಟೋ ಗಂಭೀರ ಸಂಗತಿಗಳಿರುತ್ತವೆ, ಗಹನವಾದ ಶೈಲಿಯಿರುತ್ತವೆ. ಈ ರೀತಿಯ ಬರಹಗಳನ್ನು-ಬರಹಗಾರರನ್ನು ಲೇವಡಿ ಮಾಡುವ ಮೂಲಕ ಇಂತಹ ಬರಹಗಾರರಿಗೆ ಇರಬಹುದಾದ ಕೆಲವೇ ಓದುಗರನ್ನು ಕೂಡ ಪತ್ರಿಕೆ ನಾಶಮಾಡಿತು. ಆದರೆ ಹೀಗೆಲ್ಲ ಮಾಡುವುದು ಕೂಡ ಸಮೂಹ ಮಾಧ್ಯಮದಲ್ಲಿ ಒಂದು ಶೈಲಿಯಾಗಿ ಬಿಡುತ್ತದೆ. ಓದುಗರಿಗೆ ಆಕರ್ಷಣೆಯನ್ನು ಒದಗಿಸಿಕೊಡುತ್ತದೆ ಎಂಬುದನ್ನು ಮರೆಯಬಾರದು.

ಆದರೆ ಎಲ್ಲ ಶೈಲಿಗಳು, ಎಲ್ಲ ನಿಲುವುಗಳು ಒಂದಲ್ಲ ಒಂದು ದಿನ ಸುಸ್ತು ಹೊಡೆಸುತ್ತವೆ; ಓದುಗರಿಗೆ ಬೇಸರವನ್ನು ಉಂಟುಮಾಡುತ್ತವೆ. ಲಂಕೇಶ್ ಪತ್ರಿಕೆ ಕೂಡ ಈ tiresomenessಗೆ, ಏಕತಾನತೆಗೆ ಹೊರತಾಗಲಿಲ್ಲ. ಕೊನೆಕೊನೆಗಂತೂ ಲಂಕೇಶ್ ಪತ್ರಿಕೆ ಯಾರ ಬಗ್ಗೆ ಯಾವ ವಿದ್ಯಮಾನದ ಬಗ್ಗೆ ಏನು ಹೇಳಬಹುದೆಂಬುದನ್ನು ಸುಮಾರು ಜಾಣನಾದ ಶಾಲಾಬಾಲಕನೊಬ್ಬ ಕೂಡ ಊಹಿಸಬಹುದಾಗಿತ್ತು. ಸದಾ ಹೊಸತನ್ನು ಬಯಸುವ, ಸದಾ ಬದಲಾವಣೆಯನ್ನು ಬಯಸುವ ಓದುಗರ ಪ್ರವೃತ್ತಿ ಮಾತ್ರ ಲಂಕೇಶ್‌ಪತ್ರಿಕೆಯ, ಲಂಕೇಶರ ಪ್ರಭಾವವನ್ನು ಕಡಿಮೆ ಮಾಡಿವೆ. ಲಂಕೇಶರ ವ್ಯಕ್ತಿತ್ವದ ಸ್ವರೂಪ ಮತ್ತು ಲೇಖಕರಾಗಿ ಅವರಿಗಿದ್ದ ಕೆಲ ಒಲವುಗಳು ಕೂಡ ಅವರ ಪ್ರಭಾವವನ್ನು ಕಡಿಮೆ ಮಾಡಿತೆಂದು ನನ್ನ ತಿಳುವಳಿಕೆ. 'ಜೊತೆಗಾರ' ಎನ್ನುವುದು ಲಂಕೇಶರ ಹಳೆಯ ಮತ್ತು ಕನ್ನಡದ ಉತ್ತಮ ಕತೆಗಳಲ್ಲೊಂದು. ಸತ್ಯವೆನ್ನುವುದು ಎಷ್ಟು ಸಂದಿಗ್ಧವಾದದ್ದು ಮತ್ತು ಯಾವ ದೃಷ್ಟಿಯಿಂದ ನೋಡಿದರೆ ಸತ್ಯಕ್ಕೆ ಹೇಗೆ ಹತ್ತಿರವಾಗಬಹುದು ಎನ್ನುವುದು ಕತೆಯ ಹಿಂದಿರುವ ತಾತ್ವಿಕ ಪ್ರೇರಣೆ. ಹೇಗೆ ನೋಡಿದರೂ ಮನುಷ್ಯನ ನೋಡುವ, ತಿಳಿಯುವ ಕಷ್ಟ ಕಡಿಮೆಯಾಗುವುದಿಲ್ಲ ಎಂಬ ವಿನಯವೂ ಈ ಕತೆಯಲ್ಲಿ ಅಂತರ್ಗತವಾಗಿದೆ. ಈ ಮಾತುಗಳನ್ನು ನೋಡಿ- 'ನಾಯಕ ಮುದುಕನ ದೃಷ್ಟಿಯಲ್ಲೇ ನೋಡಿದರೆ ಕತೆ ತೀವ್ರವಾಗಬಹುದು. ಸ್ಟಿಫನ್‌ನ ದೃಷ್ಟಿಯಿಂದ ಬರೆದರೆ ಸತ್ಯಕ್ಕೆ ಹತ್ತಿರವಾಗಬಹುದು. ಜೋಸೆಫೈನಳ ಭಾವನೆಯನ್ನೆಲ್ಲ ಮಂಡಿಸಿದರೆ ದುರಂತ-ದುಮ್ಮಾನಗಳನ್ನೊಳಗೊಂಡು ಆಳವಾದೀತು ಅನ್ನಿಸಿತು' (ಸಮಗ್ರ ಕತೆಗಳು, ಪುಟ-೨೧೭). ಈ ಪ್ರೇರಣೆ ಪತ್ರಿಕೆಯ ವಿಷಯದಲ್ಲಿ ಎಲ್ಲ ಕಾಲದಲ್ಲೂ ಒಂದೇ ಪ್ರಮಾಣದಲ್ಲಿ ಕೆಲಸ ಮಾಡಿತ್ತೆಂದು ಹೇಳುವುದು ಸತ್ಯಕ್ಕೆ ಅಪಚಾರವಾಗುತ್ತದೆ. ವ್ಯಕ್ತಿಗಳ ಬಗ್ಗೆ, ಸಂಗತಿಗಳ ಬಗ್ಗೆ, ಕೃತಿಗಳ ಬಗ್ಗೆ ತಮಗೆ ಕಂಡ ಅಥವಾ ಅನ್ನಿಸಿದ ನಿಲುವೇ ಸತ್ಯವೆನ್ನುವಂತೆ ಸರಳವಾಗಿ, ನೇರವಾಗಿ ಆದರೆ ತೀವ್ರವಾಗಿ ಲಂಕೇಶ್ ಬರೆಯುತ್ತ ಹೋದರು. ಹೀಗೆ ಬರೆಯುವಾಗ ಸಂಗತಿಯ ಸಂಕೀರ್ಣತೆ ಅಥವಾ ಸಂದಿಗ್ಧತೆಗೆ ಊನ ಬಂದರೂ ಪರವಾಗಿಲ್ಲ ಎಂಬುದೂ ಅವರ ಧೋರಣೆಯಾಗಿತ್ತು. ತೀವ್ರತೆ ಮತ್ತು ಸಂಕೀರ್ಣತೆಗಳ ನಡುವೆ ಲಂಕೇಶರ ಆಯ್ಕೆ ತೀವ್ರತೆಯ ಕಡೆಗೇ. ತೀವ್ರತೆಗಾಗಿ ಸರಳವಾಗಿದ್ದರೂ ಪರವಾಗಿಲ್ಲ ಎಂಬ ಧೋರಣೆ. ಇದೆಲ್ಲದರಿಂದಾಗಿ ನಿರ್ದಿಷ್ಟ ಓದುಗವರ್ಗವೊಂದು ರೂಪುಗೊಂಡುದು, ಬರವಣಿಗೆಗೆ ತೀವ್ರತೆ, ರೋಚಕತೆ ಬಂದದ್ದು ನಿಜವಾದರೂ ಈವತ್ತಿನ ಪತ್ರಿಕೆಯ ಓದುಗನಿಗೆ ಸುದ್ದಿ, ಅಭಿಪ್ರಾಯಗಳು ಸತತವಾಗಿ ಹಲವು

ಮೂಲಗಳಿಂದ,ಮಾಧ್ಯಮಗಳಿಂದ ಸಿಗುತ್ತಿರುತ್ತವೆ ;ಒಂದನ್ನು ಇನ್ನೊಂದಕ್ಕೆ ತಾಳೆಹಾಕಿ ನೋಡಿಯೇ ಆತ ಸ್ವಂತ ತೀರ್ಮಾನಕ್ಕೆ ಬರುತ್ತಾನೆ ಎಂಬ ಸರಳ ಸಂಗತಿ ಲಂಕೇಶರಿಗೆ ಗೊತ್ತಾಗದೇ ಹೋದದ್ದು ಆಶ್ಚರ್ಯ. ಇದೊಂದು ವಿಷಯದಲ್ಲಿ ಎಚ್ಚರಿಕೆ ವಹಿಸಿದ್ದರೆ ಪತ್ರಿಕೆ ಒಂದು ಜಾಡಿಗೆ ಬೀಳುವುದನ್ನೂ, ಒಂದು ಜಾಡಿನ ಓದುಗರಿಗೆ ಮಾತ್ರ ಇಷ್ಟವಾಗುವಂತಹ ಸಾಧ್ಯತೆಯನ್ನೂ ,ತಪ್ಪಿಸಿಕೊಳ್ಳಬಹುದಿತ್ತೇನೋ!

ಆಮೇಲೆ ಒಬ್ಬ ಲೇಖಕ ಎಷ್ಟೇ ಪ್ರತಿಭಾವಂತನಾದರೂ ಕನ್ನಡ ಓದುಗವರ್ಗ ಯಾವತ್ತೂ 'multiple center of excellence' ಮತ್ತು 'creativity' ಯನ್ನೇ ಪ್ರೋತ್ಸಾಹಿಸುತ್ತಾ ಬಂದಿದೆ. ಬೇಂದ್ರೆಯನ್ನು ಆರಾಧಿಸಿದ ವರ್ಗವೇ ಕುವೆಂಪುವನ್ನೂ ಮೆಚ್ಚಿದೆ, ಕಾರಂತರ ಬಗ್ಗೆ ಒಲವನ್ನು ತೋರಿದೆ. ಅನಕೃ ಎಷ್ಟೇ ಆಕರ್ಷಕರಾಗಿದ್ದಾಗಿದ್ದಾಗಲೂ ನಿರಂಜನರ ಗಾಂಭೀರ್ಯವನ್ನು,ತಾತ್ವಿಕತೆಯನ್ನು ಕನ್ನಡ ಓದುಗ ಮರೆತಿಲ್ಲ. ಓದುಗರು ಸಾರ್ವಜನಿಕರು ಒಂದೇ ಕಾಲದಲ್ಲಿ, ಒಂದೇ ತೆಕ್ಕೆಯಲ್ಲಿ ಬೇರೆ ಬೇರೆ ಸ್ವರೂಪದ ಪ್ರತಿಭಾವಂತ ಲೇಖಕರನ್ನು ಇಷ್ಟಪಡುತ್ತಾರೆ. ಅವರೆಲ್ಲರೂ ತಮ್ಮ ಸಂಸ್ಕೃತಿಗೆ ಮುಖ್ಯವೆಂದು ತಿಳಿಯುತ್ತಾರೆ. ಈ ಪತ್ರಿಕೆಯ ದಲಿತ ಲೇಖಕನೊಬ್ಬ ವೇದ ಉಪನಿಷತ್ತುಗಳನ್ನು ಓದಲು ನಿರಾಕರಿಸಬಹುದು. ದಲಿತರು ಏನು ಬರೆದಾರೆಂದು ಮಠದವರು ಕೇಳಬಹುದು. ಆದರೆ ಓದುಗ ಹಾಗಲ್ಲ. ಎರಡರಿಂದಲೂ ತನ್ನ ಮನಸ್ಸಿನ ಸಂಸ್ಕಾರಕ್ಕೆ ಬೇಕಾದ್ದನ್ನು ಪಡೆಯುವಷ್ಟು ಸೂಕ್ಷ್ಮವಾಗಿರುತ್ತಾನೆ. ಆದರೆ ಲೇಖಕರಿಗೆ ಎಷ್ಟು ಸ್ವಮಗ್ನತೆಯಿರುತ್ತದೆಯೆಂದರೆ ಈ ಪ್ರಾಥಮಿಕ ಸಂಗತಿ ಅವರಿಗೆ ತಿಳಿಯುವುದೇ ಇಲ್ಲ. ಓದುಗರು ತಮ್ಮೊಬ್ಬರನ್ನು ಮಾತ್ರವೇ ಸದಾಕಾಲ ಪ್ರೀತಿಸುತ್ತಾರೆಂದು ಭ್ರಮಿಸಿ, ಒಂದು ಸಾಮ್ರಾಜ್ಯವನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿ, ಕಟ್ಟಿಕೊಂಡೇ ಬಿಟ್ಟೆವೆಂದು ಬೀಗುತ್ತಿರುತ್ತಾರೆ. ಆದರೆ ಅವರು ಸಾಮ್ರಾಜ್ಯವೆಂದು ಭ್ರಮಿಸಿದ್ದು ಕೇವಲ ನಿರ್ಜನ ದ್ವೀಪವಾಗಿರುತ್ತದೆ. ಬೇಂದ್ರೆ, ಕುವೆಂಪು, ಅನಕೃ ಆದಿಯಾಗಿ ಎಲ್ಲರೂ ಅವರವರ ಭಾವಕ್ಕೆ,ಅವರವರ ಪ್ರಕೃತಿಗೆ ತಕ್ಕಂತೆ ಇಂತಹ ಭ್ರಮಾಧೀನ ಸ್ಥಿತಿಗೆ ಒಳಗಾಗಿದ್ದವರೇ. ಲಂಕೇಶರು ಮತ್ತು ನಂತರದವರು ಮಾತ್ರ ಹೇಗೆ ಭಿನ್ನವಾಗಿರಲು ಸಾಧ್ಯ?

ಲಂಕೇಶರನ್ನು ಸಾಂಸ್ಕೃತಿಕ ವಿದ್ಯಮಾನವನ್ನಾಗಿ ಪರಿಶೀಲಿಸುವಾಗ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಸೃಜನಶೀಲ ಲೇಖಕನೊಬ್ಬ ಸಮೂಹ ಮಾಧ್ಯಮದಲ್ಲಿ ಕೆಲಸ ಮಾಡಿದಾಗ ಏನಾಗುತ್ತದೆಂಬುದನ್ನು . ಸೃಜನಶೀಲ ಲೇಖಕನೊಬ್ಬ ತನ್ನ ವ್ಯಕ್ತಿನಿಷ್ಠ ಜಗತ್ತಿನಲ್ಲಿ,ಸ್ವ -ಪ್ರಪಂಚದಲ್ಲಿ(subjective self) ಯಾವಾಗಲೂ ತನ್ನನ್ನು, ತನ್ನ ದೃಷ್ಟಿಕೋನವನ್ನು ಕೇಂದ್ರದಲ್ಲಿಟ್ಟುಕೊಂಡು ಉಳಿದ ಸಂಗತಿಗಳನ್ನೂ, ವ್ಯಕ್ತಿಗಳನ್ನು, ವಿದ್ಯಮಾನಗಳನ್ನೂ ಪರಿಭಾವಿಸುತ್ತಿರುತ್ತಾನೆ. ರಾಜಕೀಯದಲ್ಲಾದರೆ ಈ ಗ್ರಹಿಕೆಯು ಪ್ರಧಾನ ಕ್ರಮೇಣ ಸರ್ವಾಧಿಕಾರತ್ವಕ್ಕೆ ದಾರಿಮಾಡಿಕೊಡುತ್ತದೆ. ಆದರೆ ತನ್ನ ಗ್ರಹಿಕೆ, ಪೂರ್ವಾಗ್ರಹ ನೆನಪುಗಳನ್ನು ಕೇಂದ್ರವಾಗಿಟ್ಟುಕೊಳ್ಳದ ಹೊರತು ಲೇಖಕ, ಕಲಾವಿದ ಸೃಷ್ಟಿಶೀಲನಾಗಲಾರ. ಬರವಣಿಗೆಯ ಸೃಷ್ಟಿಯ ಗುಟ್ಟಾಗಿ, ಪಟ್ಟಾಗಿ ಇದು ಸರಿ. ಆದರೆ ಪತ್ರಿಕೆಯ ಸಂಪಾದಕ ನೊಬ್ಬನಿಗೂ ಇದೇ ನಿಲುವಿದ್ದರೆ ವಸ್ತುನಿಷ್ಠತೆಗೆ ಅಡ್ಡಿ ಬರುತ್ತದೆ. ಲಂಕೇಶ್ ಪತ್ರಿಕೆಯಲ್ಲಿ

ಅವರೊಬ್ಬರನ್ನು ಹೊರತುಪಡಿಸಿ ಉಳಿದ ಗಂಭೀರ ಲೇಖಕರೆಲ್ಲ ಒಂದಲ್ಲ ಒಂದು ಸಂದರ್ಭದಲ್ಲಿ ಅವಹೇಳನಕ್ಕೆ, ಭರ್ತ್ಸನೆಗೆ ಒಳಗಾದವರೇ. ಉಳಿದವರಿಗೆ ಈ ಅವಹೇಳನಕ್ಕೆ, ಭರ್ತ್ಸನೆಗೆ ಉತ್ತರ ಕೊಡುವ ಪ್ರತಿಕ್ರಿಯಿಸುವ ಅವಕಾಶವಿಲ್ಲದೆ ಹೋದದ್ದರಿಂದ, ಎಲ್ಲ ಲೇಖಕರು, ಕೃತಿಗಳನ್ನು ಕುರಿತು ಲಂಕೇಶರಿಗೆ ಮಾತ್ರ ಖಚಿತವಾದ ಅಭಿಪ್ರಾಯವಿರುವಂತೆ, ಅವರ ವಾಕ್ಯವೇ ಕೊನೆಯ ವಾಕ್ಯವೆಂಬಂತೆ ಕೆಲವು ಓದುಗರಿಗಾದರೂ ಕೆಲವು ಕಾಲವಾದರೂ ಭ್ರಮೆ ಹುಟ್ಟಿರಬೇಕು. ಲೇಖಕರು ತಮ್ಮ ಸ್ವರಕ್ಷಣೆಯನ್ನೂ, ಸ್ವಪ್ರೇಮವನ್ನೂ ತಮ್ಮ ತಮ್ಮ ಸೀಮಿತ ವಲಯದಲ್ಲಿ ,ಕೃತಿಯೊಳಗೆ, ಸಾಹಿತ್ಯಿಕ ವಾತಾವರಣದಲ್ಲಿ ಮಾಡಿಕೊಳ್ಳುತ್ತಲೇ ಇರುತ್ತಾರೆ. ಆದರೆ ಪತ್ರಿಕೆಯಂತಹ ಸಾರ್ವಜನಿಕ ಜೀವನದ ಅಸ್ತ್ರವು ಅವರಿಗೆ ಸಿಕ್ಕಾಗ ಲಂಕೇಶರಿಗೆ ಉಳಿದ ಲೇಖಕರು ಕೃತಿಗಳೊಡನೆ ಇದ್ದಂತಹ ಸಂಬಂಧ ಮಾತ್ರ ಸಾಧ್ಯ.

ಪತ್ರಿಕೆ ಪ್ರಸಾರ ಕಳೆದುಕೊಂಡಿದ್ದಾಗಲೂ ಆಕರ್ಷಣೆ ಕಳೆದುಕೊಳ್ಳಲಿಲ್ಲ. ಆದರೆ ಪ್ರಭಾವ ಮಾತ್ರ ದಿನೇ ದಿನೇ ಮಸುಕಾಗುತ್ತಿತ್ತು. ಈ ವಿದ್ಯಮಾನಕ್ಕೆಪತ್ರಿಕೆಯ ಶೈಲಿ ನಿಲುವುಗಳಿಂದ ಓದುಗ ಕ್ರಮೇಣ ಸುಸ್ತಾದದ್ದು ಮಾತ್ರವಲ್ಲದೆ ಬೇರೆ ಕಾರಣಗಳೂ ಇವೆ. ಲಂಕೇಶರ ಬರವಣಿಗೆಯಲ್ಲೂ ಪತ್ರಿಕಾ ಪ್ರಪಂಚದಲ್ಲೂ ವ್ಯಕ್ತಿಗೇ ಅಂದರೆ ಮನುಷ್ಯನಿಗೇ ಅಗ್ರಸ್ಥಾನ. ಸಮಕಾಲೀನ ಜೀವನದ ಎಲ್ಲ ವಿದ್ಯಮಾನಗಳನ್ನೂ ಅವರು ಗ್ರಹಿಸುವುದು ಕೆಲವು ವ್ಯಕ್ತಿಗಳ ಮೂಲಕ. ವ್ಯಕ್ತಿಗಳ ದೌರ್ಬಲ್ಯ, ಒಳ್ಳೆಯತನ, ಮುಗ್ಧತೆ, ಕ್ರಿಯಾಶೀಲತೆಯಿಂದಲೇ ಒಂದು ಸಮಾಜದ, ಒಂದು ಕಾಲದ ಎಲ್ಲ ವಿದ್ಯಮಾನಗಳನ್ನು ವಿವರಿಸಬಹುದೆಂದು ಅವರು ನಂಬಿದಂತೆ ಕಾಣುತ್ತದೆ. ಈ ನಂಬಿಕೆ ಅರೆಸತ್ಯದ ಸ್ವರೂಪದ್ದು. ವ್ಯಕ್ತಿಗಳು ಒಂದು ಸಮಾಜದಲ್ಲಿ ಮುಖ್ಯವಾಗುವುದು ಅವರು ಪ್ರತಿನಿಧಿಸುವ ವಿಚಾರಗಳಿಂದ, ಪ್ರವೃತ್ತಿಗಳಿಂದ. ಈ ವಿಚಾರ - ವಿಶ್ಲೇಷಣೆಗಳು ನಮ್ಮ ಚಿಂತನೆಯ ಕೇಂದ್ರವಾಗಬೇಕೇ ಹೊರತು ಅದನ್ನು ಆಕಸ್ಮಿಕವಾಗಿ ಪ್ರತಿನಿಧಿಸುವ ವ್ಯಕ್ತಿಗಳಲ್ಲ.

· ಲಂಕೇಶರಿಗೆ ಲೇಖಕರಾಗಿ ಕೂಡ ಮುಖ್ಯವಾಗಿ ಕುತೂಹಲವಿದ್ದದ್ದು ಮನುಷ್ಯ ಸ್ವಭಾವದ ಆಳ - ಅಗಲಗಳಲ್ಲಿ. ಅವನ್ನು ಅನಾವರಣಗೊಳಿಸುವಲ್ಲಿ. ಮನುಷ್ಯ ಸ್ವಭಾವದ ಶೋಧನೆ ಎಲ್ಲ ಸಾಹಿತಿಗಳ ಕಾಳಜಿಯಾದರೂ ಲಂಕೇಶರಿಗೆ ಮನುಷ್ಯ ಸ್ವಭಾವದ Pathological ಮತ್ತು Moral / Ethical dimensions ಸಂಧಿಸುವ ಆಯಾಮಗಳಲ್ಲಿ ಆಸಕ್ತಿ ಹೆಚ್ಚು. ಗುಣಮುಖ, ನಿವೃತ್ತರು, ವಾಮನ, ಉಲ್ಲಂಘನೆ, ತೆರೆಗಳು - ಹೀಗೆ ಯಾವುದೇ ಸಫಲ - ಮುಖ್ಯ ಕೃತಿ ತೆಗೆದುಕೊಳ್ಳಿ . ಅಲ್ಲೆಲ್ಲ ಲಂಕೇಶರ ಗಮನವಿರುವುದು ಮನುಷ್ಯ ಸ್ವಭಾವದ ವಿಕೃತಿ, ವಕ್ರತೆ, ಸತ್ಯಗಳು ತಟಕ್ಕನೆ ಅಥವಾ ಕ್ರಮೇಣವಾಗಿ ಇಲ್ಲವೆ ತಣ್ಣನೆಯ ಸ್ವರೂಪದಲ್ಲಿ ಪ್ರಕಟವಾಗುವ ರೀತಿಯ ಬಗ್ಗೆಯೇ. ಅದೆಂತಹ, ಅದೆಷ್ಟು ಸನ್ನಿವೇಶದಲ್ಲಿ ಮನುಷ್ಯನನ್ನು ಅನಾವರಣಗೊಳಿಸಿದರೂ ಲಂಕೇಶರಿಗೆ ತೃಪ್ತಿಯಾದಂತಿಲ್ಲ. ಮತ್ತೆ ಮತ್ತೆ ಅವರು ಇದೇ Motifsಗೇ ಹಿಂತಿರುಗುತ್ತಿದ್ದರು. ಲಂಕೇಶರನ್ನು ಅವರ ಕಾಲೇಜು ದಿನಗಳಿಂದ ಬಲ್ಲ ಆಪ್ತರೊಬ್ಬರು ನೀಡಿದ ಒಳನೋಟದ ಮಾತೊಂದು ಇಲ್ಲಿ ನೆನಪಿಗೆ ಬರುತ್ತದೆ. ಮೂರ್ತಿ(Icon) ಇಲ್ಲದಕಡೆ ಅದನ್ನು ಸೃಷ್ಟಿಸುವುದು

ಮತ್ತು ಈಗಾಗಲೇ ಸೃಷ್ಟಿಯಾಗಿರುವ, ಬಹುಪಾಲು ತಾನೇ ಸೃಷ್ಟಿಸಿದ ಮೂರ್ತಿಯನ್ನು ವಿಕೃತಗೊಳಿಸಿ, ಛಿದ್ರಮಾಡಿ, ನಾಶಮಾಡುವುದು. ಲಂಕೇಶ್ ಮನುಷ್ಯರಾಗಿ ಮತ್ತು ಲೇಖಕರಾಗಿ ಸದಾ ಇವೆರಡು ಪ್ರವೃತ್ತಿಗಳ ನಡುವೆ ತೂಯ್ದಾಡುತ್ತಿದ್ದರು ಎನಿಸುತ್ತದೆ. **"ಒಂದು ಘಟನೆ"** ಎಂಬ ಅವರ ಕಥೆಯಲ್ಲಿ ಬರುವ ಈ ಮಾತು ನೋಡಿ: "ಯಾರಿಗೂ ಅಷ್ಟಾಗಿ ತನ್ನ ವ್ಯಕ್ತಿತ್ವ ಸೂಜಿಗಲ್ಲಾಗಿ ಕಂಡಿಲ್ಲ. ಬರೆದರೆ ತನ್ನ ಒಳಗಿರುವ ಘರ್ಷಣೆಗಳನ್ನೆಲ್ಲ **ಮಾತಿನ ಮೂರ್ತಿಗಳಾಗಿ ಕೆತ್ತಿದರೆ** ಅನ್ನುತ್ತ ತನ್ನ ವ್ಯಕ್ತಿತ್ವ ವಿಕಾಸಕ್ಕೆ ಅದೊಂದೇ ದಾರಿ ಅನ್ನುತ್ತಾ, ವಿಕಾಸಗೊಂಡ ಮೇಲೆ ತಾನು ಮರೆಯಬಹುದು ಅಂದುಕೊಳ್ಳುತ್ತಾ ..." (**ಸಮಗ್ರ ಕತೆಗಳು**, ಪುಟ :೯೨).

ಪತ್ರಿಕೆ ಅಧಿಕಾರಸ್ಥರ ಜೊತೆ ಯಾವತ್ತೂ ಹೊಂದಾಣಿಕೆ-ರಾಜಿ ಮಾಡಿಕೊಳ್ಳಲಿಲ್ಲ. ಪ್ರಜಾತಂತ್ರದಲ್ಲಿ ಪತ್ರಿಕೆಗಳದ್ದು ಯಾವತ್ತೂ Adversorial ಪಾತ್ರ ಎಂಬುದರ ಬಗ್ಗೆ ಲಂಕೇಶರಿಗೆ ಖಚಿತವಾದ ನಂಬಿಕೆಯಿತ್ತು. ಆದರೆ ಒಂದು ಸಮಾಜದ ಆಗುಹೋಗುಗಳನ್ನು ನಿರ್ಧರಿಸುವಲ್ಲಿ ಅಧಿಕಾರ ರಾಜಕೀಯದ್ದೇ (Power politics) ಸಿಂಹಪಾಲು ಎಂದು ಅವರು ತಿಳಿದಿದ್ದರು. ಹಾಗಾಗಿ ಅವರ ಪತ್ರಿಕೆ ಅಧಿಕಾರ ರಾಜಕಾರಣ, ಅಧಿಕಾರಸ್ಥರ ವಿಕೃತಿ ವಕ್ರತೆಗಳ ಬಗ್ಗೆಯೇ ಕೇಂದ್ರೀಕರಿಸಿತು. ಈ ದೃಷ್ಟಿಯಿಂದ ಅವರು ಕೂಡ ಸದ್ಯ ನಮ್ಮ ಸಮೂಹ ಮಾಧ್ಯಮಗಳಲ್ಲಿ ಚಾಲ್ತಿಯಲ್ಲಿರುವ ಪ್ರವೃತ್ತಿಯನ್ನು ಸೂಚಿಸಿದರೇ ಹೊರತು ಭಿನ್ನರಾಗಲಿಲ್ಲ. ಸಮೂಹ ಮಾಧ್ಯಮಗಳು ಅಧಿಕಾರಸ್ಥರ ಬಗ್ಗೆ ಗೀಳು ಬೆಳೆಸಿಕೊಂಡು, ಇಲ್ಲದ ಪ್ರಾಮುಖ್ಯತೆ ಕೊಟ್ಟು ಟೀಕೆ-ಟಿಪ್ಪಣಿ ಮಾಡುತ್ತ ಹೋದರೂ ಸಮಾಜದ ಆಗುಹೋಗುಗಳಲ್ಲಿ ಅಧಿಕಾರಸ್ಥರ ರಾಜಕೀಯ ಪ್ರಭಾವ ನಿಮಿತ್ತ ಮಾತ್ರವಾದ್ದರಿಂದ ನಮ್ಮ ಟೀಕೆ-ಟಿಪ್ಪಣಿಗಳು ಒಂದು ಹಂತದ ನಂತರ ತಮ್ಮ ಮೊನಚನ್ನು ಕಳೆದುಕೊಳ್ಳುತ್ತವೆ, ಅಪ್ರಸ್ತುತವಾಗುತ್ತವೆ.

ಇಷ್ಟಾಗಿಯೂ ಲಂಕೇಶ್ ಸಾಂಸ್ಕೃತಿಕ ಪರಿಚಾರಿಕೆ-ಉಪಾಸನೆಯನ್ನು ಮಾಡಿದ್ದು ಲೇಖಕ-ಸಂಪಾದಕ ವ್ಯಕ್ತಿತ್ವದ ಮೂಲಕವೇ ಅನ್ನುವುದನ್ನೂ ಮರೆಯಬಾರದು. ಸಂಸ್ಕೃತಿ ಸೇವೆ ಮಾಡಲು ಲಂಕೇಶರಿಗೆ ಯಾವತ್ತೂ ಅಧಿಕಾರ ಕೇಂದ್ರ ಬೇಕಿರಲೇ ಇಲ್ಲ. ಲಂಕೇಶರಂತವರನ್ನು ಯಾವುದಾದರೂ ಪ್ರಾಧಿಕಾರದ ಅಧ್ಯಕ್ಷರಾಗಿಯೋ, ಅಕಾಡೆಮಿಯ ಕಾರ್ಯದರ್ಶಿಯಾಗಿಯೋ ತಮಾಷೆಗಾದರೂ ಊಹಿಸಿಕೊಳ್ಳುವುದು ಕೂಡ ಕಷ್ಟ. ಈ ದೃಷ್ಟಿಯಿಂದ ಅವರ ಆಪ್ತ ಸರೀಕರಲ್ಲಿ ಲಂಕೇಶರು ಅಪವಾದದ ಅಪರೂಪ ಮತ್ತು ನಂತರದ ತಲೆಮಾರಿಗೆ ಮಾದರಿ. ಇದನ್ನು ಬರೆಯುವಾಗ ಹಿಂದಿನ ತಲೆಮಾರಿನಲ್ಲಿ ಡಿ.ವಿ.ಜಿ.ಯವರು ವಿಶ್ವೇಶ್ವರಯ್ಯ-ಮಿರ್ಜಾ ಇಂತವರ ಸಖ್ಯ-ಸಾಮೀಪ್ಯವನ್ನು ಉದ್ದೇಶಪೂರ್ವಕವಾಗಿಯೇ ದೂರವಿಟ್ಟಿದ್ದು ನೆನಪಿಗೆ ಬರುತ್ತದೆ.

ಲಂಕೇಶರು ತಮ್ಮ ಅಂಕಣ ಬರಹಗಳನ್ನು ಆಗಾಗ್ಗೆ ಜಾರ್ಜ್ ಆರ್ವೆಲ್‌ನ ಅಂಕಣ ಬರಹಗಳೊಂದಿಗೆ ಹೋಲಿಸಿಕೊಂಡಿರುವುದುಂಟು. ಪೆಂಗ್ವಿನ್ ಪ್ರಕಾಶನದವರು ಆರ್ವೆಲ್‌ನ ಅಂಕಣ ಬರಹಗಳು, ಪ್ರಬಂಧ, ಪ್ರವಾಸ ಕಥನ, ಪತ್ರಗಳೆಲ್ಲವನ್ನೂ ಸೇರಿಸಿ ನಾಲ್ಕು ಸಂಪುಟ ಹೊರತಂದಿದ್ದಾರೆ. ಆರ್ವೆಲ್ ತನ್ನ ಪೋಲೀಸ್ ಅಧಿಕಾರಿ ಕೆಲಸವನ್ನು ಬಿಟ್ಟು ಬರಹಗಾರನಾಗಿ

ಬದುಕಲು ಹೊರಟವನು. ಮಧ್ಯಮವರ್ಗದ ಜೀವನ ಶೈಲಿಯಿಂದ ಬೇಸತ್ತವನು. ಕಮ್ಯೂನಿಸಂ, ಫ್ಯಾಸಿಸಂಗಳಿಗೆ ಬದ್ಧವೈರಿಯಾಗಿದ್ದವನು. ಸಮಾಜವಾದದ ಪರವಾಗಿದ್ದವನು. ಸಮೂಹ ಮಾಧ್ಯಮಗಳಲ್ಲಿ ಭಾಷೆಯ ಬಳಕೆ ಜೀವಂತಿಕೆ ಕಳೆದುಕೊಳ್ಳುವುದು ಕಂಡು ಕನಲಿದವನು. ಸ್ಪಷ್ಟವಾದ ರಾಜಕೀಯ ಉದ್ದೇಶವಿಲ್ಲದ ಬರವಣಿಗೆಗೆ ಏನೂ ಕಿಮ್ಮತ್ತಿಲ್ಲವೆಂದವನು. ಬದುಕು- ಬರಹ ಅವನಿಗೆ ಬೇರೆ ಬೇರೆಯಾಗಿರಲಿಲ್ಲ. (ಆರ್ವೆಲ್‌ನ ಜೀವನ ಶೈಲಿ ಧೋರಣೆ ಕುರಿತಂತೆ ಹೆಚ್ಚಿನ ವಿವರಗಳಿಗೆ 'ಸರಿಹೊತ್ತಿನಲ್ಲಿ ಆರ್ವೆಲ್ ಜೊತೆ' ಎಂಬ ನನ್ನ ಪ್ರಬಂಧವನ್ನು ಗಮನಿಸಬಹುದು. ದಾಂಪತ್ಯಕ್ಕೊಂದು ಶೀಲ- ಪ್ರಬಂಧ ಸಂಕಲನದಲ್ಲಿ).

ಲಂಕೇಶರೇ ಸ್ವತಃ ಇಷ್ಟಪಟ್ಟಿದ್ದಾಗಲೂ ಅವರ ಬರಹಗಳನ್ನು ಆರ್ವೆಲ್ ಬರಹಗಳೊಡನೆ ಹೋಲಿಸುವುದು ಕಷ್ಟ. ಇಬ್ಬರೂ ಬರೆಯುತ್ತಿದ್ದ ಸಂದರ್ಭದ ಹಿನ್ನೆಲೆ ಮಾತ್ರ ಬೇರೆಯಲ್ಲ. ಯಾವ ರೀತಿಯ ಓದುಗರಿಗೆ ಅವರು ಬರೆಯುತ್ತಿದ್ದರು ಎಂಬುದು ಕೂಡ ಮುಖ್ಯವಾದ್ದರಿಂದ ಹೋಲಿಕೆಗೆ ಹೊರಡಲೇಬಾರದು ಎಂಬುದು ನನ್ನ ಅನಿಸಿಕೆ. ಆರ್ವೆಲ್‌ಗೆ ಜನಪ್ರಿಯತೆ, ಜನರಂಜಕತೆಯ ಬಗ್ಗೆ ಅನುಮಾನವಿತ್ತು. ಲಂಕೇಶರಿಗೆ ಅದನ್ನು ಹೇಗೆ ಬಳಸಿಕೊಳ್ಳಬೇಕು, ಬೆಳೆಸಿಕೊಳ್ಳಬೇಕು ಎಂಬುದು ಗೊತ್ತಿತ್ತು. ಸಾಹಿತ್ಯದ ಬಗ್ಗೆ ಸಾಮಾಜಿಕ - ರಾಜಕೀಯ ಅಪೇಕ್ಷೆಗಳು ಹೆಚ್ಚಾಗಿರುವುದರಿಂದ ಸಾಹಿತ್ಯದ ಮೂಲಕ ನಾವು ಜೀವನ ಸೌಂದರ್ಯವನ್ನೂ ಆರಾಧಿಸುವುದು ಕಡಿಮೆಯಾಗಿದೆ ಎಂದು ಕೊರಗುತ್ತಾ ಆರ್ವೆಲ್ ಶ್ರೇಷ್ಠ ಸಾಹಿತ್ಯದ ಪರವಾಗಿ ಸಮೂಹ ಮಾಧ್ಯಮಗಳ ವಿರುದ್ಧವಾಗಿ ನಿಂತವನು ಕೂಡ. ಆರ್ವೆಲ್‌ನ ಬರಹಗಳ ಹರವು, ವೈವಿಧ್ಯತೆ ಮತ್ತು ಈ ಬರಹಗಳಲ್ಲಿ ತೊಡಗಿಕೊಂಡಿರುವ ಅಂಕಣಕಾರನ ವ್ಯಕ್ತಿತ್ವದ ನೈತಿಕ ಸ್ಥೈರ್ಯ, ಚಾರಿತ್ರಿಕ ಪ್ರಜ್ಞೆ ಇವುಗಳನ್ನು ನಾವು ಅಧ್ಯಯನ ಮಾಡಬೇಕಾದ್ದು ಲಂಕೇಶರ ಬರಹಗಳೂ ಸೇರಿದಂತೆ ಒಟ್ಟು ಕನ್ನಡ ಅಂಕಣ ಬರವಣಿಗೆಯ ಸ್ವರೂಪವನ್ನು ತಿಳಿಯಲು.

ಲಂಕೇಶರು ತಮ್ಮ ಆತ್ಮ ವೃತ್ತಾಂತಕ್ಕೆ ಪೀಠಿಕೆಯೆಂಬಂತೆ ಆರ್ವೆಲ್, ಗಾಂಧಿಯ ಆತ್ಮಚರಿತ್ರೆಯನ್ನು ರಿವ್ಯೂ ಮಾಡುತ್ತಾ(ಈ ರಿವ್ಯೂನ ಅನುವಾದಕ್ಕೆ 'ಶೂದ್ರ' ಪತ್ರಿಕೆಯ ಗಾಂಧಿ-ನಜೀರ್‌ಸಾಬ್ ವಿಶೇಷಾಂಕವನ್ನು ನೋಡಿ) ''ಎಷ್ಟೋ ಜನಕ್ಕೆ ಸಂತರಾಗಲು ಆಸೆಯೇ ಇರುವುದಿಲ್ಲ'' ಎಂದು ಹೇಳಿರುವುದನ್ನು ಉದ್ಧರಿಸಿದ್ದಾರೆ. ಆದರೆ ಇದೇ ಆರ್ವೆಲ್ ಇನ್ನೊಂದು ಸಂದರ್ಭದಲ್ಲಿ ''ಸಂತನಾಗುವುದು ಅಥವಾ ಮನುಷ್ಯನಾಗುವುದು ಇವೆರಡರ ನಡುವೆ ಮನುಷ್ಯನಾಗುವುದೇ ಹೆಚ್ಚು ಕಷ್ಟವಾದ್ದು'' ಎಂಬ ಮಾತನ್ನು ಕೂಡ ಹೇಳುತ್ತಾನೆ.

ಲಂಕೇಶ್ : ವ್ಯಕ್ತಿವಾದಿ ಹೋರಾಟಗಾರ

○ ಡಾ. ಆರ್. ಕೆ. ಮಣಿಪಾಲ

ಲಂಕೇಶ್ 'ಪ್ರಜಾವಾಣಿ'ಯಲ್ಲಿ ಅಂಕಣ ಬರೆಯುತ್ತಿದ್ದಾಗ ಮುಗಿಬಿದ್ದು ಓದಿದ್ದು ನೆನಪಾಗುತ್ತದೆ. ಕೆಲವೇ ವಾರಗಳಲ್ಲಿ ಅವರು ಅದನ್ನು ನಿಲ್ಲಿಸಿ, ತಮ್ಮದೇ ಹೆಸರಿನಲ್ಲಿ ವಾರಪತ್ರಿಕೆ ಹೊರಡಿಸಿದಾಗಲೂ ಪ್ರತೀ ವಾರ ವ್ರತದಂತೆ ಪುಸ್ತಕದ ಮಳಿಗೆಯಲ್ಲಿ ಅದಕ್ಕಾಗಿ ಕಾಯುತ್ತಿದ್ದೆ. ಹೀಗೆ ಸುಮಾರು ಒಂದು ವರ್ಷ ಕಳೆದಿರಬಹುದು. ನಂತರ ಅವರ ಅಹಂಕಾರ, ಪೂರ್ವಾಗ್ರಹ, ಕಚಗುಳಿ-ಅಶ್ಲೀಲ-ಬೈಗುಳದ ಏಕತಾನಕ್ಕೆ ರೋಸಿ ಹೋಗುವಂತಾಯಿತು. ಆದರೂ ಸೂಕ್ಷ್ಮ ಸಂವೇದನಾಶೀಲ ಜಿ. ರಾಜಶೇಖರ ಅಂಥವರ ಬರಹಗಳಿಗಾಗಿ ಹಳೆ ಸಂಚಿಕೆಗಳನ್ನು ಮತ್ತು ವಿಶೇಷಾಂಕಗಳನ್ನು ಸಂಗ್ರಹಿಸುತ್ತಿದ್ದೆ.

ಲಂಕೇಶ್ ಬಗ್ಗೆ ನನಗೆ ಅರ್ಥವಾಗದ ಅಂಶವೆಂದರೆ, ಸ್ವತಃ ಬಂಡಾಯಗಾರರಾದರೂ ಬಂಡಾಯ ಸಾಹಿತ್ಯ ಸಂಘಟನೆಯ ಚಟುವಟಿಕೆಗಳನ್ನು [illegible] ಬೈಯುತ್ತಿದ್ದುದು. ಅವರು ಬಂಡಾಯವನ್ನು 'ದಂಡಾಯ'ವೆಂದೇ ಕರೆಯುತ್ತಿದ್ದುದು. ಬೈಗುಳ ಪ್ರಿಯರ ಶಬ್ದಕೋಶವನ್ನು ಲಂಕೇಶ್ ಶ್ರೀಮಂತಗೊಳಿಸಿದ ಹಾಗೆ ಬೇರಾವ ಪತ್ರಕರ್ತರೂ ಮಾಡಿಲ್ಲ. ಕೆಲವು ಬಂಡಾಯಗಾರರು ಮಾತಿನ ಮಲ್ಲರಾಗಿ ಕ್ರಿಯೆಯಲ್ಲಿ ಶೂನ್ಯರಾಗಿದ್ದಿರಬಹುದು; ನೀಚರೂ ಸ್ವಾರ್ಥಿಗಳೂ ರಾಜಕೀಯ [illegible] ಹಾತೊರೆಯುವವರೂ ಆಗಿದ್ದಿರಬಹುದು. ಹಾಗೆಂದು ಅವರಲ್ಲಿರುವವರೆಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡುವವರಲ್ಲ ಎಂದಲ್ಲ. ಅವರು ನೇರವಾಗಿ ಕ್ಷೇತ್ರ ಅಧ್ಯಯನ ಮಾಡಿ ತಿಳಿದುಕೊಳ್ಳಲು ಪ್ರಯತ್ನಿಸುತ್ತಿರಲಿಲ್ಲ. ಅವರ ಅನುವರ್ತಿಗಳ ಅಂಬೋಣಗಳ ಮೇಲೆಯೇ ಅವರು ತಮ್ಮ ಅಭಿಪ್ರಾಯ ರೂಪಿಸಿಕೊಳ್ಳುತ್ತಿದ್ದರು ಮತ್ತು ಆ ನೆಲೆಯಲ್ಲಿಯೇ ಪ್ರತಿಕ್ರಿಯಿಸುತ್ತಿದ್ದರು ಎಂದು ಹೇಳಲು ಸಾಕಷ್ಟು ಪೂರಕ ಸಂಗತಿಗಳಿವೆ. ಒಬ್ಬ ಪತ್ರಕರ್ತನಾಗಿ,

ಸೃಜನಶೀಲ ಲೇಖಕರಾದ ಅವರಿಗೆ ಈ ಬಗೆಯ ಪೂರ್ವಾಗ್ರಹ ಯಾವತ್ತೂ ಭೂಷಣವಾಗುವಂತಿರಲಿಲ್ಲ. ಸಂಘಟನೆ ಹಾಕಿಕೊಂಡ ಕಾರ್ಯಕ್ರಮದಲ್ಲಿ ದೋಷವೇನಾದರೂ ಕಂಡಿದ್ದರೆ, ಅಂಥದರ ಬಗ್ಗೆ ರಚನಾತ್ಮಕವಾದ ಟೀಕೆ ಮಾಡಿದ್ದರೆ ಸಂಘಟನೆಯ ಬೆಳವಣಿಗೆಗೆ ಸಹಾಯಕವಾಗುತ್ತಿತ್ತು; ಒಬ್ಬ ಸೃಜನಶೀಲ ಲೇಖಕನಾಗಿ ಮತ್ತು ಸಾಮಾಜಿಕ ಕಾಳಜಿಯುಳ್ಳ ಪತ್ರಕರ್ತನಾಗಿ ಲಂಕೇಶರಿಗೆ, ಸಂಘಟನೆಯ ನೇತಾರರ ಪ್ರಮಾದಗಳು, ಅಪಿಶ್ವಾನೀಯತೆ ಮತ್ತು ಅಸೂಕ್ಷ್ಮತೆಗಳಿಂದ ಸಂಘಟನೆಗೆ ಮುಳುವಾಗದಂತೆ ಸಂಘಟನೆಯ ಪ್ರಾಮಾಣಿಕ ಕಾರ್ಯಕರ್ತರನ್ನು ಎಚ್ಚರಿಸುವ ಬಾಧ್ಯತೆಯಿದ್ದಿತು. ಅಂದರೆ, ಅರ್ಥಪೂರ್ಣ ಉಪಸಂಸ್ಕೃತಿ ಸಮುಚ್ಚಯದ ಚಳುವಳಿಯನ್ನು (ರೈತ-ಕಾರ್ಮಿಕ-ಭಾಷಾ- ಸಾಂಸ್ಕೃತಿಕ ಹೋರಾಟಗಳ ಉಪಲಬ್ಧಿಯಾಗಿ ಬಂಡಾಯ ಸಾಹಿತ್ಯ ಸಂಘಟನೆ ರೂಪುಗೊಂಡದ್ದೆಂದು ನನ್ನ ತಿಳುವಳಿಕೆ) ಗಟ್ಟಿಗೊಳಿಸಬೇಕಾದದ್ದು ಲಂಕೇಶರ ಕರ್ತವ್ಯವಾಗಿತ್ತು. ಅವರು ಹಾಗೆ ಮಾಡದೆ, ಅವರೂ ಕೊನೆಗೆ ಶ್ರೇಷ್ಠ ಸಾಹಿತ್ಯವಾದಿಗಳೊಂದಿಗೆ ಸೇರಿಕೊಂಡರು. ಈ ಶ್ರೇಷ್ಠ ಸಾಹಿತ್ಯವಾದಿಗಳು ಇಂದು ಅಕ್ಷರಶಃ ಸತ್ತಿದ್ದಾರೆ; ಲಂಕೇಶರಿಗಿಂತ ತುಂಬ ಮೊದಲೇ!

ಜಿ. ರಾಜಶೇಖರ್‌ರಂಥವರು ಹಿಂದೊಮ್ಮೆ ಮಾರ್ಕ್ಸ್‌ವಾದಿ ಸಿದ್ಧಾಂತದಿಂದ ಪ್ರಭಾವಿತರಾಗಿ ಬರೆಯುತ್ತಿದ್ದರೆಂಬ ಕಾರಣಕ್ಕೆ ಅವರ ಮೇಲೆ ಪತ್ರಿಕೆಯಲ್ಲಿ ಲೇಖನಗಳನ್ನು ಪ್ರಕಟಿಸುತ್ತಲೇ ಟೀಕಾಸ್ತ್ರಗಳನ್ನು ಪ್ರಯೋಗಿಸುತ್ತಿದ್ದರು. ಗೊಡ್ಡು ಮಾರ್ಕ್ಸಿಸ್ಟ್ ಪಂಡಿತನೆಂದೇ ಅವರು ರಾಜಶೇಖರ್‌ರನ್ನು ಬಣ್ಣಿಸುತ್ತಿದ್ದುದು. ರಾಜಶೇಖರ್ ಯಾವತ್ತೂ ಗೊಡ್ಡು ಆಗಿರಲಿಲ್ಲ; ಆಗಲಾರರು. ಅವರ ಮಾರ್ಕ್ಸ್‌ವಾದಿ ಚಿಂತನೆ, ಕಾವ್ಯ-ಕತೆ-ಬದುಕಿನ ಸೂಕ್ಷ್ಮಗಳನ್ನು ಗುರುತಿಸಲಾರದಷ್ಟು ಜಡಗೊಂಡದ್ದಿಲ್ಲ. 'ಯಶೋಧರ ಚರಿತೆಯ ದ್ವಂದ್ವ ವಿನ್ಯಾಸ' ಎಂಬ ಲೇಖನವನ್ನು ಲಂಕೇಶ್ ಓದಿರಲಿಲ್ಲವೋ ಏನೋ. ಎಷ್ಟೋ ಲೇಖಕರನ್ನು ತನ್ನ ಮಾತು ಬರಹಗಳ ಮುಖಾಂತರ ಬೆಳೆಸಿದ ರಾಜಶೇಖರ್, ಬದುಕಿನಲ್ಲಿ ಅರ್ಥಪೂರ್ಣ ಮೌಲ್ಯಗಳಿಗಾಗಿ ಹೋರಾಡುತ್ತ ಬಂದ ಧೀಮಂತ. ಇಷ್ಟಿದ್ದರೂ ಲಂಕೇಶ್ ಮನಸ್ಸು ರಾಜಶೇಖರ್ ಕುರಿತು ತಿಳಿಗೊಂಡದ್ದು ಸಾಯುವ ಒಂದೆರಡು ದಿನಗಳ ಹಿಂದೆ (ನೋಡಿ: ೨/೨/೨೦೦೦ ದ ಸಂಚಿಕೆ). ಮೂರು ದಶಕಗಳಿಗಿಂತಲೂ ಹೆಚ್ಚು ಕಾಲ ಬರೆಯುತ್ತ ಬಂದ, ಎಲ್ಲಾ ಪ್ರಮುಖ ಪ್ರಗತಿಪರ ಚಳುವಳಿಗಳ ಅನಿವಾರ್ಯತೆಯನ್ನು ಎಲ್ಲರಿಗಿಂತಲೂ ಮೊದಲು ಗುರುತಿಸಿ ಪತ್ರಿಕೆಗಳಲ್ಲಿ ಅವುಗಳ ಪರವಾಗಿ ತರ್ಕಬದ್ಧವಾಗಿ ಮುಂದೊತ್ತುವ ಧಾಟಿಯಲ್ಲಿ ಬರೆಯುತ್ತಿದ್ದ ರಾಜಶೇಖರ್ ಉತ್ಕೃಷ್ಟ ವಿಮರ್ಶಕರೂ ಕೂಡ ಎಂಬುದನ್ನು ಅರ್ಥ ಮಾಡಿಕೊಳ್ಳಲು ಇಷ್ಟು ದೀರ್ಘ ಕಾಲ ಹಿಡಿಯಬೇಕೆ? ಕಾರಣ ಇಷ್ಟೇ: ಅವರ ಮನಸ್ಸು ಮುಚ್ಚಿದ ಮನಸ್ಸು; ಪ್ರಗತಿಪರ ಚಳುವಳಿಗಳು, ಸಂಘಟನೆಗಳ ಕುರಿತು ಸದಾ ಕುಹಕವಾಡುವ ಪೂರ್ವಾಗ್ರಹ ಪೀಡಿತ ಮನಸ್ಸು. ಹೀಗಾಗಿ, ಇಂಥ ಚಳುವಳಿಗಳಲ್ಲಿ ತೊಡಗಿರುವ ನಿಷ್ಠುರ, ನಿಸ್ಪೃಹ, ಧೀಮಂತ ಚೇತನಗಳನ್ನು ಕುರಿತಂತೆ ಅವರ ದೃಷ್ಟಿ ಕುರುಡು.

ಪ್ರಾಮಾಣಿಕರೂ ಪ್ರಚಾರಪ್ರಿಯರಲ್ಲದವರೂ ಆದ ಪ್ರಗತಿಪರ ಲೇಖಕರ ಬಗ್ಗೆ ಸಂದೇಹ ಮತ್ತು ಲೇವಡಿಯ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದ ಲಂಕೇಶ್, ನವ್ಯ ಕಾಲದ

ಗುಂಪುಗಾರಿಕೆಯನ್ನು ಮುಂದುವರಿಸಿದವರೂ ಕೂಡ. ಸ್ವತಃ ವ್ಯಕ್ತಿವಾದಿಯೂ ಸ್ವ-ರತಿಪೀಡಿತರೂ ಆದ ಲಂಕೇಶ್ ಅಂಥದೇ ಬರಹಗಾರರ ಗುಂಪು ಕಟ್ಟಿದ್ದರು. ಅವರಲ್ಲಿ ಹೆಚ್ಚಿನವರು ಹುಸಿ ಬುದ್ಧಿಜೀವಿಗಳು. ಕೆಲವರು ಮೊದಮೊದಲು ಪ್ರಗತಿಪರ ಸಂಘಟನೆಗಳಲ್ಲಿ ಇದ್ದು ಅಲ್ಲಿ ಮೇಯಲಿಕ್ಕಾಗದೇ ಹೊರಬಿದ್ದವರು. ಇಂಥವರು ತಮ್ಮ ವ್ಯಕ್ತಿವಾದಿ, ವಿಕ್ಷಿಪ್ತ ಗುಣಗಳಿಂದಾಗಿಯೇ ಲಂಕೇಶರಿಗೆ ನಿಕಟವರ್ತಿಗಳಾಗಿದ್ದವರು. ಲಂಕೇಶ್‌ಗೆ ಇವರ ನಿಜ ಬಣ್ಣ ಬಯಲಾಗುವ ಹೊತ್ತಿಗೆ ಈ ವರ್ತಿಗಳು 'ಲಂಕೇಶ್ ಪತ್ರಿಕೆ'ಯ ಮೂಲಕ ಬಿಟ್ಟಿ ಪ್ರಚಾರ ಪಡೆದಿದ್ದರು. ಅಂಥವರಿಗೆ ಪಕ್ಕಾ ಉದಾಹರಣೆಗಳೆಂದರೆ: ಸೂದ್ರ ಶ್ರೀನಿವಾಸ ಮತ್ತು ಡಾ. ನಿ. ಮುರಾರಿ ಬಲ್ಲಾಳ. ಬಲ್ಲಾಳರ ಅಸಂಬದ್ಧ ಪ್ರಲಾಪಗಳನ್ನೂ ಹಳಹಳಿಕೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುತ್ತಲೇ ಬಂದ ಲಂಕೇಶ್, ಈತನದು ಫ್ಯಾಸಿಸ್ಟ್ ಮಾದರಿಯ ಚಿಂತನೆ ಎಂದು ಬಣ್ಣಿಸಿದ್ದೂ ಉಂಟು. ಫ್ಯಾಸಿಸ್ಟ್ ಮಾದರಿಯ ಚಿಂತನೆಯೆಂದು ತೀರ್ಮಾನಿಸುವ ಸಂಪಾದಕನಿಗೆ ಅದನ್ನು ಪ್ರಕಟಿಸದಿರುವ ಸ್ವಾತಂತ್ರ್ಯವಿಲ್ಲವೇ? ಈ ದಾಕ್ಷಿಣ್ಯ ಯಾವ ಪುರುಷಾರ್ಥಕ್ಕೆ? ಹಾಗಾದರೆ ಮುರಾರಿ ಹೊಂದಿದ್ದ ಪ್ರತಿಷ್ಠಿತರ ವರ್ತುಲದ ಬಗ್ಗೆ ಭಯವೇ?

ಲಂಕೇಶ್ ತನ್ನ ಪತ್ರಿಕೆಯನ್ನು 'ಜಾಣ ಜಾಣೆಯರ ಪತ್ರಿಕೆ' ಎಂದು ಕರೆದಿದ್ದಾರೆ. ಪತ್ರಿಕೆಯ ಇಪ್ಪತ್ತೊಂದನೆಯ ಹುಟ್ಟುಹಬ್ಬದ ಸಂಚಿಕೆಯಲ್ಲೂ 'ಕನ್ನಡದ ಶ್ರೇಷ್ಠ ಮನಸ್ಸುಗಳ ಕಥೆ, ಕವನ, ಲೇಖನಗಳು' ಎಂಬ ಜಾಹೀರು ಮುಖಪುಟದಲ್ಲಿ ರಾರಾಜಿಸುತ್ತದೆ. 'ಜಾಣರು', 'ಶ್ರೇಷ್ಠರು' ಎನ್ನುವಂಥವರ ಪತ್ರಿಕೆ ಎಂದು ಬಣ್ಣಿಸಿಕೊಳ್ಳುವ ಲಂಕೇಶ್ ಮತ್ತು ಅವರ ಅನುವರ್ತಿಗಳು (ಇವರು ತಮ್ಮನ್ನು ಪತ್ರಿಕೆಯ ಉತ್ತರಾಧಿಕಾರಿಗಳೆಂದುಕೊಂಡಿದ್ದ ಲೇಖಕರು- ಈ ಗುಂಪಿನಲ್ಲಿ ರಾಜಶೇಖರ್ ಸೇರುವುದಿಲ್ಲ) ಎಷ್ಟರ ಮಟ್ಟಿಗೆ ಜನಪರ, ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ಭಾಗವಹಿಸಿ ಬೀದಿಗಿಳಿದವರು? ವೈದೇಹಿಯಂಥ ಪ್ರಮುಖ ಲೇಖಕಿ ಕೂಡ ಯಾವುದೇ ಸಾಮಾಜಿಕ ಹೋರಾಟಗಳಲ್ಲಿ ಜಿಲ್ಲೆಯ ಕಾರ್ಯಕರ್ತರೊಂದಿಗೆ ಭಾಗಿಯಾದದ್ದಿಲ್ಲ (ವಿದ್ಯಾರ್ಥಿ, ಸಾಹಿತಿ, ದಲಿತ, ಕಾರ್ಮಿಕ, ಮಹಿಳೆ, ಪತ್ರಕರ್ತರಿಗೆ ನ್ಯಾಯ ಒದಗಿಸುವ ಅಥವಾ ಕೋಮುವಾದ ವಿರೋಧಿ ವೇದಿಕೆಯ ಯಾವುದೇ ಚಳುವಳಿಗಳಲ್ಲಿ ಇವರು ಭಾಗವಹಿಸಿದ್ದಿಲ್ಲ). ಲೇಖಕರು ಬರೆದರೆ ಸಾಕು; ಕ್ರಾಂತಿಯಾಗುತ್ತದೆ ಎನ್ನುವ ಮಧ್ಯಮವರ್ಗೀಯ ನಿಲುವು ಲಂಕೇಶ್‌ರದಾಗಿತ್ತು ಎಂದು ಇದರ ಅರ್ಥವಲ್ಲ. ಆದರೆ, ಸ್ವತಃ ಲಂಕೇಶ್ ಹುಟ್ಟುಹಾಕಿದ 'ಪ್ರಗತಿರಂಗ'. ಒಬ್ಬನೇ ಒಬ್ಬ ಶಾಸಕನನ್ನು ವಿಧಾನಸಭೆಗೆ ಆರಿಸಿ ಕಳಿಸಿ ಕೊಡಲು ಅಸಮರ್ಥವಾದಾಗ, ಪತ್ರಿಕೆಯ ಪ್ರಭಾವ ಎಷ್ಟು ಎಂಬುದನ್ನು ಪುನರ್ ವಿಮರ್ಶಿಸಬೇಕಾಗುತ್ತದೆ. ರೇಷ್ಮೆ ಹುಳು ತಾನು ಸ್ರವಿಸಿದ ಜಿಡ್ಡಿನಿಂದ ದಾರಮಾಡಿ ಸುತ್ತಿಸುತ್ತಿ ಕೋಶಕಟ್ಟಿ, ಅದರೊಳಗೆ ಕೂತು ಸಾಯುವ ಹಾಗೆ (ಅಕ್ಕಮಹಾದೇವಿಯ ವಚನದ ನೆನಪು) ಲಂಕೇಶ್ ಕೂಡಾ ಇನ್ನಿಲ್ಲವಾದರು. ಗೋಕಾಕ್ ಚಳವಳದ ವೇಳೆ ತನ್ನ ಪತ್ರಿಕಾ ಬರೆಹಗಳಿಂದಾಗಿಯೇ ಕಾಂಗ್ರೆಸ್ ಸರ್ಕಾರ ಮಣ್ಣುಮುಕ್ಕಿ ಹೆಗಡೆ ನೇತೃತ್ವದ ಜನತಾ ಸರ್ಕಾರ ರಚನೆಯಾಯಿತೆಂದು, ಲಂಕೇಶ್ ಕೊಚ್ಚಿಕೊಂಡಿದ್ದನ್ನು

ಓದುಗರು ಮರೆಯುವಂತಿಲ್ಲ.

ಅವರ ಪತ್ರಿಕೋದ್ಯಮದ ವೃತ್ತಿಪರತೆ, ನೈತಿಕತೆಯ ಬಗ್ಗೆ ಒಂದು ಮಾತು. ೯-೨-೨೦೦೦ದ ಸಂಚಿಕೆಯಲ್ಲಿ, ಪತ್ರಿಕಾ ಬಳಗದ ಸಿ.ಎಸ್. ದ್ವಾರಕಾನಾಥ್ ಬರಹದಲ್ಲಿ, ಆಧಾರ ಸಿಗದೆ ಬರೆಯಬೇಕಾದಲ್ಲಿ ಮನಸ್ಸಿಗೆ ಸರಿ ಎನಿಸಿದ್ದನ್ನು ಬರೆಯಬೇಕು, ಪರಿಣಾಮದ ಬಗ್ಗೆ ಯೋಚಿಸಬಾರದು ಎಂದು ತನಗೆ ಲಂಕೇಶ್ ಹೇಳಿದ್ದರೆಂಬ ಮಾತು ಬರುತ್ತದೆ. ಇದೆಂಥ ಪತ್ರಿಕೋದ್ಯಮ? ಮನಸ್ಸಿಗೆ ಸರಿ ಎನಿಸುವುದೆಂದರೇನು? ಮನಸ್ಸಾಕ್ಷಿ ಇತ್ಯಾದಿ ಮಾತುಗಳು ನಿರಪೇಕ್ಷ ಪತ್ರಿಕೋದ್ಯಮದಲ್ಲಿ ಎಷ್ಟು ದೂರ ಬರಬಲ್ಲವು? ಇದಕ್ಕೇ ಇರಬೇಕು : ಲಂಕೇಶ್ ಪತ್ರಿಕೆಯಲ್ಲಿ ಎಷ್ಟೋ ತನಿಖಾವರದಿಗಳು ಪ್ರಕಟವಾಗಿ ಒಂದೇ ವಾರದಲ್ಲಿ ವಿಷಾದ, ಸ್ಪಷ್ಟೀಕರಣ ಪ್ರಕಟವಾಗುತ್ತಿದ್ದುದು. ದೊಡ್ಡ ಅಧಿಕಾರಿಗಳ ಬಗ್ಗೆ ಭ್ರಷ್ಟಾಚಾರ, ದೌರ್ಜನ್ಯದ ಪ್ರಕರಣಗಳ ವರದಿ ಪ್ರಕಟವಾದ ಒಂದೆರಡು ವಾರಗಳಲ್ಲಿ ಆ ವರದಿಯ ಸತ್ಯವನ್ನೇ ಅಲ್ಲಗಳೆಯುವ ವರದಿಗಳು, ಸಂಪಾದಕರ ವಿಷಾದ ಪ್ರಕಟವಾಗಬೇಕಾದರೆ ಇದನ್ನು 'ಬ್ಲಾಕ್‌ಮೇಲ್' ಪತ್ರಿಕೋದ್ಯಮ ಅಲ್ಲ ಎಂದು ಹೇಗೆ ಹೇಳುವುದು ? ಅಥವಾ ಒತ್ತಡಕ್ಕೆ ಮಣಿದುದಲ್ಲ ಎಂದು ಹೇಗೆ ಹೇಳುವುದು?

ಲಂಕೇಶ್ ಪತ್ರಿಕೆ ಇಂಡಿಯಾದಲ್ಲೆ ಜಾಹೀರಾತಿಲ್ಲದ ಏಕೈಕ ಪತ್ರಿಕೆ ಎಂಬ ಕೊಂಡಾಟ ನಡೆದಿದೆ. ಹೌದು. ಜಾಹೀರಿರಲಿಲ್ಲ. ಇಂದಿಗೂ ಇಲ್ಲ. ಆದರೆ, ಜಾಹೀರಿಗಿಂತ ಪ್ರಭಾವದಲ್ಲಿ ಕಡಿಮೆಯೇನೂ ಅಲ್ಲದ, 'ಛೆ ... ಛೆ...', 'ಟೀಕೆ ಟಿಪ್ಪಣಿ', 'ಗಾರ್ದಭ ಪುರಾಣ', 'ಸಂಪಾದಕೀಯ', 'ನೀಲೂ ಪದ್ಯಗಳು' (ಇವೆಂಥಾ ಕಾವ್ಯವೋ ಲಂಕೇಶರ ಆತ್ಮವೇ ಉತ್ತರಿಸಬೇಕು !), ಅನಾಮಧೇಯ ಕನ್ಯಾಮಣಿಗಳ ಕಾಲಂ, ಸಿನೆಮಾ ... ಇವೆಲ್ಲಾ ಮಾಡುತ್ತಿದ್ದುದು ಜಾಹೀರಿನ ಕೆಲಸವನ್ನೇ ಅಲ್ಲವೆ? ಅಕ್ಷರಮಟ್ಟಿಗೆ ಪೀತ ಪತ್ರಿಕೆ ಎನ್ನಬೇಕಷ್ಟೆ? (ಸಿನೆಮಾ ನಟನಟಿಯರ ಭಾವಚಿತ್ರಗಳ ಕೆಳಗಿನ ಸೂಕ್ತಿಗಳನ್ನು ನೆನಪಿಸಿಕೊಳ್ಳಿ). ವಾರಪತ್ರಿಕೆ ಎಂದಾಗ ಇಂಥ ಗಿಮಿಕ್ಸ್ ಬೇಕೋ ಏನೋ. ಆದರೆ ಜಾಣಜಾಣೆಯರು, ಕನ್ನಡದ ಶ್ರೇಷ್ಠ ಮನಸ್ಸುಗಳು ಇಂಥಾದ್ದಕ್ಕೇ ದುಂಬಾಲು ಬೀಳುವರೆಂದು ಲಂಕೇಶ್ ತಿಳಿದರೇ?

ಲಂಕೇಶ್ ಬಗ್ಗೆ ನನಗಿರುವ ದೊಡ್ಡ ತಕರಾರು ಎಂದರೆ, ಅವರು ತಮಗಾಗದವರ ಗ್ರಂಥಗಳನ್ನು ಓದದೆಯೇ (ಓದಿಲ್ಲವೆಂದು ಸ್ಪಷ್ಟ ಸಾರಿಕೊಂಡೇ) 'ವಿಮರ್ಶೆ' ಬರೆಯುತ್ತಿದ್ದುದು. ನಾನು 'ಸಂಕ್ರಮಣ' ಪತ್ರಿಕೆಯಲ್ಲಿ ಬರೆಯುತ್ತ ಬಂದುದಕ್ಕೆ ಮತ್ತು ಅವರ 'ಅಕ್ಷರ ಹೊಸಕಾವ್ಯ'ದ ಹೊಸ ಆವೃತ್ತಿಯ ಆಯ್ಕೆಯಲ್ಲಾದ ದೋಷ ಮತ್ತು ಮುನ್ನುಡಿಯ ಸ್ಪಷ್ಟ ಪೂರ್ವಾಗ್ರಹದ ಮಾತುಗಳನ್ನು ಪ್ರಶ್ನಿಸಿ ವಿಮರ್ಶೆ ಬರೆದುದಕ್ಕೆ ಅವರು ನನ್ನ ವಿರುದ್ಧ ಸೇಡು ತೀರಿಸಿದ್ದು, ನನ್ನ 'ಸಾಹಿತ್ಯ ಪ್ರಕ್ರಿಯೆ' ಎಂಬ ವಿಮರ್ಶಾ ಲೇಖನಗಳ ಸಂಗ್ರಹದ ಯಾವ ಲೇಖನವನ್ನೂ ಓದದೆಯೂ, ಕೈಗೆ ಬಂದ ನಾಲ್ಕು ಸಾಲುಗಳನ್ನು ಉದ್ಧರಿಸಿ, ನನಗೆ ಕನ್ನಡ ಭಾಷೆಯೇ ಗೊತ್ತಿಲ್ಲ ಎಂದು ಗುಡಿಸಿ ಹಾಕುವ (ಇನ್ನೂ ಎಷ್ಟೋ ಲೇಖಕರಿಗೆ ಇವರು ಹೀಗೇ ಮಾಡಿರುವುದು ತಿಳಿದಿದೆ) ವಿಮರ್ಶೆ ಬರೆಯುವ ಮೂಲಕ. ಹಾಗಾದರೆ, ಲಂಕೇಶರಿಗಷ್ಟೇ ಕನ್ನಡ ತಿಳಿದದ್ದೇ? ಕನ್ನಡ ಭಾಷೆ ಸುಂದರವೂ, ಪ್ರಭಾವಿಯೂ ಆಗಿ

ಪ್ರಯೋಗಗೊಂಡಿರುವುದು ಲಂಕೇಶ್ ಒಬ್ಬರಿಂದಲೇ? ಲಂಕೇಶರ ಬರಹಗಳ ಎಷ್ಟೋ ಸಾಲುಗಳು ಕನ್ನಡ ಬರದ, ಆಂಗ್ಲ ವಿದ್ವಾಂಸನ ಬರಹದ ತರ್ಜುಮೆಯಂತೆ ತೋರುವುದಕ್ಕೆ, ಕನ್ನಡದ ಜಾಯಮಾನಕ್ಕೊಗ್ಗದ ನುಡಿಗಟ್ಟುಗಳು, ವಾಕ್ಯರಚನೆಯನ್ನು ಹೊಂದಿರುವುದಕ್ಕೆ ಧಾರಾಳ ನಿದರ್ಶನ ನೀಡಬಹುದು. (ಅದಕ್ಕೇ - ಬಹುಶಃ ಲಂಕೇಶ್ ಸಾಯುವ ಪೂರ್ವದಲ್ಲಿ ಕನ್ನಡ ವ್ಯಾಕರಣದ ಗ್ರಂಥವೊಂದನ್ನು ಓದಿ ಮೇಜಿನ ಮೇಲಿಟ್ಟಿದ್ದು!). ಈ ದೋಷ ಅವರ ಪೂರ್ವಾಗ್ರಹ ಪೀಡಿತ, ವ್ಯಕ್ತಿವಾದಿ, ಉದ್ದುರುಟು ಮನಸ್ಸಿಗೆ ಸಂಬಂಧಿಸಿದ್ದೆಂದೇ ನನ್ನ ಅಭಿಪ್ರಾಯ. ಹಿಂದೊಮ್ಮೆ ಮೊಯ್ಲಿಯ ಬಗ್ಗೆ ಬರೆದಾಗ ಇಡಿಯ ಜಿಲ್ಲೆಯ ಜನಗಳ ಬಗ್ಗೆ 'ಈ ದಕಗಳು' ಎಂಬ ಅಸಹನೆಯ ಪ್ರಯೋಗ ಮಾಡಿದ್ದು ನನಗಿನ್ನೂ ನೆನಪಿದೆ. 'ಇಕ್ಕಬೇಕು, ಒದೆಯಬೇಕು, ಒದ್ದು ಬುದ್ಧಿಕಲಿಸಬೇಕು, ಬದ್ಮಾಷ್, ಫಟಿಂಗ, ಲುಚ್ಚ ....' ಇತ್ಯಾದಿ ಅಪ್ಪಣೆ ಕೊಡಿಸುವ, ಮತ್ತು ಸೊಂಟದ ಕೆಳಗಿನ ಬಯ್ಗುಳದ, ಭಾಷಾ ಪ್ರಯೋಗವೇ ಶುದ್ಧ ಕನ್ನಡವೆಂಬುದು ಲಂಕೇಶರ ಇಂಗಿತವಿದ್ದಿರಬೇಕು. ಸೃಜನಶೀಲ ಬರಹಗಾರನಾಗಿ, ಸತ್ವಶೀಲ ಚಿಂತಕನಾಗಿ ಪ್ರಭಾವ ಬೀರಬಲ್ಲ ಲಂಕೇಶ್, ಪತ್ರಿಕಾ ಬರಹಗಳಲ್ಲಿ, ಸಂಪಾದಕನಾಗಿ, ವ್ಯಕ್ತಿ ಸಂಬಂಧಗಳಲ್ಲಿ ಯಾಕೆ ಹೀಗೆ ವಿರೋಧಾಭಾಸದ ವ್ಯಕ್ತಿಯಾಗಿ, ಹುಳಿಮಾವಿನ ಮರವಾಗಿ ಉಳಿದರೋ ತಿಳಿಯುತ್ತಿಲ್ಲ.

ಇಷ್ಟು ಹೇಳಿದ ಮೇಲೂ, ಲಂಕೇಶ್ ಮೂಲಕ ಸ್ಥಾಪಿತ ಹಿತಾಸಕ್ತಿಗಳ ವಿರುದ್ಧ ದಿಟ್ಟ ದನಿಯೆತ್ತುವ ಒಂದು ಸಂಪ್ರದಾಯ ಹುಟ್ಟಿಕೊಂಡದ್ದು, ಕೋಮು- ಜಾತಿ - ಸಂಕುಚಿತವಾದದ ವಿರುದ್ಧ ಪತ್ರಿಕೆ ಪ್ರಬಲ ಶಸ್ತ್ರವಾಗಿ ಮೂಡಿಬಂದದ್ದು ಸಾಮಾನ್ಯ ಸಂಗತಿ ಎಂದು ನಾನು ತಿಳಿಯುತ್ತಿಲ್ಲ. ಆದರೆ, ಲಂಕೇಶ್ ಅವರ ಈ ಹೋರಾಟಕ್ಕೆ ಒಂದು ಸೈದ್ಧಾಂತಿಕ ಕೇಂದ್ರವಾಗಲೀ, ಸಾಮೂಹಿಕ ವ್ಯಾಪ್ತಿಯಾಗಲೀ ದೊರಕದಿದ್ದುದು, ಅದೊಂದು ಚಳವಳವಾಗಿ ಅಖಿಲ ಕರ್ನಾಟಕ ಮಟ್ಟದಲ್ಲಿ ರೂಪು ಪಡೆಯುವಲ್ಲಿ ಪತ್ರಿಕೆ ಸಾಧನವಾಗದಿದ್ದುದು ಒಂದು ದೊಡ್ಡ ಕೊರತೆ ಎಂದೇ ಹೇಳಬೇಕಾಗಿದೆ. ಅದು ಹಾಗಲ್ಲ ಎನ್ನುವವರು ಲಂಕೇಶರಂತೆಯೇ ವ್ಯಕ್ತಿವಾದಿ ಅತಿರೇಕ ವಿರೋಧಾಭಾಸಗಳಿಂದ ತೊಳಲಾಡುವ ಒಕ್ಕಣ್ಣರೆಂದೇ ಹೇಳಬೇಕಾಗುತ್ತದೆ.

ಮನುಷ್ಯ ತನ್ನ ಮೂಲಭೂತ ಆತಂಕವನ್ನು ಗೆಲ್ಲಲು ಅದನ್ನು ಜೀರ್ಣಿಸಿಕೊಂಡು ನೆಮ್ಮದಿ ಪಡೆಯಲು ಹಲವು ವಿಧಾನ ಕಂಡುಕೊಳ್ಳುತ್ತಾನೆ. ಆದರೆ ನೆಮ್ಮದಿಯೇ, ವಿಶ್ವಾಸವೇ ಆತನಲ್ಲಿ ಆ ಸೂಕ್ಷ್ಮತೆಯನ್ನು, ಹುಂಬತನವನ್ನು ಬೆಳೆಸುತ್ತದೆ ; ಸಂಕೋಚದಿಂದ ಪಡೆಯಬಹುದಾಗಿದ್ದ ಸೋಲಿಗಿಂತ ಯಶಸ್ಸಿನಿಂದ ಪಡೆದ ನೆಮ್ಮದಿ ಆತನನ್ನು ದುರಂತಮಯ ಸೋಲಿನತ್ತ ಒಯ್ಯುತ್ತದೆ.

- ಲಂಕೇಶ್

(ಟೀಕೆ ಟಿಪ್ಪಣಿ: ಐವತ್ತರ ಸೇತುವೆ ಮೇಲೆ)

ಲಂಕೇಶ್ : ಸಾಯುವತನಕ ಓದು

೦ ಡಾ. ರಹಮತ್ ತರೀಕೆರೆ

ಕನ್ನಡದ ದೊಡ್ಡ ಲೇಖಕರಾದ ಪಿ.ಲಂಕೇಶ್ ತೀರಿಕೊಂಡಾಗ ,ಅವರ ಸಾವಿನ ವರದಿಗಳಲ್ಲಿ ಒಂದು ವಿಶಿಷ್ಟ ಸಂಗತಿಯಿತ್ತು. ಅದೆಂದರೆ, ಅವರ ಹಾಸಿಗೆಯಲ್ಲಿ ಬಿ.ಎನ್.ಶಂಕರಭಟ್ಟರ 'ಕನ್ನಡ ಶಬ್ದ ರಚನೆ' ಪುಸ್ತಕ ಇತ್ತು ಎಂಬುದು. ಲಂಕೇಶ್ ಅವರು ಸಾಯುವ ತನಕ ಅಧ್ಯಯನ ಮಾಡುತ್ತಿದ್ದರು ಎಂಬುದಕ್ಕೆ ಇದೊಂದು ಸಾಕ್ಷಿಯಾಗಿತ್ತು. ಅವರು ಇಂಗ್ಲೀಶ್ ಸಾಹಿತ್ಯದ ವಿದ್ಯಾರ್ಥಿಯಾಗಿದ್ದವರು; ಅಪಾರ ಬರವಣಿಗೆ ಮಾಡುತ್ತಿದ್ದ ಲೇಖಕ ಹಾಗೂ ಪತ್ರಕರ್ತನಾಗಿದ್ದವರು; ಬೆಂಗಳೂರಿನ ಗಡಿಬಿಡಿಗಳ ಊರಿನಲ್ಲಿದ್ದವರು; ಇದರ ಜೊತೆಗೆ ಕೊನೆಯ ವರುಷಗಳಲ್ಲಿ ಅವರ ಒಂದು ಕಣ್ಣು ಇಂಗಿಹೋಗಿತ್ತು - ಇಷ್ಟು ಸಂಗತಿಗಳು ಒಬ್ಬ ಮನುಷ್ಯ ಪುಸ್ತಕ ಓದದೆ ಇರಲು ನೆಪಗಳೂ ಆಗಬಹುದಿತ್ತು. ಯಾಕೆಂದರೆ ನಮ್ಮಲ್ಲಿ ಲೇಖಕರು ಎಂದರೆ 'ಬರೆಯುವವರು ಮಾತ್ರ, ಮತ್ತೊಬ್ಬರು ಬರೆದುದನ್ನು ಓದಬೇಕಾದವರಲ್ಲ' ಎಂಬ ಗ್ರಹಿಕೆಯೂ ಇದ್ದಂತಿದೆ. ಪ್ರತಿಕ್ರಿಯಿಸದಿರುವ ಘನ ಗಾಂಭೀರ್ಯವಾಗಲೀ ಆಶೀರ್ವಾದ ಶೈಲಿಯಲ್ಲಿ ಪ್ರತಿಕ್ರಿಯಿಸುವುದಾಗಲೀ ಯಾವತ್ತೂ ಒಂದು ಸಾಹಿತ್ಯ ಸಂಸ್ಕೃತಿಯಲ್ಲಿ ಸಂವಾದ ಹುಟ್ಟಿಸುವುದಿಲ್ಲ. ಸಂವಾದಕ್ಕೆ ಎದುರಿನ ವ್ಯಕ್ತಿ ಅಥವಾ ಕೃತಿಯನ್ನು ಸಮಾನವಾಗಿ ಪರಿಗಣಿಸುವ ಗುಣವಿರಬೇಕು. ಕನ್ನಡದಲ್ಲಿ ತಮ್ಮ ಕಾಲದ ಎಲ್ಲ ತಲೆಮಾರಿನ ಬರೆಹಗಾರರು ಬರೆದುದನ್ನು ಗಂಭೀರವಾಗಿ ಓದಿ ಪ್ರತಿಕ್ರಿಯಿಸುತ್ತಿದ್ದ ಕೆಲವೇ ಕೆಲವು ಲೇಖಕರಲ್ಲಿ ಲಂಕೇಶ್ ಒಬ್ಬರಾಗಿದ್ದರು.

ಓದುವುದು ಬರೆಯುವುದು ಸಂಶೋಧಕರು ಅಧ್ಯಾಪಕರು ಆದವರಿಗೆ ವೃತ್ತಿ ಸಂಬಂಧಿಯಾದ ಮೂಲಭೂತ ಕೆಲಸ ಕೂಡ ಆಗದೆ, ಸಮಯ ಸಿಕ್ಕರೆ ಮಾಡುವ ಹವ್ಯಾಸದಂತಿರುವ ಹೊತ್ತಿನಲ್ಲಿ , ಲಂಕೇಶರ ಮೃತ್ಯುಶಯ್ಯೆಯಲ್ಲಿ ಸಿಕ್ಕ ಪುಸ್ತಕವು ಒಂದು ಮೌಲ್ಯದಂತೆ ಭಾಸವಾಗುತ್ತಿದೆ. ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ ಇದೇ ಶಂಕರಭಟ್ಟರ

'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ' ಎಂಬ ಪುಸ್ತಕ ಬಂದಾಗ, ಅದಕ್ಕೆ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿರುವ ಪ್ರಾಧ್ಯಾಪಕರು, ಭಾಷಾವಿಜ್ಞಾನಿಗಳು ಪ್ರತಿಕ್ರಿಯಿಸಿದಂತೆ ಕಾಣಲಿಲ್ಲ. ಆದರೆ ಲಂಕೇಶ್ ಅದನ್ನು ಓದಿ ದೀರ್ಘವಾಗಿ ಚರ್ಚಿಸಿದರು. ಲೇಖಕರೂ, ಪತ್ರಕರ್ತರೂ ಆಗಿದ್ದ ಅವರಿಗೆ ಕನ್ನಡ ಪುಸ್ತಕಗಳ ಓದು ಯಾವ ಬಗೆಯ ಆಂತರಿಕ ಅಗತ್ಯವಾಗಿತ್ತು ತಿಳಿಯದು. ಆದರೆ ಲಂಕೇಶ್ ವೃತ್ತಿಪರ ವಿಮರ್ಶಕರಿಗಿಂತಲೂ ಹೆಚ್ಚಿನ ಶ್ರದ್ಧೆಯಲ್ಲಿ ಪುಸ್ತಕಗಳನ್ನು ಓದಿ, ಪ್ರತಿಕ್ರಿಯಿಸುತ್ತಿದ್ದರು. ಅವರು ಕಳೆದ ಇಪ್ಪತ್ತು ವರ್ಷಗಳಿಂದ ಪತ್ರಿಕೆಗೆ ಬರೆದ ಅನೇಕ ಬಗೆಯ ಬರೆಹಗಳು ಅವರ ಹೊಸ ಓದಿನ ಫಲಗಳಾಗಿದ್ದುವು. ಅವುಗಳಲ್ಲಿ ಕುವೆಂಪು, ನೆರೂಡ, ಶೇಕ್ಸ್‌ಪಿಯರ್, ಮಾಸ್ತಿ, ತಕಳಿ, ಟಾಲ್‌ಸ್ಟಾಯ್, ವೈಕಂ, ಇಲಿಯಟ್, ಅಡಿಗ, ಪುತಿನ, ತೇಜಸ್ವಿ, ಡಿವಿಜಿ, ಆಲನಹಳ್ಳಿ, ನವರತ್ನ ರಾಮರಾವ್, ಬೇಂದ್ರೆ, ಬಿ. ಚಂದ್ರೇಗೌಡ - ಹೀಗೆ ಅನೇಕ ಕಾಲದ ಅನೇಕ ತಲೆಮಾರಿನ ಅನೇಕ ಭಾಷೆ - ದೇಶಗಳ ಲೇಖಕರಿರುತ್ತಿದ್ದರು. ಈ ಓದು ಏಕಕಾಲಕ್ಕೆ ಒಬ್ಬ ಓದುಗ ತನ್ನ ಖುಷಿ ಹಾಗೂ ಕುತೂಹಲಗಳಿಗಾಗಿ ಮಾಡುವ; ಒಬ್ಬ ಲೇಖಕ ಪರಂಪರೆಯಿಂದ ಪ್ರೇರಣೆ ಪಡೆಯಲು ಮಾಡುವ; ಹಾಗೂ ಒಬ್ಬ ವಿಮರ್ಶಕ ಪರಂಪರೆಯನ್ನು ಅರ್ಥಮಾಡಿಕೊಳ್ಳಲು ಮಾಡುವ- ಹೀಗೆ ಬಹುರೂಪೀ ಓದಾಗಿತ್ತು. ಲಂಕೇಶ್ ಕನ್ನಡದ ಪ್ರತಿಭಾಶಾಲಿ ವಿಮರ್ಶಕ ಕೂಡ ಆಗಿದ್ದರು. ತಟ್ಟನೆ ನೆನಪಿಗೆ ಬರುವುದು ಕಂಬಾರರ 'ಸಾವಿರದ ನೆರಳು' ಕವನ ಸಂಕಲನಕ್ಕೆ ಬರೆದ ಮುನ್ನುಡಿ. ಒಬ್ಬ ಲೇಖಕನ ನಿಜವಾದ ಶಕ್ತಿ ಎಲ್ಲಿ ಪ್ರಕಟವಾಗಿದೆ ಹಾಗೂ ದೌರ್ಬಲ್ಯ ಎಲ್ಲಿದೆ ಎಂಬುದನ್ನು, ಅಸ್ಪಷ್ಟತೆಗೆ ಎಡೆಯಿಲ್ಲದಂತೆ ಅವರು ಮುಟ್ಟಿ ತೋರಿಸ ಬಲ್ಲವರಾಗಿದ್ದರು.

ಓದು, ಚಳುವಳಿ, ಚಿಂತನೆ - ಯಾವುದೇ ಕ್ರಿಯೆ ಇರಲಿ. ಅದು ಭಾವುಕ ಆರಾಧಕತೆ ಹಾಗೂ ನಿರಾಕರಣೆಯ ಸಿನಿಕತೆಗಳ ಮನಸ್ಥಿತಿಯಲ್ಲಿದ್ದಾಗ, ಚರಿತ್ರೆ ಮತ್ತು ವರ್ತಮಾನಗಳ ಜತೆ ಫಲದಾಯಕ ಅನುಸಂಧಾನ ಮಾಡಲಾರದು; ಲಂಕೇಶ್ ಓದಿನ ಮಹತ್ವವಿರುವುದು ಅವರು ಕೊನೆಗೂ ತಪ್ಪದೆ ಎತ್ತುತ್ತಿದ್ದ ತಕರಾರುಗಳಲ್ಲಿ. ಪ್ರಾಚೀನವಾದ ಅಸ್ಪಷ್ಟವಾದ ಅಮೂರ್ತವಾದ ಭಾವುಕವಾದ ಸಂಗತಿಗಳ ಬಗ್ಗೆ ಯಾವತ್ತೂ ಅನುಮಾನ ಪಡುವ ಲಂಕೇಶರದು ಮೂಲತಃ ವೈಚಾರಿಕ ಮನಸ್ಸು; ಎಂತಲೇ ಅದು ಆಧುನಿಕತೆಯನ್ನು ಒಂದು ಮೌಲ್ಯವೆಂದು ತಕರಾರುಗಳಿಲ್ಲದೆ ಒಪ್ಪಿಬಿಡುತ್ತಿತ್ತು. ತನ್ನನ್ನು ಆವರಿಸಿಕೊಳ್ಳಬಲ್ಲ ಯಾವುದೇ ದೊಡ್ಡ ಪುಸ್ತಕ, ಲೇಖಕ, ಸಂಗತಿಯಿರಲಿ, ಕೊನೆಯಲ್ಲಿ 'ಆದರೆ' ಎಂದು ಶುರುವಾಗುತ್ತಿದ್ದ ಗಾಢ ಗುಮಾನಿಯ ಮಾತುಗಳು ಖಂಡಿತ ಇರುತ್ತಿದ್ದುವು. ಉದಾಹರಣೆಗೆ: 'ಮತ್ತೆ ಚೆಮ್ಮೀನ್ ಓದಿದಾಗ' ಎಂಬ ಅವರ ಟಿಪ್ಪಣಿ, ಹೀಗೆ ಕೊನೆಗೊಳ್ಳುತ್ತದೆ:

''ಕತೆ ನೀಟಾಗಿ ಮೋಹಕವಾಗಿದೆ. ತಾನು ಸೃಷ್ಟಿಸಿಕೊಂಡ ಪರಿಸರ, ನಂಬಿಕೆಯ ಮಿತಿಯಲ್ಲಿ ದುರಂತವನ್ನು ರೂಪಿಸುತ್ತದೆ. ಆದರೆ ನನ್ನ ಪ್ರಶ್ನೆ ಏನೆಂದರೆ, ಕಾದಂಬರಿಕಾರ ಶಿವಶಂಕರ ಪಿಳ್ಳೆ ಬೆಸ್ತರ ನಂಬಿಕೆಯ ಮಿತಿಯಲ್ಲಿಯೇ ಕತೆ ಮುಗಿಸುವುದು ಸರಿಯೇ? ಆಧುನಿಕ ಕತೆಗಾರ ಎದುರಿಸುವ ಮುಖ್ಯ ಪ್ರಶ್ನೆ ಇದಾದ್ದರಿಂದ, ನಾನು ಹೀಗೆ ಕೇಳುತ್ತಿದ್ದೇನೆ.

ಸಾಹಿತ್ಯ ಸಂವಾದ : ೫೪-೫೫

ಬೋದಿಲೇರನ ಸಖ/೭೨

ಹೆಂಡತಿ ಕೆಟ್ಟೊಡನೆ ಗಂಡ ನಾಶವಾಗುವ ನಂಬಿಕೆಯನ್ನು ನಾವು ಒಪ್ಪಿಕೊಂಡರೆ, ಬೆಸ್ತರ ಬಡತನ ಮೂಢನಂಬಿಕೆ ಶೋಷಿತ ಸ್ಥಿತಿಯನ್ನು ಒಪ್ಪಿಕೊಂಡಂತೆ ಆಗಲಿಲ್ಲವೆ? ಹಾಗಾದರೆ ಕಾದಂಬರಿಕಾರ ತಾನು ಕತೆಗಾಗಿ ಎತ್ತಿಕೊಂಡ ಪರಿಸರವನ್ನು ಹೇಗೆ ನಿಯಂತ್ರಿಸಬೇಕು? ಕರುತ್ತಮ್ಮ ಪರೀಕುಟ್ಟಿಯ ಪ್ರೇಮ ಮತ್ತು ಬದುಕು ನಿಸರ್ಗದ ಅವಾಂತರಗಳ, ಅನಿರೀಕ್ಷಿತ ಆಘಾತ, ಸಹಾಯಗಳ ಮಡಿಲಲ್ಲಿ ರೂಪುಗೊಳ್ಳದೆ ಬೆಸ್ತರ ಗುಂಪಿನ ನಂಬಿಕೆಗಳಲ್ಲಿ ಕಟ್ಟಿಹಾಕಿಕೊಳ್ಳುವುದು ವಿಚಿತ್ರವಾಗಿದೆ. 'ಚೆಮ್ಮೀನ್' ಎಷ್ಟು ಒಳ್ಳೆಯ ಕೃತಿಯೆಂದರೆ, ಅನೇಕಾನೇಕ ಪ್ರಶ್ನೆಗಳನ್ನು ಕೇಳಿಸಿಕೊಳ್ಳುತ್ತಲೇ ಮನವನ್ನು ಅಲ್ಲಾಡಿಸಿಬಿಡುತ್ತದೆ''.

ಲಂಕೇಶ್ ಇಂಗ್ಲೀಶಿನ ಮೂಲಕ ಜಗತ್ತಿನ ಅನೇಕ ಭಾಷೆಗಳ ಸಾಹಿತ್ಯದ ಓದುಗರಾಗಿದ್ದರು. ಅವರು ಬರೆಯುತ್ತಿದ್ದ ಟೀಕೆ ಟಿಪ್ಪಣಿಗಳು ಪಾಶ್ಚಾತ್ಯ ಸಾಹಿತ್ಯ ಕೃತಿಗಳ ಉಲ್ಲೇಖಗಳಿಂದ ತುಂಬಿಹೋಗಿರುತ್ತಿದ್ದವು. ಮುಖ್ಯ ಸಂಗತಿಯೆಂದರೆ, ಅವನ್ನು ಕನ್ನಡದ ಸಾಮಾನ್ಯ ಓದುಗರೂ ಕತೆ ಕಾದಂಬರಿಯಂತೆ ಓದುತ್ತಿದ್ದುದು. ಕಾರಣ, ಇವು ಪಾಶ್ಚಿಮಾತ್ಯ ಸಾಹಿತ್ಯದ ವಿಮರ್ಶೆ ಅನಿಸುತ್ತಿರಲಿಲ್ಲ. ಇಲಿಯಟ್ ಬಗೆಗೆ ಬರೆದ 'ಮತ್ಸ್ಯ ಕನ್ಯೆಯರು ನನಗಾಗಿ ಹಾಡುತ್ತಿಲ್ಲ' ಲೇಖನವನ್ನಾಗಲೀ, ಬೋದಿಲೇರನ 'ಪಾಪದ ಹೂಗಳು' ಸಂಕಲನಕ್ಕೆ ಬರೆದ ಮುನ್ನುಡಿಯನ್ನಾಗಲೀ ಗಮನಿಸಬಹುದು. ಪತ್ರಿಕೆಗಳಲ್ಲಿ ಅನೇಕ ನಿವೃತ್ತ ಇಂಗ್ಲೀಶ್ ಪ್ರಾಧ್ಯಾಪಕರು 'ನಿಮಗೆ ಇದು ಗೊತ್ತಿಲ್ಲ' ಎಂಬ ಗಣ್ಯತೆಯಲ್ಲಿ ಬರೆಯುತ್ತಿರುವ ಪಾಶ್ಯಾತ್ಯ ಸಾಹಿತಿಗಳ ಬಗೆಗಿನ ಕ್ಲಾಸ್ ನೋಟ್ಸ್‌ಗಳಂತಹ ಗೊಡ್ಡು ಬರೆಹಗಳಿಗೆ ಹೋಲಿಸಿದರೆ, ಈ ಟಿಪ್ಪಣಿಗಳ ಜೀವಂತಿಕೆ ಗೊತ್ತಾಗುತ್ತದೆ. ಇದಕ್ಕೆ ಸರಳ ಕಾರಣವೆಂದರೆ, ಲಂಕೇಶ್ ಓದನ್ನು ರಕ್ತಗತ ಮಾಡಿಕೊಂಡು ತಮ್ಮ ಸುತ್ತಮುತ್ತಲಿನ ಮಾತುಕತೆಯೆಂಬಂತೆ ಸೃಜನಶೀಲ ರೂಪಾಂತರ ಮಾಡುತ್ತಿದ್ದುದು; ಇದಕ್ಕೆ ಸಂವಾದಿಯಾಗಿ ನೆನಪಾಗುವುದು, ಬಿಎಂಶ್ರೀ ಅವರ 'ಇಂಗ್ಲಿಷ್ ಗೀತಗಳು' ಅಥವಾ ಕುವೆಂಪು ಅವರ 'ಬೊಮ್ಮನಹಳ್ಳಿಯ ಕಿಂದರ ಜೋಗಿ' ಯಂತಹ ಸೃಜನಶೀಲ ಕನ್ನಡೀಕರಣಗಳು. ಕನ್ನಡ ಸಾಹಿತ್ಯ ಚರಿತ್ರೆಯ ಉದ್ದಕ್ಕೂ ಕಾಣುವ ಸತ್ಯವೆಂದರೆ, ನಿಜವಾದ ಕನ್ನಡದ ಮನಸ್ಸು 'ಹೊರಗಿ'ನಿಂದ ಏನನ್ನಾದರೂ ಪಡೆಯಲಿ, ಅದನ್ನು ತನ್ನ ಜನಕ್ಕೆ ಭಾಷೆಗೆ ಸಂಸ್ಕೃತಿಗೆ ಹೇಗೆ ಅದರದನ್ನಾಗಿ ಮಾಡಿ ಸಲ್ಲಿಸಬೇಕು ಎಂಬ ದರ್ದಿನಲ್ಲಿ ಫಲದಾಯಕ ಅನುಸಂಧಾನಕ್ಕೆ ಹಾತೊರೆದಿರುವುದು. ಆದುದರಿಂದ ಅಪಾರವಾದ ಓದು - ಕಾವ್ಯ ಮೀಮಾಂಸೆಯ ಪರಿಭಾಷೆಯಲ್ಲಿ ಹೇಳುವುದಾದರೆ , ವ್ಯುತ್ಪತ್ತಿಯು- ತನಗೆ ತಾನೇ ಸೌಭಾಗ್ಯವಲ್ಲ. ಅದು ಯಾವ ರೂಪಾಂತರದ ಮರುಹುಟ್ಟಿನಲ್ಲಿ ತನ್ನ ಸಮುದಾಯಕ್ಕೆ ದೊರಕುತ್ತದೆ ಎಂಬುದು ಮುಖ್ಯ. ಲಂಕೇಶ್ ಸಾಯುವ ತನಕ ಮಾಡಿದ ಓದು ತನ್ನ ಸಮುದಾಯವನ್ನು ಎಜುಕೇಟ್ ಮಾಡುವ ಗುಣವನ್ನೂ ಹೊಂದಿತ್ತು ಎಂಬುದನ್ನು ಇಲ್ಲಿ ಪರಿಭಾವಿಸಬೇಕು.

ತನಗೆ ಇಷ್ಟವಾಗದುದನ್ನು ಅತ್ಯಂತ ಕಟುವಾಗಿ ನಿರಾಕರಿಸುತ್ತಿದ್ದ ಲಂಕೇಶ್, ಈ ಕಾರಣಕ್ಕೆ ಸಮಸಮವಾಗಿ ಕಡು ವಿರೋಧಿಗಳನ್ನೂ ಕಡು ಅಭಿಮಾನಿಗಳನ್ನೂ ಪಡೆದಿದ್ದ ಕನ್ನಡದ ಒಬ್ಬ ಖಾಯಂ ಭಿನ್ನಮತೀಯ ಚಿಂತಕನಾಗಿದ್ದರು; ಆದರೆ ತಮ್ಮ ಭಿನ್ನಾಭಿಪ್ರಾಯ

ದಾಖಲಿಸಲು ತೋರುತ್ತಿದ್ದಷ್ಟು ದಿಟ್ಟತನವನ್ನು ಅನ್ಯರ ಭಿನ್ನಾಭಿಪ್ರಾಯಗಳನ್ನು ಕೇಳಿಸಿಕೊಳ್ಳಲು ಸಂಯಮ ತೋರಿದರೆ ? ಅವರ ವ್ಯಕ್ತಿತ್ವದಲ್ಲಿ ಸಂವಾದಕ್ಕೆ ಬೇಕಾದಗುಣ ಕಡಿಮೆ ಇತ್ತೆನಿಸುತ್ತದೆ. ಇದಕ್ಕೆ ಕಾರಣ ಅವರ ವ್ಯಕ್ತಿತ್ವದಲ್ಲೇ ಇದ್ದ ಗೌಡಿಕೆಯೋ ಅಥವಾ ಪತ್ರಿಕೆ ಕೊಟ್ಟಿದ್ದ ಬಲಾಢ್ಯ ಶಕ್ತಿಯೋ ತಿಳಿಯದು. ಗಾಢ ಚರ್ಚೆಗೆ ಬೇಕಾದ ಪ್ರಶ್ನೆಗಳನ್ನು ಎತ್ತ ಬಲ್ಲವರಾಗಿದ್ದ ಅವರಿಗೆ ಸಂವಾದವನ್ನು ಮುಂದುವರೆಸುವುದಕ್ಕೆ ಬೇಕಾದ ಡೆಮಾಕ್ರಟಿಕ್ ತಾಳ್ಮೆ ಇರಲಿಲ್ಲ. (ಕಾರಂತರಲ್ಲಿಯೂ ಈ ಸಮಸ್ಯೆ ಇತ್ತು). ಕನ್ನಡದ ಅನೇಕ ಲೇಖಕರ , ಬುದ್ಧಿಜೀವಿಗಳ ಜತೆ ಅವರು ಮಾಡಿದ ಅರ್ಥಪೂರ್ಣ ಸಂವಾದಗಳನ್ನು ಮರೆಯದೆಯೂ ಹೇಳಬಹುದಾದರೆ, ಅವರು ಸಾಮಾನ್ಯವಾಗಿ ಭಿನ್ನಾಭಿಪ್ರಾಯಗಳನ್ನು 'ಮೂರ್ಖ' ಎಂದು ಜರೆದು ಪಕ್ಕಕ್ಕೆ ತಳ್ಳಿ ಬಿಡುತ್ತಿದ್ದರು. ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವ ಅವಕಾಶವೂ ಪತ್ರಿಕೆಯಲ್ಲಿ ಇರುತ್ತಿರಲಿಲ್ಲವಾಗಿ, ಈ ಪ್ರಶ್ನೆಗಳು ಜಗಳಗಳಾಗಿ, ದ್ವೇಷಗಳಾಗಿ ಮುಂದುವರೆಯುತ್ತಿದ್ದವು.

ಲಂಕೇಶ್ ಅವರ ಓದು ಹಾಗೂ ವಿಮರ್ಶೆಯಲ್ಲಿ ತೀವ್ರ ಮಮಕಾರ ಹಾಗೂ ಪೂರ್ವಾಗ್ರಹಗಳಿದ್ದವು. ನಿಜ. ಆದರೆ ಅವು 'ವಿಮರ್ಶಾಹೀನವಾಗಿದ್ದವು. ವಸ್ತುಸ್ಥಿತಿಗೆ ವಿರುದ್ಧವಾಗಿ ಕೊಂಡಾಟ ಮಾಡುತ್ತಿದ್ದವು' ಎಂದು ಅನಿಸುವುದಿಲ್ಲ. ಅವರ ತಕ್ಷಣದ ಪ್ರತಿಕ್ರಿಯೆಯಾಗಿ ಆಯಾ ವಾರವೇ 'ಪತ್ರಿಕೆ'ಯಲ್ಲಿ ಪ್ರಕಟವಾಗುತ್ತಿತ್ತು ಎಂಬುದು ಅದರ ಸ್ವರೂಪವನ್ನು ನಿರ್ಧರಿಸುತ್ತಿದ್ದ ಸಂಗತಿ ಕೂಡ ಆಗಿತ್ತು. ಹೀಗಾಗಿ ಅನೇಕ ಸಲ ಪ್ರತಿಕ್ರಿಯೆಗಳು ಆಳವಾದ ಚಿಂತನೆಯಿಂದ ಮೂಡಿಬರದೆ ಆ ಕ್ಷಣಕ್ಕೆ ಅನಿಸಿದ್ದನ್ನು ಹಂಚಿಕೊಳ್ಳುವ ಲಹರಿತನದಿಂದ ಕೂಡಿರುತ್ತಿದ್ದವು. ಅವುಗಳಲ್ಲಿ, ಸಾಮಾನ್ಯವಾಗಿ ಪತ್ರಿಕಾ ಬರಹಗಳಲ್ಲಿನ ತೀವ್ರತೆಗಾಗಿ ಮಾಡುವ ಚುಚ್ಚುವಿಕೆ, ಛೇಡಿಸುವಿಕೆ ಇರುತ್ತಿದ್ದವು. ಕುರ್ತಕೋಟಿಯವರ ಜಡವಾದ ಕನ್ನಡವನ್ನು ಸಮರ್ಥವಾಗಿಯೇ ತಮಾಷೆ ಮಾಡುತ್ತಿದ್ದ ಅವರಿಗೆ ಕುರ್ತಕೋಟಿ ವಿಮರ್ಶೆಯ ಒಳನೋಟಗಳನ್ನು ಹೇಳಲು ಸಾಧ್ಯವಾಗುತ್ತಿರಲಿಲ್ಲ.

ಲಂಕೇಶ್ ಎಷ್ಟೇ ವಿವಾದಕಾರ, ಪೂರ್ವಾಗ್ರಹಿ, ಯಜಮಾನಿಕೆ ದನಿಯ ಟೀಕಾಕಾರ ಆಗಿದ್ದರೂ ೨೦ನೇ ಶತಮಾನದ ಕರ್ನಾಟಕ ಸೃಷ್ಟಿಸಿದ ಬಹುಮುಖ್ಯ ಸಾಂಸ್ಕೃತಿಕ ವ್ಯಕ್ತಿತ್ವಗಳಲ್ಲಿ ಒಂದು. ಅವರು ತಮ್ಮ ಪತ್ರಿಕೆಯ ಮೂಲಕ ಅನೇಕ ಪ್ರಕರಣಗಳಲ್ಲಿ ತಳೆದ ನಿಲುವು. (ಉದಾ: ಕೊಲ್ಲಿ ಯುದ್ಧದಲ್ಲಿ ಅಮೆರಿಕ ಪರವಾಗಿ ನಿಂತಿದ್ದು; ಜಾಗೃತ ಸಾಹಿತ್ಯ ಸಮ್ಮೇಳನದಲ್ಲಿ ತಾಳಿದ ಎಲೈಟ್ ನಿಲುವು; ಬಂಡವಾಳವಾದದ ಕ್ರೌರ್ಯಗಳನ್ನು ಲೆಕ್ಕಿಸದೆ ಆಧುನಿಕತೆಯ ಮೆಚ್ಚುಗೆ; ಕಮ್ಯುನಿಸಂ ಬಗೆಗಿನ ಪೂರ್ವಾಗ್ರಹಗಳು. ಇತ್ಯಾದಿ) ಇವು ಉಂಟುಮಾಡಿದ ಪರಿಣಾಮ ಈ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳು ಇವೆ. ಆದರೆ ಅವರ ಪತ್ರಿಕೆಯು ಕಳೆದ ೨೦ ವರುಷಗಳಲ್ಲಿ ನಿರ್ವಹಿಸಿದ ಪಾತ್ರವು ಚರಿತ್ರೆಯಲ್ಲಿ ದಾಖಲಾಗದೆ ಹೋಗುವಂತಿಲ್ಲ; ತನ್ನ ಕಾಲದ ಎಲ್ಲ ಯಜಮಾನಿಕೆ ಬೂಟಾಟಿಕೆ ಓಲೈಸುವಿಕೆಗಳ ವಿರುದ್ಧ ಬಹುದೊಡ್ಡ ನೈತಿಕ ಶಕ್ತಿಯಾಗಿದ್ದ ಲಂಕೇಶ್, ಸಾಯುವ ದಿನ ಬರೆದ ಎರಡು ಬರೆಹಗಳ ಸ್ವರೂಪವನ್ನು ಗಮನಿಸಬೇಕು. ಒಂದರಲ್ಲಿ ಅಧಿಕಾರಸ್ಥರ ವಿರುದ್ಧದ ಅವರ ಟೀಕೆಯಿತ್ತು;

ಮತ್ತು ಇನ್ನೊಂದರಲ್ಲಿ ತಮ್ಮ ಪ್ರೀತಿಯ ಚಿಂತಕರಾದ ಜಿ.ರಾಜಶೇಖರ್ ಅವರ ಪುಸ್ತಕ ವಿಮರ್ಶೆಯ ಒಳಗಿನ ಒಳನೋಟ ಮತ್ತು ಸಾಂಸ್ಕೃತಿಕ ಕಾಳಜಿಯ ಬಗ್ಗೆ ಮೆಚ್ಚುಗೆಯಿತ್ತು. ಆದರ್ಶ ಪುಸ್ತಕ ವಿಮರ್ಶೆಯೊಂದು ಹೇಗಿರಬೇಕು ಎಂಬ ಬಗ್ಗೆ ಮತ್ತೆ ಮತ್ತೆ ಬರೆಯುತ್ತಿದ್ದ ಲಂಕೇಶ್ ಸ್ವತಃ ಪುಸ್ತಕ ವಿಮರ್ಶೆ ಮಾಡುತ್ತ ತಾವು ಹೇಳಿದ ಆದರ್ಶವನ್ನು ರುಜುವಾತು ಪಡಿಸಲು ಯತ್ನಿಸುತ್ತಿದ್ದರು. ಅದನ್ನು ಸಾಧಿಸಲು ಆಗದೆ ಸೋಲುತ್ತಿದ್ದರು ಕೂಡ. ಅವರು ಪ್ರಾಸಂಗಿಕವಾಗಿ ಬರೆಯುತ್ತಿದ್ದ ಟಿಪ್ಪಣಿಗಳು ಒಳನೋಟ, ಚಿಂತನೆಗಳಿಂದ ತುಂಬಿರುತ್ತಿದ್ದವು; ಕರ್ನಾಟಕದ ಬಹುದೊಡ್ಡ ಸಂಖ್ಯೆಯ ಓದುಗರ ಜತೆ ಸಂಬಂಧವಿಟ್ಟುಕೊಂಡಿದ್ದ ಅವರ ಓದು ಮತ್ತು ವಿಮರ್ಶೆಗಳು, ಪೂರ್ವಾಗ್ರಹ , ಜಗಳ, ಪ್ರೀತಿ, ಚಿಂತನೆಗಳ ಭಾಗವಾಗಿದ್ದವು. ಎಂತಲೇ ೨೦ ವರುಷ ಬರೆದರೂ ಅವು ಹಳತಾಗಲಿಲ್ಲ.

ಯಾವಾಗಲೂ ಬರವಣಿಗೆಯ ಜೀವಂತಿಕೆಯ ಬಗ್ಗೆ ಚಿಂತಿಸುತ್ತಿದ್ದ ಲಂಕೇಶ್ ನಮ್ಮನ್ನು ಜೀವಂತವಾಗಿಸಬಲ್ಲ ಓದುವ ಮತ್ತು ಬರೆಯುವ ಕ್ರಿಯೆಯ ನಿಗೂಢತೆಯನ್ನು 'ಯಕ್ಷಿಣಿ 'ಯನ್ನು ಮತ್ತೆ ಪರಿಭಾವಿಸುತ್ತಿದ್ದರು. ಈ ನಾಡು ಬರುವ ದಿನಗಳಲ್ಲಿ ಏನು ಮಾಡಿದರೆ ಸುಖಸಮೃದ್ಧಿಯ ಬೀಡಾಗುತ್ತದೆ ಎಂಬ ಕನಸಿನ ಭಾಗವಾಗಿಯೇ ಅವರ ಓದು ಬರೆಹಗಳು ಇದ್ದವು. ಕನ್ನಡದ ಸಾಧನೆಯೆಂದು ಕರೆಯಲಾಗುವ ಅವರ ಗದ್ಯದ ಜೀವಂತಿಕೆಗೂ ಈ ಕನಸುಗಾರಿಕೆಗೂ ಸಂಬಂಧವಿದೆ. ಅವರ ಮೃತ್ಯುಶಯ್ಯೆಯಲ್ಲಿ ಸಿಕ್ಕ ಶಂಕರಭಟ್ಟರ ಪುಸ್ತಕವು ,ಕನ್ನಡಕ್ಕೆ ಅದರದೇ ಸ್ವಂತಿಕೆಯಿದೆ ಎಂಬ ವಾದಗಳನ್ನು ಒಳಗೊಂಡಿತ್ತು ಎಂಬುದು ಸಾಂಕೇತಿಕವಾಗಿದೆ.

ಡನ್ ಕವಿಯ ಬಗ್ಗೆ ನಾನು ಹೇಳುತ್ತಿರುವುದಕ್ಕೆ ಇನ್ನೊಂದು ಉದ್ದೇಶವಿದೆ. ದಿನನಿತ್ಯದ ನಮ್ಮ ಕಲಿಕೆಯ ,ನಮ್ಮ ಆಫೀಸು ,ಅಂಗಡಿ ,ಕಾರ್ಖಾನೆ ,ಶಾಲೆಗಳ ಭಾಷೆಯನ್ನು ಸಾಹಿತ್ಯದಲ್ಲಿ, ಅದರಲ್ಲೂ ಕಾವ್ಯದಲ್ಲಿ ಬಳಸುವ ಚಾತುರ್ಯವಿಲ್ಲದಿದ್ದರೆ ನಮ್ಮ ಭಾಷೆ ಬಡವಾಗುತ್ತದೆ .ಆದರ್ಶದ ಪ್ರೇಮವನ್ನು ಸುಂದರ ಭಾಷೆಯಲ್ಲಿ ಹೇಳುತ್ತ ,ನಿತ್ಯದ ಕೆಲಸಗಳನ್ನು ಆಡುಭಾಷೆಯಲ್ಲಿ ನಡೆಸುತ್ತಾ ಹೋಗುವುದರಿಂದಲೇ ನಮ್ಮ ಭಾಷೆ ಬಸವಳಿಯುತ್ತ ಹೋಗಿ ನಮ್ಮ ಪ್ರೇಮ ಅಥವಾ ಭಕ್ತಿ ಕೂಡ ದಾರಿ ತಪ್ಪತೊಡಗುತ್ತದೆ. ಹೆಣ್ಣು ಗಂಡಿನ ಸಮಾನತೆಯ ಬಗ್ಗೆ ಭಾಷಣ ಬಿಗಿಯುವ ಕವಿಯೇ ಹೆಣ್ಣನ್ನು ಹೂವಿಗೆ ಹೋಲಿಸುತ್ತ ದುಂಬಿಯ ಭಾಷೆಯಲ್ಲಿ ಬರೆಯುತ್ತ ಅಸಮಾನತೆಯನ್ನು ಹೆಚ್ಚಿಸುತ್ತಾನೆ ;ತನ್ನ ಮಾತಿಗೆ ತಾನೇ ಬೇಡಿ ಹಾಕಿಕೊಳ್ಳುತ್ತಾನೆ.

ಬೇಡಿ ಹಾಕಿಕೊಂಡವರ ಭಾಷೆ ಸೊರಗಿರುತ್ತದೆ; ಪ್ರೇಮ ಅವಾಸ್ತವವಾಗಿರುತ್ತದೆ.

- ಲಂಕೇಶ್

(ಟೀಕೆ ಟಿಪ್ಪಣಿ: ನಲ್ಲ ನಲ್ಲೆಯರ ನಡುವೆ)

ಹೊಸ ಚೇತನ ನೀಡಿದ 'ಪತ್ರಿಕೆ'

○ ಬಿ.ಎ.ವೀರಭದ್ರಪ್ಪ

ಪತ್ರಿಕೆಯ ಆರಂಭಕಾಲದಲ್ಲಿ ಅದರಲ್ಲಿ ಪ್ರಕಟವಾದ ಒಂದು ಲೇಖನಕ್ಕೆ ಪ್ರತಿಕ್ರಿಯೆಯಾಗಿ ನಾನು ಬರೆದ ಒಂದು ಪತ್ರ 'ಮೂಢರಿಗೆ ಮೂರು ಪ್ರಶ್ನೆ' ಎಂಬ ಶೀರ್ಷಿಕೆಯ ಕೆಳಗೆ ಅಚ್ಚಾದಾಗ ನನಗೇ ಆಶ್ಚರ್ಯವಾಯಿತು. ಅನೇಕರು ಪತ್ರದ ಒಕ್ಕಣಿಕೆ ಮತ್ತು ತರ್ಕಗಳನ್ನು ಮೆಚ್ಚಿಕೊಂಡರು. ಹುರುಪುಗೊಂಡ ನಾನು ಕೆಲವು ವೈಚಾರಿಕ ಬರಹಗಳನ್ನು ಅನುಮಾನದಿಂದಲೇ ಪತ್ರಿಕೆಗೆ ಕಳುಹಿಸಿದೆ. ಅವೆಲ್ಲಾ ನಮ್ಮ ಧರ್ಮ ಗ್ರಂಥಗಳಲ್ಲಿರುವ ವಿರೋಧಾಭಾಸ, ಶೋಷಣೆ ಮತ್ತು ಅಸಮಾನತೆಗೆ ಸಂಬಂಧ ಪಟ್ಟವಾಗಿದ್ದವು. ಅವು ಸಹ ಕ್ರಮವಾಗಿ ಪತ್ರಿಕೆಯಲ್ಲಿ ಪ್ರಕಟವಾದುವು.

ಹಿಂದೆ ನಾನು ಹಲವು ಸಾರಿ ಇಂತಹ ಲೇಖನಗಳನ್ನು ಬೇರೆ ಪತ್ರಿಕೆಗಳಿಗೆ ಕಳಿಸಿದ್ದಾಗ ಅವು ತಿರಸ್ಕಾರವಾಗುತ್ತಿದ್ದುವು. ನನ್ನ ವಿಚಾರಗಳನ್ನು ಪ್ರಕಟಿಸಲು ತಕ್ಕುದಾದ ಒಂದು ಪತ್ರಿಕೆ ಹುಟ್ಟಿಕೊಂಡಿದೆ ಎಂದು ಆಗ ನನಗೆ ಖಚಿತವಾಯಿತು.

ಜಿಲ್ಲೆಯ ರಾಜಕೀಯ, ಸಾಮಾಜಿಕ ಬೆಳವಣಿಗೆಗಳು ಹರಿಹರ ಪಾಲಿಫೈಬರ್ಸ್‌ನಿಂದ ಉಂಟಾಗುತ್ತಿರುವ ಪರಿಸರ ಮಾಲಿನ್ಯ ಇತ್ಯಾದಿಗಳ ಬಗ್ಗೆ ಬರೆಯತೊಡಗಿದೆ. ಸಂಪಾದಕರ ಅಪ್ಪಣೆಯ ಮೇರೆಗೆ ದಾವಣಗೆರೆ ಜನರ ಜೀವನ ವಿಧಾನದ ಬಗ್ಗೆ ನಾನು ಬರೆದ ಲೇಖನ ಎಲ್ಲಾ ವರ್ಗದ ಜನರ ಗಮನ ಸೆಳೆಯಿತು. ಸಿಟಿಬಸ್‌ನಲ್ಲಿ ಟೀ ಅಂಗಡಿಗಳಲ್ಲಿ ಆ ಲೇಖನದ ಬಗ್ಗೆ ಜನರು ಖುಷಿಯಿಂದ ಮಾತಾಡುವುದನ್ನು ನಾನೇ ಕೇಳಿದೆ.

ಪತ್ರಿಕೆಯಲ್ಲಿ ಬರೆಯಲು ಆರಂಭಿಸಿ ಸುಮಾರು ಒಂದು ವರ್ಷ ಆಗುವವರೆಗೆ ನಾನು ಸಂಪಾದಕರನ್ನು ಭೇಟಿಯಾಗುವ ಅವಕಾಶ ಬಂದಿರಲಿಲ್ಲ. ಒಮ್ಮೆ ನಾನು ಬೆಂಗಳೂರಿನಲ್ಲಿ ಇದ್ದಾಗ ಲಂಕೇಶರಿಗೂ ನನಗೂ ಸಾಮಾನ್ಯ ಗೆಳೆಯರಾದ ಪ್ರೊ. ಎನ್. ಚಿಕ್ಕಣ್ಣನವರು ಫೋನ್

ಮಾಡಿ ನನ್ನನ್ನು ಪತ್ರಿಕೆಯ ಕಛೇರಿಗೆ ಕರೆದುಕೊಂಡು ಹೋದರು. ಈ ಮೊದಲು ಸಭೆ ಸಮಾರಂಭಗಳಲ್ಲಿ ಔಪಚಾರಿಕವಾಗಿ ಮಾತ್ರ ಭೇಟಿಯಾಗಿದ್ದ ಲಂಕೇಶ್‌ರನ್ನು ಅಂದು ಪ್ರಥಮಬಾರಿಗೆ ಆತ್ಮೀಯವಾಗಿ ಭೇಟಿಯಾದೆ.

ಪತ್ರಿಕೆಗೆ ಬರೆಯಲು ತೊಡಗಿದಮೇಲೆ ನಾನು ಒಂದು ಬಗೆಯ ಹೊಸ ಚೈತನ್ಯ ಪಡೆದೆ. ಸೋಮಾರಿತನದಿಂದ ವ್ಯರ್ಥಗೊಳಿಸುತ್ತಿದ್ದ ನನ್ನ ಬಿಡುವಿನ ವೇಳೆಯನ್ನು ನನ್ನ ಹೊಸ ಹವ್ಯಾಸಕ್ಕಾಗಿ ವಿನಿಯೋಗಿಸಿದೆ. ನನ್ನ ಸುತ್ತಲಿನ ಘಟನೆ ಮತ್ತು ಸಮಸ್ಯೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುವುದನ್ನು ಕಲಿತೆ. ಸಂಗ್ರಹಿಸಿದ ಮಾಹಿತಿಯಿಂದ ಸತ್ಯಾಂಶ ಮತ್ತು ಅಭಿಪ್ರಾಯಗಳನ್ನು ಬೇರ್ಪಡಿಸುವುದನ್ನು ಕಲಿತೆ. ಮೊದಲು ದೊರೆತ ಮಾಹಿತಿಯನ್ನು ಮೇಲಿಂದ ಮೇಲೆ ಮರುಪರೀಕ್ಷೆಗೆ ಒಳಪಡಿಸುವುದನ್ನು ರೂಢಿಸಿಕೊಂಡೆ.

ಬುದ್ಧಿ ಮಾಂದ್ಯದಿಂದ ಅರೆಬತ್ತಲೆಯಾಗಿ ಅಲೆಯುತ್ತಿದ್ದ ಒಬ್ಬ ತರುಣಿಯ ಬಗ್ಗೆ ಪತ್ರಿಕೆಯಲ್ಲಿ ಬರೆದ ಒಂದೇ ವಾರದೊಳಗೆ ಆಕೆಯನ್ನು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ಕೊಡಲಾಯಿತು ಎಂದು ತಿಳಿದುಬಂತು. ಪಾಲಿಫೈಬರ್ಸ್‌ನ ಮಾಲಿನ್ಯದ ಬಗ್ಗೆ ಬರೆದ ನಂತರ ತುಂಗಭದ್ರಾ ತೀರದ ಹಳ್ಳಿಗಳಲ್ಲಿ ಪರಿಸರ ಸಮಿತಿಗಳು ಹುಟ್ಟಿಕೊಂಡು ಕ್ರಿಯಾಶೀಲವಾದವು. ಅವರ ಚಳುವಳಿಯಲ್ಲಿ ಪತ್ರಿಕೆಯ ಲೇಖನಗಳನ್ನು ಇತರ ಸಾಹಿತ್ಯದೊಡನೆ ಪ್ರದರ್ಶನಕ್ಕೆ ಇಡಲಾಗುತ್ತಿತ್ತು. ಚಿತ್ರ ವ್ಯವಹಾರದ ಹಿಂದಿನ ವಂಚನೆಗಳ ಬಗ್ಗೆ ಸಾರ್ವಜನಿಕರು ಜಾಗೃತರಾದರು..

ನಾನು ಬರೆದ ಲೇಖನಗಳ ಬಗ್ಗೆ ಓದುಗರ ಅಭಿಪ್ರಾಯ ತಿಳಿಯುವ ಕಾತರ ನನಗಿದ್ದರೂ, ಕೇಳಲು ಸಂಕೋಚ. ಓದುಗರೇ ನನ್ನ ಲೇಖನಗಳ ಬಗ್ಗೆ ಪ್ರಸ್ತಾಪಿಸಿದಾಗ ಮಾತ್ರ ಅವರ ಅಭಿಪ್ರಾಯ ಟೀಕೆಗಳನ್ನು ನಾನು ಸ್ವಾಗತಿಸುತ್ತೇನೆ. ದೂರದ ಊರುಗಳಲ್ಲಿ, ಸಭೆ ಸಮಾರಂಭಗಳಲ್ಲಿ ಹೊಸದಾಗಿ ಪರಿಚಿತರಾದ ಅನೇಕರು ನನ್ನ ಲೇಖನಗಳ ಬಗ್ಗೆ ಮೆಚ್ಚುಗೆಯ ಪ್ರಸ್ತಾಪ ಮಾಡಿದಾಗ ನಾನು ಬರೆಯುವುದು ವ್ಯರ್ಥವಲ್ಲ ಎಂದು ಅನ್ನಿಸುತ್ತದೆ.

ನನ್ನ ಲೇಖನಗಳಲ್ಲಿ ಹೆಚ್ಚು ವಿವಾದಕ್ಕೆ ಒಳಗಾದ ಬರಹ ಅಶ್ವಮೇಧವನ್ನು ಕುರಿತದ್ದು. ಅನೇಕರಿಗೆ ಅದು ಆಘಾತವನ್ನುಂಟುಮಾಡಿದೆ. ಕೆಲವರಂತೂ ಅದನ್ನು ನಿಜವೆಂದು ನಂಬಲೂ ಸಿದ್ಧರಿಲ್ಲ ; ಯಾರೋ ಕಿಡಿಗೇಡಿಗಳು, ಯಜುರ್ವೇದದಲ್ಲಿ ಆ ಭಾಗಗಳನ್ನು ಸೇರಿಸಬಹುದೆಂದು ಅವರು ಭಾವಿಸುತ್ತಾರೆ. ಮತ್ತೆ ಕೆಲವರು ನಾನು ಉಲ್ಲೇಖಿಸಿದ ಮಂತ್ರಗಳಿಗೆ ಅರ್ಥವೇ ಬೇರೆ ಇದೆ, ನಾನು ಆಧರಿಸಿರುವ ಮಹೀಧರ ಒಬ್ಬ ವಾಮವಾದಿ ಎಂದು ವಾದಿಸುತ್ತಾರೆ.

ಒಬ್ಬ ಓದುಗ 'ಅಜ್ಞಾನಿ, ಅಶ್ಲೀಲ, ತಪ್ಪುಗ್ರಹಿಕೆಯ ವಿಮರ್ಶಕ ಬಿ.ವಿ. ವೀರಭದ್ರಪ್ಪನಿಗೆ -ನೀನು ಬರೆದ ಅಶ್ವಮೇಧ ಯಜ್ಞ ಲೇಖನದಲ್ಲಿ ಬರೆದ ಅಶ್ಲೀಲ ವಿಮರ್ಶೆಯನ್ನು ಓದಿದ ಮೇಲೆ ಪ್ರತಿಯೊಬ್ಬ ವೈದಿಕ ಹಿಂದು ಭಾರತೀಯನಿಗೆ ಆಕ್ರೋಶವುಂಟಾಗಿ ನಿನ್ನ ಅಪವಿತ್ರ ನಾಲಗೆ ಮೈ ಕೈಗಳಿಗೆ ಒಂದು ನೂರು ಚಾಟಿ ಏಟು ಕೊಟ್ಟು ಕ್ರೂರಶಿಕ್ಷೆ ವಿಧಿಸಬೇಕೆನಿಸುತ್ತದೆ' ಎಂದು ಬರೆದರು. ಮತ್ತೊಬ್ಬ ಓದುಗ 'ಯಾವ

ವೇದಗಳನ್ನು ನಾವು ಹಿಂದೂಗಳು ಪವಿತ್ರವೆಂದೂ ಮೋಕ್ಷಸಾಧನೆಗೆ ಮಾರ್ಗವೆಂದು ಭಾವಿಸುವೆವೋ ಅವು ಅನೇಕ ಅಸಹ್ಯ ಸಂಗತಿಗಳ ಆಗರವಾಗಿರುವುದು ನಿಜಕ್ಕೂ ಖೇದನೀಯ. ಅವು ಯಾರಿಗೂ ಅರ್ಥವಾಗದ ಭಾಷೆಯಲ್ಲಿರುವುದರಿಂದಲೇ ಇನ್ನೂ ಪವಿತ್ರವಾಗಿ ಉಳಿದಿವೆ' ಎಂದು ಅಭಿಪ್ರಾಯ ಪಟ್ಟರು.

ಸ್ವಾಮಿ ದಯಾನಂದ ಸರಸ್ವತಿಯಂತಹ ಆಧುನಿಕರು ವೇದಮಂತ್ರಗಳಿಗೆ ದಿವ್ಯವೂ ಭವ್ಯವೂ ಆದ ಅರ್ಥಗಳನ್ನು ಕಲ್ಪಿಸಿರುವುದು ನಿಜ. ಆದರೆ ವೈದಿಕ ಸಾಹಿತ್ಯ ಚರಿತ್ರೆಯಲ್ಲಿ ಉವಟ ಮತ್ತು ಮಹೀಧರರನ್ನು ಶುಕ್ಲಯಜುರ್ವೇದದ ಅಗ್ರಮಾನ್ಯ ಭಾಷ್ಯಕಾರರೆಂದು ಪರಿಗಣಿಸಲಾಗಿದೆಯೇ ಹೊರತು ಸ್ವಾಮಿ ದಯಾನಂದ ಸರಸ್ವತಿ ಅವರ ಹೆಸರು ಭಾಷ್ಯಕಾರರ ಪಟ್ಟಿಯಲ್ಲಿ ಕಂಡುಬರುವುದಿಲ್ಲ. ವಿವರಗಳಿಗೆ ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾದ ವೇದಾಂತ ವಿದ್ವಾನ್ ಎನ್.ಎಸ್. ಅನಂತರಂಗಾಚಾರ್ ಅವರ ವೈದಿಕ ಸಾಹಿತ್ಯ ಚರಿತ್ರೆ (ಪುಟ ೫೫-೬)ಯನ್ನು ಪರಿಶೀಲಿಸಬಹುದು.

ಇದಾದ ಸುಮಾರು ಏಳು ತಿಂಗಳುಗಳ ನಂತರ ಕರ್ನಾಟಕ ಸರ್ಕಾರದ ಕಾಲೇಜು ಶಿಕ್ಷಣ ನಿರ್ದೇಶಕರಿಂದ ನಾನು ಕೆಲಸ ಮಾಡುತ್ತಿರುವ ಕಾಲೇಜಿನ ಪ್ರಿನ್ಸಿಪಾಲರ ಮುಖಾಂತರ ನನಗೆ ಒಂದು ಸೂಚನೆ ಬಂತು. ಅದರಲ್ಲಿ ನಾನು ಲಂಕೇಶ್ ಪತ್ರಿಕೆಯಲ್ಲಿ ವೇದಗಳ ಬಗ್ಗೆ ಕೀಳುಭಾವನೆ ಬರುವಂತೆ ಲೇಖನವೊಂದನ್ನು ಬರೆದಿರುವುದಾಗಿಯೂ ಅದು ಭಾರತೀಯ ದಂಡಸಂಹಿತೆಯ ೨೯೫-ಎ ವಿಧಿಯಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗುತ್ತದೆಂದೂ ರಾಯಚೂರಿನ ವಕೀಲರೂ ಆರ್ಯ ಸಮಾಜದ ಅಧ್ಯಕ್ಷರೂ ಆದ ಶ್ರೀ ರಘೋತ್ತಮರಾವ್ ಅವರು ದೂರು ನೀಡುವುದಾಗಿಯೂ, ಈ ಬಗ್ಗೆ ನನ್ನ ವಿರುದ್ಧ ಶಿಸ್ತಿನ ಕ್ರಮವನ್ನು ಏಕೆ ಕೈಗೊಳ್ಳಬಾರದು ಎಂಬುದಕ್ಕೆ ಒಂದು ವಾರದೊಳಗೆ ನನ್ನ ಸಮಜಾಯಿಷಿಯನ್ನು ಪ್ರಿನ್ಸಿಪಾಲರ ಮೂಲಕ ಕಳಿಸಿಕೊಡತಕ್ಕದ್ದು ಎಂದು ತಿಳಿಸಲಾಗಿತ್ತು.

ರಾಯಚೂರಿನ ರಘೋತ್ತಮರಾವ್ ಅವರ ದೂರು ಮತ್ತು ಕಾಲೇಜು ಶಿಕ್ಷಣ ನಿರ್ದೇಶಕರ ನೋಟೀಸ್‌ನಿಂದ ನನಗಿಂತ ನಮ್ಮ ಕಾಲೇಜಿನ ಪ್ರಿನ್ಸಿಪಾಲರಿಗೆ ಮತ್ತು ಆಡಳಿತ ಮಂಡಳಿಗೆ ಹೆಚ್ಚು ಗಾಬರಿಯಾಯಿತು. ಅದರಲ್ಲಿ ಗಾಬರಿಪಡುವಂತಹುದೇನೂ ಇಲ್ಲ. ಅದನ್ನು ನಾನು ಎದುರಿಸಬಲ್ಲೆ ಎಂದು ಅವರಿಗೆ ಸಮಾಧಾನ ಹೇಳಿದೆ. ಇದ್ದದ್ದನ್ನು ಇದ್ದಹಾಗೆ ಬರೆದಿದ್ದಾರೆ; ಕಾನೂನಿನ ದೃಷ್ಟಿಯಿಂದ ಅಪರಾಧವಾದದ್ದೇನೂ ಅದರಲ್ಲಿ ಇಲ್ಲ ಎಂದು ಕಾನೂನಿನ ಕಾಲೇಜಿನ ಪ್ರಿನ್ಸಿಪಾಲರು ಆಡಳಿತ ಮಂಡಳಿಯ ಕಾರ್ಯದರ್ಶಿಗಳಿಗೆ ತಿಳಿಸಿದರು. ಮರುದಿನವೇ ನಾನೊಂದು ಸಮಜಾಯಿಷಿ ಪತ್ರ ಬರೆದು ಪ್ರಿನ್ಸಿಪಾಲರ ಮೂಲಕ ಕಾಲೇಜು ಶಿಕ್ಷಣದ ನಿರ್ದೇಶಕರಿಗೆ ಕಳಿಸಿದೆ.

ನನ್ನ ಸಮಜಾಯಿಷಿಯಲ್ಲಿ ಹೀಗೆ ಬರೆದೆ:

ಮೇಲೆ ಹೇಳಲಾದ 'ಒಂದು ಅಶ್ವಮೇಧ' ಎಂಬ ಲೇಖನದಲ್ಲಿ ಎರಡು ಭಾಗಗಳಿವೆ. ಮೊದಲ ಭಾಗದಲ್ಲಿ ಮೇ ೮೫ರಲ್ಲಿ ಹೈದರಾಬಾದಿನಲ್ಲಿ ನಡೆದ ಒಂದು ಅಶ್ವಮೇಧ ಯಜ್ಞದ ಯಥಾವತ್ತಾದ ವರ್ಣನೆ ಇದೆ. ಎರಡನೆಯ ಭಾಗದಲ್ಲಿ ಅಶ್ವಮೇಧಯಜ್ಞ ಸಮಯದಲ್ಲಿ

ಜಪಿಸುವ ಮಂತ್ರಗಳ ಅರ್ಥವನ್ನು ಮಹೀಧರಾಚಾರ್ಯರ 'ವೇದದೀಪ' ಭಾಷ್ಯದಿಂದ ಆರಿಸಿ ಕನ್ನಡಕ್ಕೆ ಅನುವಾದಿಸಿರುತ್ತೇನೆ. (See pages 716-21,Vajasaneyi Samhita with the commentary of Mahidhara,Ed.by Albert Weber,Pub.by the Chokhamba ,Sanskrit SeriesOffice, Varanasi-1,1972). ಈ ಎರಡು ಭಾಗಗಳಲ್ಲಿ ಯಾವುದೂ ಐ.ಪಿ.ಸಿ. ೨೯೫-ಎ ವಿಧಿಯ ಪ್ರಕಾರ ಅಪರಾಧವಾಗುವುದಿಲ್ಲ.

ಏಕೆಂದರೆ ಮೊದಲನೆಯ ಭಾಗದಲ್ಲಿ ನಡೆದ ಸಂಗತಿಯನ್ನು ನಡೆದಂತೆ ವಿವರಿಸಲಾಗಿದೆ. ಎರಡನೆಯ ಭಾಗದಲ್ಲಿ ಪವಿತ್ರವೆಂದು ಭಾವಿಸಲಾದ 'ವೇದ ದೀಪ ' ಭಾಷ್ಯದ ಕೆಲವು ಭಾಗಗಳನ್ನು ಕನ್ನಡಕ್ಕೆ ಅನುವಾದ ಮಾಡಲಾಗಿದೆ. ಈ ಲೇಖನದ ಯಾವುದೇ ಭಾಗದಲ್ಲಿ ಅಥವಾ ಸಾಲಿನಲ್ಲಿ ಐ. ಪಿ. ಸಿ. ೨೯೫-ಎ ಪ್ರಕಾರ ಶಿಕ್ಷಾರ್ಹವಾದಂತಹ ಅಂಶಗಳು ಇಲ್ಲವೆಂದು ನಾನು ಸ್ಪಷ್ಟಪಡಿಸುತ್ತೇನೆ.

'ಭಾರತ ಸಂವಿಧಾನದ ೫೧-ಎ ವಿಧಿಯ ಪ್ರಕಾರ ವೈಜ್ಞಾನಿಕ ಮನೋಭಾವ ಮಾನವೀಯತೆ ಹಾಗೂ ಅನ್ವೇಷಣಾ ಪ್ರವೃತ್ತಿಯನ್ನು ಬೆಳೆಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ. ನಾನು ಒಬ್ಬ ಪ್ರಜ್ಞಾವಂತ ಪ್ರಜೆಯಾಗಿ ಮೇಲಿನ ಉದ್ದೇಶದಿಂದ ಈ ಲೇಖನವನ್ನು ಬರೆದಿದ್ದೇನೆ ಎಂದು ತಿಳಿಸಬಯಸುತ್ತೇನೆ.

'ಶ್ರೀ ರಘೋತ್ತಮರಾವ್ ಅವರು ಮಾಡಿರುವ ದೂರು ನಿರಾಧಾರವಾದುದೆಂದು ನನ್ನ ವಿವರಣೆಯಿಂದ ಸ್ಪಷ್ಟವಾಗಬಹುದೆಂದು ಆಶಿಸುತ್ತೇನೆ '.

'ಒಂದು ಪಕ್ಷ ನಿಮ್ಮಲ್ಲಿ ಈ ಬಗ್ಗೆ ಇನ್ನೂ ಸಂಶಯ ಉಳಿದಿದ್ದರೆ ನೀವು ನನ್ನ ವಿರುದ್ಧ ತನಿಖೆ ನಡೆಸಲು ಒಂದು ತಜ್ಞರ ಸಮಿತಿಯನ್ನು ನೇಮಿಸಬಹುದು. ಅಂತಹ ಸಮಿತಿಯ ಮುಂದೆ ಹಾಜರಾಗಲು ನಾನು ಸದಾ ಸಿದ್ಧನಿದ್ದೇನೆ '.

ನಾನು ಮೇಲಿನ ಸಮಜಾಯಿಷಿಯನ್ನು ಬರೆದು ಇಲ್ಲಿಗೆ ವರ್ಷಗಳು ಕಳೆದವು .' ಆ ಕಡೆಯಿಂದ ಇದುವರೆಗೆ ಏನೂ ಕೇಳಿಬಂದಿಲ್ಲ.

ಜೀವನದಲ್ಲಿ ಒಮ್ಮೆಯಾದರೂ ನ್ಯಾಯಾಲಯದ ಮೆಟ್ಟಿಲನ್ನು ಹತ್ತದ ಪತ್ರಿಕಾಕರ್ತ ಒಬ್ಬ ಪತ್ರಿಕಾಕರ್ತನೇ ಅಲ್ಲ ಎಂದು ಎಲ್ಲಿಯೋ ಓದಿದ ನೆನಪು . ಈ ಅರ್ಥದಲ್ಲಿ ನಾನಿನ್ನೂ ಪತ್ರಿಕಾಕರ್ತನೆಂಬ ಹೆಸರಿಗೆ ಅರ್ಹನಾಗಿಲ್ಲ ಎಂಬ ಕೊರಗು ನನಗಿದೆ .

ನಮ್ಮ ಧರ್ಮಗ್ರಂಥಗಳ ಬಗ್ಗೆ ಅಂಧಾಭಿಮಾನ ಹೊಂದಿ ಅಜ್ಜ ನೆಟ್ಟ ಆಲದ ಮರಕ್ಕೆ ನೇಣುಹಾಕಿಕೊಳ್ಳುವುದರಿಂದ ನಮಗೆ ಮೋಕ್ಷ ಸಿಗುವುದಿಲ್ಲ. ನಮ್ಮ ಪರಂಪರೆಯನ್ನು ವೈಜ್ಞಾನಿಕ ದೃಷ್ಟಿಯಿಂದ ಅಧ್ಯಯನ ಮಾಡುವುದನ್ನು ನಾವು ಕಲಿಯಬೇಕಾಗಿದೆ. ವೇದಕಾಲದಿಂದ ಇಲ್ಲಿಯವರೆಗೆ ನಮ್ಮ ಸಮಾಜದಲ್ಲಿ ಬಹಳಷ್ಟು ಬದಲಾವಣೆ ಆಗಿದೆ. ನಮ್ಮ ಇಂದಿನ ನೀತಿಗಳೇ ಎಲ್ಲಾ ಕಾಲದಲ್ಲೂ ಅಸ್ತಿತ್ವದಲ್ಲಿದ್ದುವು ಎಂದು ನಂಬುವುದಾಗಲಿ , ವೇದಗಳಲ್ಲಿ ಹೇಳಿರುವುದು ಎಲ್ಲಾ ಕಾಲಕ್ಕೂ ಅನ್ವಯವಾಗು ವಂತಹುದು ಎಂದು ಭಾವಿಸುವುದಾಗಲಿ ಬುದ್ಧಿವಂತಿಕೆಯ ಲಕ್ಷಣವಲ್ಲ. ನಾವು ಬೇಕೆಂದರೂ,

ಬೇಡವೆಂದರೂ ಸಮಾಜ ಸದಾ ಬದಲಾಗದೆ ಇರದು. ಆಯಾ ಕಾಲದ ಸಮಾಜ ತನ್ನ ಅಗತ್ಯಗಳಿಗೆ ತಕ್ಕಂತೆ ಹೊಸ ನೀತಿಗಳನ್ನು ಹೊಸ ಮೌಲ್ಯಗಳನ್ನು ರೂಪಿಸಿಕೊಳ್ಳುತ್ತದೆ.

ಅದೇನೇ ಇರಲಿ, ಪತ್ರಿಕೆಯಲ್ಲಿ ಬರೆಯಲು ತೊಡಗಿದ ನಂತರ ವಿಭಿನ್ನ ರೀತಿಯ ಅನುಭವಗಳನ್ನು ನಾನು ಪಡೆದಿದ್ದೇನೆ. ಅನಿರೀಕ್ಷಿತ ಸ್ಥಳಗಳಲ್ಲಿ ಆಕಸ್ಮಿಕವಾಗಿ ಭೇಟಿಯಾದ ಪತ್ರಿಕೆಯ ಓದುಗರು ನನ್ನನ್ನು ವಿಶ್ವಾಸದಿಂದ ಕಂಡು ಆದರಿಸಿದ್ದಾರೆ. ಒಂದೊಂದು ಬಾರಿ ನನ್ನ ಗುರುತು ಆಗುತ್ತಿದ್ದಂತೆಯೇ ಕೆಲವರು ಕೆಲವು ವಿಷಯಗಳನ್ನು ಕುರಿತು ಮಾತಾಡುವುದನ್ನೇ ನಿಲ್ಲಿಸುವುದುಂಟು. ಅವರೊಡನೆ ಸಲುಗೆಯಿಂದ ಮಾತಾಡಿ ಅವರನ್ನು ಮಾಮೂಲಿ ಸ್ಥಿತಿಗೆ ತರಲು ಆಗ ನಾನು ಪ್ರಯತ್ನಿಸುತ್ತೇನೆ. ನನ್ನ ಒಬ್ಬ ಮುಸ್ಲಿಂ ಗೆಳೆಯ ನನ್ನನ್ನು ವಿಶ್ವಾಸಾರ್ಹವಾದ ನಾಸ್ತಿಕ ಎಂದು ಸಂಬೋಧಿಸುತ್ತಾನೆ. ಆತನನ್ನು ಕುರಿತು ನಾನು ದೇವರ ಬಗ್ಗೆ ನನಗೆ ನಂಬಿಕೆ ಇದೆಯೋ ಇಲ್ಲವೋ ತಿಳಿಯದು, ಆದರೆ ನಿನ್ನಲ್ಲಿ ನಂಬಿಕೆ ಇದೆ ಎಂದು ಪ್ರತಿಯಾಗಿ ಹೇಳತ್ತೇನೆ.

ಪತ್ರಿಕೆಯೊಡನೆ ನನಗುಂಟಾದ ಸಂಬಂಧ ನನ್ನ ಜೀವನದಲ್ಲಿ ಒಂದು ಹೊಸ ಅಧ್ಯಾಯಕ್ಕೆ ಕಾರಣವಾಯಿತು. ಬಿಡುವಿನ ವೇಳೆಯನ್ನು ಗೊತ್ತುಗುರಿ ಇಲ್ಲದೆ ಕಳೆಯುತ್ತಿದ್ದ ನನಗೆ ಪತ್ರಿಕೆ ಒಂದು ಗುರಿ ಮತ್ತು ಒಂದು ದಾರಿಯನ್ನು ತೋರಿಸಿ ಕೊಟ್ಟಿತು. ನನ್ನ ಸುತ್ತಣ ಜನರ ಬಗ್ಗೆ ಪರಿಸರದ ಬಗ್ಗೆ ನನ್ನಲ್ಲಿ ಕಾಳಜಿಯನ್ನು ಬೆಳೆಸಿತು. ಹೀಗೆ ಪತ್ರಿಕೆಯು ನನ್ನಲ್ಲಿ ಮತ್ತು ನನ್ನ ಮೂಲಕ ನನ್ನ ಸುತ್ತಣ ಜನ ಪರಿಸರದಲ್ಲಿ ಒಂದು ಹೊಸ ಎಚ್ಚರ ಮತ್ತು ಚೈತನ್ಯವನ್ನು ಮೂಡಿಸಿತು. ನನ್ನಂತೆಯೇ ಎಷ್ಟೋ ಧ್ವನಿಗಳು ಧೈರ್ಯದಿಂದ ಮಾತನಾಡಲು ಸಾಧ್ಯವಾಗುವಂತಹ ಸಂದರ್ಭವನ್ನು ಸೃಷ್ಟಿಸಿತು. ನಾನು ಪತ್ರಿಕೆಗೆ ಕೃತಜ್ಞನಾಗಿದ್ದೇನೆ ...

ದೊಡ್ಡವರು ತಿಳಿದಿರುವುದಕ್ಕಿಂತ ಹೆಚ್ಚು ವೇಗವಾಗಿ, ಹೆಚ್ಚು ಆಳವಾಗಿ ಕಲಿಯುವ ಮಗುವಿನ ರೋಮಾಂಚನ ವಿಶಿಷ್ಟವಾದದ್ದು. ನನಗಿನ್ನೂ ನೆನಪಿದೆ. ಒಮ್ಮೆ ಓದಲು ಶುರು ಮಾಡಿದೊಡನೆ ನಮ್ಮ ಮನೆಯಲ್ಲಿದ್ದ ಧೂಳು ಮುಸುಕಿದ್ದ ಪುಸ್ತಕಗಳನ್ನೆಲ್ಲ ಓದಲು ಪ್ರಯತ್ನಿಸುತ್ತಿದ್ದೆ. ನಾನು ಸೇರಿದ ಮಾಧ್ಯಮಿಕ ಶಾಲೆಯಲ್ಲಿ ನನ್ನ ಜೊತೆಗಿದ್ದ ಹುಡುಗರು ನನಗಿಂತ ಒಳ್ಳೊಳ್ಳೆಯ ಬಟ್ಟೆ ಹಾಕಿಕೊಳ್ಳುತ್ತಿದ್ದರೂ, ನನ್ನ ಕುಟುಂಬಕ್ಕಿಂತ ಹೆಚ್ಚು ಓದಿದ ಹಿನ್ನೆಲೆಯಿಂದ ಬಂದಿದ್ದರೂ ಓದುವುದರಲ್ಲಿ ಅವರನ್ನು ಮೀರಿಸಿದ್ದೆ. ಅವರ ಜೊತೆ ಮಾತಾಡುವಾಗ ಹಿಂದೆ ಇದ್ದ ಸಂಕೋಚ ಕರಗತೊಡಗಿತ್ತು. ನಾನು ಒಟ್ಟಾಗಿಯೇ ಸಾಮಾಜಿಕ, ಶೈಕ್ಷಣಿಕ, ನೈಸರ್ಗಿಕ ಗ್ರಹಿಕೆಗಳ ಮೂಲಕವೇ ನನ್ನೊಳಗಿನ ತುಮುಲಗಳಿಗೆ ಪರಿಹಾರ ಕಂಡುಕೊಳ್ಳಬೇಕಾಗಿತ್ತು. ಇಲ್ಲಿ ಕಂಡದ್ದೇನೆಂದರೆ, ಕಲಿಯುವ ಸಂಭ್ರಮ, ಕಲಿತದ್ದನ್ನು ಮೇಷ್ಟರು, ಸಹಪಾಠಿಗಳೊಂದಿಗೆ ಒರೆಹಚ್ಚುವ ಕೆಲಸ; ಎರಡನೆಯದು, ನನ್ನ ತಿಳಿವು ಮಿಕ್ಕವರ ತಿಳಿವಿಗೆ ಸರಿಗಟ್ಟಬಲ್ಲದೆಂಬ ವಿಶ್ವಾಸ.

- ಲಂಕೇಶ್

(ಟೀಕೆ ಟಿಪ್ಪಣಿ: ಮೀಸಲಾತಿಯ ಸುತ್ತ: ಬಡ ಪ್ರತಿಭಾವಂತರು)

ಲಂಕೇಶ್ ಪತ್ರಿಕೆ : ೨೦ ವರ್ಷಗಳು ...

ಎರಡು ಪ್ರತಿಕ್ರಿಯೆಗಳು...

ವ್ಯವಸ್ಥೆಗೆ ಮಣಿಯದ ಗುಣ...

ಲಂಕೇಶ್ ಪತ್ರಿಕೆ ಪ್ರಾರಂಭವಾದಾಗ ನಾನು ಕಾಲೇಜ್ ವಿದ್ಯಾರ್ಥಿ. ಆಗ ನಾನು ಧಾರವಾಡದಲ್ಲಿದ್ದೆ. ಚುರುಕು ಬರಹ ಮತ್ತು ನಿರ್ಭೀತಿಗಳಿಂದ ಅದು ಬಹುಬೇಗ ಯುವಕರ ಅಚ್ಚುಮೆಚ್ಚಿನ ಪತ್ರಿಕೆಯಾಯಿತು. 'ಗುಂ', 'ಬಂ', 'ಉಟ್ಟು ಓರಾಟಗಾರರು' ಇಂಥ ಪದಪ್ರಯೋಗಗಳ ನಾವೀನ್ಯತೆಯಿಂದ, ಅಧಿಕಾರದ ತುಟ್ಟತುದಿಯಲ್ಲಿರುವವರನ್ನೂ ಕೆಣಕಬಲ್ಲ ತನ್ನ ಚಾತಿಯಿಂದ ಪತ್ರಿಕೆ ಮತ್ತು ಪತ್ರಿಕೆಯ ಸಂಪಾದಕ ಲಂಕೇಶ್ ದೂರದ ಊರುಗಳಲ್ಲಿ ದಂತಕಥೆಯಾಗಿಬಿಟ್ಟರು. ಇಂಥ ದಂತಕಥೆಗಳ ಪ್ರಭಾವ ಎಂಥದೆಂದರೆ ಬೆಂಗಳೂರಿಗೆ ಬಂದು ವರ್ಷಗಳೇ ಕಳೆದರೂ ನಾನು ಅವರನ್ನು ಕಾಣಲು ಹೆದರಿದ್ದೆ.

ಲಂಕೇಶ್ ಪತ್ರಿಕೆ ಯಾವತ್ತೂ ವ್ಯವಸ್ಥೆಯನ್ನು ಅನುಮಾನದಿಂದ ಕಾಣುತ್ತ ಬಂದಿದೆ. ಇಷ್ಟು ದೀರ್ಘಕಾಲದ ಪ್ರಯಾಣದಲ್ಲಿ ಸಾಕಷ್ಟು ಸಲ ಪತ್ರಿಕೆಯ ಗ್ರಹಿಕೆಗಳು ತಪ್ಪಾಗಿರಲು ಸಾಧ್ಯ. ಅದರಲ್ಲಿ ಅಚ್ಚರಿಯಾಗಲೀ ವಿಷಾದ ಪಡುವಂಥದಾಗಲೀ ಏನೂ ಇಲ್ಲ. ವ್ಯವಸ್ಥೆಯೊಡನೆ ಅದು ಕಾದುಕೊಂಡಿರುವ ದೂರವೇ ನನ್ನಂಥವನ ಪಾಲಿಗೆ ದೊಡ್ಡ ಸಮಾಧಾನದ ಮತ್ತು ನಿಜಕ್ಕೂ ಆಶ್ಚರ್ಯದ ಸಂಗತಿಯಾಗಿ ಉಳಿದಿದೆ. ಇಪ್ಪತ್ತು ವರ್ಷಗಳೆಂದರೆ ಸಾಕಷ್ಟು ದೀರ್ಘಕಾಲ. ವೈಯಕ್ತಿಕ ಜೀವನದಲ್ಲಿ ಕೂಡ ಇಷ್ಟು ಅವಧಿಯಲ್ಲಿ ಬಹುತೇಕ ಜನ ಹೋರಾಡಿ, ಮಣಿದು ವ್ಯವಸ್ಥೆಗೆ ಶರಣಾಗಿರುವುದನ್ನು ಕಾಣುತ್ತೇವೆ. ಹೀಗಿರುವಾಗ ಪತ್ರಿಕೆಯೊಂದು ಜಡವಾಗದಿರಲು, ಶರಣಾಗದಿರಲು ಮಾಡುತ್ತಿರುವ ಪ್ರಯತ್ನ ನಮ್ಮ ಬಗೆಗೆ ನಮಗೇ ಭರವಸೆ ಹುಟ್ಟಿಸುವ ಸಂಗತಿಯಾಗಿ ಕಾಣುತ್ತದೆ.

ಹಾಗಾದರೆ ಪತ್ರಿಕೆ ಕುರಿತು ನನ್ನ ತಕರಾರು ಏನೂ ಇಲ್ಲವೆ? ಇದ್ದೇ ಇದೆ. ತಾನು ಗ್ರಹಿಸಿದ ಸಂಗತಿಗಳ ಕುರಿತು ಪತ್ರಿಕೆಯ ಜಿಗಿಪಟ್ಟು - ಆ ಗ್ರಹಿಕೆಗಳು ವಿವಾದಾಸ್ಪದವಾದಾಗ

ವಿಚಿತ್ರ ಸಮಸ್ಯೆಯನ್ನುಂಟು ಮಾಡುತ್ತವೆ. ಸಾಹಿತ್ಯ ಕೃತಿಗಳ ಕುರಿತು ಇಂಥ ಸಮಸ್ಯೆಗಳು ಉಂಟಾದಾಗಲಂತೂ ಸಾಹಿತ್ಯ ಲೋಕದಲ್ಲಿ ಸಣ್ಣ ಭೂಕಂಪವೇ ಆಗುತ್ತದೆ. ಇದೂ ಕೂಡ ಒಂದು ಅತಿಯಿಂದ ಹೊರಟು ಸತ್ಯವನ್ನು ತಿಳಿಯುವ ಯತ್ನವೇ ಎಂದು ನಾನು ಯೋಚಿಸಿದ್ದಿದೆ. ಹಾಗಿದ್ದರೆ ಆಗ ಚರ್ಚೆ ಸಾಧ್ಯವಾಗಬೇಕು. ಅಂಥ ಚರ್ಚೆಗಳು ಪತ್ರಿಕೆಯ ಪುಟಗಳಲ್ಲಿ ಅಷ್ಟಾಗಿ ಆದಂತಿಲ್ಲ. ಪತ್ರಿಕೆಯ ಹೊಳೆವ ಬೆಳಕಲ್ಲಿ ಕೆಲವುಸಲ ಸಾಧಾರಣ ಲೇಖಕರು ಪ್ರಮುಖರಂತೆ ಮಿಂಚಿದ್ದಿದೆ. ತೇಜಸ್ವಿಯವರಂಥ ಲೇಖಕರು ಪತ್ರಿಕೆಯಿಂದ ದೂರವಾಗಿದ್ದಾರೆ. ಇಂದು ಪತ್ರಿಕೆಗೊಂದು ವ್ಯಕ್ತಿತ್ವ ಕೊಡಲು ಸಾಧ್ಯವಾಗಿರುವುದು ಲಂಕೇಶ್ ಅವರಿಗೆ ಮಾತ್ರ... ಈ ಮಾತುಗಳನ್ನು ಆಡುವಾಗಲೂ ಪತ್ರಿಕೆ ಎರಡು ದಶಕಗಳ ಕಾಲ ತನ್ನ ಹೊಸ ಹೊಸ ಬೈಗುಳಗಳಿಂದ ಕನ್ನಡದ ಜಾಣ ಜಾಣೆಯರ ಪಂಚೇಂದ್ರಿಯಗಳನ್ನು ಚುರುಕಾಗಿಡಲು ಮಾಡುತ್ತಲೇ ಇರುವ ಪ್ರಯತ್ನಗಳು ನೆನಪಾಗುತ್ತವೆ. ಅಂಕುಡೊಂಕು ಅಕ್ಷರಗಳಲ್ಲಿ ಥಟ್ಟನೆ ಗಮನ ಸೆಳೆವ 'ನೀಲು' ಪದ್ಯಗಳ ಸೊಗಸು ಮನಸ್ಸನ್ನಾವರಿಸುತ್ತದೆ.

- ಚಿಂತಾಮಣಿ ಕೊಡ್ಲೆಕೆರೆ

ವಿಮರ್ಶೆ ಶಿಕ್ಷೆಯ ತೀರ್ಪಿನಂತೆ ...

ಈ ಪ್ರತಿಕ್ರಿಯೆ ಲಂಕೇಶ್ ಪತ್ರಿಕೆಯ ವಿಮರ್ಶೆ ಕಾಲಂಗೆ ಮಾತ್ರ ಸೀಮಿತವಾಗಿದೆ. ಕನ್ನಡದಲ್ಲಿ ಇವತ್ತು ರಿವ್ಯೂಗಳು ಮತ್ತು ಸೆಮಿನಾರ್‌ಗಳಲ್ಲಿ ಓದಿದ ಪ್ರಬಂಧಗಳೇ ವಿಮರ್ಶೆ ಎಂದು ಚಲಾವಣೆಯಲ್ಲಿವೆ. ಯಾವುದಾದರೂ ಒಂದು ವಿಷಯವನ್ನೋ ಲೇಖಕನನ್ನೋ ಆರಿಸಿಕೊಂಡು ಅಧ್ಯಯನ ಶೀಲವಾಗಿ ಬರೆದ ಪುಸ್ತಕಗಳು ಇಲ್ಲವೇ ಇಲ್ಲ ಎನ್ನುವಷ್ಟು ಅಪರೂಪ. ಸಮಕಾಲೀನ ಸಾಹಿತ್ಯ - ವಿಮರ್ಶೆಗಳೆರಡೂ ಕುಬ್ಜವಾಗುತ್ತ ನಡೆದಿವೆ.

ಲಂಕೇಶ್ ಪತ್ರಿಕೆಯ ಯಾವುದೋ ಒಂದು ಸಂಚಿಕೆಯಲ್ಲಿ ಸಂಪಾದಕರು ವಿಮರ್ಶೆಯ ಕಾಲಂ ನಿಷ್ಠುರವಾಗಿರಬೇಕು, ಪುಸ್ತಕ ತನಗೆ ಕೊಟ್ಟ ಸಂತೋಷವನ್ನು ಮುಕ್ತವಾಗಿ ಹೇಳಿಕೊಳ್ಳಬೇಕು, ಅಭಿಪ್ರಾಯ ನಿರ್ದುಷ್ಟವಾಗಿ ವ್ಯಕ್ತವಾಗಬೇಕು ಎಂಬ ಅಪೇಕ್ಷೆಗಳನ್ನು ಸೂಚಿಸಿದ್ದ ನೆನಪು ಇದೆ. ಸ್ವತಃ ಲಂಕೇಶ್ ಬರೆದ ರಿವ್ಯೂಗಳು ಮತ್ತು ಇತರರು ಬರೆದ ರಿವ್ಯೂಗಳು ಗುಣ ಮತ್ತು ಧೋರಣೆಗಳಲ್ಲಿ ತೀರ ಭಿನ್ನವಾಗಿರುತ್ತವೆ. ಲಂಕೇಶ್ ಬರವಣಿಗೆ ಅವರ ಸೃಜನಶೀಲ ವ್ಯಕ್ತಿತ್ವದ ಒಂದು ವಿಸ್ತರಣೆಯಂತೆ ಕಂಡರೆ, ಇತರ ಅನೇಕರು ಬರೆದ ರಿವ್ಯೂಗಳು ಲಂಕೇಶರ ಧೋರಣೆ - ತೀರ್ಮಾನಗಳನ್ನು ಆವಾಹಿಸಿಕೊಂಡು ಅನುಕರಿಸಿ ಬರೆದಂತೆ ಇರುತ್ತದೆ.

ಈ ಕಾಲಂನ ರಿವ್ಯೂಗಳಿಗೆ ಇನ್ನೊಂದು ಮುಖ್ಯ ಲಕ್ಷಣ ಇದೆ. ಅದೇನೆಂದರೆ ಓದುಗರನ್ನು ವಿಚಾರಶೀಲರನ್ನಾಗಿಸುವುದಕ್ಕಿಂತ, ಪುಸ್ತಕದ ವಿಷಯ ಸೂಚಿಸುವ ಸಂಗತಿಯ ಬಗ್ಗೆ ಯೋಚನೆಗೆ ತೊಡಗುವಂತೆ ಪ್ರೇರೇಪಿಸುವುದಕ್ಕಿಂತ , ರಿವ್ಯೂ ಮಾಡುವವರ 'ತೀರ್ಮಾನ'ವನ್ನು ಗಟ್ಟಿಯಾಗಿ ಹೇಳುವುದೇ ಮುಖ್ಯವಾಗಿರುತ್ತದೆ . ರಿವ್ಯೂ ನ್ಯಾಯಾಧೀಶ

ಸಾಹಿತ್ಯ ಸಂವಾದ ೫೪-೫೫

ಒಬ್ಬನು ಬರೆದ ಶಿಕ್ಷೆಯ ತೀರ್ಪಿನ ಧಾಟಿಯಲ್ಲಿರುತ್ತದೆ. ನೂರಕ್ಕೆ ತೊಂಭತ್ತು ಭಾಗ ರಿವ್ಯೂಗಳು ತಾವು ಪರಿಶೀಲಿಸುವ ಕೃತಿಯ ದೌರ್ಬಲ್ಯ ಮತ್ತು ಕೊರತೆಗಳನ್ನು ಎತ್ತಿ ತೋರಿಸುವುದಕ್ಕೆ ಕೊಡುವ ಪ್ರಾಮುಖ್ಯತೆ ಹೆಚ್ಚಿರುತ್ತದೆ. ಇಷ್ಟು ಹೇಳಿದರೂ ಕನ್ನಡದ ಇತರ ಪತ್ರಿಕೆಗಳಲ್ಲಿ ಬರುವ ರಿವ್ಯೂಗಳಿಗಿಂತ 'ಪತ್ರಿಕೆ 'ಯ ರಿವ್ಯೂ ಬಹುಶಃ ಹೆಚ್ಚು ಜೀವಂತ . ರಿವ್ಯೂ ಹೀಗಲ್ಲ ಇರಬೇಕಾದದ್ದು ಅನ್ನುವ ಭಿನ್ನಾಭಿಪ್ರಾಯವನ್ನಾದರೂ ಪ್ರಚೋದಿಸುತ್ತವೆ. ಉಳಿದವು ಅಷ್ಟೂ ಮಾಡಲಾರವು.

ರಿವ್ಯೂ ಮಾಡುವ ವ್ಯಕ್ತಿಯ ಗ್ರಹಿಕೆ, ಮೌಲ್ಯ ಪ್ರಜ್ಞೆ ಹೇಗೆ ಇರುತ್ತದೋ ಹಾಗೆಯೇ ಬೇರೆಯವರೂ ಕೃತಿ ಬರೆಯಲು ಸಾಧ್ಯವಿಲ್ಲವಷ್ಟೆ ! ಇಂಥ ಪುಸ್ತಕದಲ್ಲಿ ಇಂಥದ್ದು ಇಲ್ಲ , ಇಂಥದ್ದು ಹೀಗೆ ಇರಬೇಕಾಗಿತ್ತು ಎಂಬ ಎರಡೂ ಧೋರಣೆ ನಿಷ್ಫಲ . ತನಗೆ ಕಂಡದ್ದು ಕಂಡ ಹಾಗೆ, ತನಗೆ ಇರುವ ಭಾಷೆಯಲ್ಲಿ ಬರೆಯುವಾತ ಬರೆದಿರುತ್ತಾನೆ. 'ಹೀಗಿರಬೇಕಿತ್ತು' ಅಂದರೆ ಹಾಗೆನ್ನುವವರೇ ಬರೆಯಬೇಕು. 'ಹೀಗಿಲ್ಲ' ಅಂದರೆ ಬರೆದಾತ ತನಗೆ ಸಾಧ್ಯವಿರುವಷ್ಟು ಮಾತ್ರ ಬರೆಯಬಲ್ಲ ಅಲ್ಲವೆ?

'ವಸ್ತುನಿಷ್ಠ ' ರಿವ್ಯೂ ನಿಜವಾಗಿ ವಸ್ತುನಿಷ್ಠವಲ್ಲ. ವೈಯಕ್ತಿಕ ಪೂರ್ವಾಗ್ರಹಗಳ ಮಂಡನೆ ಅಷ್ಟೆ. ಆದರೆ ಅದನ್ನು ವಸ್ತುನಿಷ್ಠ ಪಾರಿಭಾಷಿಕಗಳ ಭಾಷೆಯಲ್ಲಿ ಪ್ಯಾಕೇಜು ಮಾಡಲಾಗಿರುತ್ತದೆ .

- ಓ . ಎಲ್ . ನಾಗಭೂಷಣ ಸ್ವಾಮಿ

ಜನ ನವ್ಯರ ಪ್ರಯೋಗ, ಪ್ರಗತಿಶೀಲರ ಕೂಗು ಕೇಳಿಯಾದ ಮೇಲೆ ಮಾಸ್ತಿಯತ್ತ ನೋಡಿದರು. ಅಲ್ಲಿದ್ದ ಮೆಲುದನಿ, ಸ್ಪಷ್ಟತೆ, ಅನ್ಯೋನ್ಯ ಮತ್ತು ಜೀವನೋತ್ಸಾಹಕ್ಕೆ ಬೆರಗಾದರು. ನಿಂತು ನೋಡಿದವರಿಗೆ, ಮತ್ಸರವಿಲ್ಲದೆ ಧ್ಯಾನಿಸಿದವರಿಗೆ ಮಾಸ್ತಿಯವರಲ್ಲಿನ ಕಂದಾಚಾರವನ್ನು ಮೀರಿದ ಶಿಸ್ತಿನ ಹೊಂದಾಣಿಕೆ, ಮೌಢ್ಯದ ಸೋಂಕಿಲ್ಲದ ಧಾರ್ಮಿಕತೆ, ಆಡಂಬರವಿಲ್ಲದ ಮಾನವೀಯತೆ ಇಷ್ಟವಾಗತೊಡಗಿದವು. ಮಾಸ್ತಿಯ ಮೌಲ್ಯಗಳು ಹಲವೇ : ಈ ಜನಸಮೂಹದ ಬದುಕನ್ನು ನಡೆಸಿಕೊಂಡು ಬಂದಿರುವ ನಂಬಿಕೆ, ವಿಶ್ವಾಸ, ಪ್ರೀತಿ, ಕಲಾರಾಧನೆ. ಆದರೆ ಬಿರುಗಾಳಿಗೆ ಸಿಕ್ಕರೂ ತೂರಿ ಹೋಗಲಾರದ ಈ ಹಲವು ಅನ್ನಿಸಿಕೆಗಳನ್ನು ಕಲೆಯಾಗಿಸುವ ಮಾಧ್ಯಮ ಅವರ ಮೆಲುದನಿ, ಸ್ಪಷ್ಟತೆ, ಅನ್ಯೋನ್ಯ ಇತ್ಯಾದಿ - ಇವೇ ಮೌಲ್ಯಗಳೋ ಅನ್ನಿಸುವಷ್ಟು ಮಟ್ಟಿಗೆ .

- ಲಂಕೇಶ್

(ಟೀಕೆ ಟಿಪ್ಪಣಿ : ಮಾಸ್ತಿ ಇನ್ನಿಲ್ಲ)

ಲಂಕೇಶರ 'ಅವ್ವ' ಪದ್ಯವನ್ನು ಒಂದು ವರ್ಕ್‌ಷಾಪಿನಲ್ಲಿ ವಿವರಿಸುತ್ತಿದ್ದಾಗ ಥಟ್ಟನೆ ಅದರಲ್ಲೊಂದು ಸೂಕ್ಷ್ಮ ಕಂಡಿತು. ಪ್ರಾಯಶಃ ಬ್ರಾಹ್ಮಣೇತರ ಬಡಕುಟುಂಬದಲ್ಲಿ ಹುಟ್ಟಿಬಂದವರು ಬೆಳೆಯುತ್ತಾ ನಗರೀಕರಣವಾದ ನಂತರ ತಮ್ಮ ಜನರ ಬಗ್ಗೆ ಒಂದು ರೀತಿಯ ಸಂಕೋಚವನ್ನೂ ಅವಮಾನವನ್ನೂ ಬೆಳೆಸಿಕೊಳ್ಳುವುದಕ್ಕೆ ಸಾಧ್ಯ. ಬ್ರಾಹ್ಮಣೇತರ ಹುಡುಗರಿಗೆ ಇದು ಬಹುಶಃ ಬೆಳೆಯುವ ಕ್ರಿಯೆಯಲ್ಲಿ ವಿದ್ಯಾಭ್ಯಾಸದ ಕ್ರಿಯೆಯಲ್ಲಿ ಇರಬಹುದಾದ ಸಮಸ್ಯೆ ಎಂದು ಕಾಣುತ್ತದೆ. ಹಿಂದೆ ಕುವೆಂಪುರವರು ಸಂಸ್ಕೃತೀಕರಣವನ್ನು ಒಪ್ಪಿಕೊಂಡಾಗ ಇನ್ನೂ ಗೊಡ್ಡು ನಂಬಿಕೆಗಳಿರುವವರ ಜೊತೆಗೆ ಹೂವಮ್ಮನಿಗಿರುವ ಸಂಬಂಧವನ್ನು 'ಕಾನೂರು ಹೆಗ್ಗಡತಿ'ಯಲ್ಲಿ ಅವರು ಚಿತ್ರಿಸುವ ಬಗೆ ನೋಡಿ. ನಂತರ ಇದಕ್ಕೆ ವ್ಯತಿರಿಕ್ತವೆನ್ನಿಸುವಂತಿರುವ ಲಂಕೇಶರ ಪದ್ಯದಲ್ಲಿ ಅವ್ವನ ಜೊತೆ ಕವನದ ನಾಯಕನಿಗಿರುವ ಸಂಬಂಧ ನೋಡಿ. ಅಲ್ಲಿರುವ ಪ್ರತಿಯೊಂದು ಸಾಲು ಹೇಗಿದೆಯೆಂದರೆ: ಇವಳು ಹುಡುಕಿಕೊಂಡು ಹೊರಟಿದ್ದು ಅನ್ನುತ್ತಾರೆ - ಅಂದರೆ, ಏನೋ ಒಂದು ಧರ್ಮಕ್ಕಾಗಿ ಅನ್ನುವ ಆಶೆಯನ್ನು ಪ್ರಚೋದಿಸಿ 'ಕಳೆದುಹೋದ ಎಮ್ಮೆಗಾಗಿ' ಅನ್ನುತ್ತಾರೆ. ಅಂದರೆ ಸಂಸ್ಕೃತೀಕರಣದ ಮೌಲ್ಯಗಳನ್ನು ಅಪೇಕ್ಷಿಸುವಂಥ ಸಾಲುಗಳನ್ನು ಸೃಷ್ಟಿಸಿ, ಅವುಗಳ ಕೊನೆಯಲ್ಲಿ ಅವಳು ಬರೇ ಕಾಯಕ ಜೀವಿಯಾಗಿದ್ದನ್ನು ತೋರಿಸಿ ಅದನ್ನೇ ಕೀರ್ತಿಸುತ್ತಾರೆ. 'ನಮ್ಮವ್ವನಿಗೆ ಭಗವದ್ಗೀತೆ ಇತ್ಯಾದಿಗಳು ಬೇಡ' ಎನ್ನುತ್ತಾರೆ. ಎಲ್ಲಿ ಒಂದು ದ್ವಂದ್ವ ಮತ್ತು ಘರ್ಷಣೆ ಹುಟ್ಟಿಕೊಳ್ಳಬಹುದಿತ್ತೋ ಅಲ್ಲಿ ಇವರು ಸೂದ್ರತ್ವವನ್ನು, ಅದು ಇರುವಂತೆಯೇ ಒಪ್ಪಿಕೊಳ್ಳುವ ನಿಲುವಿನಲ್ಲಿ ನಿಂತು ಸಂಕೋಚವನ್ನು ಮೀರುತ್ತಾರೆ. ಆದರೆ ಇದು ಎಷ್ಟು ಕಷ್ಟದ್ದು ಎಂಬುದಕ್ಕೆ ಇವರ ಇನ್ನೊಂದು ಪದ್ಯ 'ಅಕ್ಕ - ತಮ್ಮ' ಅನ್ನುವುದನ್ನು ನೋಡಬಹುದು: ಅಲ್ಲಿ ತನ್ನಕ್ಕನ ಬಗ್ಗೆ ಅವನಿಗೆ ಸಂಶಯ ಬರುತ್ತದೆ; ಜೊತೆಯ ಹುಡುಗರು ಹಾಸ್ಯ ಮಾಡುತ್ತಿರುತ್ತಾರೆ; ಆಗ ಕವನದ ನಾಯಕ ಕುದುಮಿಯಾಗಿ ಬಿಡುತ್ತಾನೆ. [illegible] ಇವನು ಹಟಮಾಡಿದನೆಂದು, ಮನೆಯವರು ಅವಳು ಒಲ್ಲದ ಗಂಡನ ಮನೆಗೆ ಕಳುಹಿಸುತ್ತಾರೆ ಮತ್ತು ಇವನು ಪಾಪಪ್ರಜ್ಞೆಗೆ ಒಳಗಾಗುತ್ತಾನೆ....

-ಯು. ಆರ್. ಅನಂತಮೂರ್ತಿ

(ಪೂರ್ವಾಪರ: ಎಪ್ಪತ್ತರ ದಶಕದ ಕನ್ನಡ ಸಾಹಿತ್ಯ ಮತ್ತು ರಾಜಕೀಯ)

ಸಾಹಿತ್ಯ ಸಂವಾದ : ೫೪-೫೫

ಲಂಕೇಶ್ ...

ಸೃಜನಶೀಲತೆ

ಲೇಖಕನಾದವನು ನೆನಪಿನಲ್ಲಿಡಬೇಕಾದ್ದೇನೆಂದರೆ - ಒಳ ಅರಿವು ಅಥವಾ ಸಹಜ ಜ್ಞಾನವಿಲ್ಲದವನು ಲೇಖಕನಾಗಲು ಸಾಧ್ಯವಿಲ್ಲವಾದ್ದರಿಂದ ತನ್ನ ಬುದ್ಧಿಯ ವಿಕಾಸದ ಜೊತೆಗೇ ಈ ಮುಗ್ಧತೆಯನ್ನವಲಂಬಿಸಿದ, ಅಚ್ಚರಿಯ ಮೇಲೆ ನಿಂತ intuition ಅನ್ನು ಕಾಪಾಡಿಕೊಳ್ಳಬೇಕು ಮತ್ತು ಬೆಳೆಸಿಕೊಳ್ಳಬೇಕು. ಲೇಖಕನಿಗೆ ದಂತಗೋಪುರಗಳು ಬಹಳ ರೀತಿಯಲ್ಲಿರುತ್ತವೆ. ಅವು ಬೌದ್ಧಿಕ ಅಹಂಕಾರದ ರೂಪದಲ್ಲಿ, ರಾಜಕೀಯ ಹೋರಾಟದ ರೂಪದಲ್ಲಿ, ದೇಶಪ್ರೇಮದ ರೂಪದಲ್ಲಿ, ಜಾತಿ ಪ್ರೇಮದ ರೂಪದಲ್ಲಿ, ಉನ್ನತ ವಿದ್ಯೆಯ ರೂಪದಲ್ಲಿ ಇರಬಹುದು; ಅಥವಾ ಕೇವಲ ಆತ್ಮವನ್ನು ಆವರಿಸಿದ ಯಾವುದೋ ಸನ್ಯಾಸದ ರೂಪದಲ್ಲಿರಬಹುದು. ಇದರಿಂದಾಗಿ ಲೇಖಕ ಹಲವು ರೀತಿಯಲ್ಲಿ ತನ್ನ ಒಳದೃಷ್ಟಿಯನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಅವುಗಳಲ್ಲೊಂದು ಎಲ್ಲ ಕಲಿಕೆಯ ಮುಖಾಂತರ ಬ್ಲೇಕನ ಹಾಗೆ ದ್ವಂದ್ವಗಳನ್ನು ಇಟ್ಟುಕೊಳ್ಳುವುದು, ತರ್ಕಾತೀತ ಪ್ರೇಮವನ್ನು ಬೆಳೆಸಿಕೊಳ್ಳುವುದು; ಹೊರಜಗತ್ತಿಗೆ ಕೇವಲ ಹುಚ್ಚಾಗಿ ಕಾಣುವ ದೈವಿಕ ಹುಚ್ಚನ್ನು ನಂಬುವುದು. ಇನ್ನೊಂದು ಬಗೆ ಇದಕ್ಕೆ ಪೂರಕವಾಗಿದೆ: ಚಿಕ್ಕಂದಿನಲ್ಲಿ ಕಂಡು ಕಳೆದುಹೋದ ವಿಚಿತ್ರ, ಸುಂದರ ಜಗತ್ತನ್ನು ಮನುಷ್ಯರೊಡನಾಟದ ಮೂಲಕ (ವರ್ಡ್ಸ್‌ವರ್ತ್‌ನ ಹಾಗೆ) ದಕ್ಕಿಸಿಕೊಳ್ಳುವುದು. ಏಟ್ಸ್ ಕವಿಯಲ್ಲಿ ಮೇಲಿನೆರಡನ್ನೂ ನೋಡುತ್ತೇವೆ: ಮೂರನೆಯದು, ಧೈರ್ಯವಾಗಿ ಪರಂಪರಾಗತ ಮೌಲ್ಯಗಳನ್ನು ನಂಬಿ ತಲೆಕೆಳಗು dissent ಮೂಲಕ ತಾನು ಕಲಿತದ್ದಕ್ಕೆ ರೂಪವನ್ನೂ ಮೌಲ್ಯಗಳ ಘರ್ಷಣೆಯ ಮೂಲಕ ತರ್ಕಾತೀತ ಜೀವಪೋಷಕ ಒಳನೋಟವನ್ನೂ ಪಡೆಯುವುದು... ಇವೆಲ್ಲವುಗಳ ಆಳಕ್ಕೆ ಹೋಗಿ ನಾವು ನೋಡುವುದಿದೆ. ಯಾವ ಕಾಲದಲ್ಲೂ ಅಜ್ಞಾನವಾಗಲೀ, ದಡ್ಡತನದ ಸರಳತೆಯಾಗಲೀ ಒಳ್ಳೆಯದಲ್ಲ; ಅಂಥದರಿಂದ ಬಂದ intuition ಕೂಡ ಲಘುವಾದದ್ದು. ನಮ್ಮ ಕಾಲದಲ್ಲಂತೂ ಈ ಬಗೆಯ ದಡ್ಡತನ ಅಕ್ಷಮ್ಯ.

- ಲಂಕೇಶ್

(ಟೀಕೆ ಟಿಪ್ಪಣಿ: ತರುಣ ಸಾಹಿತಿಗಳನ್ನು ಕುರಿತು)

ಸಾಹಿತ್ಯ ಸಂವಾದ :೫೪-೫೫

ಲಂಕೇಶರ ಕಾದಂಬರಿಗಳನ್ನು ಮತ್ತೆ ಓದಿದಾಗ...

○ ಡಾ. ಸಿ. ಎನ್. ರಾಮಚಂದ್ರನ್

ಒಂದು ಕಾಲಘಟ್ಟದಲ್ಲಿ ಓದಿದ್ದ ಕೃತಿಗಳನ್ನು ಒಂದೆರಡು ದಶಕಗಳ ನಂತರ ಮತ್ತೆ ಓದುವುದು ಒಂದು ವಿಚಿತ್ರ ಸಂಕೀರ್ಣ ಅನುಭವ. ಮೊದಲ ಬಾರಿ ಓದಿದಾಗ ಹೊಳೆದ 'ಅರ್ಥಗಳು', ಅನುಭವಿಸಿದ ಉದ್ವೇಗ-ಕಳವಳಗಳು, ಪಡೆದ ನೋವು -ಸಂಭ್ರಮಗಳು, ಇವೆಲ್ಲವುಗಳೂ ಮರೆಯಾಗುತ್ತವೆ. ಯಾವ ಕಾರಣಗಳಿಗಾಗಿ ಅಂದು ಒಂದು ಕೃತಿ ಅರ್ಥಪೂರ್ಣ ಅಥವಾ ಅರ್ಥಹೀನವೆನಿಸಿತ್ತೋ ಆ ಕಾರಣಗಳೇ ಇಲ್ಲವಾಗಿ ಅಥವಾ ಅದು 'ಸಕಾರಣ'ವೆಂದು ತೋರದೇ, ಒಂದು ವಿಧದ ಹಳಹಳಿಕೆಯನ್ನೂ ಒಳಗೊಂಡ ಖಿನ್ನತೆ ಆವರಿಸುತ್ತದೆ. ಹಾಗೆಯೇ, ಆ ಖಿನ್ನತೆಯ ಗರ್ಭದಿಂದಲೇ ಹೊಸ 'ಅರ್ಥಗಳು', ಹೊಸ ಒಳನೋಟಗಳು ಮತ್ತು ನೂತನ ನೋವು -ಸಂಭ್ರಮಗಳು ಜನ್ಮಿಸುತ್ತವೆ. ಕೃತಿಯ 'ಅರ್ಥ'ವೆನ್ನುವುದು ಕೇವಲ ಕೃತಿಗೆ ಮಾತ್ರ ಸೀಮಿತವಾಗಿರದೆ, ಒಂದು ಕಾಲಘಟ್ಟದಲ್ಲಿ ಓದುಗರಾದ ನಾವು ಗೌರವಿಸುವ ಲೇಖಕ-ವಿಮರ್ಶಕ ಸಮುದಾಯ ಕಟ್ಟಿಕೊಟ್ಟ ಅಪೇಕ್ಷೆ-ನಿರೀಕ್ಷೆಗಳು ಹಾಗೂ ಮೌಲ್ಯ - ಮಾನದಂಡಗಳು, ಆಗಿನ ನಮ್ಮ ಸಾಹಿತ್ಯಾನುಭವ ಮತ್ತು ಕೃತಿ ಇವು ಮೂರೂ ಒಟ್ಟಾರೆಯಾಗಿ ಕೆಲಸ ಮಾಡುವ ಪ್ರಕ್ರಿಯೆಯಲ್ಲಿ 'ಅರ್ಥ'ವೆನ್ನುವುದು ಸೃಷ್ಟಿಯಾಗುತ್ತದೆಂಬುದು ನಮ್ಮ ಅರಿವಿಗೆ ಬರುತ್ತದೆ.

''ಬಿರುಕು'' ಕಾದಂಬರಿಯನ್ನು ನಾನು ಮೊದಲು ಓದಿದುದು ೬೭ರಲ್ಲಿ; ನಾನು ಸೊಲ್ಲಾಪುರದಲ್ಲಿದ್ದಾಗ. ಆಗ ಗ್ರಾಮೀಣ ಪರಿಸರದಿಂದ ಬಂದು ನಗರ ಜೀವನಕ್ಕೆ ಹೊಂದಿ ಕೊಳ್ಳಲಾಗದ , ಇಂಗ್ಲೀಷ್ ಮೇಷ್ಟ್ರಾಗಿದ್ದೂ ಆ ಭಾಷೆಯ ಬಗ್ಗೆ ಅಳುಕಿರುವ, ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಕೇವಲ ಢೋಂಗಿ ಜನರನ್ನೇ ಕಾಣುತ್ತಿದ್ದ ನನ್ನಂತಹ ನೂರಾರು ತರುಣರ ಆತಂಕ -ತಲ್ಲಣಗಳನ್ನು ಬಸವರಾಜುವಿನ ಮೂಲಕ ಈ ಕೃತಿ ದಾಖಲಿಸುತ್ತದೆಂದು ತಿಳಿದು ತುಂಬಾ ಮಹತ್ವಪೂರ್ಣವೆಂದು ಅನ್ನಿಸುತ್ತಿತ್ತು. ಅಲ್ಲದೆ ಆ ಕೃತಿಯಲ್ಲಿನ ಪಾತ್ರಗಳಾದ

ಬಸವರಾಜು, ಪ್ರೊ. ರಂಗಯ್ಯ, ಆನಂದ ಮೂರ್ತಿ, ಮೀನಾ ಮುಂತಾದವರೆಲ್ಲಾ ನನಗೆ (ಮಹಾರಾಜಾ ಕಾಲೇಜಿನ ವಿದ್ಯಾರ್ಥಿಯಾದುದರಿಂದ) ತುಂಬಾ ಗೊತ್ತಿದ್ದ 'ನಿಜ ವ್ಯಕ್ತಿಗಳೆಂಬ' ಗುಮಾನಿಯೂ ಆ ಕೃತಿಗೆ ಒಂದು ಅಸಾಹಿತ್ಯಕ ರೋಚಕತೆಯನ್ನು ಕೊಟ್ಟಿತ್ತು. ಆದರೆ ಇಂದು ಓದಿದಾಗ ಇತರರ ಢೋಂಗೀತನವನ್ನು ಗೇಲಿಮಾಡುವ ಬಸವರಾಜು ಎಷ್ಟರ ಮಟ್ಟಿಗೆ 'ವಿಶ್ವಸನೀಯ ನಿರೂಪಕ'? ಮತ್ತೆ ಮತ್ತೆ ಇವನು ಇನ್ನೊಬ್ಬರ ಬಟ್ಟೆಗಳನ್ನು ಹಾಕಿಕೊಳ್ಳುವುದರ ಅರ್ಥವೇನು? ಕೃತಿಯ ಕೊನೆಯಲ್ಲಿ ಬಸವರಾಜು ಪ್ರಬುದ್ಧನಾಗಿದ್ದಾನೆಂದು ಕೃತಿಯು ತೋರಿಸುವುದು ಸಮರ್ಥನೀಯವೇ? - ಎಂದೆಲ್ಲಾ ಪ್ರಶ್ನೆಗಳು ಏಳುತ್ತವೆ. ಇನ್ನೂ ಮುಖ್ಯವಾಗಿ, ಈ ಪ್ರಶ್ನೆಗಳು ಎರಡು ದಶಕಗಳ ಹಿಂದೆ ಈ ಕಾದಂಬರಿಯನ್ನು ಓದಿದಾಗ ಏಕೆ ಎದ್ದಿರಲಿಲ್ಲ ಎಂಬುದೂ ಪ್ರಶ್ನೆಯಾಗುತ್ತದೆ.

ಪ್ರಾಯಶಃ, ಅದೇ ಕೃತಿಯನ್ನು ಎರಡುಸಲ ಓದಲು/ಕೇಳಲು/ನೋಡಲು ಸಾಧ್ಯವಿಲ್ಲ. ಪ್ರತಿ ಓದೂ ಒಂದು 'ಹೊಸ' ಕೃತಿಯನ್ನು ನಿರ್ಮಿಸುತ್ತದೆ ಎಂದು ತೋರುತ್ತದೆ.

★★ ★★ ★★

ಲಂಕೇಶರ ''ಬಿರುಕು''(೧೯೬೭), ''ಮುಸ್ಸಂಜೆಯ ಕಥಾ ಪ್ರಸಂಗ''(೧೯೭೮), ಮತ್ತು ''ಅಕ್ಕ''(೧೯೯೧) ಈ ಮೂರೂ ಕಾದಂಬರಿಗಳನ್ನು ಕುರಿತು ವಿವಿಧ ಕಾಲಘಟ್ಟಗಳಲ್ಲಿ ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ಎಂ. ಜಿ. ಕೃಷ್ಣಮೂರ್ತಿ, ಜಿ. ಎಸ್. ಆಮೂರ್, ಗಿರಡ್ಡಿ ಗೋವಿಂದರಾಜ, ರಾಜೇಂದ್ರ ಚೆನ್ನಿ, ಕೆ. ವಿ. ನಾರಾಯಣ, ಟಿ. ಪಿ. ಅಶೋಕ, ಕಿರ್ಕೀರ ನಾರಾಯಣ ಮುಂತಾದವರು ಸಮರ್ಥ ವಿಮರ್ಶೆ - ವ್ಯಾಖ್ಯಾನಗಳನ್ನು ಮಾಡಿದ್ದಾರೆ; ಕೃತಿಗಳ ಸಾಧನೆಗಳನ್ನು ಮತ್ತು ಮಿತಿಗಳನ್ನು ವಿಶ್ಲೇಷಿಸಿದ್ದಾರೆ[೧]. ಆದ್ದರಿಂದ ಸಾಧ್ಯವಾದಷ್ಟೂ ಅದೇ ಅಂಶಗಳ ಪುನರುಕ್ತಿ ಮಾಡದೆ, ಇವರೆಲ್ಲರ ಚರ್ಚೆಯ ಹಿನ್ನೆಲೆಯಲ್ಲಿ, ಮತ್ತೆ ಲಂಕೇಶರ ಕಾದಂಬರಿಗಳನ್ನು ಓದಿದಾಗ ನನಗೆ ಮುಖ್ಯವೆಂದು ಕಂಡುಬಂದ ಕೆಲವೇ ಕೆಲವು ಅಂಶಗಳನ್ನು, ಕಥನಶಾಸ್ತ್ರದ ಸ್ಥೂಲ ಚೌಕಟ್ಟಿನಲ್ಲಿ, ಈ ಲೇಖನದಲ್ಲಿ ಪ್ರಸ್ತಾಪಿಸುತ್ತೇನೆ. ಎಲ್ಲಾ ಕಾದಂಬರಿಗಳ ಸಮಗ್ರ ವಿಮರ್ಶೆ ಈ ಲೇಖನದ ಉದ್ದೇಶವಲ್ಲ.

ಕಾವ್ಯದಲ್ಲೇ ಆಗಲಿ, ಸಣ್ಣ ಕಥೆ - ಕಾದಂಬರಿಗಳಲ್ಲೇ ಆಗಲಿ, ಲಂಕೇಶರಿಗೆ ಕಥನದ ವಸ್ತು ಎಷ್ಟು ಮುಖ್ಯವೋ ಕಥನ ಕ್ರಮವೂ ಅಷ್ಟೇ ಮುಖ್ಯ. (ಕಾರಂತರ ಮತ್ತು ಮಾಸ್ತಿಯವರ ಬಗ್ಗೆ ಲಂಕೇಶರಿಗಿದ್ದ ಅತೃಪ್ತಿಗೆ ಒಂದು ಕಾರಣವೆಂದರೆ - ಲಂಕೇಶರು ಗ್ರಹಿಸಿದಂತೆ - ಅವರುಗಳಿಗೆ Form ಬಗ್ಗೆ ಆಸಕ್ತಿಯಿಲ್ಲದಿದ್ದುದು.[೨]) ಈ ಕಾರಣದಿಂದಲೇ ಲಂಕೇಶರ ಮೂರು ಕಾದಂಬರಿಗಳಲ್ಲಿ ನಾವು ಮೂರು ಬಗೆಯ ಕಥನ ಕ್ರಿಯೆಯನ್ನು ಮತ್ತು ಮೂರು ಬಗೆಯ ನಿರೂಪಕರನ್ನು ನೋಡುತ್ತೇವೆ.

''ಬಿರುಕು'' ಕಾದಂಬರಿಯ ನಿರೂಪಕ ಕಾದಂಬರಿಯ ಕೇಂದ್ರ ಪಾತ್ರವಾದ ಬಸವರಾಜು, ಮತ್ತು ಅವನು ಉತ್ತಮ ಪುರುಷ ನಿರೂಪಣಾ ಕ್ರಮವನ್ನೇ ಅನುಸರಿಸಿ, ತಾನು

ಕಂಡುದನ್ನು, ಗ್ರಹಿಸಿದುದನ್ನು ಮತ್ತು ಅನುಭವಿಸಿದುದನ್ನು ಮಾತ್ರ ನಿರೂಪಿಸುತ್ತಾನೆ. ನಾವು ಓದುಗರು ಕೃತಿಯ ಎಲ್ಲಾ ಪಾತ್ರಗಳನ್ನು ಮತ್ತು ಘಟನೆಗಳನ್ನು ಅವನ (ನಿರೂಪಕನ) ದೃಷ್ಟಿಕೋನದಿಂದ ಮಾತ್ರ ನೋಡುತ್ತೇವೆ, ಅರಿಯುತ್ತೇವೆ.

ನಿರೂಪಕ ಬಸವರಾಜು 'ಸಿಟ್ಟಿನ ಯುವಕ' ಮತ್ತು ಅವನ ಹಿಂದೆ Catcher in the Rye ಕಾದಂಬರಿಯ ಹೋಲ್ಡನ್[೩] ಮತ್ತು Look Back in Anger ನಾಟಕದ ಜಿಮ್ಮಿ ಪೋರ್ಟರ್ ಇದ್ದಾರೆ. (ಲಂಕೇಶರ ಅನೇಕ ನಾಟಕಗಳ ಕೇಂದ್ರ ಪಾತ್ರಗಳಾದ ಟಿ. ಪ್ರಸನ್ನ, ಜಗನ್ನಾಥ, ಮುಂತಾದವರೂ ಕೂಡ ಬಸವರಾಜುವಿನಂತೆ 'ಸಿಟ್ಟಿನ ಯುವಕರೇ')[೪]. ಇವರೆಲ್ಲರಿಗೂ ಭಯಂಕರ ಸಿಟ್ಟು - ಆಕ್ರೋಶಗಳಿವೆ; ಆದರೆ ಬಹುಮಟ್ಟಿಗೆ ಯಾರ ಬಗ್ಗೆ ಮತ್ತು ಏಕೆ ಎಂಬುದು ಇವರಿಗೆ ಸ್ಪಷ್ಟವಾಗಿಲ್ಲ. ಆದ್ದರಿಂದಲೇ ಬಸವರಾಜು ಕೃತಿಯ ಮಧ್ಯಭಾಗದ ತನಕ ಎಲ್ಲರನ್ನೂ ಢೋಂಗಿಗಳೆಂದು, ಸ್ವಾರ್ಥಿಗಳೆಂದು, ಸಂಸ್ಕೃತಿಯ ಗಂಧವಿಲ್ಲದ ಅನಾಗರಿಕರೆಂದು ಜರಿಯುತ್ತಾನೆ, ತಿರಸ್ಕರಿಸುತ್ತಾನೆ; ಮನೆಯ ಮಾಲೀಕ ಗಂಗಪ್ಪ ಕಂತ್ರಿ; ಪ್ರೊಫೆಸರ್ ರಂಗಯ್ಯ ಢೋಂಗೀ ಮತ್ತು ಸಮಯಸಾಧಕ; ಮೀನಾ ಬೇವಾರ್ಸಿ ಅಂಗ್ರೇಜಿ ಹುಡುಗಿ; ಆನಂದು ಬೆನ್ನೆಲುಬಿಲ್ಲದವನು ಇತ್ಯಾದಿ. ಇದೊಂದು ವಿಧದ ಮಾನಸಿಕ ನೆಲೆಯಲ್ಲಿ ಆತ್ಮರಕ್ಷಣೆಯ ವಿಧಾನ. ಇವರೆಲ್ಲರೂ ಸೇರಿ ಹಣ, ಪ್ರಭಾವ, ಸಾಂಸ್ಕೃತಿಕ ಚಟುವಟಿಕೆಗಳು, ಸಾಹಿತ್ಯ ಪ್ರಕಾಶನ, ಸಾಮಾಜಿಕ ಪ್ರತಿಷ್ಠೆ ...''ಇವುಗಳಿಂದ ಕೂಡಿದ ಕಾಡೊಂದನ್ನು ನಿರ್ಮಿಸಿದ್ದಾರೆ, ಮತ್ತು ಆ ಕಾಡು, ನಾನು ನುಗ್ಗಲಾರದ ಕಾಡು''.[೫]

ತನ್ನ ಪರಿಸರವನ್ನು ಕುರಿತ ತಿರಸ್ಕಾರ ಹಾಗೂ ಅಸಹನೆ ಬಸವರಾಜುವಿನಲ್ಲಿ ಎಷ್ಟು ತುಂಬಿವೆಯೆಂಬುದನ್ನು ಅವನು ಇತರರನ್ನು ಗುರುತಿಸಲು ಉಪಯೋಗಿಸುವ 'ರೂಪಕಗಳು' ಸ್ಪಷ್ಟಪಡಿಸುತ್ತವೆ; ಗಂಗಪ್ಪನ ಮಗಳು ಇಂದಿರಾ 'ಮೋಟು ಜಡೆಯ ಇಜ್ಜಲಿನ ತುಣುಕು'; ಪ್ರೊಫೆಸರ್ ರಂಗಯ್ಯ 'ಗೂಬೆ'; ಶಾಂತಾಳ ತಾಯಿ 'ದೊಡ್ಡ ತಿಮಿಂಗಿಲು'; ಅವಳ ಸ್ನೇಹಿತೆ ಸುವರ್ಣ ಕೂಡ 'ತಿಮಿಂಗಿಲು'; ವಸಂತ್ 'ಕೆಂಪುಕೋತಿ'; ಅವನ ಸುತ್ತ ಇರುವವರೆಲ್ಲ 'ಬೂರ್ಜ್ವಾ ಬಡ್ಡೀ ಮಕ್ಕಳು ...ಈ ನನ್ನ ಜಾತಿಯ ಮೃಗಗಳಿಗಿಂತ ಕೆಟ್ಟವರು ಈ ಜಗತ್ತಿನಲ್ಲೇ ಇಲ್ಲ''(ಪುಟ:೩೧).

ಸಾಹಿತ್ಯಕ, ಶೈಕ್ಷಣಿಕ, ಸಾಂಸ್ಕೃತಿಕ ಇತ್ಯಾದಿ ಎಲ್ಲಾ ಕ್ಷೇತ್ರಗಳಲ್ಲಿಯೂ ವ್ಯಕ್ತಿ ಮತ್ತು ಸಮುದಾಯದ ನಡುವೆ ಬೆಳೆದಿರುವ ಅಗಾಧ ಬಿರುಕನ್ನು ನಾಟಕೀಯವಾಗಿ ದಾಖಲಿಸಲು ಪ್ರಯತ್ನಿಸುವ ''ಬಿರುಕು'' ಕಾದಂಬರಿಯ ಕಥನಕ್ಕೆ 'ಸೀಮಿತ ಉತ್ತಮ ಪುರುಷ ನಿರೂಪಣಾ ಮಾರ್ಗ'ವನ್ನು ಲೇಖಕರು ಆಯ್ಕೆ ಮಾಡಿರುವುದು ಕಥನ ಕ್ಷೇತ್ರದಲ್ಲಿ ಲಂಕೇಶರಿಗಿರುವ ಪ್ರಯೋಗಶೀಲತೆಯ ಸಾಕ್ಷಿ. ಆದರೆ ಇದೊಂದು ಅತಿ ಕಠಿಣ ಪ್ರಯೋಗ ಕೂಡಾ. ಏಕೆಂದರೆ, ಇಂತಹ ನಿರೂಪಣೆಯಲ್ಲಿ ನಿರೂಪಕನಿಗೂ ಕೃತಿಯ 'ಸೂಚಿತ ಲೇಖಕ'ನಿಗೂ ಅಂತರವಿದ್ದು ಆ ಅಂತರ ಓದುಗರಿಗೆ ಸ್ಪಷ್ಟವಾಗಬೇಕು.[೬] ಎಂದರೆ ಬಸವರಾಜುವಿನ ದೃಷ್ಟಿಕೋನ ಸೂಚಿತ ಲೇಖಕನ ದೃಷ್ಟಿಕೋನವಲ್ಲ, ಮತ್ತು ನಿರೂಪಕನ ವ್ಯಕ್ತಿತ್ವದಲ್ಲೇ ಬಿರುಕು ಇದೆ ಎಂಬುದು ಓದುಗರಿಗೆ ತಿಳಿಯಬೇಕು. ಈ ದಿಕ್ಕಿನಲ್ಲಿ ಲಂಕೇಶರು

ಸಾಕಷ್ಟು ಕಾಳಜಿ ವಹಿಸಿ ಅನೇಕ ಸೂಚನೆಗಳನ್ನು ಕೊಡುತ್ತಾರೆ.

ಉದಾಹರಣೆಗೆ : ಬಸವರಾಜುವಿನ ಸಿಟ್ಟು - ಅತೃಪ್ತಿಗೆ ಒಂದು ಮುಖ್ಯ ಕಾರಣ ಅವನ ವೈಯಕ್ತಿಕ ಬದುಕು. ಅವನ ತಂದೆ ಗತಿಸಿದ ನಂತರ ಅವನ ತಾಯಿಗೆ ಇನ್ನೊಬ್ಬನೊಡನೆ ಸಂಬಂಧವಿದ್ದುದು ಮತ್ತು ಅದು ಅವನಿಗೆ ಅಸಮಾಧಾನಕರವಾಗಿದ್ದುದು ಕೃತಿಯ ಒಂದು ಭಾಗದಲ್ಲಿ ಬರುವ ಈ ಮಾತುಗಳಿಂದ ತಿಳಿಯುತ್ತದೆ : ''...ಆದರೆ ಆ ಹೊತ್ತನ್ನು ನೆನೆಯುತ್ತಾ ಮನೆಯಲ್ಲಿ ಮಲಗಿದ್ದ ಅವನನ್ನು ಮರೆಯುವಂತಿರಲಿಲ್ಲ. ಆತ ಕಪ್ಪಗಿದ್ದ, ಬಲವಾಗಿದ್ದ. ನಾನು ಬೈದರೆ ನಕ್ಕು ಅಪ್ಪನ ಹತ್ತಿರ ಮಲಗುತ್ತಿದ್ದ'' (ಪು:೭೬); ''ನಾನು ಇಪ್ಪತ್ತ ಮೂರು ವರ್ಷ ತಂದೆಯರ ಜೊತೆಗಿದ್ದೇನೆ''(ಪು:೯೦); ಇತ್ಯಾದಿ. ಹಾಗೆಯೇ ತನ್ನ ಗ್ರಾಮೀಣ ಪರಿಸರವನ್ನು ಅಗಾಧವಾಗಿ ಪ್ರೀತಿಸುವ ಬಸವರಾಜನು ನಗರ ಜೀವನಕ್ಕೆ ಹೊಂದಿಕೊಳ್ಳುವುದೇ ಇಲ್ಲ. ಅವನಲ್ಲಿಯೇ ಇರುವ ಅಂತಹ ಅಗಾಧ 'ಬಿರುಕ'ನ್ನು ಲಂಕೇಶರು ಸಾಂಕೇತಿಕವಾಗಿಯೂ ಮತ್ತೆ ಮತ್ತೆ ನಮ್ಮ ಗಮನಕ್ಕೆ ತರುತ್ತಾರೆ. ತನ್ನ ಭ್ರಾಮಕ ಲೋಕದಿಂದ ಹೊರಬರುವಾಗ ಬಸವರಾಜು ತನ್ನ ಮೇಲಂಗಿಯನ್ನು ಕಳೆದುಕೊಂಡು ಅರೆಬೆತ್ತಲೆಯಾಗಿರುತ್ತಾನೆ. ಅನಂತರ ಚಂದ್ರಕಾಂತನ ಷ್ಯಾರ್ಟ್, ಮುಂದೆ ಪರಮನ ಅಂಗಿ, ಪ್ರೊ. ರಂಗಯ್ಯನ ಕೋಟು, ಇವೇ ಮುಂತಾದವುಗಳನ್ನು ಹಾಕಿಕೊಳ್ಳುತ್ತಾನೆ. ಆದರೆ, ಇವು ಯಾವುವೂ ಅವನ ದೇಹದ ಅಳತೆಗೆ ಹೊಂದುವುದಿಲ್ಲ. ಈ ಸಂಗತಿ (ಯೂಂಗ್‌ನ 'ಮುಖವಾಡ' ಪರಿಕಲ್ಪನೆಯ ಹಿನ್ನೆಲೆಯಲ್ಲಿ) ಅವನು ಸ್ವಂತ ವ್ಯಕ್ತಿತ್ವಕ್ಕಾಗಿ ನಡೆಸುವ ಹೋರಾಟವನ್ನು ಮತ್ತು ಅವನ ಸುಪ್ತ ಚಿತ್ತದಲ್ಲಿ ನಡೆಯುತ್ತಿರುವ ಸಾಮಾಜಿಕ ಮುಖ - ವೈಯಕ್ತಿಕ ಮುಖ ಇವುಗಳ ಘರ್ಷಣೆಯನ್ನು ಪ್ರತಿಮಾವಿಧಾನದಲ್ಲಿ ಚಿತ್ರಿಸುತ್ತದೆ.

ಆದರೂ ಒಟ್ಟಾರೆಯಾಗಿ ನಿರೂಪಕ ಬಸವರಾಜು ಮತ್ತು ಸೂಚಿತ ಲೇಖಕನ ನಡುವೆ ಲಂಕೇಶರು ಕಲ್ಪಿಸಲೆತ್ನಿಸಿರುವ 'ಬಿರುಕು' ಸಂಪೂರ್ಣವಾಗಿ ಯಶಸ್ವಿಯಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಲೇಖಕ - ನಿರೂಪಕರಿಗೆ ಇರುವ ಅಂತರ ಓದುಗರ ಅರಿವಿಗೆ ಬರದೆ, ಅವರಿಬ್ಬರೂ ಒಂದೇ ಆಗಿ ಕಾಣುತ್ತಾರೆ. ಎಂದರೆ ನಿರೂಪಕನನ್ನು ವ್ಯಂಗ್ಯಕ್ಕೆ ಗುರಿಮಾಡುವಲ್ಲಿ ಲಂಕೇಶರು ಅಲ್ಲಲ್ಲಿ (ಮುಖ್ಯವಾಗಿ ಢೋಂಗೀ ವ್ಯಕ್ತಿಗಳ ಮತ್ತು ಮೌಲ್ಯಗಳ ವಿರುದ್ಧ ಬಸವರಾಜು ಹರಿಹಾಯುವ ಸಂದರ್ಭಗಳಲ್ಲಿ) ಸೋಲುತ್ತಾರೆ. ಈ ಅಂಶವನ್ನು ಗಿರಡ್ಡಿ ಗೋವಿಂದರಾಜರು ಸರಿಯಾಗಿ ಗುರುತಿಸಿದ್ದಾರೆ : ''ಸಮಾಜದ ಬಗೆಗಿನ ಅಸಹನೆಯಲ್ಲಿ, ಅದರ ಅಪ್ರಾಮಾಣಿಕತೆಯನ್ನು ಕಿತ್ತು ಕಿತ್ತು ತೋರಿಸುವ ಬಯಕೆಯಲ್ಲಿ, ಅದು ಗೌರವಿಸುವ ಸಂಗತಿಗಳ ಹಿಂದಿರುವ ಪೊಳ್ಳುತನಗಳನ್ನು ಚುಚ್ಚಿ ಗೇಲಿ ಮಾಡುವಲ್ಲಿ ಬಸವರಾಜನನ್ನೂ ಮತ್ತು ಲೇಖಕರನ್ನೂ ಬೇರ್ಪಡಿಸಿ ತೋರಿಸುವುದು ಸಾಧ್ಯವಿಲ್ಲ.''

ಹಾಗೆಯೇ, ಇದೇ ಕಾರಣಕ್ಕಾಗಿ, (ಎಂದರೆ ಲೇಖಕನು ನಿರೂಪಕನಲ್ಲಿ ತನ್ಮಯನಾಗುವ ಕಾರಣಕ್ಕಾಗಿ), ಕೃತಿಯ ಕೊನೆಯಲ್ಲಿ ನಿರೂಪಕನಲ್ಲಾಗುವ ಬದಲಾವಣೆಯ ಕಾರಣ ಮತ್ತು ಸ್ವರೂಪ ಅರ್ಥವಾಗುವುದಿಲ್ಲ. ''ತನ್ನನ್ನು ತಾನು ಒಪ್ಪಿಕೊಳ್ಳುವ ಕಥೆ'' ಎಂದು ಲೇಖಕರೇ (ಮುನ್ನುಡಿಯಲ್ಲಿ) ವ್ಯಾಖ್ಯಾನಿಸಿದರೂ, ಬಸವರಾಜು ತನ್ನನ್ನು ತಾನು ಹೇಗೆ

ಮತ್ತು ಏಕೆ ಒಪ್ಪಿಕೊಳ್ಳುತ್ತಾನೆ ಎಂಬುದು ಅಸ್ಪಷ್ಟವಾಗಿಯೇ ಉಳಿಯುತ್ತದೆ. ತಾನು ಪ್ರವೇಶಿಸುವ 'ಭ್ರಾಮಕ ಲೋಕ'ದಲ್ಲಿ ತನ್ನ ಅಸಹಾಯಕತೆ ಅವನ ಅರಿವಿಗೆ ಬರುತ್ತದೆಯೆ? ತನ್ನ ವಿಚಾರಗಳೆಲ್ಲವೂ (ಸಿನೆಮಾದ ನಾಯಕ ನಾಯಿಕೆಯನ್ನು ಪಾರುಮಾಡುವಂತೆ) ತೀರಾ ರೋಮ್ಯಾಂಟಿಕ್ ಮತ್ತು ಬಾಲಿಶ ಎಂದು ಅವನಿಗೆ ಗೊತ್ತಾಗುತ್ತದೆಯೆ? ಕಾದಂಬರಿಯ ಕೊನೆಯ ಬಗ್ಗೆ ಸಂದಿಗ್ಧತೆ ಉಳಿದೇ ಉಳಿಯುತ್ತದೆಂಬ ದೇಸಾಯರ ತೀರ್ಮಾನವನ್ನು ನಾವು ಒಪ್ಪಬಹುದು.[೮]

''ಬಿರುಕು'' ಬರೆದ ಹನ್ನೊಂದು ವರ್ಷಗಳ ನಂತರ ಹೊರಬಂದ ''ಮುಸ್ಸಂಜೆಯ ಕಥಾಪ್ರಸಂಗ''ದಲ್ಲಿ ಲಂಕೇಶರ ಕಾಳಜಿಗಳು ಮತ್ತು ಚಿಂತನಾಕ್ರಮ ಬೇರೆಯಾಗಿವೆ ; ಪರಿಣಾಮತಃ , ಅವರ ಕಥನ ಕ್ರಮವೂ ಬೇರೆಯಾಗುತ್ತದೆ.[೯] ಈ ಕೃತಿಯ ನಿರೂಪಕ ರೂಪರಹಿತ ; ಮತ್ತು ಕಥೆಯ ಆಗುಹೋಗುಗಳಲ್ಲಿ ಅವನ ಪಾತ್ರವೇನೂ ಇಲ್ಲ. ತನ್ನದೇ ಆದ 'ವ್ಯಂಗ್ಯ ವೈನೋದಿಕ ' ಶೈಲಿಯಲ್ಲಿ , ನಿಧಾನವಾಗಿ, ಒಂದು ಹಳ್ಳಿಯ ಕಥೆಯನ್ನು ಸರ್ವಜ್ಞತ್ವದ ನೆಲೆಯಲ್ಲಿ ನಿರ್ವಹಿಸುತ್ತಾನೆ ; ಮತ್ತು ಆಗಾಗ್ಗೆ ವ್ಯಾಖ್ಯಾನಿಸುತ್ತಾನೆ .

ಇನ್ನೂ ಮುಂದುವರಿಯುವ ಮೊದಲು ಕನ್ನಡ ಕಾದಂಬರಿಯ ನೆಲೆಯಲ್ಲಿ ಮುಖ್ಯವಾಗುವ ಒಂದು ಅಂಶವನ್ನು ಪ್ರಸ್ತಾಪಿಸಬೇಕು. ಅದೆಂದರೆ, ಪ್ರಮುಖ ನವ್ಯ ಕಾದಂಬರಿಕಾರರೆಲ್ಲರೂ ಕಾಲಕ್ರಮದಲ್ಲಿ ಪ್ರಾರಂಭಿಕ ವ್ಯಕ್ತಿ ಕೇಂದ್ರಿತ ಚಿಂತನೆ - ನಿರೂಪಣೆಗಳಿಂದ ಸಮಷ್ಟಿಕೇಂದ್ರಿತ ಚಿಂತನೆ - ನಿರೂಪಣೆಯ ದಿಕ್ಕಿನಲ್ಲಿ ಸಾಗಿದರು. ಉದಾಹರಣೆಗೆ : ಆಲನಹಳ್ಳಿ ಕೃಷ್ಣ ಅವರ ''ಕಾಡು'' ಮತ್ತು ''ಭುಜಂಗಯ್ಯನ ದಶಾವತಾರಗಳು''; ಶಾಂತಿನಾಥ ದೇಸಾಯಿಯವರ ''ಮುಕ್ತಿ'' ಮತ್ತು ''ಓಂ ಣಮೋ''; ಅನಂತಮೂರ್ತಿಯವರ ''ಸಂಸ್ಕಾರ '' ಮತ್ತು ''ಅವಸ್ಥೆ''; ಮತ್ತು ಲಂಕೇಶರವರ ''ಬಿರುಕು'' ಮತ್ತು ''ಮುಸ್ಸಂಜೆಯ ಕಥಾಪ್ರಸಂಗ ''. ಇಂತಹ ಬದಲಾದ ಚಿಂತನಾ ಕ್ರಮವನ್ನು ಕೇವಲ ಲೇಖಕರ ವೈಯಕ್ತಿಕ ನೆಲೆಯಲ್ಲಿ ಗುರುತಿಸಬೇಕೇ ಅಥವಾ ೭೦ರ ದಶಕದಲ್ಲಿ, ಕರ್ನಾಟಕದಲ್ಲಿ ನಡೆದ ವ್ಯಾಪಕ ಭೂಸುಧಾರಣೆ, ಜಾತಿ ವಿನಾಶ ಸಂಘ, ದಸಂಸ ಸಂಘಟನೆ ಇವೇ ಮುಂತಾದವುಗಳೊಡನೆ (ಜೆಪಿಯವರ ಚಳುವಳಿಯನ್ನೂ ಇಲ್ಲಿ ಪ್ರಾಯಶಃ ಗಮನಿಸಬೇಕು) ಗುರುತಿಸಬೇಕೇ ಎಂಬುದು ನನಗಿನ್ನೂ ಸ್ಪಷ್ಟವಾಗಿಲ್ಲ. ಪ್ರಾಯಶಃ ದೂರದ ಮುಂಬಯಿಯಲ್ಲಿದ್ದುದರಿಂದ ಯಶವಂತ ಚಿತ್ತಾಲರಲ್ಲಿ ಈ ಬಗೆಯ ಗತಿಯನ್ನು ನಾವು ಕಾಣುವುದಿಲ್ಲ.

ತಮ್ಮ ಕವನಗಳಲ್ಲಾಗಲೀ, ಕಥೆ - ಕಾದಂಬರಿಗಳಲ್ಲಾಗಲೀ, ಲೇಖಕರಾಗಿ ಲಂಕೇಶರ ಪ್ರಮುಖ ಗುರಿಗಳು ಎರಡು : ಮಾನವರನ್ನು ಮತ್ತು ಮಾನವ ವರ್ತನೆಯನ್ನು ಕಪ್ಪು - ಬಿಳುಪು ಚೌಕಟ್ಟಿನಿಂದಾಚೆ, ಅದರ ಎಲ್ಲಾ ವೈರುಧ್ಯಗಳೊಂದಿಗೆ ದಾಖಲಿಸುವುದು. ಇಂತಹ ನಿಲುವಿನ ಗ್ರಹೀತವೆಂದರೆ ಮಾನವ ವರ್ತನೆಯನ್ನು ತಾರ್ಕಿಕ ನೆಲೆಯಲ್ಲಿ ಅರ್ಥೈಸಲು ಸಾಧ್ಯವಿಲ್ಲ. ಲೇಖಕರಾಗಿ ಲಂಕೇಶರ ಎರಡನೆಯ ಗುರಿಯೆಂದರೆ, ಯಾವ ಸಂದರ್ಭದಲ್ಲಿಯೂ ಮತ್ತು ಯಾವ ಕಾರಣಕ್ಕೂ ಭಾವೋದ್ವೇಗಕ್ಕೆ ಎಡೆಕೊಡದಿರುವುದು . ಸ್ವಾತಂತ್ರ್ಯೋತ್ತರ ಕಾಲದ

ಅತ್ಯಂತ ಪರಿವರ್ತನಶೀಲ ಭಾರತೀಯ ಸಮಾಜವನ್ನು ಅದರ ಎಲ್ಲಾ ಆಂತರಿಕ ವೈರುದ್ಧ್ಯಗಳೊಡನೆಯೇ ಚಿತ್ರಿಸುವ ಉದ್ದೇಶವುಳ್ಳ ''ಮುಸ್ಸಂಜೆ''ಯ ನಿರೂಪಕ ಮೇಲೆಕಾಣಿಸಿದ ಎರಡೂ ಗುರಿಗಳನ್ನು ಸಾಧಿಸುವ ಒಂದು ತಂತ್ರ; ಅವನು ಕಥೆಯ ಆಗು-ಹೋಗುಗಳಲ್ಲಿ ಭಾಗಿಯಲ್ಲ;ಮತ್ತು ಅವನ ನಿರೂಪಣಾ ಧಾಟಿಯು ಚೇಷ್ಟೆ, ವ್ಯಂಗ್ಯ, ವಿನೋದ, ವಿಡಂಬನೆ ಇವೆಲ್ಲವುಗಳ ಮಿಶ್ರಣ.

''ಸಂಕ್ರಮಣ ಕಾಲದಲ್ಲಿ ಕಂಬಳ್ಳಿ''ಯನ್ನು ನಿರೂಪಕ ಪ್ರಾರಂಭದಲ್ಲಿಯೇ ಹೀಗೆ ಗುರುತಿಸುತ್ತಾನೆ-ನಿಧಾನವಾಗಿ ಶಿವಮೊಗ್ಗಾ ನಗರ ಕಂಬಳ್ಳಿಯ ಪಾರಂಪರಿಕ ಜೀವನ ಕ್ರಮವನ್ನು ಬದಲಾಯಿಸುತ್ತಿದೆ:''ಕಂಬಳ್ಳಿಯ ಜನರ ಮುಖ್ಯ ಉದ್ಯೋಗ ಬೇಸಾಯ ಮತ್ತು ಹಾಲು ಹೈನು ತೆಗೆದುಕೊಂಡು ಹೋಗಿ ಶಿವಮೊಗ್ಗೆಯಲ್ಲಿ ಮಾರುವುದು ಎಂಬುದು ಪರಂಪರೆಯ ಮಾತಾಯಿತು.ಈಚೆಗೆ ಒಂದು ಹಿಟ್ಟು ಮತ್ತು ಅಕ್ಕಿಯ ಹಲ್ಲರ್ ಬಂದಿವೆ. ಶಿವಮೊಗ್ಗೆಯ ಪ್ರಭಾವದಿಂದ ವರದಕ್ಷಿಣೆ,ಹೆಂಡ, ಜೂಜು,ಪುಢಾರಿತನಗಳೆಲ್ಲಾ ಇಲ್ಲಿ ಕಾಲಿಟ್ಟಿವೆ:ಜಾತಿಗಳ ಹೆಸರಿನಲ್ಲಿ ಹಲಬಗೆಯ ಸಾಹಸಗಳು ನಡೆಯುತ್ತಿವೆ'' (ಪುಟ:೧). ಕೃತಿ ಮುಂದುವರಿದಂತೆ ನಿರೂಪಕನು ಇಂತಹುದೇ ಇತರ ವಿವರಗಳನ್ನು ಗಮನಿಸುತ್ತಾನೆ: ''ಜನ ಕೂಲಿಗೆ ಸಿಕ್ಕುವಂತೆಯೇ ಇಲ್ಲ.ಎಲ್ಲ ಸಾರಾಯಿ ಮಾಡಿಕೊಂಡು ಓಡಾಡುತ್ತಿದ್ದಾರೆ'' (ಪುಟ:೧೩೦); ''ಈಗ ತೆರದ ಬದಲು ವರದಕ್ಷಿಣೆಯ ಪದ್ಧತಿ ಮಾನ್ಯತೆಯನ್ನು ಪಡೆದಿದೆ''(ಪುಟ:೧೩೭); ''ಜಾಜ್ವಲ್ಯಮಾನವಾದ ಸುಖ ಸಮೃದ್ಧಿಯ ರಾತ್ರಿಯನ್ನು ರೈಲಿನ ಶಿಳ್ಳೆ ಮಧ್ಯರಾತ್ರಿಯಲ್ಲಿ ಕಲಕುತ್ತಿದೆ''(ಪುಟ: ೧೪೯); ''ಹ್ಯಾಟು ಬೂಟು ಹಾಕಿದ ಜನ ಬರೆಯತೊಡಗಿದರೆ ಅಪಾಯ ಕಾದಿದೆ ಎನ್ನುವುದು ಅಮಲ್ದಾರ, ಶೇಕದಾರ, ಊರಿಗೆ ಬಂದಾಗ ಅವನಿಗೆ ಗೊತ್ತಾಗಿತ್ತು''(ಪುಟ:೩೩೦)....ಇತ್ಯಾದಿ.

ಈ ನೆಲೆಯಿಂದ ನೋಡಿದಾಗ,ಪರಿವರ್ತನಶೀಲ ಭಾರತೀಯ ಸಮಾಜ ಕನ್ನಡ ಕಾದಂಬರಿಗಳಿಗೆ ವಸ್ತುವಾದಷ್ಟು ಇತರ ಯಾವ ವಿಷಯವೂ ಆಗಿಲ್ಲ.ಕುವೆಂಪು ಅವರ ''ಕಾನೂರು ಹೆಗ್ಗಡತಿ''ಯಿಂದ ಪ್ರಾರಂಭವಾಗಿ ದೇವನೂರರ ''ಒಡಲಾಳ''ದವರೆಗೆ ಕನ್ನಡದ ಮಹತ್ವಪೂರ್ಣ ಕಾದಂಬರಿಗಳೆಲ್ಲವೂ ಭಾರತೀಯ ಸಮಾಜದ ಈ ಚಲನೆಯನ್ನು ಮತ್ತು ಈ ಚಲನಶೀಲತೆಯ ಕಾರಣಗಳು ಮತ್ತು ಪರಿಣಾಮಗಳನ್ನು ಸೆರೆಹಿಡಿಯಲು ಪ್ರಯತ್ನಿಸುತ್ತವೆ.

ಆದರೆ,ಕೂಡಲೇ ಇಲ್ಲಿ ಒತ್ತಿಹೇಳಬೇಕಾದ ಅಂಶವೆಂದರೆ,ಇತರ ವಾಸ್ತವವಾದೀ ಕಾದಂಬರಿಗಳ ನಿರೂಪಕನಿಗೂ/ನಿರೂಪಣಾ ಧಾಟಿಗೂ,''ಮುಸ್ಸಂಜೆ''ಯ ನಿರೂಪಕನಿಗೂ/ನಿರೂಪಣಾ ಧಾಟಿಗೂ ಇರುವ ವ್ಯತ್ಯಾಸ.ಕುವೆಂಪು,ಅನಂತಮೂರ್ತಿ, ಆಲನಹಳ್ಳಿ,ದೇವನೂರು ಮುಂತಾದವರ ಕಾದಂಬರಿಗಳ ನಿರೂಪಕನಿಗೆ ನಮ್ಮ ಸಮಾಜದಲ್ಲಿ ಆಗುತ್ತಿರುವ ಪರಿವರ್ತನೆ ಆಶಾದಾಯಕವಾಗಿದೆ;ಪರಿವರ್ತನೆಯ ಗತಿ ಪ್ರಗತಿಪರವಾಗಿದೆ ಎಂಬ ನಂಬಿಕೆಯಿದೆ;ಕಾರಂತರ ಕಾದಂಬರಿಗಳ ನಿರೂಪಕನಿಗೆ ಪರಿವರ್ತನೆಯ ಬಗ್ಗೆ ಅತೃಪ್ತಿಯಿದೆ;ಸಾಮಾಜಿಕ ಚಲನೆ ನಮ್ಮ ಭಾರತೀಯ ವ್ಯವಸ್ಥೆಗಳನ್ನು

ಮತ್ತು ಮೌಲ್ಯಗಳನ್ನು ಹಾಳು ಮಾಡುತ್ತಿದೆ ಎನ್ನುವ ರೋಷವಿದೆ. ಸಾಮಾಜಿಕ ಚಲನೆ ಮತ್ತು ಪರಿವರ್ತನೆಯ ಬಗ್ಗೆ ಸಾಧ್ಯವಾದಷ್ಟೂ ತಾತ್ವಿಕನೆಲೆಯಲ್ಲಿ ತಾಟಸ್ಥ್ಯ ವಹಿಸಿ, ಕೇವಲ ಪ್ರೇಕ್ಷಕನಂತೆ (ಇದು ಅಂತಿಮವಾಗಿ ಸಾಧ್ಯವಾಗುವುದಿಲ್ಲ ಎನ್ನುವುದು ಬೇರೆ ಸಂಗತಿ) ಸಾಮಾಜಿಕ ಚಲನೆಯ ಪ್ರಕ್ರಿಯೆಯನ್ನು ದಾಖಲಿಸಲು ಪ್ರಯತ್ನಿಸುವ ಕನ್ನಡ ಕಾದಂಬರಿಕಾರರಲ್ಲಿ ಮುಖ್ಯರಾದವರು ಲಂಕೇಶ್ ಮತ್ತು ತೇಜಸ್ವಿ. ಈ ಕಾರಣದಿಂದಲೇ ಇವರ ಕೃತಿಗಳ ನಿರೂಪಕರು ವ್ಯಂಗ್ಯ - ವೈನೋದಿಕ ಧಾಟಿಯನ್ನು ತಮ್ಮ ಕಥನದಲ್ಲಿ ಉಪಯೋಗಿಸಿಕೊಳ್ಳುತ್ತಾರೆ.

ಹಾಗೆ ನೋಡಿದರೆ, ಚೇಷ್ಟೆ, ವ್ಯಂಗ್ಯ, ವಿನೋದ, ವಿಡಂಬನೆ - ಇವುಗಳಿಂದ ಕೂಡಿದ ನಿರೂಪಕನ ಅಸ್ತಿತ್ವವೇ ಲೇಖಕನ ತಾತ್ವಿಕ - ಸಾಮಾಜಿಕ ನಿಲುವುಗಳನ್ನು ಹಾಗೂ ಧೋರಣೆಗಳನ್ನು ಧ್ವನಿಸುತ್ತದೆ.

ತಾತ್ವಿಕ ನೆಲೆಯಲ್ಲಿ ಇಂತಹ ನಿರೂಪಕನ ಅಸ್ತಿತ್ವ ಲೇಖಕನಿಗೆ ಯಾವುದೇ ಆಧ್ಯಾತ್ಮಿಕ- ಪಾರಮಾರ್ಥಿಕ ಅಮೂರ್ತ ತತ್ವಗಳಲ್ಲಿ ನಂಬಿಕೆ ಇಲ್ಲದಿರುವುದನ್ನು ಸ್ಪಷ್ಟಪಡಿಸುತ್ತದೆ. ಲೇಖಕರಾಗಿ/ವ್ಯಕ್ತಿಯಾಗಿ ಲಂಕೇಶರನ್ನು ಭೌತಿಕವಾದೀ-ನಿರೀಶ್ವರ ವಾದಿಯೆಂದು ಗುರುತಿಸಬಹುದು. (ಈ ಹೇಳಿಕೆ ಅವರ ಇತರ ಕಥೆ - ಕಾದಂಬರಿಗಳಿಗೂ ಅನ್ವಯಿಸುತ್ತದೆ). ಯಾವುದೇ ಧಾರ್ಮಿಕ ವ್ಯವಸ್ಥೆ, ನ್ಯಾಯಾಂಗ ವ್ಯವಸ್ಥೆ, ರಾಜಕೀಯ ವ್ಯವಸ್ಥೆ ಇವುಗಳಲ್ಲಿ ನಂಬಿಕೆ ಇರದ ಲಂಕೇಶರಿಗೆ ಮೌಲ್ಯಗಳೆಂದರೆ ಪ್ರೀತಿ - ಸ್ನೇಹ ಮುಂತಾದ ವೈಯಕ್ತಿಕ ಮೌಲ್ಯಗಳು ಮತ್ತು ''ಅದಮ್ಯ ಜೀವನೋತ್ಸಾಹ'' - ಯಾವುದೇ ಪರಿಸ್ಥಿತಿಯನ್ನು ಎದುರಿಸಿ ಬದುಕುವ ಛಲ.

ಈ ಮೌಲ್ಯಗಳನ್ನು ''ಮುಸ್ಸಂಜೆ''ಯ ಸಾವಂತ್ರಿ ಮತ್ತು ಅವಳ ತಾಯಿ ರಂಗವ್ವನಲ್ಲಿ ಕೃತಿ ಸಮರ್ಥವಾಗಿ ಪ್ರದರ್ಶಿಸುತ್ತದೆ. ಒಂದು ಸಂದರ್ಭದಲ್ಲಿ ಸಾವಂತ್ರಿಯೇ ತನ್ನ ತಾಯಿಯನ್ನು, ಅವಳ ಛಲವನ್ನು ಹೀಗೆ ಗ್ರಹಿಸುತ್ತಾಳೆ :''ಅವ್ವ ಅದೇನನ್ನೋ ಗಾಢವಾಗಿ ಚಿಂತಿಸುವ ಹಾಗಿತ್ತು. ಸಾವಂತ್ರಿಗೆ ತಾನು ನೋಡದ ಅಪ್ಪ; ಆತ ಸತ್ತು ಹೋದ ಮೇಲೆ ಜೀವ ಉಳಿಸಿಕೊಳ್ಳಲು ಪಟ್ಟ ಪಾಡು, ತನಗೆ ಯಾವುದಕ್ಕೂ ಕಡಿಮೆಯಿಲ್ಲದಂತೆ ನಡೆಸಿಕೊಂಡು ಬಂದ ಬಗೆ, ಅವಳನ್ನು ಕಿತ್ತು ತಿನ್ನಲು ಕಾದು ನಿಂತ ಊರ ಜನ - ಎಲ್ಲವೂ ನೆನಪಾಗಿ, ಅವ್ವನ ಬಗ್ಗೆ ಅಪಾರ ಕರುಣೆ ಉಕ್ಕಿ ಬಂತು''(ಪುಟ:೮೦). ಇಂತಹ ಛಲದ ಕಾರಣಗಳಿಂದಲೇ ಊರಿನ ಪ್ರಭಾವಿಗಳೆಲ್ಲರನ್ನೂ ಎದುರಿಸಿ, ಬಹಿಷ್ಕಾರದ ಹೆದರಿಕೆಗೂ ಬಗ್ಗದೆ ರಂಗವ್ವ ಸ್ವತಂತ್ರವಾಗಿ ಬದುಕುತ್ತಾಳೆ. ಒಂದು ನಿರ್ಣಾಯಕ ಘಟ್ಟದಲ್ಲಿ ರಕ್ತ ಚೆಲ್ಲಲೂ ಸಿದ್ಧವಾಗಿರುವ ಗುಂಪನ್ನೆದುರಿಸಿ, ತನ್ನ ಮಗಳಿಗೆ ಎಲ್ಲರೆದುರಿಗೇ ಅಂತರ್ಜಾತೀಯ ವಿವಾಹವನ್ನು ನೆರವೇರಿಸಿ,'' 'ಅದೇನಾಗ್ತತೋ ನಾನೋಡ್ಕಂತಿನಿ. ಸುಖವಾಗಿರು ನನ್ನ ಸುಡುಗಾಡು ಮಗಳೇ' ಎಂದು ಅರ್ಧ ಬೈಯುತ್ತ, ಅರ್ಧ ರೋಮಾಂಚನಗೊಳ್ಳುತ್ತ ಊರ ಹಲವರನ್ನು ತನ್ನ ಶಾಪದಿಂದ ಮಲಿನಗೊಳಿಸತೊಡಗಿದಳು''(ಪುಟ:೩೫೨). ಇದು ಬದುಕುವ ಛಲದ ರೋಮಾಂಚನಕಾರೀ ದೃಶ್ಯ. ಇಂತಹ ಛಲವಿಲ್ಲದಿರುವುದರಿಂದಲೇ ಸ್ವಭಾವತಃ ಸಾತ್ವಿಕರೂ,

ಸಜ್ಜನರೂ ಆದ ನಂದ್ಯಪ್ಪ -ನಿಂಗವ್ವ ಅವರ ಬದುಕು ದುಸ್ತರವಾಗುತ್ತದೆ.ಮತ್ತು ಶಿವಿ ಅಸಹಾಯಕಳಾಗಿ ಸಾವನ್ನಪ್ಪಬೇಕಾಗುತ್ತದೆ.(ಇಂತಹುದೇ ಪಾತ್ರ ವಿನ್ಯಾಸವನ್ನು ''ಅಕ್ಕ'' ಕಾದಂಬರಿಯ ಕ್ಯಾತ-ದೇವೀರಿ ಹಾಗೂ ಸಂಪೂರ್ಣಮ್ಮ-ರಂಗಜೆಟ್ಟ ಇವರುಗಳಲ್ಲಿ ನಾವು ಕಾಣುತ್ತೇವೆ. ಛಲ -ಕ್ರೋಧ -ಹಠಗಳಿಲ್ಲದ ಒಳ್ಳೆಯತನ ಎಂದೂ ಲಂಕೇಶರಿಗೆ ಒಂದು ಮುಖ್ಯ ಮೌಲ್ಯವಾಗುವುದಿಲ್ಲ.)

'ಬದುಕುವ ಛಲ'ಕ್ಕೆ ಪೂರಕವಾಗಿ ಲಂಕೇಶರು ವ್ಯಕ್ತಿಯೊಬ್ಬನು/ಳು 'ನೋವಿನಿಂದ ಮಾಗುವುದನ್ನು' ಒತ್ತುಕೊಟ್ಟು ಹೇಳುತ್ತಾರೆ.(ಈ ವಿಧದ ಮಾಗುವಿಕೆ ಕಾರಂತರ ಎಲ್ಲಾ ಕಾದಂಬರಿಗಳಲ್ಲಿಯೂ,ಮುಖ್ಯವಾಗಿ ಅವರ ಸ್ತ್ರೀ ಪಾತ್ರಗಳಲ್ಲಿ ಒಡೆದು ಕಾಣುತ್ತದೆ). ಬದುಕಿನ ಸಾರ್ಥಕತೆಯನ್ನು ಅಳೆಯಲು ಲಂಕೇಶರಿಗೆ ಇದೊಂದು ಪ್ರಮುಖ ಮಾನದಂಡ. ಒಂದು ಸಂದರ್ಭದಲ್ಲಿ ಸಾವಂತ್ರಿಗೆ ''ರಂಗವ್ವ ನೋವನ್ನು ಅನುಭವಿಸಿದಂತೆ ,ಕ್ರಮೇಣ ಹಣದ ಹಿಡಿತದಿಂದ ಬಿಡಿಸಿಕೊಳ್ಳುತ್ತಿದ್ದಂತೆ'' ಅನಿಸಿತು.(ಪುಟ:೨೭೩). ಬದುಕನ್ನು ಕುರಿತ ತನ್ನ ಒಂದು ವ್ಯಾಖ್ಯಾನದಲ್ಲಿ ನಿರೂಪಕನು ''ದುಃಖವನ್ನು ಅನುಭವಿಸಿದವರು ಬಲ್ಲಂತೆ'' ಎಂದು ವಿವರಿಸುತ್ತಾನೆ(ಪುಟ:೩೨೫).ಇಕ್ಬಾಲನಿಗೆ ಸಾವಂತ್ರಿಯೆದುರು ತಾನು ತುಂಬಾ ಸಣ್ಣವನೆಂದೆನಿಸುತ್ತದೆ ;ಏಕೆಂದರೆ,''ಸಾವಂತ್ರಿಗೆ ಆದಂತೆ ಪ್ರೇಮ ತನ್ನ ಅಂತರಂಗವನ್ನು ಸುಟ್ಟು ಶುದ್ಧಗೊಳಿಸಿಲ್ಲ''(ಪುಟ:೩೩೭).''ಸಾವಿನ ಅಂಚಿನಲ್ಲಿಯೇ ಸಾಗುವ ಬದುಕಿನಲ್ಲಿ'' ದುಃಖ ನೋವುಗಳಿಂದ ಮಾಗುವುದು ಮಾತ್ರ ಮನುಷ್ಯನಿಗೆ ಸಾಧ್ಯವಿರುವ ಸಾಧನೆ. ಈ ಸಂದರ್ಭದಲ್ಲಿ 'ಮಾಗುವುದು' ಎಂದ ಕೂಡಲೇ ಶೇಕ್ಸ್‌ಪಿಯರ್‌ನ 'Ripeness is all' ಎಂಬ ಪ್ರಸಿದ್ಧ ಉಕ್ತಿಯನ್ನು ನೆನಪಿಸಿಕೊಳ್ಳಬೇಕಾಗಿಲ್ಲ ;ಕಾಳಿದಾಸನ ''ಶಾಕುಂತಲಾ'' ನಾಟಕದ ಒಂದು ಪ್ರಮುಖ ಲಕ್ಷಣವೂ 'ನೋವಿನಿಂದ ಮಾಗುವಿಕೆ'ಯ ನಾಟ್ಯೀಕರಣ.

ಇಲ್ಲೊಂದು ಪ್ರಶ್ನೆ ಏಳುತ್ತದೆ: ವೈಯಕ್ತಿಕ ನೆಲೆಯ ಪ್ರೀತಿ-ಸ್ನೇಹ ಮತ್ತು ಅದಮ್ಯ ಜೀವನೋತ್ಸಾಹ (ರಂಗವ್ವ,ಸಾವಂತ್ರಿ,ದೇವೀರಿ ಇವರುಗಳಲ್ಲಿ ನಾವು ಕಾಣುವಂತೆ) ಇವುಗಳೇ ಎಲ್ಲದಕ್ಕಿಂತ ಹೆಚ್ಚಿನ ಮೌಲ್ಯಗಳೆಂದಾದರೆ, ಈ ನಿಲುವು ಎಷ್ಟು ಸಮರ್ಥನೀಯ? ಸಮಾಜಕ್ಕೆ ಎಷ್ಟು ಆರೋಗ್ಯಕರ? (''ಲಂಕೇಶ್ ಪತ್ರಿಕೆ''ಯ ಒಟ್ಟಾರೆ ಧೋರಣೆಯ ಬಗ್ಗೆಯೂ ಇವೇ ಪ್ರಶ್ನೆಗಳೇಳುತ್ತವೆ.)ಈ ನಿಲುವಿನ ತಾರ್ಕಿಕ ತುದಿಯೆಂದರೆ ಸಂಪೂರ್ಣ ಸಿನಿಕತೆಯಾಗಿ,ಈ ನಿಲುವನ್ನೊಳಗೊಳ್ಳುವ ಕೃತಿಗಳೆಲ್ಲವೂ ಡಾರ್ವಿನ್ನನ ವಿಕಾಸವಾದದ ಸಾಮಾಜಿಕ ಆಯಾಮದ ದಾಖಲೆಗಳಾಗುತ್ತವೆ.ಅವು ಎಷ್ಟೇ ದುರ್ಬಲವಾಗಿದ್ದರೂ ಸಾಮೂಹಿಕ ವ್ಯವಸ್ಥೆಗಳಲ್ಲಿ ನಂಬಿಕೆಯಿರದ ಮತ್ತು ಆಧ್ಯಾತ್ಮಿಕ ಆಯಾಮವಿರದ ಸಮಾಜದಲ್ಲಿ ಬದುಕಲು ಸಾಧ್ಯವೇ ಇಲ್ಲ.ಪ್ರಾಯಶಃ ಈ ಕಾರಣದಿಂದಲೇ ಲಂಕೇಶರ ಕಥೆ-ಕಾದಂಬರಿಗಳನ್ನು ಓದುವಾಗ,ಅವರ ಅದ್ಭುತ ಪಾತ್ರ ಸೃಷ್ಟಿ ,ಭಾಷೆಯ ಕಸುವು, ನಿರ್ಭೀತ ವಿಡಂಬನೆ ಇವೆಲ್ಲವನ್ನೂ ಮೆಚ್ಚುತ್ತಲೇ ಏನೋ ಒಂದು ವಿಧದ -ಏನನ್ನೋ ಕಳೆದುಕೊಂಡ - ಅತೃಪ್ತಿ ನಮ್ಮಲ್ಲಿ ಮೂಡುತ್ತದೆ.

ಸಾಹಿತ್ಯಕ ನೆಲೆಯಲ್ಲಿ ''ಮುಸ್ಸಂಜೆ''ಯ ನಿರೂಪಕನು ಎರಡು ಸಂಗತಿಗಳನ್ನು

ಧ್ವನಿಸುತ್ತಾನೆ : ದೇಶೀಯತೆಯ ತುಡಿತ ಮತ್ತು ಸ್ವಾಭಿಮುಖತೆ.

ನವ್ಯಕಾಲಘಟ್ಟದ ತಮ್ಮ "ಬಿರುಕು" ಕಾದಂಬರಿ, "ಟಿ.ಪ್ರಸನ್ನನ ಗೃಹಸ್ಥಾಶ್ರಮ" ಇತ್ಯಾದಿ ನಾಟಕಗಳು -"ವಾಮನ" ಮುಂತಾದ ಸಣ್ಣ ಕಥೆಗಳು - ಇವುಗಳ ಮೇಲೆ ಪಾಶ್ಚಿಮಾತ್ಯ ಸಾಹಿತ್ಯದ ದಟ್ಟ ಪ್ರಭಾವವಿದ್ದುದು ಲಂಕೇಶರ ಅರಿವಿಗೆ ಬಂದಿತ್ತು. ಆದರೆ, ವಿದೇಶೀ ಮಾದರಿಗಳ ಆಕರ್ಷಣೆಯೊಡನೆಯೇ, ಅಷ್ಟೇ ತೀವ್ರವಾದ, ದೇಶೀಯತೆಯ, ದೇಶೀ ಮಾದರಿಗಳ ಹಾಗೂ ಪರಂಪರೆಗಳ ತುಡಿತವೂ ಇತ್ತು. ಇಂತಹ ದೇಶೀ ತುಡಿತದ ಸ್ವರೂಪವನ್ನು ಒಂದು ರೂಪಕದ ಮುಖಾಂತರ ಅತ್ಯಂತ ಪರಿಣಾಮಕಾರಿಯಾಗಿ ಲಂಕೇಶ್ ಒಂದು ಸಂದರ್ಭದಲ್ಲಿ ಹೀಗೆ ವಿವರಿಸುತ್ತಾರೆ : "....ದೇವರಸನ ಹಳ್ಳಿಯಲ್ಲಿ ಬೆಳೆದ ನಂಜನಗೂಡಿನ ರಸಬಾಳೆ ಯಾವ ವೈಶಿಷ್ಟ್ಯವನ್ನು ಪಡೆದಿರುತ್ತದೆ, ಯಾವ ಸೊಗಡನ್ನು, ಸ್ವಾದವನ್ನು ಪಡೆದಿರುತ್ತದೆಯೋ ಅಂಥದು ನನ್ನ ಕೃತಿಯಲ್ಲಿ ಇರಬೇಕು...ಇದು ಇಷ್ಟು ಸರಳವಾದದ್ದು, ಸ್ಥಳೀಯವಾದದ್ದು, ಖಾಸಗಿಯಾದದ್ದು, ಅರ್ಥಪೂರ್ಣವಾದದ್ದು- ಇದನ್ನು ನಾವು ಅಂತರ್‌ರಾಷ್ಟ್ರೀಯ ಪ್ರಜ್ಞೆಯಲ್ಲೂ ಕಳೆದುಕೊಳ್ಳಬಾರದು".[೧೦]

ಇಂತಹ ದೇಶೀಯತೆಯ ಸೊಗಡನ್ನು ಮತ್ತು ಸ್ವಾದವನ್ನು ನಾವು "ಮುಸ್ಸಂಜೆ"ಯ ವಸ್ತುವಿನಲ್ಲಿ, ನಿರೂಪಕನಲ್ಲಿ ಮತ್ತು ಕಥನಕ್ರಮದಲ್ಲಿ ಕಾಣುತ್ತೇವೆ. ಕೃತಿಯ ಹೆಸರೂ ಮೊದಲಿಗೆ ಈ ಅಂಶವನ್ನು ನಮ್ಮ ಗಮನಕ್ಕೆ ತರುತ್ತದೆ :'...ಒಂದು ಕಥಾಪ್ರಸಂಗ' ಈ ಪದಗಳು ಯಕ್ಷಗಾನ ಪ್ರಸಂಗಗಳನ್ನು ಒಟ್ಟಿಗೇ ನಮ್ಮ ನೆನಪಿಗೆ ತರುತ್ತವೆ. (ಆದರೆ, ಕೂಡಲೇ 'ಮುಸ್ಸಂಜೆ' ಶಬ್ದ 'ಈ ಪ್ರಸಂಗ' ಜಾನಪದ ಕಥೆ - ಪುರಾಣಗಳಿಗಿಂತ ಭಿನ್ನ ಎಂಬುದನ್ನೂ ನಮ್ಮ ಅರಿವಿಗೆ ತರುತ್ತದೆ. ಏಕೆಂದರೆ, ಮನೆಯಲ್ಲಿ ತಾಯಿ - ಅಕ್ಕ - ಅಜ್ಜಿ ಮುಂತಾದವರು ಮಕ್ಕಳಿಗೆ ಕಥೆ ಹೇಳುವುದು ಮುಸ್ಸಂಜೆಯಲ್ಲಲ್ಲ, ರಾತ್ರಿ ಮಲಗುವ ಹೊತ್ತಿನಲ್ಲಿ.) ಹಾಗೆಯೇ, ಇಲ್ಲಿಯವರೆಗೆ ಸರಿಸುಮಾರು ಲಂಕೇಶರು ಬರೆದ ನಾಟಕ - ಕಥೆ- ಕಾದಂಬರಿಗಳು ನಗರ ಜೀವನಕ್ಕೆ ಸಂಬಂಧಿಸಿದ್ದರೆ, "ಮುಸ್ಸಂಜೆ" ಗ್ರಾಮೀಣ ಬದುಕಿನ ಚಿತ್ರಣಕ್ಕೇ ಮುಡಿಪಾಗಿದೆ. ಭಾಷೆಯೂ ಕೂಡ ಉಡುಪನಂತಹ ನಗರ ಜೀವಿಗಳನ್ನು ಹೊರತುಪಡಿಸಿದರೆ, ಗ್ರಾಮೀಣ ಜನಸಾಮಾನ್ಯರು ದೈನಂದಿನ ಬದುಕಿನಲ್ಲಿ ಬಳಸುವಂತಹ ಗ್ರಾಮ್ಯ ಭಾಷೆಯೇ.

ಎಲ್ಲದಕ್ಕಿಂತ ಮುಖ್ಯವಾಗಿ, "ಮುಸ್ಸಂಜೆ"ಯ ನಿರೂಪಕ ಮತ್ತು ಕಥನಕ್ರಮ ದೇಶೀ ಪರಂಪರೆಯಲ್ಲಿ ನಮಗೆ ಚಿರಪರಿಚಿತ -"ಮಲೆಮಾದೇಶ್ವರ", "ಹಾಲುಮತ ಮಹಾಕಾವ್ಯ" ಮುಂತಾದ ಮೌಖಿಕ ಮಹಾಕಾವ್ಯಗಳ ಆವರಣದಲ್ಲಿ ನಿರೂಪಕನಿಗೂ ಕೇಳುಗರಿಗೂ ನೇರಸಂಬಂಧವಿರುತ್ತದೆ ; ನಿರೂಪಕನು ತನಗೇನೂ ಅರಿಯದೆಂದು, ತಪ್ಪಾದರೆ ಕ್ಷಮಿಸಬೇಕೆಂದೂ ಕೇಳುಗರಲ್ಲಿ ವಿನಂತಿ ಮಾಡಿಕೊಳ್ಳುತ್ತಾನೆ[೧೧]; ಕಾಲಾನುಕ್ರಮವಾಗಿ ಕಥೆಯನ್ನು ನಿರೂಪಿಸುತ್ತಾನೆ - ಯಾವುದೇ ಅವಸರ ಒತ್ತಡಗಳಿಲ್ಲದೆ ; ಕೆಲವು ಘಟನೆಗಳ 'ಅರ್ಥವನ್ನು/ನೀತಿಯನ್ನು' ತಾನೇ ಕೇಳುಗರಿಗೆ ವಿವರಿಸುತ್ತಾನೆ ; 'ಇದು ನಿಮಗೆ ಗೊತ್ತಿಲ್ಲ; ಲಕ್ಷ್ಯವಿಟ್ಟು ಕೇಳಿ' ಎಂದು ಕೇಳುಗರೊಡನೆ ಚಕ್ಕಂದವಾಡುತ್ತಾನೆ ; ಅನೇಕ ಘಟನೆಗಳನ್ನು

ಜೋಡಿಸಲು ಏನೂ ಸಂಕೋಚವಿಲ್ಲದೆ 'ಆಗ ಅಲ್ಲಿ ... ಈಗ ಇಲ್ಲಿ' - ಎಂದು ಸುಲಭವಾಗಿ ಸ್ಥಳ - ಕಾಲಗಳನ್ನು ಜಿಗಿಯುತ್ತಾನೆ ; ಮತ್ತು ಗ್ರಾಮೀಣ ಪರಿಸರದ ಆಡು ಭಾಷೆಯನ್ನು ಸತ್ವಯುತವಾಗಿ ಉಪಯೋಗಿಸುತ್ತಾನೆ. ಇವೆಲ್ಲಾ ಗುಣಗಳನ್ನೂ ನಾವು ''ಮುಸ್ಸಂಜೆ''ಯ ನಿರೂಪಕನಲ್ಲಿ ಕಾಣುತ್ತೇವೆ. ಉದಾಹರಣೆಗೆ :

ಒಂದು ಸಂದರ್ಭದಲ್ಲಿ ಮಂಜನ ಬಗ್ಗೆ ಮಾತನಾಡುತ್ತ ಸಾವಿತ್ರಿ-ಶಿವಪ್ಪರ ಬಗ್ಗೆ ನಿರೂಪಣೆ ಹೊರಳಿದಾಗ, ನಿರೂಪಕ ಹೀಗೆ ಹೇಳುತ್ತಾನೆ: ''ಯಾವುದನ್ನೋ ಹೇಳಲುಹೋಗಿ ಯಾವುದಕ್ಕೋ ಬಂದದ್ದಾಯಿತು. ಹಲವರ ಪಾಲಿಗೆ ಬದುಕೇ ಒಂದು ಕಗ್ಗಾಡು ಎಂಬುದು ನಿಜವಾದ್ದರಿಂದ ಕಾಡು, ಊರು ಮತ್ತು ಕಾಡು, ಮನುಷ್ಯ ಕತೆಯಲ್ಲಿ ಸೇರಿದಾಗ ಸಹೃದಯರು ಮನ್ನಿಸಬೇಕು''(ಪುಟ:೧೯೯). ತಾನು ಹೇಳುತ್ತಿರುವ ಕಥೆಯಲ್ಲಿ ಕಾರ್ಯ- ಕಾರಣ ಸಂಬಂಧ ಎಲ್ಲಾ ಸಂದರ್ಭಗಳಲ್ಲಿಯೂ ಕಾಣದೆ ಇದ್ದಾಗ ನಿರೂಪಕನು ಹೀಗೆ ತನ್ನ ಕಥನವನ್ನು ಸಮರ್ಥಿಸಿಕೊಳ್ಳುತ್ತಾನೆ ; ''ಯಾವೊಂದೂ ಕತೆಯ ಘಟನೆಗಳೇ ಆಗಲಿ, ಒಂದರ ಮೇಲೊಂದು ಇಟ್ಟ ಇಟ್ಟಿಗೆಯಂತೆ ಇರಲಾರದು. ಹಿಂದಾದದ್ದು- ಮುಂದಾದದ್ದು ಮತ್ತು ಏಕಕಾಲದಲ್ಲಿ ಆದವು - ಎಲ್ಲ ಸೇರಿ ಒಂದು ಕಥೆಯಾಗುತ್ತದೆ'' (ಪುಟ:೧೪೪). ಹೀಗೆಯೇ, ಇನ್ನೊಂದು ಸಂದರ್ಭದಲ್ಲಿ ತಾನು ತನ್ನ ಕಥನದಲ್ಲಿ ''ದೇಶ, ಕಾಲ, ಜಾಗಗಳನ್ನು ಮಿಶ್ರಣ''ಗೊಳಿಸುತ್ತಿರುವುದನ್ನು ದೀರ್ಘವಾಗಿ ಸಮರ್ಥಿಸಿಕೊಳ್ಳುತ್ತಾನೆ. (ಪುಟ:೨೯೯). ಮತ್ತೊಂದು ಸಂದರ್ಭದಲ್ಲಿ 'ಮಾನಭಂಗ' ಎಂದರೇನೆಂಬುದನ್ನು ವಿವರವಾಗಿ ಓದುಗರಿಗೆ ತಿಳಿಹೇಳುತ್ತಾನೆ.(ಪುಟ:೩೩೩). ಸ್ಥೂಲದರಲ್ಲಿಯೇ ಹೇಳುವುದಾದರೆ, ''ಮುಸ್ಸಂಜೆ''ಯ ನಿರೂಪಕ ಕೇವಲ ಕಥೆಯ ನಿರೂಪಕನಷ್ಟೇ ಅಲ್ಲದೆ ತನ್ನ ಕಥನದ ವ್ಯಾಖ್ಯಾನಕಾರ ಮತ್ತು ವಿಮರ್ಶಕ ಕೂಡ - ಕನ್ನಡ ಜಾನಪದ ಮಹಾಕಾವ್ಯಗಳ ನಿರೂಪಕನಂತೆ.

ವಸ್ತು ಮತ್ತು ಕಥನಕ್ರಿಯೆ ಇವೆರಡೂ ನೆಲೆಗಳಲ್ಲಿ ಪ್ರಾರಂಭದಿಂದಲೂ ಕನ್ನಡ ಲೇಖಕರು ಮಾರ್ಗ x ದೇಶಿ ಘರ್ಷಣೆಯನ್ನು ಎದುರಿಸಬೇಕಾದ್ದರಿಂದ, ಎದುರಿಸಿ ತಮ್ಮವೇ ಆದ ಪರಿಹಾರಗಳನ್ನು ಕಂಡುಕೊಳ್ಳಬೇಕಾದುದರಿಂದ, ಕನ್ನಡದಲ್ಲಿ ಎಲ್ಲಾ (ಪ್ರಾಚೀನ ಹಾಗೂ ಅರ್ವಾಚೀನ) ಪ್ರಮುಖ ಕೃತಿಗಳ ಒಂದು ಸಮಾನ ಲಕ್ಷಣ 'ಸ್ವಾಭಿಮುಖತೆ'. ಕನ್ನಡದ ಪರಂಪರಾಗತ ಕೃತಿಗಳಲ್ಲಿ ಅನಿವಾರ್ಯ ಭಾಗವಾಗಿರುವ 'ಪೀಠಿಕಾ ಪ್ರಕರಣ'ದಲ್ಲಿ ಬರುವ 'ಕುಕವಿ ನಿಂದೆ, ಸ್ವಕಾವ್ಯ ಪ್ರಶಂಸೆ' ಇತ್ಯಾದಿಗಳನ್ನು ನಾವು ಸ್ವಾಭಿಮುಖತೆಯ ಭಾಗವೆಂದು ಪರಿಗಣಿಸಬಹುದು ಎಂದು ಜಿಎಸ್‌ಎಸ್ ಸಾಧಾರವಾಗಿ ಮಂಡಿಸುತ್ತಾರೆ. ಈ ನೆಲೆಯಲ್ಲಿ ಮುದ್ದಣನ ''ರಾಮಾಶ್ವಮೇಧ'' ಒಂದು ಅಪೂರ್ವ ಸ್ವಾಭಿಮುಖೀ ಕೃತಿ. ಲಂಕೇಶರ ಹೆಚ್ಚಿನ ಕೃತಿಗಳಲ್ಲಿ ನಾವು ಈ ಲಕ್ಷಣವನ್ನು ಕಾಣುತ್ತೇವೆ ; ಆದರೆ ಸ್ವಾಭಿಮುಖತೆ ಕೃತಿಯ ಒಂದು ವಿಶಿಷ್ಟ ಆಯಾಮವಾಗುವುದು ''ಮುಸ್ಸಂಜೆ''ಯಲ್ಲಿ.

''ಮುಸ್ಸಂಜೆ''ಯ ಸ್ವಾಭಿಮುಖೀ ನಿರೂಪಕ ತನ್ನ ಕಥನಕ್ರಿಯೆಯಲ್ಲಿ ತೊಡಗಿರುವಾಗ ತನ್ನ ಬಗ್ಗೆ, ತನ್ನ ಕಥನದ ಬಗ್ಗೆ, ಓದುಗರ ಅಭಿರುಚಿಯ ಬಗ್ಗೆ ಅನೇಕ ಗಂಭೀರ ಪ್ರಶ್ನೆಗಳನ್ನು ಎತ್ತುತ್ತಾನೆ; ಮತ್ತು ತನಗೆ ಸರಿಕಂಡ ಉತ್ತರಗಳನ್ನು ಕೊಡುತ್ತಾನೆ.

''ಮುಸ್ಸಂಜೆ '' ಓದುಗರ ಅಭಿರುಚಿಯ ಬಗ್ಗೆ ನಿರೂಪಕನಿಗಿರುವ ಒಂದು ಸರಳ ಗ್ರಹೀತದಿಂದಲೇ ಪ್ರಾರಂಭವಾಗುತ್ತದೆ:''ವಾಚಕ ಮಹಾಶಯರಿಗೆ ಆನಂದದಾಯಕವಾಗ ಬಲ್ಲ ಕಥಾವಸ್ತುಗಳಾದ ಹಣ,ವಿದ್ಯೆ,ಜಾತಿ,ಕುಸ್ತಿ ಮತ್ತು ಪ್ರೇಮವನ್ನು ಕುರಿತ ಈ ವೃತ್ತಾಂತ ನಡೆದದ್ದು ಕಂಬಳ್ಳಿ ಎಂಬ ಗ್ರಾಮದಲ್ಲಿ'' (ಪುಟಡ:೧).ಎಂದರೆ ಓದುಗರ ಸದಭಿರುಚಿಯ ಬಗ್ಗೆ ಈ ನಿರೂಪಕನಿಗೆ ಅಷ್ಟೇನೂ ವಿಶ್ವಾಸವಿಲ್ಲ.ಈ ಕಾರಣದಿಂದಲೇ ಆಗಾಗ್ಗೆ ಈ ನಿರೂಪಕ ತನ್ನ ಕಥನದ ಬಗ್ಗೆ,ಸಾಚಾ ಮತ್ತು ''ಖೊಟ್ಟಿ ಜಾಣತನದ'' ಸಾಹಿತ್ಯದ ಬಗ್ಗೆ ವ್ಯಾಖ್ಯಾನದಲ್ಲಿ ತೊಡಗುತ್ತಾನೆ(ಪುಟ :೧೦೭-೧೦೮;೩೪೪;..ಇತ್ಯಾದಿ).

ನಿರೂಪಕನ ನಿಲುವು ಸೂಚಿತ ಲೇಖಕನ/ಕೃತಿಕಾರನ ನಿಲುವೂ ಆಗಬೇಕೆಂದೇನೂ ಇಲ್ಲ.ಆದರೆ ,''ಲಂಕೇಶ್ ಪತ್ರಿಕೆ''ಯ ಆಳದಲ್ಲಿರುವ ಗ್ರಹೀತಗಳನ್ನು (ಅಧಿಕಾರದಲ್ಲಿ ಇರುವವರೆಲ್ಲರೂ ಭ್ರಷ್ಟರು;ಸಾಹಿತಿಗಳೆಲ್ಲರೂ ಢೋಂಗೀ ವರ್ತನೆಯವರು,ಇತ್ಯಾದಿ) ಗಮನಿಸಿದರೆ ನಿರೂಪಕನಿಗೂ ಕೃತಿಕಾರನಿಗೂ ಈ ಸಂದರ್ಭದಲ್ಲಿ ಅಷ್ಟೇನೂ ಅಂತರ ಕಾಣುವುದಿಲ್ಲ.ಆದರೆ ,ಕೂಡಲೇ ಹೇಳಬೇಕಾದ ಮಾತೆಂದರೆ,ಸರಸವಾಗಿ ಓದುಗರೊಡನೆ ಆಟವಾಡುತ್ತಾ,ನಿಧಾನವಾಗಿ ಒಂದು ಕಥೆಯನ್ನು ಹೇಳುವ ಈ ವಿಧದ ನಿರೂಪಕನನ್ನು ಲಂಕೇಶರು ಸೃಷ್ಟಿಸಿರುವುದರಲ್ಲಿ ಮತ್ತೂ ಒಂದು ಮುಖ್ಯ ಉದ್ದೇಶವಿರುವಂತೆ ತೋರುತ್ತದೆ. ಅದೆಂದರೆ,'ಗಂಭೀರ ' ಮತ್ತು 'ಜನಪ್ರಿಯ 'ವೆಂಬ ಸಾಹಿತ್ಯಕ ವರ್ಗಗಳ ನಡುವಣ ಗೋಡೆಯನ್ನು ಒಡೆದು,ತನ್ನ ಕೃತಿ ಏಕಕಾಲಕ್ಕೆ 'ಜನಪ್ರಿಯ ಸಾಹಿತ್ಯ'ದ ಓದುಗರಿಗೂ, ಗಂಭೀರ ಸಾಹಿತ್ಯಕ ಪ್ರಜ್ಞೆಯುಳ್ಳವರಿಗೂ ದೊರಕುವಂತೆ ಮಾಡುವುದು.ತಮ್ಮ ಇತ್ತೀಚಿನ ಕೃತಿಗಳಲ್ಲಿ 'ಪತ್ತೇದಾರಿ' ಕಥಾ ಪ್ರಭೇದದ ಮುಖ್ಯ ಅಂಶಗಳನ್ನು ದುಡಿಸಿಕೊಳ್ಳುವ ತೇಜಸ್ವಿಯವರ ಬಗ್ಗೆಯೂ ಈ ಮೇಲಿನ ಹೇಳಿಕೆ ಅನ್ವಯಿಸುತ್ತದೆ.

ಲಂಕೇಶರ ಕೊನೆಯ ಕಾದಂಬರಿ ''ಅಕ್ಕ'';ಇದರ ನಿರೂಪಕ ''ಬಿರುಕು'' ಮತ್ತು ''ಮುಸ್ಸಂಜೆ ''ಗಿಂತ ಭಿನ್ನ.ಕೊಳೆಗೇರಿಗಳಲ್ಲಿ ಬದುಕುವವರ ಸುತ್ತ ಹೆಣೆಯಲ್ಪಟ್ಟಿರುವ ಈ ಕೃತಿಯ ನಿರೂಪಕ ಕೃತಿಯ ಒಂದು ಮುಖ್ಯ ಪಾತ್ರವಾದ ಕ್ಯಾತ ;ಆದರೆ ಕೃತಿಯ ಕೇಂದ್ರದಲ್ಲಿರುವ ಪಾತ್ರ ಕ್ಯಾತನ ಅಕ್ಕ ದೇವೀರಿ.

ತಮ್ಮ ಕಥನಕ್ರಿಯೆಯಲ್ಲಿ ಕ್ಯಾತನನ್ನು ನಿರೂಪಕನನ್ನಾಗಿ ಮಾಡುವ ಮೂಲಕ ಇಂತಹ ವಸ್ತುವನ್ನು ಕುರಿತ ಕಥನಗಳಲ್ಲಿರುವ ಅನೇಕ ಅಪಾಯಗಳಿಂದ ಲಂಕೇಶರು ಪಾರಾಗಿದ್ದಾರೆ. ಕೊಳೆಗೇರಿಯ ಬದುಕನ್ನು ಕುರಿತ ಕಥನದ ಒಂದು ಅಪಾಯವೆಂದರೆ ಭಾವೋದ್ವೇಗ; ಇಲ್ಲಿಯ ಬದುಕು ಬದುಕೇ ಅಲ್ಲ;ಇಲ್ಲಿ ವಾಸ ಮಾಡುವವರಿಗೆ ಯಾವ ಸುಖ ಸಂತೋಷಗಳೂ ಇಲ್ಲ -ಎಂಬ ನಿಲುವಿನಿಂದ ಸೃಷ್ಟಿಯಾಗುವ ಕರುಣೆ ಮತ್ತು ಭಾವುಕತೆ. ಇದರ ವಿರುದ್ಧ ತುದಿ ಎರಡನೆಯ ಅಪಾಯ:ಕೊಳೆಗೇರಿಯ ಬದುಕನ್ನು ವೈಭವೀಕರಿಸಿ. ನಿಜವಾದ ಬದುಕು ಇಲ್ಲಿ ಮಾತ್ರ ಕಾಣಬಹುದೆಂಬ ನಿಲುವು.ಕೊಳೆಗೇರಿಯಲ್ಲಿಯೇ ಹುಟ್ಟಿ ಬೆಳೆದಿರುವ ಕ್ಯಾತನೇ ನಿರೂಪಕನಾದ್ದರಿಂದ ಯಾವ ವಿಧದ ಭಾವಾತಿರೇಕ ಅಥವಾ ವೈಭವೀಕರಣವೂ ಇಲ್ಲದೇ ಕೊಳೆಗೇರಿಗಳಲ್ಲಿರುವ ಶೋಷಣೆ ಮತ್ತು ನೋವು,ಹಾಗೆಯೇ

ಅಲ್ಲಿರುವವರಲ್ಲಿ ಕಾಣುವ ಸಂಭ್ರಮ ಮತ್ತು ಜೀವನೋತ್ಸಾಹ ಇವೆಲ್ಲವನ್ನೂ ಕೃತಿ ಚಿತ್ರಿಸುತ್ತದೆ.

ಒಂದು ಸಂದರ್ಭದಲ್ಲಿ ನಿರೂಪಕ ಕ್ಯಾತ ತನ್ನ ಒದುಗರನ್ನು ಉದ್ದೇಶಿಸಿ ಹೀಗೆ ಹೇಳಿಕೊಳ್ಳುತ್ತಾನೆ:''ನೀವು ದೊಡ್ಡೋರು. ಇದೆಲ್ಲಾ ಕೇಳಿ ನಗ್ತಿರಬಹುದು. ಕೊಳೆಗೇರಿ ಪಟ್ಟಿ ಅಂದರೆ ನರಕ ಅಂತ ತಿಳ್ಕೊಂಡಿದ್ದೀರಿ - ಹಂಗೇನಿಲ್ಲ ಸಾರ್''(ಪುಟ:೩೨). ಈ ಕೃತಿಯುದ್ದಕ್ಕೂ ಕ್ಯಾತ ಮಾಡುವುದು ಇದನ್ನೇ - ಹೇಗೆ ಅಲ್ಲಿಯ ಗುಡಿಸಲುಗಳಲ್ಲಿಯೂ ಬದುಕಿನ ತುಡಿತ ವಿವಿಧ ಲಯಗಳಲ್ಲಿ ಕೇಳಿಬರುತ್ತದೆ ಎಂಬುದನ್ನು ದಾಖಲಿಸುವುದು; ಅಲ್ಲಿಯೂ ಸಂಭ್ರಮ-ಉಲ್ಲಾಸಗಳಿವೆ ; ಋತುಮತಿಯಾದ ಕನ್ಯೆಗೆ ಎಲ್ಲರೂ ಸೇರಿ ಆರತಿ ಎತ್ತಿ ಉತ್ಸವ ಮಾಡುತ್ತಾರೆ ; ಕ್ಯಾತ - ಪದ್ಮಿಯಂತಹ ಗಂಡು ಹೆಣ್ಣುಗಳು ಪರಸ್ಪರ ಆಕರ್ಷಿತರಾಗಿ ತಮ್ಮ ಸುಮ್ಮಾನವನ್ನು ಹಂಚಿಕೊಳ್ಳುತ್ತಾರೆ; ನಗುತ್ತಾರೆ, ಅಳುತ್ತಾರೆ, ಪ್ರೀತಿಸುತ್ತಾರೆ; ರೇಸ್‌ನಲ್ಲಿ ಹಣಕಟ್ಟಿ ಅಥವಾ ಸಿನೆಮಾದಲ್ಲಿ ನಾಯಿಕೆಯಾಗಿ ಅಥವಾ 'ಕಾರ್ಮೆಂಟ್' ಸ್ಕೂಲು ಸೇರಿ ಇಂಗ್ಲೀಷ್ ಕಲಿತು ಸಮಾಜದಲ್ಲಿ ಮೇಲೇರುವ ಕನಸು ಕಾಣುತ್ತಾರೆ. ಇಂತಹ ಬದುಕಿನ ತುಡಿತವನ್ನು ಉತ್ತಮ ಪುರುಷ - ಪ್ರಥಮ ಪುರುಷ ಕಥನದಲ್ಲಿ ಅದ್ಭುತವಾಗಿ ಲೇಖಕರು ಸೆರೆಹಿಡಿಯುತ್ತಾರೆ. ಇದು ಸಾಧ್ಯವಾಗಿರುವುದು ಸೀಮಿತ ಪ್ರಜ್ಞೆಯ ಮುಖ್ಯ ಪಾತ್ರವೇ ನಿರೂಪಕನಾಗಿರುವುದರಿಂದ.

ಸೀಮಿತ ಪ್ರಜ್ಞೆಯ ನಿರೂಪಕನಿಂದಾಗುವ ಪ್ರಯೋಜನವೆಂದರೆ, ಕೊಳೆಗೇರಿಗಳಿಗೆ ಕಾರಣವಾಗುವ ಮತ್ತು ಅವುಗಳಲ್ಲಿ ಹಾಸುಹೊಕ್ಕಾಗಿರುವ ಶೋಷಣೆಯ ವಿವಿಧ ಮುಖಗಳನ್ನು ಪರೋಕ್ಷವಾಗಿ ಸೂಚಿಸುವುದು. ಬಹಳಷ್ಟು ಬಾರಿ ಕ್ಯಾತನಿಗೇ ತಾನು ಹೇಳುವ ವಿಷಯಗಳು ಸಂಪೂರ್ಣವಾಗಿ ಅರ್ಥವಾಗಿರುವುದಿಲ್ಲ; ರಾಮಪ್ಪನಂತಹ ಪುಢಾರಿಗಳ ಒಳ್ಳೆಯತನದ ಹಿಂದೆ ಇರುವ ಸ್ವಾರ್ಥ ಮತ್ತು ಚುನಾವಣಾ ರಾಜಕೀಯ; ಸಿನಿಮಾ ಹೆಸರಿನಲ್ಲಿ ಕೊಳೆಗೇರಿಯ ಹೆಣ್ಣುಮಕ್ಕಳ ಮೇಲಾಗುವ ಲೈಂಗಿಕ ಶೋಷಣೆ; ಟಿಸಿಲ್ಲಾ, ಖಿಗವಾ, ನಾಗ ಮುಂತಾದ ರೌಡಿಗಳ ಸ್ಪರ್ಧೆಯಲ್ಲಿ ಇವರುಗಳು ಬಲಿಪಶುಗಳಾಗುವುದು; ಇತ್ಯಾದಿ. ಹಾಗೆಯೇ ನಿರೂಪಕ ಅಪ್ರಬುದ್ಧ ಹುಡುಗನಾದ್ದರಿಂದ ಅವನ ಅಕ್ಕ ದೇವೀರಿಯ ಖಾಸಗೀ ಬದುಕಿನ ಸೆಳೆತ, ಯೌವನದ ಒತ್ತಡ ಇವುಗಳೂ ಅವನಿಗೆ ಅರ್ಥವಾಗುವುದಿಲ್ಲ; ಚುನಾವಣೆ, ಕನ್ನಡ ಚಳುವಳಿಗಳು, ಸಿನಿಮಾ, ಕಾನ್ವೆಂಟ್ - ಇವುಗಳಿಂದ ಕೂಡಿದ ಬೇರೆಯೇ ಆದ ಜಗತ್ತುಗಳ ನೆರಳುಗಳು ಕ್ಯಾತನ ಕೊಳೆಗೇರಿಯ ಮೇಲೆ ಬೀಳುವುದು, ಮತ್ತು ಅಲ್ಲಿ ಬದುಕುವವರು ಆ ನೆರಳುಗಳನ್ನು ಹೊದ್ದುಕೊಳ್ಳಲು ಪ್ರಯತ್ನಿಸುವುದು - ಇವೆಲ್ಲವೂ ಕ್ಯಾತನಿಗೆ ಗೋಚರವಾಗುತ್ತವೆ; ಆದರೆ ಅರ್ಥವಾಗುವುದಿಲ್ಲ. ಇಂತಹ ನಿರೂಪಕ (''ಬದುಕು'' ಕೃತಿಯ ನಿರೂಪಕನಂತೆ) ಓದುಗರ ಅನುಕಂಪ ಮತ್ತು ಅವಿಶ್ವಾಸ ಇವುಗಳ ನಡುವೆ ತೂಗಾಡುತ್ತಾನೆ.

ಕೊನೆಯದಾಗಿ ಒಂದು ಅಂಶವನ್ನು ಪ್ರಸ್ತಾಪಿಸಿ ಈ ಚರ್ಚೆಯನ್ನು ಮುಗಿಸಬಹುದು. ''ಉಸಾ, ಪಂಕಜ, ಗಟ್ಟಿ, ನೀಳಾ ಎಲ್ಲರ ಕಾದಂಬ್ರಿಗಿಂತ ಮುಂಚೇನೇ ನರಸಿಂಹಯ್ಯನ ಕಾದಂಬ್ರಿ ಒದಿದ್ದ'' ''ನಾಲ್ಕು ಸಾಲು ಬರೆದರೆ ಒಂದು ಪೈಗುಳ'' ಬರುವ ಹದಿನೆಂಟರ ಚೀಟಿ

ವಯಸ್ಸಿನ ಕ್ಯಾತ, ''ಕ್ಯಾತನಿಗೆ ದೇವೀರಿ ಗೊತ್ತಾಗಬೇಕು, ಕ್ಯಾತನಿಗೆ ದೇವೀರಿ ಗೊತ್ತಾಗದಿದ್ರೆ ಗೊತ್ತಾಗಲಿಕ್ಕೇ ಇಲ್ಲ ಅಂತ ಗೊತ್ತಾಗಬೇಕು''(ಪುಟ:೬೮) ಎಂಬಂತೆ ಒಂದೊಂದು ಬಾರಿ ಅಸ್ತಿತ್ವವಾದಿಯಾಗಿ ಯೋಚಿಸುವುದು ನೈಜತೆಯಿಂದ ದೂರವಾದಂತೆ ತೋರುತ್ತದೆ.[೪] ''ಬಿರುಕು'' ಕೃತಿಯಲ್ಲಿ ಹೇಗೋ ಹಾಗೆ ''ಅಕ್ಕ'' ಕೃತಿಯಲ್ಲಿಯೂ ಕೆಲವು ಸಂದರ್ಭಗಳಲ್ಲಿ ನಿರೂಪಕನ ಮತ್ತು ಕೃತಿಕಾರನ ನಡುವೆ ಇರಬೇಕಾದ ಅಂತರ ಇಲ್ಲವಾಗುತ್ತದೆ.

ಬರೆದುದು ಮೂರೇ ಕಾದಂಬರಿಗಳಾದರೂ ಕನ್ನಡ ಕಾದಂಬರಿಗೆ ನೂತನ ಆಯಾಮಗಳನ್ನು ಕೊಟ್ಟವರು ಲಂಕೇಶ್; 'ವ್ಯವಸ್ಥೆ, ಕ್ರಾಂತಿ ಮತ್ತು ಜೋಗುಳದ ಹಾಡು'- ಇವೆಲ್ಲವನ್ನೂ ಒಂದೇ ಎಂದು ಕಂಡು ವ್ಯಕ್ತಿಗಳ ನೈತಿಕತೆಯನ್ನು ಅತಿ ಶ್ರೇಷ್ಠ ಮೌಲ್ಯವಾಗಿ ಕಂಡವರು ಲಂಕೇಶ್; ಪ್ರತಿಯೊಂದು ಕೃತಿಯಲ್ಲಿಯೂ ಹೊಸ ಪ್ರಶ್ನೆಗಳನ್ನು ಹೊಸ ಸಂದೇಹಗಳನ್ನು ಹುಟ್ಟು ಹಾಕಿದವರು ಲಂಕೇಶ್!

ಟಿಪ್ಪಣಿಗಳು :

೧. ನೋಡಿ : ಶಾಂತಿನಾಥ ದೇಸಾಯಿ, ''ಪಿ. ಲಂಕೇಶರ ಬಿರುಕು'', **ನವ್ಯ ಸಾಹಿತ್ಯ ದರ್ಶನ**, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ೧೯೯೦, ಪುಟ:೧೨೭-೧೩೬; ಎಂ. ಜಿ. ಕೃಷ್ಣಮೂರ್ತಿ, **ಆಧುನಿಕ ಭಾರತೀಯ ಸಾಹಿತ್ಯ** ; ಜಿ. ಎಸ್. ಆಮೂರ್, ''ಲಂಕೇಶರ ಕಾದಂಬರಿಗಳಲ್ಲಿ ಬದುಕಿನ ತುಡಿತಗಳು'', **ಕನ್ನಡ ಕಥನ ಸಾಹಿತ್ಯ : ಕಾದಂಬರಿ**, ಶ್ರೀಹರಿ ಪ್ರಕಾಶನ, ಧಾರವಾಡ, ೧೯೯೪, ಪುಟ : ೩೩೬-೩೫೬ ; ಕೆ. ವಿ. ನಾರಾಯಣ, ''ಮುಸ್ಸಂಜೆ ಕಥಾ ಪ್ರಸಂಗ : ಗ್ರಹಿಕೆಯ ನೆಲೆಗಳು'', **ಬೇರು ಕಾಂಡ ಚಿಗುರು**, ವಿವೇಕ ಪ್ರಕಾಶನ, ಬೆಂಗಳೂರು, ೧೯೯೭, ಪುಟ : ೩೪೮-೩೫೧ ; ರಾಜೇಂದ್ರ ಚೆನ್ನಿ, ''ಮುಸ್ಸಂಜೆಯ ಕಥಾ ಪ್ರಸಂಗ'', **ಅಧ್ಯಯನ**, ಪರಿಸರ ಸಾಹಿತ್ಯ ಪ್ರಕಾಶನ, ೧೯೮೭; ಟಿ. ಪಿ. ಅಶೋಕ, ''ಲಂಕೇಶ್ ಅವರ 'ಅಕ್ಕ' '', **ಸಾಹಿತ್ಯ ಸಂದರ್ಭ**, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೧, ಪುಟ : ೮೬-೯೧ ; ಯಶವಂತ ಚಿತ್ತಾಲ ''ಮುಸ್ಸಂಜೆಯ ಕಥಾ ಪ್ರಸಂಗ''; ಗಿರಡ್ಡಿ ಗೋವಿಂದರಾಜ, ''ಬಿರುಕು''; ಕಿಕ್ಕೇರಿ ನಾರಾಯಣ, ''ಲಂಕೇಶರ ಕಾದಂಬರಿಗಳ 'ಮುಸ್ಸಂಜೆ ವಲಯ' ''- ಇವು ಮೂರೂ ಸಂ. ಗಂಗಾಧರ ಕುಷ್ಟಗಿ, **ತಲೆಮಾರಿನ ತಳಮಳ**, ಕವಿತಾ ಪ್ರಕಾಶನ, ರಾಯಚೂರು, ೧೯೯೭.

೨. ಮಾಸ್ತಿಯವರ ಕಥೆಗಳನ್ನು 'ಯಾವ ಬುಟ್ಟಿಯಲ್ಲಿ ಬೇಕಾದರೂ ಇಡಬಹುದಾದ ಸೌತೆಕಾಯಿಗಳು' ಎಂದು ಲಂಕೇಶರು ತಮ್ಮ **ಪ್ರಜಾವಾಣಿ** ಲೇಖನದಲ್ಲಿ ಬರೆದಿದ್ದುದು ಎಲ್ಲರಿಗೂ ಗೊತ್ತಿರುವ ವಿಷಯ. ಕಾರಂತರು ''ಯಾವಾಗಲೂ ಕಾದಂಬರೀಲಿ 'ನಾವೆಲ್ ಫಾರಂ' ಅನ್ನ ಸೀರಿಯಸ್ ಆಗಿ ತಗೊಳ್ಳಿಲ್ಲ'', ಎಂದು ೧೯೮೩ರಲ್ಲಿ ಬರೆದ ಲೇಖನವೊಂದರಲ್ಲಿ ಹೇಳುತ್ತಾರೆ. ನೋಡಿ: ಸಂ. ಟಿ. ಪಿ. ಅಶೋಕ, **ಈ ಶತಮಾನದ ನೋಟ : ಶಿವರಾಮ ಕಾರಂತ**, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩, ಪುಟ : ೩೨.

೩. ಆಮೂರ್ ಅವರೂ ಈ ಎರಡೂ ಕಾದಂಬರಿಗಳ ಕೆಲ ಸಾಮ್ಯತೆಗಳನ್ನು ಚರ್ಚಿಸಿದ್ದಾರೆ, **ಕನ್ನಡ ಕಥನ ಸಾಹಿತ್ಯ**, ಪುಟ : ೩೩೭.

೪. ಲಂಕೇಶರ ನಾಟಕಗಳ 'ಸಿಟ್ಟಿನ ಯುವಕ'ರ ಬಗ್ಗೆ ನನ್ನ ಲೇಖನ, ''ಅಸಂಗತ ನಾಟಕಗಳ ತಾರ್ಕಿಕತೆ ಮತ್ತು ಲಂಕೇಶರ ನಾಟಕಗಳು'' ನೋಡಬಹುದು; ಸಂ. ಜಯಪ್ರಕಾಶ ಮಾವಿನಕುಳಿ, **ಲಂಕೇಶರ**

ನಾಟಕಗಳು, ಕರ್ನಾಟಕ ಸಂಘ, ಪುತ್ತೂರು, ೧೯೯೯, ಪುಟ: ೧೭ - ೨೭.

೫. **ಬಿರುಕು**, ೧೯೬೭; ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೯೬; ಪುಟ: ೪೬.

೬. ವಿವರಗಳಿಗೆ ನೋಡಿ : "ಕಥನ ಶಾಸ್ತ್ರ", **ಆಶಯ ಆಕೃತಿ**, ಅಭಿನವ, ಬೆಂಗಳೂರು, ೧೯೯೫.

೭. **ತಲೆಮಾರಿನ ತಳಮಳ** ಪುಟ: ೧೭೯.

೮. **ನವ್ಯ ಸಾಹಿತ್ಯ ದರ್ಶನ**, ಪುಟ: ೧೩೪ - ೧೩೫.

೯. **ಮುಸ್ಸಂಜೆಯ ಕಥಾ ಪ್ರಸಂಗ**, ೧೯೭೮; ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೯೫.

೧೦. **ತಲೆಮಾರಿನ ತಳಮಳ** ಪುಟ: ೩೭೩ - ೭೪.

೧೧. ಸಂ. ಕೇಶವನ್ ಪ್ರಸಾದ್, **ಮಲೆ ಮಾದೇಶ್ವರ**, ಕನ್ನಡ ವಿ.ವಿ., ೧೯೯೭; ಸಂ. ಹೀರಣ್ಣ ದುಂಡೆ, **ಜನಪದ ಹಾಲುಮತ ಮಹಾಕಾವ್ಯ**, ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦; ಇವೇ ಮುಂತಾದ ಜನಪದ ಮಹಾಕಾವ್ಯಗಳಲ್ಲಿ ಬರುವ "ಮತಿ ಗಣ ಪ್ರಾಸವನ್ನರಿಯೆನು ನಾನು", "ಓದನು ಅರಿಯದ ಕಂದನು ಪೇಳುವೆ", ಇತ್ಯಾದಿ ವಿನಯ ಸೂಚಕ ಹೇಳಿಕೆಗಳು ರನ್ನ ಮುಂತಾದ ಅಭಿಜಾತ ಪರಂಪರೆಯ ಲೇಖಕರ ಅತೀವ ಆತ್ಮ ವಿಶ್ವಾಸಕ್ಕೆ ವಿರುದ್ಧವಾಗಿ ಬರುತ್ತವೆ.

೧೨. ಜಿ.ಎಸ್. ಶಿವರುದ್ರಪ್ಪ, "ಕನ್ನಡ ಕವಿಗಳ ಕಾವ್ಯ" ಮತ್ತು "ಹೊಸಗನ್ನಡ ಕವಿತೆಗಳಲ್ಲಿ ಕಾವ್ಯ ಚಿಂತನೆ", **ಸಮಗ್ರ ಗದ್ಯ, ಸಂಪುಟ: ೩**, ಕಾಮಧೇನು ಪ್ರಕಾಶನ, ೧೯೯೬.

೧೩. ವಿವರಗಳಿಗೆ ನೋಡಿ: "ಸ್ವಾಭಿಮುಖಿ ಸಾಹಿತ್ಯ", **ತೌಲನಿಕ ಸಾಹಿತ್ಯ ಮತ್ತು ಇತರ ಲೇಖನಗಳು** ಮೈಸೂರು ವಿ.ವಿ., ಮೈಸೂರು, ೧೯೯೮, ಪುಟ: ೭೧ - ೯೫.

೧೪. **ಅಕ್ಕ**, ಪತ್ರಿಕೆ ಪ್ರಕಾಶನ, ಬೆಂಗಳೂರು, ೧೯೯೧.

೧೫. ಇದೇ ಅಂಶವನ್ನು ಅಮೂರ್ ಅವರೂ ಚರ್ಚಿಸುತ್ತಾರೆ **ಕನ್ನಡ ಕಥನ ಸಾಹಿತ್ಯ**. ಪುಟ: ೩೫೪.

"ಒಂದು ಸಾಹಿತ್ಯ ಕೃತಿ ಸಾಹಿತ್ಯವೋ ಅಲ್ಲವೋ ಎಂಬುದನ್ನು ನಿರ್ಧರಿಸಲು ಸಾಹಿತ್ಯದ ಮಾನದಂಡ ಅವಶ್ಯ. ಆದರೆ ಅದು ಶ್ರೇಷ್ಠ ಕೃತಿಯೋ ಅಲ್ಲವೋ ಎಂದು ನಿರ್ಧರಿಸಲು ಸಾಹಿತ್ಯೇತರ ಮಾನದಂಡ ಅಗತ್ಯ" ಎಂದು ಎಲಿಯಟ್ ಹೇಳಿದ. ಆದ್ದರಿಂದ ನಾವು ಸಾಹಿತ್ಯದ ಮಾನದಂಡದಿಂದಲೇ ಎಲಿಯಟ್ ಎಂಥ ಕವಿಯೆಂಬುದನ್ನು ನಿರ್ಧರಿಸಲು ಆಗುವುದಿಲ್ಲ. ತತ್ವಶಾಸ್ತ್ರ ಮಾನವ ಶಾಸ್ತ್ರ ಇತಿಹಾಸವನ್ನೆಲ್ಲ ಅರಿತಿದ್ದ ಎಲಿಯಟ್ ಕಾವ್ಯ ಒಂದು ಸ್ತರದಲ್ಲಿ ಸೂಕ್ಷ್ಮಾತಿಸೂಕ್ಷ್ಮ ಜೀವಿಯೊಬ್ಬ ಸೋಲನ್ನು ಒಪ್ಪಿಕೊಂಡು ಬಿಟ್ಟ ದೀರ್ಘ ನಿಟ್ಟುಸಿರಿನಂತಿದೆ. ಇನ್ನೊಂದು ಸ್ತರದಲ್ಲಿ ಎಲ್ಲವನ್ನೂ ಅರಿತ ಪ್ರಾಧ್ಯಾಪಕನೊಬ್ಬ ತನ್ನ ಅಂತರ್ಯಕ್ಕೆ ಹೇಳಿಕೊಳ್ಳುವ ಸ್ವಗತದಂತಿದೆ. ಮತ್ತೊಂದು ಸ್ತರದಲ್ಲಿ ಮನುಷ್ಯ ತನ್ನ ಸೋಲನ್ನು ಕೂಡ ಎಂಥ ನಿರಂತರವಾಗಿ ಅರ್ಥ ಸಾಹಿತ್ಯ ಕೃತಿಯಾಗಿ ಪರಿವರ್ತಿಸಬಲ್ಲ ಎಂಬುದನ್ನು ತೋರುವ ಸಂಕೀರ್ಣ ಸಾಧನೆಯಾಗಿದೆ.

- ಲಂಕೇಶ್

(ಟೀಕೆ ಟಿಪ್ಪಣಿ: ಮತ್ಸ್ಯ ಕನ್ನೆಯರು ನನಗಾಗಿ ಹಾಡುತ್ತಿಲ್ಲ...)

‘ಬಿರುಕು’ ಮತ್ತು ‘ಅಕ್ಕ’ :
ಚೆಲ್ಲಾಡಿದ ಒಂದಿಷ್ಟು ಟಿಪ್ಪಣಿಗಳು...

O ರಾಘವೇಂದ್ರ ಪಾಟೀಲ

ಬಿರುಕು :

‘ಬಿರುಕು’ ಕನ್ನಡದ ಒಂದು ವಿಶಿಷ್ಟ ಕಾದಂಬರಿ. ಈ ಕಾದಂಬರಿಯನ್ನು ಓದಿದಾಗೆಲ್ಲ ನನಗೆ ನೆನಪಾಗುವುದು ನಕ್ಷತ್ರಗಳಲ್ಲಿ ನೆಲೆಗೊಂಡಿರುವ ಕಪ್ಪು ರಂಧ್ರಗಳು -Black Hole! ಇದು ಕಪ್ಪು ರಂಧ್ರಗಳ ರೀತಿಯ ಕಾದಂಬರಿ.

ಈ ಕಪ್ಪುರಂಧ್ರಗಳು ನಕ್ಷತ್ರಗಳಲ್ಲಿನ ಅತ್ಯುಗ್ರ ಗುರುತ್ವ ಬಲದ ಕೇಂದ್ರಗಳು. ಇಲ್ಲಿ ಏನಿದ್ದರೂ ಆಕರ್ಷಣೆ - ಆಪೋಶನ! ಇಲ್ಲಿಂದ ಕಿರಣಗಳು ಹೊರಹೊಮ್ಮುವುದಿಲ್ಲ; ಅಷ್ಟೇ ಅಲ್ಲ, ಅದೇ ನಕ್ಷತ್ರದ ಬೇರೆ ಭಾಗಗಳಿಂದ ಹೊರಹೊಮ್ಮುವ ಮತ್ತು ಬೇರೆ ನಕ್ಷತ್ರಗಳಿಂದ ಹೊರಹೊಮ್ಮುವ ಪ್ರಕಾಶ ಕಿರಣಗಳನ್ನು ಕೂಡ ತನ್ನತ್ತ ಎಳೆದುಕೊಂಡು ನುಂಗುತ್ತ ಎಂದೆಂದೂ ಅಂಧಃಕಾರವನ್ನು ಬೀರುತ್ತವೆ.

ಕನ್ನಡದಲ್ಲಿ ಈ ರೀತಿಯ ಕಾದಂಬರಿಗಳು ಬಹಳ ವಿರಳವಾದವುಗಳು. ಬಹುಶಃ ರಾಮಾನುಜನ್ ಅನುವಾದಿಸಿರುವ ಶೌರಿಯವರ ‘ಹಳದಿ ಮೀನು’ ಇನ್ನೊಂದು ಇಂತಹ ಕೃತಿಯೆಂದು ತೋರುತ್ತದೆ. ‘ಬಿರುಕು’ ಅತ್ಯುಗ್ರ ಒಳಮುಖೀ, ತೀವ್ರತೆಯ ಕೃತಿ. ಈ ಕೃತಿಯಿಂದ ಕಿರಣಗಳ ಹೊರಹೊಮ್ಮುವಿಕೆ ಇಲ್ಲ.

ನಾವು ಒಂದು ವಸ್ತುವನ್ನು ನೋಡುವುದು ಅದರಿಂದ ಹೊರಹೊಮ್ಮುವ ಕಿರಣಗಳಿಂದ ಅಥವಾ ಅದರಿಂದ ಪ್ರತಿಫಲನಗೊಳ್ಳುವ ಪ್ರಕಾಶಕಿರಣಗಳ ಸಹಾಯದಿಂದ. ಹಾಗೆಯೇ ಒಂದು ಕೃತಿಯನ್ನು ಗ್ರಹಿಸುವುದು ಅದರಿಂದ ಹೊರಹೊಮ್ಮುವ ‘ಪ್ರಕಾಶಕಿರಣ’ಗಳನ್ನು ವಕ್ರೀಭವನ - ಪ್ರತಿಫಲನ - ದಟ್ಟೈಸಿಕೊಳ್ಳುವ ಕ್ರಿಯೆಗಳ ಮೂಲಕ (refraction -reflection -condensation). ಈ ಕ್ರಿಯೆಗಳಿಂದ, ಅಥವಾ ಕೃತಿಯಿಂದ ಹೊರ ಹೊಮ್ಮುವ ಕಿರಣಗಳೊಂದಿಗಿನ ಅನುಸಂಧಾನದಿಂದ, ನಮ್ಮ ಮನಸ್ಸಿನ ಪಟಲದ

ಮೇಲೆ ಪ್ರತಿಬಿಂಬ ಮೂಡುತ್ತದೆ, ಮತ್ತು ಇಂಥ ಪ್ರತಿಬಿಂಬದ ಮೂಲಕ ನಾವು ಕೃತಿಯನ್ನು ಅರ್ಥಮಾಡಿಕೊಳ್ಳುತ್ತೇವೆ - ಅದರ ದರ್ಶನವನ್ನು ಕಂಡುಕೊಳ್ಳುತ್ತೇವೆ.

ಕೃತಿಯೊಂದರ ಅರ್ಥಗ್ರಹಣದ ಕ್ರಿಯೆ ಹೀಗಿರುವಾಗ, 'Black Hole'ನಂತಹ ಕೃತಿಗಳನ್ನು ಹೇಗೆ ಅರ್ಥ ಮಾಡಿಕೊಳ್ಳುವುದು ಎನ್ನುವ ಪ್ರಶ್ನೆ ಮೂಡುತ್ತದೆ. ಯಾಕೆಂದರೆ ಅರ್ಥೈಸಿಕೊಳ್ಳಲು ಸಹಾಯನೀಡುವಂತಹ ಯಾವ ಕಿರಣಗಳ ಹೊರಹೊಮ್ಮುವಿಕೆಯೂ ಇಲ್ಲಿರುವುದಿಲ್ಲ...ತೀವ್ರವಾಗಿ ಕೇಂದ್ರಸ್ಥವಾಗಿರುವ (intensely centripetal) ಲೇಖಕನ ಮನಸ್ಸನ್ನು ಘನೀಭವಿಸಿ ಇಲ್ಲಿ ಇಡಲಾಗಿರುತ್ತದೆ ! ಇಂಥ ಕೃತಿ ಒಂದು ರೀತಿಯಾಗಿ ಜ್ಞಾನ ಸ್ವನಿಷ್ಠತಾವಾದವನ್ನು ಬಿಂಬಿಸುವಂತಹುದು - ಸತ್ಯಕ್ಕೆ ಬಾಹ್ಯ ಪ್ರಮಾಣ ಯಾವುದೂ ಇಲ್ಲ- ಜ್ಞಾನವು ಏನಿದ್ದರೂ ಜ್ಞಾತೃನಿಷ್ಠವಾದದ್ದು - ಎಂದು ನಂಬಿರುವಂತಹುದು.

ಹಾಗಾದರೆ ಇಂಥ ಕೃತಿಯನ್ನು ಅರ್ಥೈಸಿಕೊಳ್ಳಲು ನಾವು ಏನು ಮಾಡಬೇಕು? ...ಇಂಥ ತೀವ್ರ ಸ್ವನಿಷ್ಠತಾವಾದದ ಕೃತಿಗಳನ್ನು ಅರ್ಥೈಸಿಕೊಳ್ಳಲು ಓದುಗನೂ ಸ್ವನಿಷ್ಠತಾ ಮಾರ್ಗವನ್ನೇ ಅನುಸರಿಸಬೇಕು...ಇಂಥ ಕೃತಿಗಳನ್ನು ಅರ್ಥೈಸಿಕೊಳ್ಳಲು ಇರುವ ಮಾರ್ಗವೆಂದರೆ - ಈ ಕಪ್ಪುರಂಧ್ರಗಳಲ್ಲಿ ಜಿಗಿಯುವುದು; ಎಲ್ಲವನ್ನೂ ಅಂತಸ್ಥಗೊಳಿಸಿ ಕೊಳ್ಳುತ್ತಿರುವ ಅದರೊಳಗೆ ಇಳಿದು ಅದರ ತೀವ್ರವಾದ ಸಬ್ಜೆಕ್ಟಿವಿಟಿಯೊಂದಿಗೆ ಬೆರೆಯುತ್ತ- ಮಿಳಿತವಾಗುತ್ತ, ಅದರ ಅಂತರಂಗದ ಅಂತರಂಗವಾಗುತ್ತ - ಅದರ ದರ್ಶನದ ದರ್ಶನ ಮಾಡಿಕೊಳ್ಳುವುದು...

ಆದರೆ 'ಬಿರುಕು' ಕಾದಂಬರಿ ಎಷ್ಟು ನಿರ್ದಿಷ್ಟವಾದುದೆಂದರೆ, ಈ ರೀತಿಯ ಸಾಮಾನ್ಯ ಮಾರ್ಗವನ್ನು ಅನುಸರಿಸಿ - ಅದರೊಳಗೆ ಜಿಗಿದು ಮಿಳಿತವಾಗುವ ಮೂಲಕ ಅದನ್ನು ಅರ್ಥೈಸಿಕೊಳ್ಳುವ ಕ್ರಿಯೆಗೆ ಕೂಡ ಇದು ಒಡಂಬಡದೇ ಅಡೆತಡೆ ಒಡ್ಡುತ್ತದೆ - ಟಾಂಗು ಕೊಡುತ್ತದೆ. ಇದು ಯಾವುದೇ ಹಂತದಲ್ಲಿಯೂ ಕೂಡ ಸಾಮಾನ್ಯೀಕರಣಕ್ಕೆ ಒಡಂಬಡುವುದೇ ಇಲ್ಲ. ಹೀಗಾಗಿ 'ಬಿರುಕು' ಆಧುನಿಕತೆಯ ಅತ್ಯುಗ್ರ ವ್ಯಕ್ತಿವಾದೀ ಕೃತಿಯಾಗಿದೆ ಮತ್ತು ಹಾಗಿರುವುದರ ಮೂಲಕ ತನ್ನದೇ ಒಂದು ನಿರ್ದಿಷ್ಟ ನಮೂನೆಯನ್ನು ಬಿಂಬಿಸುತ್ತದೆ....

o

o

ಇಲ್ಲಿ ಬಸವರಾಜನು ಉಳಿದವರೆಲ್ಲರ ಸುಳ್ಳು ತಟವಟಗಳನ್ನು ಕಂಡುಕೊಳ್ಳುತ್ತ ಅನುಭವಿಸುತ್ತಾನೆ. ತಿಮಿಂಗಲು (ಪ್ರೊಫೆಸರರ ಹೆಂಡತಿ) - ಇದ್ದಿಲುಬುರಾಯ (ಇಂದಿರಾ)- ಆನಂದಮೂರ್ತಿ - ವಸಂತ - ಚಂದ್ರಕಾಂತ - ರಂಗಯ್ಯ - ಬಸವರಾಜ ಗುರುತಿಸುವ - ಇವರೆಲ್ಲರ ಸುಳ್ಳು ತಟವಟಗಳು ಸೇರಿ ಕಟ್ಟುವ ಪ್ರಪಂಚ ಬಸವರಾಜನಿಗೆ ಸಹಿಸಲಸಾಧ್ಯವಾದ ಮಿಥ್ಯಾ ಪ್ರಪಂಚವೆನಿಸಿ, ಅವನು ಇಂಥ ವಾಸ್ತವದಿಂದ ಪರಾಙ್ಮುಖಗೊಂಡು ಇನ್ನೊಂದು ಪ್ರಪಂಚವನ್ನು ಪ್ರವೇಶಿಸುತ್ತಾನೆ. ಹೀಗೆ ಹೊಸದಾಗಿ ಹೊಗುವ ಅವನ ಪ್ರಪಂಚ ಕೂಡ ಭ್ರಮಾತ್ಮಕವಾದದ್ದೇ. ಈ ಹೊಸ ಪ್ರಪಂಚದ ಸಂಗಾತಿ ಮತ್ತು ಸಂಗತಿಗಳೆಂದರೆ :

ಸಾಹಿತ್ಯ ಸಂವಾದ :೫೪-೫೫

ಬೋದಿಲೇರನ ಸಖಿ/೮೭

ಗೂಂಡಾ ನಾಯಕ್ ಮತ್ತು ಅವನ ಗ್ಯಾಂಗಿಗೆ ಸಹಾಯಕನಾಗಿರುವ ಸಬ್ ಇನ್‌ಸ್ಪೆಕ್ಟರ್ ಮುತ್ತಯ್ಯ- ನಾಯಕನ ವಶವರ್ತಿಯಾಗಿರುವ ಶಾಂತಾ, ಹೊಟೆಲ್ಲಿನ ಮಾಣಿ ; ಹೊಟೆಲ್ ಮತ್ತು ಅಲ್ಲಿ ಸಂಭವಿಸುವ ಹೋಮೋ ಸೆಕ್ಸ್ ಇತ್ಯಾದಿ . ವಾಸ್ತವ ಮತ್ತು ಭ್ರಾಮಕ ಪ್ರಪಂಚಗಳೆಂದು ನಾನು ಹೆಸರಿಸುತ್ತಿರುವ ಈ ಎರಡು ಪ್ರಪಂಚಗಳು ಬಸವರಾಜನಿಗೆ ಹಾಗಲ್ಲ... ಅವನಿಗೆ ಅವೆರಡೂ ವಾಸ್ತವ ಅಥವಾ ಅವೆರಡೂ ಭ್ರಾಮಕವಾದವುಗಳು.

ಎರಡನೆಯ ಭ್ರಾಮಕ ಪ್ರಪಂಚದಲ್ಲಿ ಮಾತ್ರ ಬಸವರಾಜನು ಭ್ರಮಾತ್ಮಕ ಶಕ್ತಿಯನ್ನು(torque) -ತನ್ನ ಸುತ್ತಲಿನದನ್ನು ತಿರುಚುವ (manipulate) ಶಕ್ತಿಯನ್ನು ರೂಢಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ಶಾಂತಾಳನ್ನು ರಕ್ಷಿಸುವುದಾಗಿ ಅವಳ ಜೊತೆಗೆ ಹೊರಟು, ನಾಯಕನ ಜೊತೆಗಾರ ಗೂಂಡಾನೊಂದಿಗೆ ಹೋರಾಡಲು ತೋಳು ಮಡಿಸುತ್ತಾನೆ. ಆದರೆ ಆದರಿಂದಲೂ ಪರಾಙ್ಮುಖಗೊಳ್ಳುತ್ತಾನೆ. ಎಲ್ಲವೂ ಹೋಮೋ ಸೆಕ್ಸ್ ಆಗಿ ಕಂಡು, ಮತ್ತೆ 'ವಾಸ್ತವ'ಕ್ಕೆ ಓಡಿ ಬರುತ್ತಾನೆ.

ಈ ಕಾದಂಬರಿಯನ್ನು ಅತ್ಯಂತ ನಿರ್ದಿಷ್ಟ ನಮೂನೆಯದು ಎಂದು ಹೇಳಿದೆ. ಇದನ್ನು ಸ್ಪಷ್ಟಪಡಿಸಿಕೊಳ್ಳುವುದಕ್ಕೆ 'ಬಿರುಕು' ಕೃತಿಯನ್ನು ಕಾಫ್ಕನ 'ಮೆಟಾಮಾರ್ಫಾಸಿಸ್' ಕೃತಿಯೊಂದಿಗೆ ಹೋಲಿಸಿ ನೋಡಬೇಕು. ಅಲ್ಲಿ ಗ್ರೆಗರ್‌ನು ಬೇರೆಯವರನ್ನು ಕುರಿತು ನಿಲುವು ತಾಳುತ್ತಿರುವಂತೆಯೇ ಬೇರೆಯವರು ಅವನ ಬಗ್ಗೆ ನಿಲುವು ತಾಳುತ್ತಿರುತ್ತಾರೆ. ಆದರೆ 'ಬಿರುಕು' ಕಾದಂಬರಿಯಲ್ಲಿ ಬಸವರಾಜನ ನಿಲುವುಗಳು ಮಾತ್ರ ಬರುತ್ತವೆ -active uni-directional apprehension.... ಹೀಗಿರುವುದರಿಂದಲೇ ಕಾದಂಬರಿಯ ಯಾವುದೇ ಪಾತ್ರವಾಗಲೀ, ಯಾವುದೇ ಕ್ರಿಯೆಯಾಗಲೀ ಬಸವರಾಜನ ಅನುಪಸ್ಥಿತಿಯಲ್ಲಿ ಸಂಘಟಿಸುವುದೇ ಇಲ್ಲ. ಬಸವರಾಜನ ಉಪಸ್ಥಿತಿಯಲ್ಲಿ ಕೂಡ ಅವು ಸ್ವತಂತ್ರವಾಗಿ ಘಟಿಸುತ್ತವೆ ಎಂದಿಲ್ಲ -ಏನಿದ್ದರೂ ಬಸವರಾಜನ ಮಾನಸಿಕ ಪ್ರಪಂಚಕ್ಕೆ -ಪ್ರಜ್ಞೆಗೆ ಬದ್ಧವಾಗಿಯೇ ಅವು ಸಂಘಟಿಸುತ್ತವೆ.

o

o

'ಬಿರುಕು' ದಂತಹ ತೀವ್ರ ಒಳಮುಖಿಯಾದ ಕೃತಿಗಳ ಮಹತ್ವವೇನು ಎನ್ನುವ ಸಮಸ್ಯೆ ಬರುತ್ತದೆ. ಹೌದು. ಸುಲಭವಾಗಿ ತನ್ನನ್ನು ತೋರಿಸಿಕೊಳ್ಳದ; ಹಗುರ ಓದಿನ, ಕೃತಿಯ ಹೊರಗೇ ನಿಲ್ಲುವ ಓದುಗನನ್ನು ನಿರಾಕರಿಸುವ, ತನ್ನ ಸಬ್ಜೆಕ್ಟಿವಿಟಿಯೊಂದಿಗೆ ಒಂದಾಗುವ ಸವಾಲು ಹಾಕುವ ಇಂತಹ ಕೃತಿಗಳ ಮಹತ್ವವೇನು ಎನ್ನುವ ಸಮಸ್ಯೆ ಬಂದೇ ಬರುತ್ತದೆ. ಇಂಥ ಕೃತಿಗಳು ಸಾಹಿತ್ಯದ ಅನನ್ಯತೆಯನ್ನು, ವ್ಯಕ್ತಿತ್ವದ ಅನನ್ಯತೆಯನ್ನು ಸ್ಥಾಪಿಸುವಲ್ಲಿ ಸಾರ್ಥಕತೆಯನ್ನು ಪಡೆಯುತ್ತವೆ. ಅಭಿವ್ಯಕ್ತಿಯ ಅನನ್ಯತೆಯನ್ನು ಸಾಧಿಸುವ ಇಂಥ ಪ್ರಕ್ರಿಯೆ ಸಾಹಿತ್ಯದ ಮೂಲ ಮತ್ತು ಆದಿಮ ಪ್ರೇರಣೆಯಾಗಿದೆ. ಕಾಲಾಂತರದಲ್ಲಿ ಕ್ರಮಿಸುತ್ತಿರುವಾಗ ಒಂದೊಂದು ಘಟ್ಟದಲ್ಲಿಯೂ ಇಂಥ ಕೃತಿಗಳು ಮೂಲ ಪ್ರೇರಣೆಯನ್ನು ಮತ್ತೆ ಮತ್ತೆ ಶೋಧಿಸುತ್ತವೆ . ಹೀಗೆ ಮೂಲ ಪ್ರೇರಣೆಗಳತ್ತ ಹೋಗುವ ಇಂಥ ಕೃತಿಗಳನ್ನು 'ಹಿಮ್ಮುಖ

ವಿಕಾಸ'ದ (Retrogressive Evolution) ಉತ್ಪನ್ನಗಳೆನ್ನಬಹುದು. ಹಿಮ್ಮುಖ ವಿಕಾಸ ಎನ್ನುವುದನ್ನು ನಾವು ನೇತ್ಯಾತ್ಮಕವಾಗಿ ಗ್ರಹಿಸಬೇಕಾಗಿಲ್ಲ. ಯಾಕೆಂದರೆ, ವಿಕಾಸವು ತನ್ನ ಮೂಲ ಪ್ರೇರಣೆಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವುದು ಸೃಷ್ಟಿಯಲ್ಲಿನ ಒಂದು ಅನಿವಾರ್ಯ ಅವಶ್ಯಕತೆಯಾಗಿರುತ್ತದೆ.

ಅಕ್ಕ :

ಲಂಕೇಶರ 'ಅಕ್ಕ' ಕಾದಂಬರಿ 'ಬಿರುಕು' ಕಾದಂಬರಿಗಿಂತ ಭಿನ್ನವಾದ ರೀತಿಯ ಬರವಣಿಗೆಯಾದರೂ ಅನೇಕ ಸಾಮ್ಯತೆಗಳನ್ನೂ ತೋರುತ್ತದೆ. ಹಾಗೆ ನೋಡಿದರೆ 'ಅಕ್ಕ'ದ ಕ್ಯಾತನಲ್ಲಿಯೂ 'ಬಿರುಕು'ದ ಬಸವರಾಜನ ಅನೇಕ ಅಂಶಗಳು ಇದ್ದಂತೆ ತೋರುತ್ತವೆ. ಆದರೆ ಬರವಣಿಗೆಯ ರೀತಿ ಮಾತ್ರ ಕೇಂದ್ರದಿಂದ ಹೊರಕ್ಕೆ ಚಿಮ್ಮುವ -ರೀತಿಯದು -ತೀವ್ರ ಬಹಿರ್ಮುಖ ರೀತಿಯದು.

ಇಂಥ ಬಹಿರ್ಮುಖತೆಗೆ ಅನುಸಾರವಾಗಿ ಇಡೀ ಕಾದಂಬರಿಯುದ್ದಕ್ಕೂ ಕ್ಯಾತನ ಅನುಭವಗಳ ಜೊತೆಗೆ ಅದನ್ನು ಹೇಳುವ ಕ್ಯಾತನ ಉಪಸ್ಥಿತಿಯೂ ಇದೆ. ಅಷ್ಟೇ ಅಲ್ಲ, ಕಾದಂಬರಿಯ ಒಟ್ಟು ವಾತಾವರಣವಾದ ಬಹಿರ್ಮುಖತೆಗೆ ಯಾವುದೇ ಅಡೆ ತಡೆ ಬರಬಾರದೆನ್ನುವಂತೆ ಉತ್ತಮ ಪುರುಷದ 'ನಾನು' ಎಂದು ಹೇಳಬಹುದಾದದ್ದನ್ನು- ಕ್ಯಾತನು, ಕ್ಯಾತನ ಬಗ್ಗೆ ಪ್ರಥಮ ಪುರುಷದ 'ಅವನು' ಎನ್ನುವಂತೆ ಹೇಳುತ್ತಾನೆ. ಕಾದಂಬರಿಯಲ್ಲಿನ ಒಂದೆರಡು ಉಲ್ಲೇಖಗಳಿಂದ ಇದನ್ನು ಸ್ಪಷ್ಟಪಡಿಸಬಹುದು -

"ಅವತ್ತು ಬೆಳಗ್ಗೆ ಏನಾಯ್ತು ಅದ್ರಿಂದಾನೆ ಶುರು ಮಾಡ್ತಾನೆ **ಕ್ಯಾತ** ..."

"....ಈ ದೇವೀರಿ ಅವತ್ತು ಹೊತ್ತು ಮೂಡಿದಾಗಿನಿಂದ ಪೈತಾನೇ ಇದ್ಲು **ಕ್ಯಾತನಿಗೆ** ತಲೆರೋಸುವಂತೆ ಬೈತಾನೆ ಇದ್ಲು"

ಹೀಗೆ-ಇವೆಲ್ಲವನ್ನು ಹೇಳುತ್ತಿರುವವನು ನಿರೂಪಕನಾದ ಕ್ಯಾತ. ಹೀಗೆ ಕಾದಂಬರಿಯುದ್ದಕ್ಕೂ ನಮಗೆ ಇಬ್ಬರು ಕ್ಯಾತರು ಸಿಗುತ್ತಾರೆ -ಒಬ್ಬ ಅನುಭವಗಳಿಗೆ ಪಕ್ಕಾಗುವ ಜ್ಞಾತೃವಾದ ಕ್ಯಾತ ಮತ್ತು ಇನ್ನೊಬ್ಬ ಆ ಅನುಭವಗಳನ್ನು ನಿರೂಪಿಸುವ ಕ್ಯಾತ. ನಿರೂಪಕನಾದ ಕ್ಯಾತ ಅನುಭವಿಸುವ ಕ್ಯಾತನ ಬಗ್ಗೆ ಆಗಾಗ ಟೀಕೆ ಮಾಡುವ ಅವಕಾಶಗಳನ್ನು ಬಳಸಿಕೊಳ್ಳುತ್ತಾನೆ. ಹಾಗೆಯೇ ಅವನ ಪರವಾಗಿ ವಾದವನ್ನು ಕೂಡ ಮಾಡುತ್ತಾನೆ. ಹೀಗೆ 'ಅಕ್ಕ' ಕಾದಂಬರಿಯಲ್ಲಿ ಅನುಭವಗಳ ಮೂರು ನೆಲೆಯಲ್ಲಿನ ಪರಿಭಾವನೆ ಸಾಧ್ಯವಾಗುತ್ತದೆ: ಲೇಖಕನ ನೆಲೆಯಲ್ಲಿ, ನಿರೂಪಕ ಕ್ಯಾತನ ಪ್ರಜ್ಞೆಯ ನೆಲೆಯಲ್ಲಿ ಮತ್ತು ಅನುಭವಗಳಿಗೆ ಪಾತ್ರನಾಗುವ ಕ್ಯಾತನ ನೆಲೆಯಲ್ಲಿ. ಇದು ಒಂದು ರೀತಿಯಾಗಿ ಸಬ್ಜೆಕ್ಟಿವಿಟಿಯ ಘಾಟನ್ನು ತಪ್ಪಿಸಿಕೊಳ್ಳಲು, ಅದನ್ನುಳಿಸಿಕೊಂಡೂ ಅದಕ್ಕಂಟಿ ಬರುವ ಅಂತರ್ಮುಖತೆಯ ಬಿಕ್ಕಟ್ಟುಗಳನ್ನು ಮೀರಲು ಲಂಕೇಶರ ಈ ತಂತ್ರವು ಅವರಿಗೆ ಉಪಯುಕ್ತವಾಗಿ ಒದಗಿಬಂದಿದೆ.

ಲಂಕೇಶರು ತಮ್ಮ ಅಕ್ಕ ಕಾದಂಬರಿಯಲ್ಲಿ ಶೀಲ ಎನ್ನುವ ಮೌಲ್ಯವನ್ನು ಶೋಧಿಸಲು ತೊಡಗುತ್ತಾರೆನ್ನಿಸುತ್ತದೆ. ಶೀಲ ಎಂತೆನ್ನುವಾಗ ಅದನ್ನು ಬರೀ ಹೆಣ್ಣಿನ ಲೈಂಗಿಕ ಪಾವಿತ್ರ್ಯ ಎನ್ನುನಂತೆ ನೋಡುವುದಲ್ಲ. ಅದು ವ್ಯಕ್ತಿಗಳಿಂದ ಹಿಡಿದು ಇಡೀ ಸಮಾಜವನ್ನು ವ್ಯಾಪಿಸುವ

ನೈತಿಕ ಮೌಲ್ಯ. ದೇವೀರಿ, ಪದ್ದಿಯ ಲೈಂಗಿಕ ಶೀಲ, ಕೌಟುಂಬಿಕ ಸಂಬಂಧಗಳ ಶೀಲ, ಸಿನೇಮಾದ ಜನರ ಶೀಲ, ರಾಜಕೀಯದಲ್ಲಿರುವವರ ಶೀಲ, ಅಧಿಕಾರಿಯ ನಡವಳಿಕೆಯ ಶೀಲ - ಹೀಗೆಎಲ್ಲವನ್ನೂ ವ್ಯಾಪಿಸುವ ನೈತಿಕ ಮೌಲ್ಯವಾಗಿ ಶೀಲದ ಗ್ರಹಿಕೆ ಬರುತ್ತದೆ. ಕ್ಯಾತ ಕಾಣುವುದು ಸಡಿಲುಗೊಂಡಿರುವ - ಹಳಿ ತಪ್ಪಿರುವ ಶೀಲದ ಗತಿಯನ್ನು. ದೇವೀರಿ ದುಬಾರಿ ಸೀರೆಯನ್ನುಟ್ಟು, ಸ್ನೋ - ಪೌಡರ್ ಲೇಪಿಸಿಕೊಂಡು ಜಾರಿ ಹೋಗುತ್ತಿದ್ದರೆ, ಪದ್ದಿ ಶಂಕ್ರನಾರಾಯಣನ ನಯವಂಚಕತನಕ್ಕೆ ತನ್ನ ನಡು ಒಪ್ಪಿಸುತ್ತ ಸಿನೆಮಾ ಲೋಕಕ್ಕೆ ಸಂದಾಯವಾಗುತ್ತಾಳೆ. ಸುಧೀರನ ಅಪ್ಪ ಲಂಚ ಪಡೆದು ಸಿಕ್ಕಿಹಾಕಿಕೊಂಡು ರಾಮಪ್ಪನ ದರ್ಬಾರಿಗೆ ಸಂದರೆ, ರಾಮಪ್ಪನಿಗೆ ಎಲೆಕ್ಶನ್‌ಗೆ ಪಾರ್ಟಿ ಟಿಕೆಟ್ ದಕ್ಕಲಿಲ್ಲವೆಂದು ತಿಳಿಯುತ್ತಿದ್ದಂತೆಯೇ ಅವನ ಅತ್ಯಂತ ನಿಷ್ಠೆಯ ಅನುಯಾಯಿಗಳಾದ ನರಸಿಂಹ ಮೇಸ್ತ್ರಿ, ನಾಗ್ರಾಜ, ಖಡವಾ ಇತ್ಯಾದಿಗಳು ಅವನನ್ನು ಬಿಟ್ಟು ಟಿಕೆಟ್ ಸಿಕ್ಕ ವಿಶ್ವನಾಥನನ್ನು ಸೇರಿಕೊಳ್ಳುವುದು - ರಂಗಜೆಟ್ಟಿ ಕುದುರೆ ಬಾಲಕ್ಕೆ ನೇತುಬಿದ್ದು ಕೌಟುಂಬಿಕ ಶೀಲವನ್ನು ಮೀರುವುದು, ಕನ್ನಡದ ಹೆಸರಿನಲ್ಲಿ ಎತ್ತುವಳಿ ಮಾಡುವ ಶಂಕರ್ರಾವ್ವೂ - ಹೀಗೆ ವಿವಿಧ ಹಂತಗಳಲ್ಲಿ ಶೀಲದ ಶಿಥಿಲತೆಯ ಚಿತ್ರಗಳನ್ನು ಕಾದಂಬರಿ ನೀಡುತ್ತದೆ.

ಒಂದು ಕಡೆ ಕ್ಯಾತ ಕೇಳುತ್ತಾನೆ :

> ''ನಿಮಗೆಂದಾದರೂ ಹಿಂಗೆ ಅನ್ನಿಸ್ಯೆತ ಸಾರ್? ನಿಮ್ಮ ಹೆಂಡ್ತಿ ಜತೆಗೆ, ನಿಮ್ಮ ಹುಡುಗಿ ಜತೆಗೆ, ನಿಮ್ಮ ನಾಯಿ ಜತೆಗೆ, ನಿಮ್ಮ ದೇವರ ಎದುರು, ನಿಮ್ಮ ಅವ್ವನ ಎದುರು - 'ನಂಗೆ ಇವರೆಲ್ಲಾ ಬ್ಯಾರೆ ತರ ಕಾಣ್ತಿದಾರಲ್ಲ... ಮುಂಚಿನಂಗಿಲ್ವಲ್ಲ' ಅಂತ ಎಂದಾದ್ರೂ ಅನ್ನಿಸ್ತೈತ ಸಾರ್? ಕತೆ ಹೇಳ್ತಾ ಹಿಂಗೆಲ್ಲ ಹೇಳಿದ್ಕೆ ಮಿಸ್ಟೇಕ್ ಮಾಡ್ಕೋಬೇಡಿ ಸಾರ್. ನಂಗೆ ಹುಚ್ಚೋ ನಿಮಗೆಲ್ಲ ಹಿಂಗನ್ನಿಸ್ತದೋ ಅಂತ ಒಂದೊಂದ್ಸಲ ಬಲೆ ತೊಂದ್ರೆ ಆಗ್ತದೆ.... ನಿಮಗೂ ಹಿಂಗೇ ಅನಿಸಿದ್ರೆ ನಂದು ಹುಚ್ಚಲ್ಲ ಅಂತ ಗೊತ್ತಾಗುತ್ತಲ್ಲವಾ ಸಾರ್?''

ಅಂದರೆ, ನಾವೆಲ್ಲ ವೈಯಕ್ತಿಕ - ಸಾಮಾಜಿಕ ಶೀಲದ ಪತನವನ್ನು ಗ್ರಹಿಸಲಾರದ ಜಡತ್ವಕ್ಕೆ ಪಕ್ಕಾಗಿ ಬಿಟ್ಟಿದ್ದೀವೇನೋ ಎನ್ನುವ ಸೂಚನೆಯನ್ನು ಕ್ಯಾತ ನೀಡುತ್ತಾನೆ. ಅಷ್ಟೇ ಅಲ್ಲ, ಕ್ಯಾತನ ನಿರೂಪಣೆಯಲ್ಲಿ ಪೋಣಿಸಿಕೊಂಡು ಬರುವ ಬೈಗುಳಗಳು ಇಂಥ ಸಾಮಾಜಿಕ ನಿಃಸ್ಪಂದ ಜಡತ್ವದ ಸ್ಥಿತಿಯನ್ನು - insensitivity ಯನ್ನು ಒಡೆಯುವ ಮಾರ್ಗವಾಗಿಯೇ ಬರುತ್ತದೆನಿಸುತ್ತದೆ.

ಆದರೆ ದೇವೀರಿ ಕ್ಯಾತನನ್ನು ಬಿಟ್ಟು ತಪ್ಪಿಸಿಕೊಂಡು ಹೋದಮೇಲೆ, ಎರಡು ದಿನಗಳಕಾಲ ಉಪವಾಸವಿದ್ದಾಗ ಶಂಕ್ರನಾರಾಯಣ ಕೊಡಿಸುವ ತಿಂಡಿಯನ್ನು ತಿರಸ್ಕರಿಸುವಲ್ಲಿ ಕ್ಯಾತನ ಶೀಲ ಒಮ್ಮೆ ಪ್ರಖರವಾಗಿ ಕಾಣಿಸಿಕೊಳ್ಳುವುದನ್ನು ಬಿಟ್ರೆ, ಉಳಿದೆಡೆಗಳಲ್ಲಿ ಕ್ಯಾತನು ಬೇರೆಯವರ ಶೀಲ ಭ್ರಷ್ಟತೆಯನ್ನು ಕುರಿತು ಹೇಳುತ್ತಾನೆಯೇ ಹೊರತು ಅದರೊಂದಿಗೆ ಕ್ರಿಯಾತ್ಮಕವಾಗಿ ಮುಖಾಮುಖಿಯಾಗುವುದು ಕಾಣಿಸುವುದಿಲ್ಲ.

ಲಂಕೇಶ್ ಈ ಕಾದಂಬರಿಯನ್ನು ರಾಜಕೀಯ ಕಾದಂಬರಿ ಎನ್ನುತ್ತಾರೆ. ಹೌದು. ನಮ್ಮ ವೈಯಕ್ತಿಕ - ಕೌಟುಂಬಿಕ - ಸಾಮಾಜಿಕ ಬದುಕನ್ನು ವಿಪರೀತವಾಗಿ ಪ್ರವೇಶಿಸಿರುವ ರಾಜಕೀಯವು, ವ್ಯಕ್ತಿ ಮತ್ತು ಸಾಮಾಜಿಕ ಶೀಲದ ಭ್ರಷ್ಟತೆಗೆ ಕಾರಣವಾಗಿರುವುದನ್ನು ಈ

ಕಾದಂಬರಿ ಸ್ಪಷ್ಟವಾಗಿ ಗುರುತಿಸುತ್ತದೆ....

ಬಿರುಕು ಆಗಲೀ ಅಕ್ಕ ಆಗಲೀ ಲಂಕೇಶರ ಭಾಗಶಃ ತೊಡಗುಪಿಕೆಯ ಕೃತಿಗಳು. ಎರಡೂ ಪಟ್ಟಣದ ಪರಿಸರದಲ್ಲಿ ಘಟಿಸುತ್ತವೆ. ನಗರ ಅನುಭವಗಳಿಗೆ ಪ್ರತಿಕ್ರಿಯೆ ತೋರಿಸುವ ಲಂಕೇಶರ ಕ್ರಿಯೆಯು ಮೂಲವೆನ್ನಿಸುವಂತಹುದಲ್ಲ-ಅದೇನಿದ್ದರೂ ಎರಡನೆಯ ಹಂತದ್ದು. ಲಂಕೇಶರ ಮೂಲ ಅನುಭವ ಮತ್ತು ಪ್ರೇರಣೆಗಳಾದ ಹಳ್ಳಿಯ ಬದುಕು ವ್ಯಾಪ್ತವಾದ ಅಭಿವ್ಯಕ್ತಿಯನ್ನು ಪಡೆದಿರುವುದು ಅವರ 'ಮುಸ್ಸಂಜೆಯ ಕಥಾ ಪ್ರಸಂಗ' ಕಾದಂಬರಿಯಲ್ಲಿ. ಮುಸ್ಸಂಜೆ ... ಲಂಕೇಶರ ಉಳಿದೆರಡು ಕಾದಂಬರಿಗಳಿಗಿಂತ ಹೆಚ್ಚು ಘನಿಷ್ಠವಾದ, ಹೆಚ್ಚು ಸಾರ್ಥಕವಾದ ಕೃತಿಯಾಗಿದೆ.

...~~ನೇರವಾದದ್ದನ್ನು ತಿರುಚಿ, ಕ್ಲಿಷ್ಟವಾದದ್ದನ್ನು ಸರಳಗೊಳಿಸಲು~~ ಪ್ರಯತ್ನಿಸಬೇಡಿ ; ನೀವು ನಿಮ್ಮ ಬಗ್ಗೆ ಕಂಡುಕೊಂಡ ಸತ್ಯಗಳನ್ನು ಹೇಳುವುದಕ್ಕಾಗಿ ಸಮಾಜಕ್ಕೆ ಹೆದರಿ ಸಂಕೇತಗಳ ಮೂಲಕ ಹೇಳಲು ಅನಗತ್ಯವಾಗಿ ಯತ್ನಿಸಬೇಡಿ ; ನಿಮ್ಮ ಹೆಂಡತಿಯೊಂದಿಗಿನ ನಿಮ್ಮ ವಿರಸವನ್ನು ಇನ್ನೊಬ್ಬರ ಹೆಂಡತಿಯ ವಿರಸವನ್ನಾಗಿಸಿ ಬರೆದಾಗ ಅದು ಕೆಲವು ಮುಖ್ಯ ಗುಣಗಳನ್ನು ಕಳೆದುಕೊಳ್ಳುತ್ತದೆ. ನಿಮ್ಮ ಪಾಪವನ್ನೂ ಗುಟ್ಟುಗಳನ್ನೂ ದೌರ್ಬಲ್ಯಗಳನ್ನೂ ಏಕಾಂತತೆಯನ್ನೂ ಎದುರಿಸುವುದನ್ನು ಕಲಿತುಕೊಳ್ಳಿ ; ಹಾಗೆ ಕಲಿತೊಡನೆ ನಿಮ್ಮ ಬರವಣಿಗೆಗೆ ವಿಚಿತ್ರ ಶಕ್ತಿ ಮತ್ತು ಸೌಂದರ್ಯ ಬರುತ್ತದೆ. ಉದಾಹರಣೆಗೆ, ನಿಮ್ಮ ಏಕಾಂತತೆ ಅಂದರೆ ಅರ್ಥ ಏನು ? ನಿಮ್ಮ ಒಬ್ಬಂಟಿತನದ ಸ್ವಾರಸ್ಯ ಏನು ? ಸಮಾಜದ ಎಲ್ಲ ಕಾಣ್ಕೆಯ ಸಂಪತ್ತು, ಸಾಹಿತ್ಯ ಸಂಪತ್ತಾಗಿ ಬರುವುದು ಇಂಥ ಪ್ರಶ್ನೆಗಳಿಗೆ ದೊರೆತ ಗಾಢ ಉತ್ತರಗಳಿಂದ

ಕೊನೆಯದಾಗಿ, ಅನೇಕ ರೋಮ್ಯಾಂಟಿಕ್ ವಿಷಯಗಳನ್ನು ಈಗಾಗಲೇ ಹೇಳಿರಬಹುದಾದ ನಾನು ನಿಮಗೆ ಹೇಳಲೇ ಬೇಕು, ಪ್ರೇಮ, ಭಕ್ತಿಯ ಹಾಗೆಯೇ ಸಾಹಿತ್ಯದ ಸಾಕ್ಷಾತ್ಕಾರ (ಇದೆಂಥ ಗೊಡ್ಡು ಪದ !) ಅಥವಾ ಒಳನೋಟ ಕೂಡ proxy ಮೂಲಕ ದೊರೆಯದಿರಬಹುದು. ಹರಿಜನರ ನಿಜವಾದ ನೋವು ಮತ್ತು ಅವಮಾನಗಳನ್ನು ಲಿಂಗಾಯತನೊಬ್ಬ ವೇದಿಸಿ ಬರೆಯುವುದು ಕಷ್ಟ. ಅಷ್ಟೇಕೆ, ಅಗಾಧ್ಯ ಕೂಡ. ಬದುಕಿನ ವಿವರಗಳಾಗಲೀ, ಅಲ್ಲಿಯ ನೋವು, ಅವಮಾನಗಳಾಗಲೀ ಪ್ರೇಕ್ಷಕನಿಗೆ, ನಾಯಿಯೋಕನಿಗೆ ದಕ್ಕುವುದಿಲ್ಲ. ಕಳ್ಳ ಸಿಕ್ಕೊಡನೆ ಅವನ ಮೇಲೆ ಬಿದ್ದು ಹೊಡೆಯಬಯಸುವವರು ತಮ್ಮ ಕಳ್ಳತನ ಬಚ್ಚಿಟ್ಟುಕೊಂಡ ಸಾಮಾಜಿಕರಾದ ಜನರೆಂದು ಮನಃಶಾಸ್ತ್ರಜ್ಞರು ಹೇಳುತ್ತಾರೆ : ಆತನ ಕಷ್ಟಗಳನ್ನೆಲ್ಲಾ ಪಟ್ಟಿಮಾಡಿ ಕತೆ ಮುಗಿಸುವಾತ ಕೂಡ ಕಳ್ಳತನದ ಲಾಭ ಪಡೆಯಲು ಬಯಸುವ ಮನುಷ್ಯ; ಆತನನ್ನು ಸಮರ್ಥಿಸಿ ಭಾಷಣ ಮಾಡುವಾತ ತನ್ನ ಗಂಟಲು ಮತ್ತು ಜಾಣತನವನ್ನು ನಂಬಿ ಅಧಿಕಾರಕ್ಕೆ ಆಶೆ ಪಡುವಾತ ; ಕಳ್ಳನ ನೋವು, ಅವಮಾನ, ಹಸಿವು, ತಲೆಸುತ್ತು ಕಳ್ಳನಿಗೆ ಮಾತ್ರ ಗೊತ್ತು. ಅಂದಹಾಗೆ, ನಿಮ್ಮಲ್ಲೆಷ್ಟು ಜನ ನಿಮ್ಮ ಕಳ್ಳತನವನ್ನು, ದ್ರೋಹವನ್ನು, ನಿಮ್ಮಲ್ಲಿರಬೇಕಾದ ತಲ್ಲಣವನ್ನು ಎದುರಿಸಿದ್ದೀರಿ?

- ಲಂಕೇಶ್

(ಟೀಕೆ ಟಿಪ್ಪಣಿ : ತರುಣ ಸಾಹಿತಿಗಳನ್ನು ಕುರಿತು)

ಲಂಕೇಶ್ ನಾಟಕಗಳ ಭಾಷೆ

○ ಲಿಂಗದೇವರು ಹಳೆಮನೆ

ಭಾಷೆಯ ಬಗೆಗಿನ ಲಂಕೇಶ್ ಅವರ ಮುಖಾಮುಖಿ ಬಹಳ ಆಸಕ್ತಿ ಕೆರಳಿಸುವಂಥಾದ್ದು. ಅವರ ನಾಟಕಗಳು, ವಿಮರ್ಶಾ ಲೇಖನಗಳು, ಕವಿತೆಗಳು, ಕಾದಂಬರಿಗಳು ಹಾಗೂ 'ಲಂಕೇಶ್ ಪತ್ರಿಕೆ'ಯ ಲೇಖನಗಳು ಇಲ್ಲೆಲ್ಲಾ ನಾವು ಕಾಣುವುದು ಅವರು ನಿರಂತರವಾಗಿ ಭಾಷೆಯ ಜೊತೆ ಸೆಣಸಾಟಕ್ಕೆ ತೊಡಗಿರುವುದನ್ನು. ಭಾಷೆಗೆ ರೂಢಿಗತವಾದ ಒಂದು ಗುಣ, ಒಂದು ವ್ಯಾಕರಣ ವ್ಯವಸ್ಥೆ ಇರುತ್ತದೆ. ಇದು ಸರ್ವಮಾನ್ಯವಾದ ಒಂದು ಸಾರ್ವತ್ರಿಕ ಗುಣ. ಈ ಸಾರ್ವತ್ರಿಕ ಗುಣವನ್ನು ತಾವು ಮೈಗೂಡಿಸಿಕೊಳ್ಳಬೇಕೆಂದು ಎಲ್ಲಾ ಲೇಖಕರು ಹಾತೊರೆದವರೇ. ಲಂಕೇಶ್ ಕೂಡಾ ಈ ಸಾರ್ವತ್ರಿಕ ಗುಣವನ್ನು ಮೈಗುಡಿಸಿಕೊಳ್ಳಬೇಕೆಂದು ಹಾತೊರೆದವರೇ. ಆದರೆ ಅವರು ಅಷ್ಟಕ್ಕೇ ಸುಮ್ಮನಾಗುವುದಿಲ್ಲ. ಭಾಷೆಯ ಸಾರ್ವತ್ರಿಕ ಗುಣವನ್ನು ಮೈಗೂಡಿಸಿಕೊಳ್ಳುವುದರ ಜೊತೆ ಜೊತೆಗೇ ಆ ಸಾರ್ವತ್ರಿಕ ಗುಣವನ್ನು ಒಡೆಯುವ ಕೆಲಸವನ್ನು ಮಾಡುತ್ತಾರೆ. ಅವರ 'ಬಿರುಕು' ಕಾದಂಬರಿಯಲ್ಲಿ ಬರುವ ಬಸವರಾಜು ಬೆಂಗಳೂರಿನಂಥ ನಗರಕ್ಕೆ ಬಂದು ಅಲ್ಲಿಯ ಭಾಷೆಯ ಜೊತೆ ಗುದ್ದಾಡುವುದು ಒಂದು ತುದಿಯಾದರೆ, 'ಲಂಕೇಶ್ ಪತ್ರಿಕೆ'ಯಲ್ಲಿ ಬಳಕೆಯಾದ, ಎಲ್ಲಾ ಶಿಷ್ಟ ಭಾಷಾ ವ್ಯವಸ್ಥೆಯನ್ನೇ ಧಿಃಕರಿಸಿದ ತುದಿ ಇನ್ನೊಂದು ಕಡೆ. ಈ ಮಧ್ಯದಲ್ಲಿ ಸಾಹಿತ್ಯದ ಗಂಭೀರ ಸೃಜನಶೀಲ ಪ್ರಯತ್ನದಲ್ಲೂ ಅವರು ಅನೇಕ ಭಾಷಾ ಸಾಧ್ಯತೆಗಳನ್ನು ಕಂಡುಕೊಂಡವರು. ಭಾಷೆಯ ಈ ಅನನ್ಯತೆಯೇ ಅವರನ್ನು ಕೆಲವು ಬಾರಿ ವಿಕ್ಷಿಪ್ತವಾಗಿ, ವಿಲಕ್ಷಣವಾಗಿ ಮತ್ತು ವಿಶೇಷವಾಗಿ ಕಾಣುವಂತೆ ಮಾಡಿದೆ.

ಅಚಾನಕ್ಕಾದದ್ದನ್ನು ಹೇಳುವುದು ಲಂಕೇಶ್ ಅವರ ಗುಣ. ಸದಾ ತಾನು ಭಿನ್ನವಾಗಿಯೇ ಚಿಂತಿಸಬೇಕು, ಭಿನ್ನವಾಗಿಯೇ ಬರೆಯಬೇಕು ಎಂಬ ಕಟ್ಟೆಚ್ಚರವನ್ನು ಅವರು

ಕಾಪಾಡಿಕೊಂಡು ಬಂದವರು. ಈ ಗುಣವನ್ನು ಜೆಕ್ ಭಾಷಾವಿಜ್ಞಾನ ಪಂಥದ ಮಕರೋವ್‌ಸ್ಕಿ ಎಂಬ ಭಾಷಾ ವಿಜ್ಞಾನಿ ''ಡಿ ಆಟೊಮೆಟೈಸೇಷನ್'' ಎಂದು ಕರೆದಿದ್ದಾನೆ. ಅವನ ಪರಿಕಲ್ಪನೆಯ ಪ್ರಕಾರ ಭಾಷೆಗೊಂದು ಸಂಭಾವ್ಯ ಸರಳತೆ ಹಾಗೂ ಸಾತತ್ಯತೆ ಇರುತ್ತದೆ. ಭಾಷೆಯ ಈ ಗುಣದಿಂದಾಗಿ ಅದರ ಸಾತತ್ಯ ಬಳಕೆಯ ರಚನೆಯಲ್ಲಿ ಮುಂದಾಗುವುದನ್ನು ಊಹಿಸುತ್ತಾ ಹೋಗಬಹುದು. ಭಾಷಾ ರಚನೆಯ ಕ್ರಮವೂ ಅದಕ್ಕೆ ಅನುಗುಣವಾಗಿಯೇ ಇರುತ್ತದೆ. ಇದನ್ನು ಅವನು ಭಾಷೆಯ ಸರಳ ಲಕ್ಷಣ ಎಂದು ಕರೆದಿದ್ದಾನೆ. ಸಾಮಾನ್ಯ ಜನ ಹಾಗೂ ಸಾಮಾನ್ಯ ಪ್ರತಿಭೆ ಇರುವವರು ಭಾಷೆಯ ಈ ಲಕ್ಷಣವನ್ನೇ ಹೆಚ್ಚು ಹೆಚ್ಚು ಬಳಸುತ್ತಾ ಹೋಗುತ್ತಾರೆ. ಆದರೆ ನಿಜವಾದ ಪ್ರತಿಭಾವಂತನಿಗೆ ಭಾಷೆಯ ಈ ಲಕ್ಷಣ ಅಷ್ಟಾಗಿ ರುಚಿಸುವುದಿಲ್ಲ. ಅವನು ಭಾಷೆಯ ವ್ಯವಸ್ಥೆಯನ್ನು, ರಚನಾ ಕ್ರಮವನ್ನು ಮೀರುವ ಕೆಲಸ ಮಾಡುತ್ತಾನೆ. ಆ ಮೂಲಕ ಅಲ್ಲಿ ಚಕಿತಗೊಳಿಸುವ ಪ್ರತಿಭೆಯನ್ನು ಪ್ರದರ್ಶಿಸುತ್ತಾನೆ. ಈ ಚಕಿತಗೊಳಿಸುವ ಗುಣ ಲಂಕೇಶ್ ಅವರಲ್ಲಿ ಹೆಚ್ಚಾಗಿಯೇ ಇದೆ. ಅವರು ರಿಯಾಲಿಟಿಯಿಂದ ಹಿಡಿದು ರೆಟಾರಿಕ್‌ವರೆಗೆ ದೊರೆಯಬಹುದಾದ ಎಲ್ಲಾ ಸಾಧ್ಯತೆಗಳನ್ನೂ ಇದಕ್ಕಾಗಿ ಬಳಸಿಕೊಳ್ಳುತ್ತಾರೆ. ಲಂಕೇಶ್ ಬೇರೆಯವರಿಗಿಂತ ಭಿನ್ನರಾಗುವುದು ಇಲ್ಲಿಯೇ. ಅವರೇ ಒಂದು ಕಡೆ ಹೀಗೆ ಹೇಳುತ್ತಾರೆ:

> ಮಾತು ಮತ್ತು ಜಾಣತನ ಯಾವಾಗಲೂ ಮನುಷ್ಯನನ್ನು ನಿಜವಾದ ಸ್ಥಿತಿಯಿಂದ ದೂರಕ್ಕೆ ಒಯ್ಯುತ್ತವೆ. ಇದು ಭಾರತೀಯನಾದ ಹೊಸ ಮನುಷ್ಯ ಧೈರ್ಯವಾಗಿ ಎದುರಿಸಬೇಕಾದ ಸಮಸ್ಯೆ. ಭಾಷೆಯೊಂದು ಮೌಲ್ಯವಾಗುವುದು ಅದು ಸತ್ಯಕ್ಕೆ ಹತ್ತಿರ ಹತ್ತಿರ ಹೋದಾಗ. ಸತ್ಯದಿಂದ ದೂರ ದೂರ ಹೋಗಿ ತೀರಾ ಸುಂದರವೂ ಪರಿಷ್ಕೃತವೂ ಆದಾಗ ಅಲ್ಲ.
>
> (ಕಂಡದ್ದು ಕಂಡಹಾಗೆ - ಸಾಹಿತ್ಯ ಹಾಗೂ ಹೊಸ ಮೌಲ್ಯಗಳು)

ಭಾಷೆಯನ್ನು ಸತ್ಯಕ್ಕೆ ಹತ್ತಿರ ತರುವ ಮಾತೇ ಸಾಪೇಕ್ಷವಾದದ್ದು. ಅದೇನೇ ಇರಲಿ, ಸುಂದರವಾದ, ಪರಿಷ್ಕೃತವಾದ ಭಾಷೆಯನ್ನು ಬಿಟ್ಟು ಸತ್ಯಕ್ಕೆ ಹತ್ತಿರವಾಗಲು ಲಂಕೇಶ್ ತಮ್ಮ ಬರವಣಿಗೆಯಲ್ಲಿ ಅನೇಕ ಪ್ರಯತ್ನಗಳನ್ನಂತೂ ಮಾಡಿದ್ದಾರೆ. ಇಲ್ಲಿ ಸತ್ಯ ಎನ್ನುವುದು ಲಂಕೇಶ್ ಕಂಡುಕೊಂಡ ಸತ್ಯ ಎನ್ನುವುದು ಮುಖ್ಯ. ಅವರ ಭಾಷಾ ಪ್ರಯತ್ನದ ಒಂದು ಸಣ್ಣ ಉದಾಹರಣೆಯನ್ನು ಅವರ ಬರಹದಿಂದಲೇ ಕೊಡಬಹುದು. 'ಕೆಲವು ಟಿಪ್ಪಣಿಗಳು :೧೯೭೯' ಎಂಬ ತಮ್ಮ ಲೇಖನದಲ್ಲಿ ''ಕಂಬಾರ, ಮರುಳಸಿದ್ದಪ್ಪ, ಸುಜನಾ, ಅನಂತಮೂರ್ತಿ ತಮ್ಮ ಲೇಖನಗಳನ್ನು ಮಾತಾಡಿದರು'' ಎಂದು ಬರೆಯುತ್ತಾರೆ. ಕನ್ನಡದ ಸಾರ್ವತ್ರಿಕ ಭಾಷಾ ಒಪ್ಪಿಗೆಯ ಪ್ರಕಾರ ಇಲ್ಲಿ ''ಮಾತಾಡಿದರು'' ಎನ್ನುವುದರ ಬದಲು ''ಓದಿದರು'' ಎಂದಿರಬೇಕಿತ್ತು. ಇಲ್ಲಿ ಉದ್ದೇಶಪೂರ್ವಕವಾಗಿ ವಾಕ್ಯರಚನೆಗೆ ಹೊಂದದಂತಹ ಕ್ರಿಯಾಪದವನ್ನು ಬಳಸಿರುವುದು ಥಟ್ಟನೆ ಗೋಚರವಾಗುತ್ತದೆ. ಆದರೆ 'ಓದಿದರು' ಎಂಬ ಕ್ರಿಯಾಪದವನ್ನು ಬಳಸಿದರೆ ವಿಚಾರಗೋಷ್ಠಿಯಲ್ಲಿ ನಡೆದ ಸತ್ಯ ಸಂಗತಿಯನ್ನು ಹೇಳಿದಂತಾಗುವುದಿಲ್ಲ. ಕನ್ನಡದ ವಾಕ್ಯ ಮತ್ತು ಅರ್ಥ ಸಾಂಗತ್ಯವನ್ನು ಧಿಕ್ಕರಿಸಿ ಬಳಕೆಯಾಗುವ ಈ ವಾಕ್ಯ ಮಕರೋವ್‌ಸ್ಕಿ ಹೇಳುವ 'ಡಿ ಆಟೊಮೆಟೈಸೇಷನ್' ಗುಣವನ್ನು

ಬಿಂಬಿಸುವಂತಹದು. ಈ ರೀತಿಯ ಚಕಿತಗೊಳಿಸುವ ಗುಣವನ್ನು ಲಂಕೇಶ್ ಭಾಷೆಯ ಬೇರೆ ಬೇರೆ ಸ್ಥರಗಳಲ್ಲಿ ಅತ್ಯಂತ ಯಶಸ್ವಿಯಾಗಿ ಪ್ರದರ್ಶಿಸಿದ್ದಾರೆ.

ಈ ಲೇಖನದ ಉದ್ದೇಶ ಲಂಕೇಶ್ ಅವರ ನಾಟಕಗಳ ಭಾಷೆಯ ಲಕ್ಷಣವನ್ನು ಗುರುತಿಸುವುದು. ಲಂಕೇಶ್ ಏಳು ಕಿರುನಾಟಕಗಳನ್ನೂ, ಎರಡು ಪೂರ್ಣ ಪ್ರಮಾಣದ ನಾಟಕಗಳನ್ನೂ ಬರೆದಿದ್ದಾರೆ. ಅವರ ಏಳು ನಾಟಕಗಳು ಇವು : ''ಟಿ. ಪ್ರಸನ್ನನ ಗ್ರಹಸ್ತಾಶ್ರಮ'', ''ಪೋಲೀಸರಿದ್ದಾರೆ ಎಚ್ಚರಿಕೆ '', ''ಸಿದ್ಧತೆ'', ''ತೆರೆಗಳು'', ''ನನ್ನ ತಂಗಿಗೊಂದು ಗಂಡು ಕೊಡಿ'', ''ಕ್ರಾಂತಿ ಬಂತು ಕ್ರಾಂತಿ'' ಮತ್ತು ''ಗಿಳಿಯು ಪಂಜರದೊಳಿಲ್ಲ''. ಇವುಗಳಲ್ಲಿ 'ತೆರೆಗಳು' ಕನ್ನಡದಲ್ಲೇ ವಿಶಿಷ್ಟವಾದ ಅಸಂಗತ ಲಕ್ಷಣಗಳುಳ್ಳ, ಆದರೆ ಪೂರ್ಣ ಅಸಂಗತ ಎನ್ನಲಾಗದ ನಾಟಕ. ಮಿಕ್ಕ ಆರೂ ಕಿರುನಾಟಕಗಳು ನಗರ ಜೀವನದ ಮಧ್ಯಮ ವರ್ಗದ ಜನರ ಹಿನ್ನೆಲೆಯನ್ನು ಕುರಿತಂಥ ವಾಸ್ತವವಾದೀ ನಾಟಕಗಳು. ಲಂಕೇಶ ಅವರು ಬರೆದಿರುವ ಪೂರ್ಣ ಪ್ರಮಾಣದ ನಾಟಕಗಳೆಂದರೆ : ''ಸಂಕ್ರಾಂತಿ'' ಮತ್ತು ''ಗುಣಮುಖ''. ''ಸಂಕ್ರಾಂತಿ'' ಹನ್ನೆರಡನೇ ಶತಮಾನದ ವಚನ ಚಳುವಳಿಯ ಹಿನ್ನೆಲೆಯನ್ನು ಇಟ್ಟುಕೊಂಡಿದ್ದರೂ ವರ್ತಮಾನದ ಅನೇಕ ಧ್ವನಿಗಳನ್ನು ಒಳಗೊಂಡದ್ದು. ''ಗುಣಮುಖ'' ನಾದಿರ್‌ಶಾ ಮತ್ತು ಹಕೀಮನೊಬ್ಬನ ಮುಖಾಮುಖಿಯಲ್ಲಿ, ರೋಗದಿಂದ ಬಳಲುತ್ತಿದ್ದ ನಾದಿರ್‌ಶಾ ದೈಹಿಕವಾಗಿ ಅಷ್ಟೇ ಅಲ್ಲ, ಮಾನಸಿಕವಾಗಿಯೂ ಗುಣಮುಖನಾಗುತ್ತಾ ಹೋಗುವ ಚಿತ್ರಣವನ್ನು ಒಳಗೊಂಡಿದೆ.

ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಿಗಿಂತ ನಾಟಕದಲ್ಲಿ ಬಳಕೆಯಾಗುವ ಭಾಷೆ ಭಿನ್ನವಾಗಿರುತ್ತದೆಂಬ ನಂಬಿಕೆ ಇದೆ. ಇದಕ್ಕೆ ಕಾರಣ ಮುಖ್ಯವಾಗಿ ನಾಟಕ ಸಂಭಾಷಣೆಯನ್ನು ಒಳಗೊಂಡಿರುತ್ತದೆನ್ನುವುದು. ಅದರಿಂದಾಗಿ ನಾಟಕದಲ್ಲಿ 'ಜೀವಂತ ಭಾಷೆ' ಬಳಕೆಯಾಗಬೇಕು ಎನ್ನುವ ಒಂದು ವಾದ ಇದೆ. ಈ ಜೀವಂತ ಭಾಷೆ ಎನ್ನುವುದು ಯಾವುದು? ನಾವು ದಿನನಿತ್ಯದಲ್ಲಿ ಬಳಸುವ ಭಾಷೆಯೇ ಜೀವಂತ ಭಾಷೆಯೆ? ಹಾಗಿದ್ದರೆ ದಿನನಿತ್ಯ ಮಾತನಾಡುವ ಭಾಷೆಯನ್ನೇ ನಾಟಕದಲ್ಲಿ ಬಳಸಿದಾಗ ಅದು ನಿರೀಕ್ಷಿತ ಪರಿಣಾಮ ಬೀರಬಲ್ಲದೆ? ಎಂದು ಮುಂತಾದ ಪ್ರಶ್ನೆಗಳು ಏಳುತ್ತವೆ. ನಾಟಕದಲ್ಲಿ ಬಳಕೆಯಾಗುವ ಜೀವಂತ ಭಾಷೆಗೆ ಒಂದು ವಿಚಿತ್ರವಾದ ಹಟಮಾರಿತನ ಇರುತ್ತದೆ. ಈ ಹಟಮಾರಿತನ ನಾಟಕದ ರಚನೆಗೋಸ್ಕರವೇ ನಾಟಕಕಾರನಿಂದ ಉದ್ದೇಶಪೂರ್ವಕವಾಗಿ ರಚಿತಗೊಂಡದ್ದು. ಹಾಗೆ ಬಳಕೆಯಾಗುವ ಈ ಜೀವಂತ ಭಾಷೆ ದಿನ ನಿತ್ಯದ ಚೌಕಟ್ಟಿನಲ್ಲೇ ಸಂಭಾಷಣೆಯ ಹೊಸ ಸ್ವರೂಪಗಳನ್ನು ಸೃಷ್ಟಿಸುವಲ್ಲಿ ಸಫಲವಾಗಿರುತ್ತದೆ. ಲಂಕೇಶರ ಕಿರುನಾಟಕಗಳಲ್ಲಿ ಈ ಗುಣ ಹೆಚ್ಚು ವ್ಯಾಪಕವಾಗಿ ಕಂಡುಬರುವಂಥಾದ್ದು.

ಲಂಕೇಶರ ಕಿರುನಾಟಕಗಳಲ್ಲೆಲ್ಲಾ ಭಾಷಾ ದೃಷ್ಟಿಯಿಂದ ಅತ್ಯಂತ ಕುತೂಹಲ ಕೆರಳಿಸುವ ನಾಟಕವೆಂದರೆ : 'ತೆರೆಗಳು'. ಅದರ ಬಗ್ಗೆ ಅವರೇ ಸುರೇಶ್ ಅವಸ್ಥಿ ಅವರಿಗೆ ನೀಡಿದ ಸಂದರ್ಶನವೊಂದರಲ್ಲಿ ಹೀಗೆ ಹೇಳಿಕೊಂಡಿದ್ದಾರೆ : ''ಇಷ್ಟು ಸಮಯದ ನಂತರ ನೋಡಿದಾಗಲೂ ನನ್ನ ಇತರ ನಾಟಕಗಳ ಹಾಗೆ 'ತೆರೆಗಳು' ನನ್ನಲ್ಲಿ ಜುಗುಪ್ಸೆ ಹುಟ್ಟಿಸಿಲ್ಲ.

ಈಗಲೂ 'ತೆರೆಗಳು' ತಾಂತ್ರಿಕವಾಗಿ ಕುತೂಹಲ ಕೆರಳಿಸುತ್ತದೆ ''. ಈ ನಾಟಕ ಬಾಷೆಯ ದೃಷ್ಟಿಯಿಂದ ಮೊದಲು ತೆರೆದಿಡುವ ಲಕ್ಷಣವೆಂದರೆ, ''ಸೀಮಿತ ಭಾಷೆಯ ಬಳಕೆ ''. ಸಂಭಾಷಣೆಯ ಭಾಷೆಯನ್ನು ಎಷ್ಟು ಪೃಥಕ್ಕರಿಸಲು ಸಾಧ್ಯವೋ ಅಷ್ಟು ಪೃಥಕ್ಕರಿಸಿ, ಎಚ್ಚರಿಕೆಯಿಂದ ಭಾಷಾ ಸ್ವರೂಪವೊಂದನ್ನು ಸಿದ್ಧಪಡಿಸಿಕೊಂಡು ಮನುಷ್ಯ ಸಂಬಂಧಗಳನ್ನು ಭಾಷೆಯ ಬೆಳವಣಿಗೆಯ ಮೂಲಕವೇ ಕಟ್ಟುತ್ತಾ ನಾಟಕವನ್ನೂ ಬೆಳೆಸುತ್ತಾ ಹೋಗುವುದು. ನಾಟಕದ ಪ್ರಾರಂಭಕ್ಕೆ ಒಬ್ಬ ವ್ಯಕ್ತಿ ಹಣ ಎಣಿಸುತ್ತಾ ಕೂತಿರುತ್ತಾನೆ. ಮೂರುಮಂದಿ ಆಗಂತುಕರು ಅಲ್ಲಿ ಬರುತ್ತಾರೆ. ವ್ಯಕ್ತಿಯನ್ನು ಮಾತನಾಡಿಸುತ್ತಾರೆ. ಅವರ ಮಾತಿನ ಧಾಟಿ ಮೊದಲು ವಿದ್ಯಾರ್ಥಿಗಳಂತೆ, ಆಮೇಲೆ ಗೂಢಚರ್ಯೆ ನಡೆಸಲು ಬಂದವರಂತೆ, ಕೊನೆಗೆ ನ್ಯಾಯಾಧೀಶರ ಧ್ವನಿಯಂತೆ ಆಗುತ್ತದೆ. ಈ ಮೂರೂ ಜನರೂ ಬೇರೆ ಬೇರ ವರ್ಗಕ್ಕೆ ಸೇರಿದವರು. ಕಾರ್ಮಿಕ, ವ್ಯಾಪಾರಿ ಹಾಗೂ ಪುರೋಹಿತ. ಇಲ್ಲಿ ಬರುವ ಘರ್ಷಣೆ ಬ್ರಾಹ್ಮಣ ಬ್ರಾಹ್ಮಣೇತರ ವರ್ಗ ಘರ್ಷಣೆಯಂತಿದೆ. ಅಲ್ಲದೆ ಅರ್ಥ, ಕರ್ಮ, ಧರ್ಮ ಈ ತತ್ವಗಳ ಬಗ್ಗೆಯೂ ಅಲ್ಲಿ ಕೆಲವು ವಿಚಾರಗಳಿವೆ. ನಾಟಕದ ಕೇಂದ್ರ ಪಾತ್ರವಾದ ವ್ಯಕ್ತಿಯು ಈ ಮೂವರು ಆಗಂತುಕರೊಡನೆ ಮೊದಲು ಉಪಾಧ್ಯಾಯನಂತೆ, ರಾಜಕಾರಣಿಯಂತೆ, ತನ್ನ ಹೆಂಡತಿಯನ್ನೇ ಕೊಲೆಗೈದ ಪಾತಕಿಯಂತೆ ವಿವಿಧ ಸ್ತರಗಳಲ್ಲಿ ನಡೆದುಕೊಳ್ಳುತ್ತಾನೆ. ವ್ಯಕ್ತಿ ತನ್ನ ವರ್ತನೆಯನ್ನು, ವ್ಯಕ್ತಿತ್ವವನ್ನು ಬದಲಿಸುತ್ತಾ ಹೋದಂತೆ ಈ ಮೂವರು ತಮ್ಮನ್ನೂ ಬದಲಿಸಿಕೊಳ್ಳುತ್ತಾ ಹೋಗುತ್ತಾರೆ.

ಇಡೀ ನಾಟಕದಲ್ಲಿ ಮನುಷ್ಯನ ಅಂತರ್‌ಸಂಬಂಧಗಳು, ವರ್ತನೆಗಳು ಬದಲಾಗುತ್ತಾ ಹೋಗುವುದು ಇಡಿಯಾಗಿ ಸಂಭಾಷಣೆಯ ಮಟ್ಟದಲ್ಲಿ ಎಂಬುದನ್ನು ಗುರುತಿಸಬೇಕು. ಆಗಂತುಕರ ಮಾತಿಗೆ ತಕ್ಕಂತೆ ವ್ಯಕ್ತಿ ಬದಲಾಗುವುದು, ವ್ಯಕ್ತಿಯ ಮಾತಿಗೆ ತಕ್ಕಂತೆ ಆಗಂತುಕರು ಪ್ರತಿಕ್ರಿಯಿಸುವುದು ಇಡೀ ನಾಟಕದಲ್ಲಿ ಮಾತಿನ ಚಕಮಕಿಯಂತೆ ಭಾಸವಾಗುತ್ತದೆ. ಸಂಭಾಷಣೆಯಲ್ಲಿ ತೀವ್ರತೆ ಇಲ್ಲದೇ ಹೋದರೆ ಈ ಚಕಮಕಿ ಸಾಧ್ಯವಿಲ್ಲ. ಮೊದಲಿಗೆ ಲಂಕೇಶ್ ಸಂಭಾಷಣೆಯ ಈ ತೀವ್ರತೆಯನ್ನು ಸಾಧಿಸುವುದು ಭಾಷೆಯ ಎಲಿಪ್ಟಿಕಲ್ ಗುಣದಿಂದಾಗಿ. ಭಾಷೆಯ ಈ ಎಲಿಪ್ಟಿಕಲ್ ಗುಣದಲ್ಲಿ ಕ್ರಿಯಾಪದಗಳು ಕಡಿಮೆ ಇರುತ್ತವೆ. ಸಂಯುಕ್ತ ವಾಕ್ಯಗಳು ಇರುವುದಿಲ್ಲ. ದೀರ್ಘ ಸಂಭಾಷಣೆ ಇದಕ್ಕೆ ಹೊರತಾದದ್ದು. ನೇರ, ಸರಳ ವಾಕ್ಯಗಳೇ ಇದರ ಜೀವಾಳ. ಈ ಕೆಳಗಿನ ಉದಾಹರಣೆಯನ್ನು ಗಮನಿಸಿ :

ವ್ಯಕ್ತಿ : ನೀವು ಯಾರು ಹೇಳಿ?
ಕಂಠಿ : ಅದಿರ್‍ಲಿ ಮುಗುಳ್ನಗಿ ಸಾರ್
ವ್ಯಕ್ತಿ : ನಿಮಗೇನು ಬೇಕು?
ಕಂಠಿ : ಅದಿರ್‍ಲಿ ಮುಗುಳ್ನಗಿ ಸಾರ್
ವ್ಯಕ್ತಿ : ನಿಮ್ಮ ಆಫೀಸು ಯಾವುದು?
ಕಂಠಿ : ಅದಿರ್‍ಲಿ ಮುಗುಳ್ನಗಿ ಸಾರ್ (ಕಟುವಾಗಿ, ಯಾಂತ್ರಿಕವಾಗಿ)
ವ್ಯಕ್ತಿ . ನನಗೆ ಹೊತ್ತಾಗುತ್ತೆ . ಹೇಳಿ . ನಿಮಗೇನು ಬೇಕು?

ಕಿಟ್ಟಿ : ಒಂದುಸಲ ಪಸಂದಾಗಿ ನಗ್ರಿ ಅಂತ ಐದಾರಲ್ರಿ

ಕಂಠಿ : ಲೋ ಬಾಯಿಗೆ ಬೀಗ ಜಡ್ಕೋ.

ವ್ಯಕ್ತಿ : ದೊಡ್ಡೋರು ಮಾತನಾಡುವಾಗ ಸುಮ್ಮನಿರಬೇಕು

ಕಂಠಿ : (ಕಿಟ್ಟಿಗೆ) ಒಳ್ಳೇ ಮಾತು. ಬರಕೋ. (ವ್ಯಕ್ತಿಗೆ) ಈಗ ಕೊಲೆ ವಿಚಾರ

ವ್ಯಕ್ತಿ : ಕೊಲೆಯಲ್ಲಿ ನಾನಾ ಬಗೆ ಇವೆ

ಕಂಠಿ : (ಕಿಟ್ಟಿಗೆ) ಬರಕೋ

ವ್ಯಕ್ತಿ : ಯಜಮಾನ್ರು ಸತ್ತದ್ದು ನಿಜ

(ತೆರೆಗಳು ಪುಟ :೧೮)

ಮೇಲಿನ ವಾಕ್ಯಗಳಲ್ಲಿ ಯಾವುದೇ ವಾಕ್ಯ ಆಖ್ಯಾತ ರೂಪದ ಕ್ರಿಯಾಪದಗಳನ್ನು ಒಳಗೊಂಡಿಲ್ಲ ಎಂಬುದನ್ನು ಗಮನಿಸಬೇಕು. ಸಾಮಾನ್ಯವಾಗಿ ಸಂಭಾಷಣೆಯ ಹ್ರಸ್ವ ರೂಪಗಳು ಅಂಥ ವಾಕ್ಯಗಳನ್ನು ಬಳಸುವುದಿಲ್ಲ. ಇದರಿಂದ ನಾಟಕಕಾರನಿಗೆ ಒಂದು ಅನುಕೂಲವಿದೆ. ತನ್ನ ತರ್ಕವನ್ನು ಬೆಳೆಸುವಾಗ ಆದಷ್ಟೂ ನಾಟಕೀಯವಾಗಿಯೇ ತರ್ಕವನ್ನು ಬೆಳೆಸಬೇಕಾಗುತ್ತದೆ. ಪ್ರತಿಯೊಂದು ಪಾತ್ರವೂ ತನ್ನದೇ ಆದ ತರ್ಕವನ್ನು ಮಂಡಿಸ ಬೇಕಾಗಿರುತ್ತದೆ. ಅಲ್ಲದೇ ವಾಕ್ಯಗಳ ಪುನರಾವೃತ್ತಿಯೂ ತರ್ಕ ಮತ್ತು ಸನ್ನಿವೇಶಗಳ ತೀವ್ರ ಬೆಳವಣಿಗೆಗೆ ಸಹಾಯ ಮಾಡುತ್ತವೆ. ಮೇಲಿನ ಉದಾಹರಣೆಯಲ್ಲಿ ಕಂಠಿ ಮತ್ತೆ ಮತ್ತೆ ಹೇಳುವ 'ಅದಿರ್ಲಿ ಮುಗುಳ್ನಗಿ ಸಾರ್' ಎನ್ನುವ ಪದ ಮುಂದೆ ಬರಬಹುದಾದ ಗಂಭೀರ ವಿಷಯದ ಪ್ರಸ್ತಾವನೆಗೆ ಬೇಕಾದ ಸನ್ನಿವೇಶದ ಒಂದು ಭಾಗವಾಗಿಯೇ ಇದೆ. ಇಂಥ ಕಡೆ ಭಾಷೆ ಅತ್ಯಂತ ತೀವ್ರವಾಗಿ ಬೆಳೆಯುತ್ತಾ ಹೋಗುತ್ತದೆ.

'ತೆರೆಗಳು' ನಾಟಕ, ಭಾಷೆಯ ಮೇಲೆ ಪಾತ್ರಗಳ ಸಂಬಂಧವನ್ನು ಕಟ್ಟುತ್ತಾ ಹೋಗುತ್ತದೆ ಎಂದು ಪ್ರಸ್ತಾಪಿಸಲಾಗಿದೆ. ಈ ರೀತಿಯ ಭಾಷಾ ಬಳಕೆಯನ್ನು ಮಾಡುವಾಗ ಆ ಭಾಷೆಯಲ್ಲಿ ''ಮಾತಿಗೆ ನಟನೆ, ಚಲನಶೀಲ ಜೀವಂತ ಭಾಷೆ, ಕ್ರಿಯೆಯಿಂದ ಬೇರ್ಪಡಿಸಲಾಗದ ಅಚಾನಕ್ಕಾದ ಅಭಿವ್ಯಕ್ತಿ'' ಇರಬೇಕೆಂದು ಪಿರಾಂಡಾಲೋ ಅಭಿಪ್ರಾಯ ಪಡುತ್ತಾನೆ. ಲಂಕೇಶ್ ತಮ್ಮ ಕಿರುನಾಟಕಗಳಲ್ಲಿ ಈ ಲಕ್ಷಣಗಳನ್ನು ಸಾಧಿಸಲು ಯತ್ನಿಸುತ್ತಾರೆ. 'ತೆರೆಗಳು' ನಾಟಕದಲ್ಲಿ ಬರುವ ಕಿಟ್ಟಿ, ಕಂಠಿ, ವಿಟ್ಟಿ ಈ ರೀತಿಯ ಭಾಷೆಯನ್ನು ಬಳಸುವ ಪಾತ್ರಗಳು. ನಾಟಕದ ಸಮಗ್ರ ಪಠ್ಯದ ಒಳಗೇ ಉಪ ಪಠ್ಯಗಳನ್ನು ಈ ಪಾತ್ರಗಳು ಸೃಷ್ಟಿಸುತ್ತಾ ಹೋಗುತ್ತವೆ. ಈ ರೀತಿ ಪಠ್ಯದೊಳಗೆ ಉಪಪಠ್ಯ ಸೃಷ್ಟಿಸುವಾಗ ನಾಟಕಕಾರ ಬಳಸುವ ಭಾಷೆಗೂ ಬಹುಮುಖ ಸ್ತರಗಳು ರೂಪಿತವಾಗುತ್ತಾ ಹೋಗುತ್ತವೆ. ಮೂವರು ಆಗಂತುಕರು ಬೇರೆ ಬೇರೆ ಪಾತ್ರಗಳಂತೆ ತೋರಿಸಿಕೊಳ್ಳುವಾಗ ಸೂಕ್ಷ್ಮವಾಗಿ ಭಾಷೆಯಲ್ಲೂ ಬದಲಾವಣೆಯಾಗಿರುತ್ತದೆ. ಇಲ್ಲಿ ಸಹಜ ಭಾಷೆಯನ್ನು ಉದ್ದೇಶಪೂರ್ವಕವಾಗಿಯೇ ಬದಲಾಯಿಸಿ ಅದರಲ್ಲಿರುವ ಕೊರತೆಗಳನ್ನು ತುಂಬುವಂತೆ ಬೇರೆ ತಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ.

ಕಂಠಿ : ಕರ್ಮ ಅಂದ್ರೇನು, ಕಾವ್ಯ ಅಂದ್ರೇನು, ಕಾಡು ಅಂದ್ರೇನು -
ಕಿಟ್ಟಿ : Tax ಅಂದ್ರೇನು, Fox ಅಂದ್ರೇನು, Hoax ಅಂದ್ರೇನು -
ವಿಟ್ಟಿ : ರಾಮ ಅಂದ್ರೇನು, ಕೃಷ್ಣ ಅಂದ್ರೇನು, ರಾವ್ ಅಂದ್ರೇನು -

ಮುಂತಾದ ಉದಾಹರಣೆಗಳಲ್ಲಿ ಪುನರಾವೃತ್ತಿಗಳು, ಸುತ್ತಿ ಬಳಸಿ ಹೇಳುವುದು, ಪೃಥಕ್ಕಾಗಿಸಿ ಹೇಳುವುದು, ಭಾಷೆಯನ್ನು ಆಟದ ಸಾಧನವನ್ನಾಗಿ ಮಾಡಿಕೊಳ್ಳುವುದು, ಇದ್ದಕ್ಕಿದ್ದಂತೆ ಕಾವ್ಯಾತ್ಮಕವಾಗಿ ಮಾತನಾಡುವುದು ಮೊದಲಾದವುಗಳನ್ನು ಕಾಣಬಹುದು. 'ಕ್ರಾಂತಿ ಬಂತು ಕ್ರಾಂತಿ' ನಾಟಕದಲ್ಲಿ ಬರುವ ಪ್ರೊಫೆಸರ್ ಭಗವಾನ್ ಬಳಸುವ ಉನ್ನತ ಮಟ್ಟದ ರೆಟಾರಿಕ್ ಸಹ ಈ ರೀತಿಯ ಒಂದು ತಂತ್ರವೇ. ನಾಟಕಕಾರ ತನ್ನ ನಾಟಕದಲ್ಲಿ ಸನ್ನಿವೇಶದಿಂದ ಸನ್ನಿವೇಶಕ್ಕೆ ಹೈಲೈಟ್ ಮಾಡಬೇಕಾದ ಪಾತ್ರ, ಮತ್ತು ಸಂಗತಿಗಳಿಗೆ ತಕ್ಕಹಾಗೆ ಭಾಷೆಯ ಸ್ವರೂಪವನ್ನೂ ಬದಲಿಸಿಕೊಳ್ಳುತ್ತಾ ಹೋಗುತ್ತಾನೆ. ಇದನ್ನು ನಾಟಕದ ಭಾಷೆಯ ಸಹಜ ಸ್ವರೂಪ ಎಂದು ಕರೆಯುತ್ತಾರೆ.

ಆಸ್ಬರ್ನ್ ತನ್ನ ನಾಟಕ ''ಲುಕ್ ಬ್ಯಾಕ್ ಇನ್ ಆ್ಯಂಗರ್'' ಬಗ್ಗೆ ಬರೆಯುತ್ತಾ ''ಇದು ತನ್ನ ಭಾಷೆಯ ಬಳಕೆಯಲ್ಲಿ ಇಲ್ಲಿಯವರೆಗಿದ್ದ ಚೌಕಟ್ಟನ್ನು ಮುರಿದುಹಾಕಿದೆ'' ಎನ್ನುತ್ತಾನೆ. ಲಂಕೇಶ್ ಕೂಡಾ ತಮ್ಮ ನಾಟಕಗಳ ಭಾಷೆಯ ಬಳಕೆಯಲ್ಲಿ ಚೌಕಟ್ಟನ್ನು ಮೀರಿದವರು. ಇದಕ್ಕೆ ಕಾರಣಗಳನ್ನು ಹೀಗೆ ಗುರುತಿಸಬಹುದು. ಮೊದಲಿಗೆ ಲಂಕೇಶ್ ವಾಸ್ತವವಾದೀ ನಾಟಕಗಳನ್ನು ಬರೆಯಲು ತೊಡಗಿದ್ದು. ವಾಸ್ತವವಾದೀ ನಾಟಕಗಳ ಮೂಲಬಂಡವಾಳ ಭಾಷೆ. ಇಲ್ಲಿ ಭಾಷೆ ಡ್ರಮೆಟಿಕ್ ಆಗಿರುವುದಿಲ್ಲ. ಆದರೆ ಅದನ್ನು 'ಡ್ರಮೆಟಿಕ್' ಮಾಡುವ ಜವಾಬ್ದಾರಿ ನಾಟಕಕಾರನದ್ದಾಗಿರುತ್ತದೆ. ಅದಕ್ಕಾಗಿ ಅತ ಅಭಿವ್ಯಕ್ತಿಸಲಾಗದಂತಹ, ಕೈಗೆಸಿಗದಂತಹ, ಹಾರಿಕೆಯಂತಿರುವ, ಅಡಚಣೆಯನ್ನು ಉಂಟುಮಾಡುವಂತಹ, ಇಷ್ಟವಿಲ್ಲದ ಪಾತ್ರಗಳನ್ನು ಸೃಷ್ಟಿಸುತ್ತಲೇ ಆಯಾಯಾ ಪಾತ್ರಗಳಿಗೆ ತಕ್ಕ ಭಾಷೆಯನ್ನೂ ಸೃಷ್ಟಿಸಬೇಕಾಗುತ್ತದೆ. ಅಂದರೆ ಪಾತ್ರಕ್ಕೆ ತಕ್ಕಂತೆ ಭಾಷೆಯನ್ನು ಸೃಷ್ಟಿಸುತ್ತಾ ಹೋಗುವುದು. ಪ್ರತಿಯೊಂದು ನಾಟಕಕ್ಕೂ ಹೊಸ ಪ್ರರೂಪಗಳನ್ನು ಕಂಡುಕೊಳ್ಳುತ್ತಾ ಹೋಗುವುದು. ಲಂಕೇಶ್ ತಮ್ಮ ಎಲ್ಲಾ ನಾಟಕಗಳಲ್ಲಿ ಮುಖ್ಯವಾಗಿ ಮಧ್ಯಮವರ್ಗದ ಸಮಸ್ಯೆಗಳನ್ನು ಅನ್ವೇಷಿಸುತ್ತಾ, ವಿಶ್ಲೇಷಿಸುತ್ತಾ ಹೋಗುತ್ತಾರೆ. ಈ ಅನ್ವೇಷಣೆಗೆ ಅವರು ಪ್ರಧಾನವಾಗಿ ಬಳಸುವುದು ಭಾಷೆ. ಅದನ್ನು ಭಾಷೆ ಎನ್ನುವುದಕ್ಕಿಂತ 'ಮಾತು' ಎನ್ನುವುದು ಹೆಚ್ಚು ಸೂಕ್ತ. ಒಂದು ನಾಟಕ ಯಾವಾಗಲೂ ಮಾತು ಎನ್ನುವುದನ್ನು ಪದಗಳಾಚೆಯ ಸಾಧ್ಯತೆ ಎಂದೇ ಪರಿಗಣಿಸುತ್ತದೆ. ಹಾಗೆ ಅದು ಪದಗಳಾಚೆಯ ಸಂವೇದನೆಯನ್ನು ತಟ್ಟಿದಾಗಲೇ ಶಾಬ್ದಿಕ ಕ್ರಿಯೆಗೊಂದು ಸ್ಥಾನ ದೊರಕುತ್ತದೆ.

ಲಂಕೇಶರ ಕಿರುನಾಟಕಗಳು ಕನ್ನಡ ನಾಟಕದ ಭಾಷಾ ಬಳಕೆಯಲ್ಲಿ ಅಂಥ ಒಂದು ಸಾಧ್ಯತೆಯನ್ನು ತೋರಿಸಿಕೊಟ್ಟವುಗಳು. ತಮ್ಮ ತೀಕ್ಷ್ಣ ಸಂಭಾಷಣೆ, ಹ್ರಸ್ವ ವಾಕ್ಯಗಳು, ಕಾವ್ಯಾತ್ಮಕ ಭಾಷೆ, ಪುನರಾವೃತ್ತಿಗಳು, ಭಾಷೆಯ 'ಡಿ ಅಟೊಮೆಟೈಸೇಷನ್' ಮುಂತಾದ ತಂತ್ರಗಳನ್ನು ಅವರು ಯಥೇಚ್ಛವಾಗಿ ಬಳಸಿಕೊಂಡಿದ್ದಾರೆ. ಈ ನಾಟಕಗಳು ಸಮಕಾಲೀನ

ವಸ್ತುವನ್ನು ಪಡೆದಿರುವುದರಿಂದ ಭಾಷಾ ಮಿಶ್ರಣ ಮತ್ತು ಭಾಷಾ ಪಲ್ಲಟಗಳೂ ಕೂಡ ಆಯಾ ಪಾತ್ರಗಳ ಸಹಜ ಗುಣಸ್ವಭಾವಕ್ಕೆ ತಕ್ಕಂತೆ ಬಳಕೆಯಾಗಿವೆ. ಆದರೆ ಒಂದಂಶವನ್ನು ಇಲ್ಲಿ ಗಮನಿಸಬೇಕು. ಭಾಷೆಗಿರಬಹುದಾದ ಒಂದು ತಾರ್ಕಿಕ ಬೆಳವಣಿಗೆಯನ್ನು ಅವರು ಏಕಮುಖವಾಗಿ ಬಳಸಲು ಈ ನಾಟಕಗಳಲ್ಲಿ ನಿರಾಕರಿಸುತ್ತಾರೆ. ಇದು ಮುಖ್ಯವಾಗಿ ಕಂಡುಬರುವುದು ಆಯಾ 'ಪಾತ್ರ ಭಾಷೆ' ಗಳಲ್ಲಿ. ಈ ನಾಟಕಗಳ ಪಾತ್ರಗಳು fragmented ಆದ್ದರಿಂದ ಒಂದು ರೀತಿಯ ಭಾಷೆಯನ್ನೇ ಅವರು ಬಳಸುತ್ತಾರೆ. ಈ fragmented ಭಾಷೆ ಯಾವಾಗಲೂ ಏರಿಳಿತದಲ್ಲೇ ಇರುತ್ತದೆ.

ಲಂಕೇಶರ 'ಸಂಕ್ರಾಂತಿ' ನಾಟಕದ ಭಾಷೆ ಅವರ 'ಏಳು ನಾಟಕಗಳು' ಗಿಂತ ಭಿನ್ನವಾದದ್ದು. ಈ ಏಳೂ ನಾಟಕಗಳಲ್ಲಿ ಅವರು ಬಳಸಿಕೊಂಡಿರುವುದು ಕನ್ನಡದ 'ಶಿಷ್ಟ ಮಾತಿನ' ಭಾಷೆಯನ್ನು. ಈ ಶಿಷ್ಟಮಾತಿನ ಭಾಷೆ ವರ್ತಮಾನದ ಆಧುನಿಕ ಭಾಷೆ ಎಂಬುದನ್ನು ಗಮನಿಸಬೇಕು. ವರ್ತಮಾನದ ಆಧುನಿಕ ಭಾಷೆಗೆ ಎರಡು ವಿಚಿತ್ರವಾದ ಗುಣಗಳಿವೆ. ಒಂದು ಕಡೆ ಆ ಭಾಷೆ ಶಿಷ್ಟವೂ ಹೌದು ಮತ್ತು ಇನ್ನೊಂದು ಕಡೆ ಅದು ಆಧುನಿಕವೂ ಹೌದು. ಶಿಷ್ಟ ಸ್ವರೂಪದ ಮೂಲಕ ಸಮಾನರೂಪೀ ಅಭಿವ್ಯಕ್ತಿಯನ್ನು ಸಾಧಿಸುತ್ತಲೇ ಆಧುನಿಕತೆಯ ಮೂಲಕ ಇಂಗ್ಲಿಷ್ ಮತ್ತು ತಂತ್ರಜ್ಞಾನ ಹಾಗೂ ನಗರೀಕರಣದ ಸಂವೇದನೆಗೆ ಹತ್ತಿರವಾಗಿರುತ್ತದದು. 'ಟಿ. ಪ್ರಸನ್ನನ ಗೃಹಸ್ಥಾಶ್ರಮ', 'ಸಿದ್ಧತೆ', 'ನನ್ನ ತಂಗಿಗೊಂದು ಗಂಡು ಕೊಡಿ', 'ಗಿಳಿಯು ಪಂಜರದೊಳಿಲ್ಲ' ನಾಟಕಗಳಲ್ಲಿ ಈ ಅಂಶಗಳು ಢಾಳಾಗಿ ಎದ್ದು ಕಾಣುತ್ತದೆ. 'ಸಂಕ್ರಾಂತಿ' ಯ ಭಾಷೆ ಮೇಲೆ ತಿಳಿಸಿದ ನಾಟಕಗಳ ವರ್ಗದ್ದೂ ಅಲ್ಲ, ಭಾಗದ್ದೂ ಅಲ್ಲ. ''ಇಲ್ಲಿಯ ಜನರಾಡುವ ಭಾಷೆ ದಾವಣಗೆರೆಯ ಸೆರಗಿನದು; ನಮ್ಮೂರ ಜನರಾಡುವಂಥಾದ್ದು'', ಎಂದು ಹೇಳುವ ಮೂಲಕ ಲಂಕೇಶ್ ಈ ನಾಟಕದ ಭಾಷೆಗೆ ಒಂದು ಪ್ರಾದೇಶಿಕ ಕಟ್ಟುಪಾಡನ್ನು ಹಾಕಿಕೊಂಡಿದ್ದಾರೆ. ಏಳು ನಾಟಕಗಳನ್ನು ನಗರೀಕರಣದ ಶಿಷ್ಟ ಭಾಷೆಯಲ್ಲಿ ಬರೆದ ನಾಟಕಕಾರನಿಗೆ ಹೊಸ ಭಾಷಾ ಪ್ರರೂಪಗಳನ್ನು ತರುವ ಅನಿವಾರ್ಯತೆ ಇದ್ದೇ ಇರುತ್ತದೆ. ಇದು ಶಕ್ತಿಶಾಲಿಯಾದ ನಾಟಕಕಾರನಲ್ಲಿ ಕಂಡು ಬರುವ ವಿಶೇಷ ಲಕ್ಷಣ. ಚಂದ್ರಶೇಖರ ಕಂಬಾರ, ಗಿರೀಶ ಕಾರ್ನಾಡ ಮುಂತಾದ ನಾಟಕಕಾರರು ಈ ರೀತಿಯ ಪ್ರಯೋಗಗಳನ್ನು ಮಾಡಿದ್ದಾರೆ. 'ಸಂಕ್ರಾಂತಿ' ನಾಟಕದಲ್ಲಿ ಎರಡು ಸಮುದಾಯಗಳ ಭಾಷೆ ಬಳಕೆಯಾಗಿರುವುದನ್ನು ಕಾಣುತ್ತೇವೆ. ಒಂದು ಕಡೆ ಹೊಲೆಯರ ಹಟ್ಟಿಯ ಭಾಷೆ, ಇನ್ನೊಂದು ಕಡೆ ಶಿಷ್ಟ ಜನಾಂಗದ ಭಾಷೆ. ಲಂಕೇಶರ ಬೇರೆ ನಾಟಕಗಳಲ್ಲಿ ಭಾಷೆ ಅದರ ರಚನಾಕ್ರಮದ ತಂತ್ರದಿಂದ ಗಮನ ಸೆಳೆದರೆ, ಇಲ್ಲಿ ತಂತ್ರದ ಜೊತೆಗೆ ಭಾಷೆ ನಾಟಕೀಯ ಬೆಳವಣಿಗೆಯ ವಸ್ತುವಾಗಿಯೂ ಗಮನ ಸೆಳೆಯುತ್ತದೆ. ಶಿಷ್ಟ ಮತ್ತು ಪರಿಶಿಷ್ಟ ಸಮುದಾಯಗಳ ಮಧ್ಯೆ ಮುಖಾಮುಖಿಯಾಗುವ ಅವರವರ ಭಾಷೆ ಮುಖ್ಯವಾಗಿ ನಾಟಕದ ತೀವ್ರತೆಯನ್ನು ಹೆಚ್ಚಿಸಲೆಂದೇ ಬಳಕೆಯಾಗಿದೆ. ಇದನ್ನೇ ನಾಟಕದ ಕ್ರಿಯೆಯಲ್ಲಿ ಹೇಳುವುದಾದರೆ 'ಅಭಿನಯ' ಮತ್ತು 'ನಟನೆ' ಯ ಮಧ್ಯೆ ಭಾಷೆ ಹೇಗೆ ಬಳಕೆಯಾಗುತ್ತದೆ ಎಂಬುದನ್ನು 'ಸಂಕ್ರಾಂತಿ' ಯಲ್ಲಿ ನೋಡಬಹುದು. ಉಜ್ಜ ಮತ್ತು ಅವನ ಪರಿವಾರದವರು

ಬಳಸುವ ಭಾಷೆಗೆ ಅಭಿನಯದ ಲಕ್ಷಣಗಳಿದ್ದರೆ, ಬಸವ ಮತ್ತು ಬಿಜ್ಜಳರು ಬಳಸುವ ಭಾಷೆಗೆ ನಟನೆಯ ಲಕ್ಷಣಗಳಿವೆ. ಇದೊಂದು ರೀತಿಯ ರಂಗಪ್ರಜ್ಞಾಪೂರ್ವಕವಾದ ಭಾಷಾ ಬಳಕೆಯ ತಂತ್ರ. ಲಂಕೇಶರು 'ಸಂಕ್ರಾಂತಿ'ಯ ಪ್ರಥಮ ಆವೃತ್ತಿಯಲ್ಲಿ ಪ್ರದರ್ಶನದ ಟಿಪ್ಪಣಿಯೊಂದನ್ನು ಬರೆದಿದ್ದಾರೆ. ಅದರಲ್ಲಿ ಹೀಗೆ ಹೇಳುತ್ತಾರೆ: ''ದೇಸಿಯನ್ನು ಆಡುವಾಗ ಬರೆದಿರುವ ಹಾಗೆ ಆಡದೆ ಕೊಂಚ ವೇಗವಾಗಿ, ಪದಗಳ ಅಚ್ಚಿನ ಸ್ಥಿತಿಯನ್ನು ಮೃದುಗೊಳಿಸಿ ಲಯಬದ್ಧವಾಗಿ ಆಡಬೇಕು; ಇತರ ಮಾತುಗಳನ್ನು ಆಡುವಾಗ ಸೂಚಿತವಾದ ಎಲ್ಲ 'ಮೌನ'ಗಳ ಉಪಯೋಗ - ಆದಷ್ಟೂ - ಪಡೆದು, ತಮಾಷೆಯ ಚಟಕ್ಕೆ ಬೀಳದೆ, ಆದರೆ ಹಾಸ್ಯವನ್ನು ತೀರಾ ಮಂದಗೊಳಿಸದೆ, ಆಡಬೇಕು.'' ಈ ಮಾತಿನಲ್ಲಿ ಲಂಕೇಶ್ ತಾವು ಸ್ಪಷ್ಟವಾಗಿ ನಾಟಕದಲ್ಲಿ ಎರಡು ರೀತಿಯ ಭಾಷಾ ರೂಪಗಳನ್ನು ಬಳಸಿರುವುದನ್ನು ಒಪ್ಪಿಕೊಂಡಿದ್ದಾರೆ. ದೇಸಿಯನ್ನು ಆಡುವಾಗ ಬರೆದಿರುವ ಹಾಗೆ ಆಡದೇ ಕೊಂಚ ವೇಗವಾಗಿ, ಪದಗಳ ಅಚ್ಚಿನ ಸ್ಥಿತಿಯನ್ನು ಮೃದುಗೊಳಿಸಿ ಲಯಬದ್ಧವಾಗಿ ಆಡಬೇಕು ಎಂದರೇನು? ಕನ್ನಡ ಭಾಷೆಯಲ್ಲಿ ಗ್ರಾಮೀಣ ಆಡುಮಾತಿಗೂ, ಶಿಷ್ಟ ಆಡುಮಾತಿಗೂ ಮತ್ತು ಬರವಣಿಗೆಯ ಶಿಷ್ಟ ಭಾಷೆಗೂ ಕೆಲವು ಮೂಲಭೂತ ವ್ಯತ್ಯಾಸಗಳಿವೆ. ಬರೆದಂತೆ ನಾವು ಮಾತನಾಡುವುದಿಲ್ಲ. ಮಾತನಾಡುವಾಗ ಪ್ರತಿಪದದ ಎರಡನೇ ಸ್ವರ ಬಿದ್ದುಹೋಗುವುದು ಕನ್ನಡದ ಜಾಯಮಾನ. ಬರೆಯುವಾಗ ನಾವು ಪದದ ಎರಡನೇ ಸ್ವರವನ್ನು ಸೇರಿಸಿಕೊಂಡು ಬರೆದರೂ ಮಾತನಾಡುವಾಗ ಅದನ್ನು ಲೋಪಮಾಡಿಯೇ ಮಾಡುತ್ತೇವೆ. ಆದರೆ ಗ್ರಾಮೀಣ ಆಡುಮಾತಿಗೆ ಒಂದು ವಿಶೇಷ ಧ್ವನ್ಯಾತ್ಮಕ ಲಕ್ಷಣವಿರುತ್ತದೆ. ಅದೇನೆಂದರೆ ಸ್ವರದ ಮೇಲೆ ಒತ್ತುನೀಡಿ ಒಂದು ರೀತಿಯ ಲಯವನ್ನು ಸೃಷ್ಟಿಸುವುದು. ಇದು ಶಿಷ್ಟ ಆಡುಮಾತಿನಲ್ಲಿ ಕಂಡುಬರುವುದಿಲ್ಲ. ಅದನ್ನೇ ಲಂಕೇಶ್ ಮೇಲೆ ತಿಳಿಸಿರುವುದು. ಉಜ್ಜ ಮತ್ತು ಅವನ ಪರಿವಾರದವರ ಭಾಷೆಯನ್ನು ಆದಷ್ಟೂ ಬರವಣಿಗೆಯಲ್ಲಿ ಗ್ರಾಮ್ಯದ ಹತ್ತಿರಕ್ಕೆ ತರಲು ಅವರು ಯತ್ನಿಸುತ್ತಾರೆ. ಆದರೆ ಸಂಭಾಷಣೆ ಹೇಳುವಾಗ ಅದು ಇನ್ನೂ ಗ್ರಾಮ್ಯವಾಗುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕು.

ತಮ್ಮ ಕಿರುನಾಟಕಗಳಲ್ಲಿ ಯಥೇಚ್ಛವಾಗಿ ಬಳಸುವ 'ಎಲಿಪ್ಟಿಕಲ್' ವಾಕ್ಯಗಳನ್ನು ಲಂಕೇಶ್ 'ಸಂಕ್ರಾಂತಿ' ನಾಟಕದಲ್ಲಿ ಬಳಸಿಲ್ಲ. ಇಲ್ಲಿ ಚಿಕ್ಕ ಚಿಕ್ಕ ವಾಕ್ಯಗಳು ಬಳಕೆಯಾಗಿದ್ದರೆ ಮುಖ್ಯವಾಗಿ ವಾಗ್ವಾದದ ಬೆಳವಣಿಗೆಗೆ ಮಾತ್ರ. ಅಲ್ಲದೆ, ಶಿಷ್ಟ ಭಾಷೆಯಲ್ಲಿ ಎಲಿಪ್ಟಿಕಲ್ ವಾಕ್ಯಗಳು ಬಳಕೆಯಾಗುವುದಕ್ಕೂ ಗ್ರಾಮ್ಯದಲ್ಲಿ ಬಳಕೆಯಾಗುವುದಕ್ಕೂ ವ್ಯತ್ಯಾಸ ಇದೆ. ಶಿಷ್ಟ ಭಾಷೆಯಲ್ಲಿ ಆಖ್ಯಾತ ರೂಪದ ಕ್ರಿಯಾಪದಗಳ ಬಳಕೆ ಗೌಣ. ನಾಮ ವಿಶೇಷಣಗಳು ಅಥವಾ ವಿಧೇಯಕಗಳ ಬಳಕೆ ಹೆಚ್ಚು. ಲಂಕೇಶ್ ಅವರಿಗಂತೂ ವಿಧ್ಯರ್ಥ ರೂಪಗಳ ಬಳಕೆ ಅತಿ ಹೆಚ್ಚು ಪ್ರಿಯವಾದವುಗಳು. ಬೇಕು, ಬೇಡ, ಬಹುದು, ಬಾರದು ಮುಂತಾದವುಗಳನ್ನು ಅವರು ಯಥೇಚ್ಛವಾಗಿ ಬಳಸುತ್ತಾರೆ. 'ಬೇಡ'ಗಳನ್ನು ಬಿಡೋದು ಹೇಗೆ ಎಂಬುದು ಲಂಕೇಶರ ಉಜ್ಜನ, ಕಾರ್ನಾಡರ ಬಿಜ್ಜಳನ ಸಮಸ್ಯೆ. ಆ ಸಮಸ್ಯೆ ಒಂದುರೀತಿಯಲ್ಲಿ ಲಂಕೇಶರ ಸಮಸ್ಯೆಯೂ ಹೌದು. ಈ ರೀತಿಯ ವಿಧ್ಯರ್ಥಗಳು ಭಾಷೆಗೊಂದು ಅಧಿಕೃತತೆಯನ್ನು ತಂದು

ಕೊಡುತ್ತವೆಂಬುದು ಅವರ ಅಭಿಪ್ರಾಯ ಇರಬಹುದು.'ಸಂಕ್ರಾಂತಿ' ಯಲ್ಲಿ ಪರಿಶಿಷ್ಟ ವರ್ಗದವರು ಬಳಸುವ ಎಲೆಪ್ಟಿಕಲ್ ವಾಕ್ಯಗಳು ಆಖ್ಯಾತ ರೂಪದ ಕ್ರಿಯೆಯನ್ನು ಪಡೆದಿರುವಂಥವು.ಕನ್ನಡ ಭಾಷೆಯಲ್ಲಿಯೇ ಶಿಷ್ಟ ಭಾಷೆ ಮತ್ತು ಗ್ರಾಮ್ಯ ಭಾಷೆಯ ರಚನಾ ವ್ಯವಸ್ಥೆಯಲ್ಲಿ ಇಂಥದೊಂದು ಬೆಳವಣಿಗೆ ಇದೆ. ಲಂಕೇಶ್ ಅವರು 'ಸಂಕ್ರಾಂತಿ 'ಯಲ್ಲಿ ಇದನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಂಡಿದ್ದಾರೆ.

'ಸಂಕ್ರಾಂತಿ' ನಾಟಕದಲ್ಲಿ ಭಾಷೆ ನಾಟಕದ ವಸ್ತುವಾಗಿಯೂ ಜಾಗ ಪಡೆದುಕೊಳ್ಳುತ್ತದೆನ್ನುವುದನ್ನು ಪ್ರಸ್ತಾಪಿಸಿದ್ದೇನೆ. ಅದರ ಕಡೆ ಕೊಂಚ ಗಮನ ಹರಿಸೋಣ. ರುದ್ರ ಬಸವಣ್ಣನ ಪ್ರಭಾವಕ್ಕೆ ಸಿಕ್ಕಿ ತನ್ನ ನಡೆ ನುಡಿಯಲ್ಲಿ ಬದಲಾಗಿದ್ದಾನೆ. ಪರಿಶಿಷ್ಟನಾಗಿದ್ದವನು ಶಿಷ್ಟನಾಗಿದ್ದಾನೆ . ಅವನ ಬದಲಾವಣೆ ಎದ್ದು ಕಾಣುವುದು ಅವನಾಡುವ ಭಾಷೆಯಲ್ಲಿ ಮತ್ತು ಅವನ ವರ್ತನೆಗಳಲ್ಲಿ. ಯಾಕ್ಲಾ - ಹೋಗ್ಲಾ - ಬಾರ್ಲಾ - ಅನ್ನೋ ಭಾಷೆಯನ್ನು ತ್ಯಜಿಸಿ ಶಿಷ್ಟರು ಆಡುವ ಭಾಷೆಯನ್ನು ರೂಢಿಸಿಕೊಂಡಿದ್ದಾನೆ. ಪರಿಶಿಷ್ಟನಾದವನು ಎಷ್ಟೇ ಶಿಷ್ಟನಾಗಲು ಬಯಸಿದರೂ ಕೆಲವೊಮ್ಮೆ ಭಾಷೆ ಅವನಿಗೆ ಕೈಕೊಟ್ಟೇ ಕೊಡುತ್ತದೆ. ಈಗಲೂ ಅವನಿಗೆ ಉಷಾ ಎನ್ನಲು ಬರುವುದಿಲ್ಲ.'ಉಸಾ' ಎಂದೇ ಹೇಳುತ್ತಾನೆ. ಲಂಕೇಶ್ ಭಾಷೆಯ ಈ ಸಹಜ ಲಕ್ಷಣವನ್ನು ನಾಟಕದ ನಾಟಕೀಯತೆಯನ್ನು ಹೆಚ್ಚಿಸುವಲ್ಲಿ ಅನುಕೂಲವಾಗುವಂತೆ ಬಳಸಿಕೊಂಡಿದ್ದಾರೆ.

ಸಂಕ್ರಾಂತಿ ನಾಟಕ ಒಂದು ಕಡೆ ಭಾಷೆಯನ್ನು ಬಳಸಿಕೊಂಡು ಶೂದ್ರರನ್ನು ಗೇಲಿ ಮಾಡಿದರೆ ಇನ್ನೊಂದು ಕಡೆ ಅದೇ ಭಾಷೆಯನ್ನು ಬಳಸಿಕೊಂಡು ಬ್ರಾಹ್ಮಣರನ್ನೂ ಗೇಲಿ ಮಾಡುತ್ತದೆ. ''ಸಂಸ್ಕೃತದ ಒಂಬು ಶಬ್ದ ಕೇಳಿದರೂ ಜನ ಸಿಟ್ಟಿಗೇಳುವ , ಗೇಲಿ ಮಾಡುವ ಕಾಲ ಬಂದಿದೆ '' ಎಂದು ಶಾಸ್ತ್ರಿ ಹೇಳುವ ಮಾತಿನಲ್ಲಿ ನಿಜವಾದ ಆತಂಕ ವ್ಯಕ್ತವಾದರೂ ಬಿಜ್ಜಳನಲ್ಲಿ ಅದು ಉತ್ಕಟ ಆತಂಕವನ್ನೇನೂ ಉಂಟುಮಾಡುವುದಿಲ್ಲ. ಯಾಕೆಂದರೆ ನಾಲ್ಕನೇ ದೃಶ್ಯದ ಪ್ರಾರಂಭದಲ್ಲಿ ,''ಈ ದೇಶದ ಪ್ರತಿಯೊಬ್ಬನೂ ಸ್ವರ್ಗ, ಧರ್ಮ, ಅಧ್ಯಾತ್ಮ ಬಿಟ್ಟು ಬೇರೆ ನಾಲಗೆ ಹೊರಳಿಸಲ್ಲ'' ಎಂಬ ತೀರ್ಮಾನಕ್ಕೆ ಅವನಾಗಲೇ ಬಂದಾಗಿದೆ. ಆದ್ದರಿಂದ ಬಿಜ್ಜಳ ಮತ್ತು ವೈದಿಕರು; ಬಿಜ್ಜಳ ಮತ್ತು ಬಸವಣ್ಣನ ನಡುವೆ ನಡೆಯುವ ಮಾತುಗಳು ಒಬ್ಬರನ್ನು ಮೀರಿ ಒಬ್ಬರು ಹೇಗೆ ಕಥಾನಕಗಳನ್ನು ಕಟ್ಟಬಹುದು ಎಂಬ ಲೆಕ್ಕಾಚಾರದಲ್ಲಿವೆ. ಅದಕ್ಕೆ ತಕ್ಕಂತೆ ಭಾಷೆ ನರೇಟಿವ್‌ಗಳಲ್ಲಿ ಮುಂದುವರೆಯುತ್ತಾ ಹೋಗುತ್ತದೆ. ಜೀವನದ ಅನುಭವವನ್ನೇ ಮಾತಾಗಿ ಆಡುವ ಶೂದ್ರರಿಗೂ, ಬುದ್ಧಿಯ ತರ್ಕದಲ್ಲಿ ಜೀವನವನ್ನು ನೋಡುವ ಬಿಜ್ಜಳ ಮತ್ತಿತರರ ಮಾತಿಗೂ ರಚನೆಯಲ್ಲಿಯೇ ಮೂಲಭೂತವಾದ ವ್ಯತ್ಯಾಸಗಳಿವೆ. ಬದುಕಿನ ಮೂಲದಿಂದ ಅನುಭವವಾಗುವ ಭಾಷೆ ಸರಳ; ನೇರ ನಿರೂಪಣೆಯಲ್ಲಿರುತ್ತದೆ. ಸಾರ್ವಜನಿಕ ಜೀವನದ ನೆಲೆಯಿಂದ ಬರುವ ಭಾಷೆ ಸನ್ನಿವೇಶಕ್ಕೆ ತಕ್ಕಂತೆ ಸಾಣೆ ಹಿಡಿಸಿಕೊಳ್ಳುತ್ತಿರುತ್ತದೆ ಮತ್ತು ಅಂಥ ಭಾಷೆ ಪಾತ್ರಗಳಿಗೂ ಸಾಣೆ ಹಿಡಿಯುತ್ತಿರುತ್ತದೆ.

ಬಿಜ್ಜಳ ಮತ್ತು ಬಸವಣ್ಣನ ಮಧ್ಯದ ಸಂಭಾಷಣೆಯಂತೂ ಭಾಷೆಯನ್ನು ಸಾಣೆ

ಹಿಡಿಯುವ ಕಲಾವಂತಿಕೆಗೆ ಒಳ್ಳೆಯ ಉದಾಹರಣೆ. ಬಿಜ್ಜಳ ಬಸವಣ್ಣನನ್ನು ಮಾತಿನಲ್ಲಿ ಸೋಲಿಸಿ ನಿರಾಯುಧನನ್ನಾಗಿ ಮಾಡಬೇಕಿದೆ. ಅದಕ್ಕಾಗಿ ಆತ ಬಳಸದ ವಿಧಾನವಿಲ್ಲ. ಕತೆ ಹೇಳುತ್ತಾನೆ, ತರ್ಕಕ್ಕೆ ಒಡ್ಡಿಕೊಳ್ಳುತ್ತಾನೆ, ರೇಗುತ್ತಾನೆ. ಆಪ್ತ ಮಿತ್ರನಂತೆ ನಟಿಸುತ್ತಾನೆ. ಈ ಎಲ್ಲಾ ಪಾತ್ರಕ್ಕೆ ಬೇಕಾದ ರೆಟಾರಿಕ್‌ಗಳನ್ನು ಬಳಸುತ್ತಾನೆ. ಅವರಿಬ್ಬರ ಮಧ್ಯದ ವಾದ, ವಿವಾದಗಳು ಲಾಯರುಗಳಿಬ್ಬರ ಮಧ್ಯದ ಪಾಟಿಸವಾಲುಗಳಂತೆ ಕಂಡುಬರುತ್ತವೆ. ಕಡೆಗೂ ಬಸವಣ್ಣ, ''ನಾನು ಮಾತಾಡಲೆ?'' ಎಂದು ಕೇಳಿದಾಗ ಅವನಿಗೆ ಮಾತಾಡಲು ಅವಕಾಶ ಕೊಡದೆ ತನ್ನ ತೀರ್ಪನ್ನು ಹೇಳಿಯೇ ಬಿಡುತ್ತಾನೆ. ''ನನ್ನ ಮಾತಿಗೆ ನೀವು ಅವಕಾಶ ಕೊಡಲಿಲ್ಲ'' ಎಂದು ಬಸವಣ್ಣ ಹಲುಬುವಾಗ ''ನಿಮ್ಮ ಪ್ರೀತಿ ಕೂಡ ಮಾತಿಗೆ ಮೀರಿದ್ದು ಬನ್ನಿ'' ಎಂದು ಎದ್ದು ಹೊರಡುತ್ತಾನೆ.

ಆಂಡ್ರ್ಯೂ ಕೆನೆಡಿ ಎಂಬ ಭಾಷಾ ವಿಜ್ಞಾನಿ 'ಕಾಸ್ಟ್ಯೂಮ್ ಸ್ಪೀಚ್' ಎನ್ನುವ ಪರಿಕಲ್ಪನೆಯನ್ನು ಕುರಿತು ಹೇಳಿದ್ದಾನೆ. ಅವನ ಪ್ರಕಾರ, ಅಲ್ಲಿ ಭಾಷೆ ಆಭರಣದ ರೀತಿಯಲ್ಲಿ ಕಂಡುಬರುತ್ತದೆ. ತಮ್ಮ ವಾದವನ್ನು ಮಂಡಿಸುವುದಕ್ಕೆ ಮತ್ತು ಭ್ರಮೆಯನ್ನು ಸೃಷ್ಟಿಸುವುದಕ್ಕೆ ಇದನ್ನು ಬಳಸಿಕೊಳ್ಳಲಾಗಿದೆ. ಬಿಜ್ಜಳ ಈ ನಾಟಕದಲ್ಲಿ ಬಳಸುವ ಭಾಷೆ ಅಂಥದು. ಭಾಷೆಯನ್ನು ಕ್ರಿಯೆಯ ಸಾಧನವನ್ನಾಗಿ ಮತ್ತು ಕ್ರಿಯೆಯ ವಸ್ತುವನ್ನಾಗಿ ಲಂಕೇಶ್ 'ಸಂಕ್ರಾಂತಿ' ನಾಟಕದಲ್ಲಿ ಅತ್ಯಂತ ಪ್ರಜ್ಞಾಪೂರ್ವಕವಾಗಿ ಬಳಸಿದ್ದಾರೆ.

'ಗುಣಮುಖ'ದಲ್ಲಿ ಲಂಕೇಶ್ ಬಳಸಿರುವ ಭಾಷೆ ತಟಸ್ಥವಾದದ್ದು. ಈ ತಟಸ್ಥವಾದ ಭಾಷೆಗೆ ಒಂದು ವಿಶಿಷ್ಟ ಲಕ್ಷಣವಿರುತ್ತದೆ. ಅಲ್ಲಿ ನಾಟಕಕಾರ ಭಾಷಾ ಅನ್ವೇಷಣೆಗಿಂತ ವಸ್ತುವಿನ ಅನ್ವೇಷಣೆಗೆ, ಪಾತ್ರಗಳ ವಿಶ್ಲೇಷಣೆಗೆ ಗಮನ ಕೊಡುತ್ತಾನೆ. ಭಾಷೆಯ ಮೂಲಕ ಪಾತ್ರವನ್ನು ಕಟ್ಟುವ ಬದಲು ಸಮಸ್ಯೆಯ ಮೂಲಕ ಪಾತ್ರವನ್ನು ಕಟ್ಟುತ್ತಾ ಹೋಗುತ್ತಾನೆ. ಇಂಥ ಕಡೆ ವ್ಯಕ್ತಿ ವಿಶಿಷ್ಟ ಭಾಷೆಗಿಂತ ಶಿಷ್ಟ ಭಾಷೆಯೇ ಹೆಚ್ಚು ಪ್ರಯೋಜನಕಾರಿಯಾದದ್ದು. ಈ ಶಿಷ್ಟ ಭಾಷೆಯೂ ಕೂಡ ಸಮಕಾಲೀನವಾದ ಆಧುನೀಕರಣಗೊಂಡ ಭಾಷೆಯಲ್ಲ. ಕಾಲ ಮತ್ತು ಸ್ಥಳಗಳಿಂದ ಕೊಂಚ ದೂರ ನಿಂತ ಭಾಷೆ. ಇಲ್ಲಿ ಭಾಷೆಯ ರಚನಾ ನಿಯಮದಿಂದ ಹಿಡಿದು ಶಬ್ದಗಳ ಆಯ್ಕೆಯವರೆಗೆ ಈ ದೂರವೇ ನಾಟಕಕಾರನನ್ನು ನಿಯಂತ್ರಿಸುತ್ತಿರುತ್ತದೆ. 'ಗುಣಮುಖ'ದ ನಾದಿರ್‌ಶಾ ಮತ್ತು ನಾಟಕದ ಕಥಾಭಿತ್ತಿ ಈ ರೀತಿಯ ಸಮದೂರವನ್ನು ಕಾಪಾಡಿಕೊಂಡಿರುವಂಥಾದ್ದು. ನಾಟಕದ ಯಾವುದೇ ಹಂತದಲ್ಲೂ ಈ ದೂರಕ್ಕೆ ಧಕ್ಕೆ ಬಾರದ ಹಾಗೆ ಎಚ್ಚರಿಕೆಯಿಂದ ಭಾಷೆ ಬಳಕೆಗೊಂಡಿರುವುದು ಈ ನಾಟಕದ ವೈಶಿಷ್ಟ್ಯ. ಹಕೀಮ್ ಅಲಾವಿ ಖಾನ್ ಮತ್ತು ನಾದಿರ್‌ಶಾ ಮಧ್ಯ ನಡೆಯುವ ವಾದ-ವಿವಾದಗಳನ್ನೇ ಉದಾಹರಣೆಗೆ ತೆಗೆದುಕೊಳ್ಳಬಹುದು. ಅವರಿಬ್ಬರ ಮಧ್ಯೆ ತೀವ್ರ ಭಿನ್ನಾಭಿಪ್ರಾಯಗಳಿವೆ. ನಾದಿರ್‌ಶಾನಂತೂ ಅನಾರೋಗ್ಯ ಮತ್ತು ಮಾನಸಿಕ ಅಸ್ವಸ್ಥತೆಯಿಂದ ಕ್ರುದ್ಧನಾಗಿದ್ದಾನೆ. ಇಷ್ಟೆಲ್ಲಾ ತೀವ್ರ, ಸಿಡಿಯುವ ಸನ್ನಿವೇಶಗಳಿದ್ದರೂ ಮಾತು ಎಲ್ಲೂ ಸಿಟ್ಟು, ಆರ್ಭಟ, ಕೂಗಾಟಗಳಲ್ಲಿ ಮುಂದುವರೆಯುವುದೇ ಇಲ್ಲ. ಅಸ್ವಸ್ಥತೆ ಮತ್ತು ಚಿಕಿತ್ಸೆ ಇವೆರಡರ ಪ್ರತೀಕವಾದ ನಾದಿರ್‌ಶಾ ಮತ್ತು ಅಲಾವಿ ಒಬ್ಬರನ್ನೊಬ್ಬರು

ಆಕ್ರಮಿಸಿಕೊಳ್ಳಲುತೊಡಗುವುದು ತಮ್ಮ ನಿಖರ ಮಾತುಗಳ ಮೂಲಕ ಹಾಗೂ ಅಗಾಧ ಮೌನಗಳ ಮೂಲಕ. ತಟಸ್ಥ ಭಾಷೆಗೆ ಮಾತ್ರ ಈ ರೀತಿಯ ಒಂದು ಗುಣ ಇರುತ್ತದೆ.

ಒಬ್ಬ ಪ್ರತಿಭಾವಂತ ನಾಟಕಕಾರನಿಗೆ ತನ್ನ ಸಮಕಾಲೀನ ಸಂದರ್ಭದಲ್ಲಿ ಬೇರೆ ಬೇರೆ ನಾಟಕಕಾರರು ಭಾಷಾ ಪ್ರಯೋಗವನ್ನು ಮಾಡುವ ರೀತಿ ಚೆನ್ನಾಗಿ ತಿಳಿದಿರುತ್ತದೆ. ಲಂಕೇಶ್ ತಮ್ಮ ಕಿರುನಾಟಕಗಳನ್ನು ಬರೆಯುವ ಕಾಲಕ್ಕೆ, ಅವರಿಗಿಂತ ಮೊದಲು ಶ್ರೀರಂಗರು ವಾಸ್ತವವಾದಿ ನಾಟಕಗಳಲ್ಲಿ ಭಾಷೆಯನ್ನು ಬಳಸುತ್ತಿದ್ದ ರೀತಿ ಗೊತ್ತಿತ್ತು. ಶ್ರೀರಂಗರು ಸಂಭಾಷಣೆಯನ್ನೇ ಕಥಾನಕವಾಗಿಸಿಬಿಡುತ್ತಿದ್ದರು. ಹಾಗಾಗಿ ಅವರ ನಾಟಕದ ಭಾಷೆ ತರ್ಕಕ್ಕೆ ಹುಟ್ಟಿದಂತೆ ಕಾಣುತ್ತಿತ್ತು. ಅದಕ್ಕಿಂತ ಭಿನ್ನವಾಗಿ ನಗರೀಕರಣದ ಭಾಷೆಯನ್ನು ಒಂದು ವಠಾರಕ್ಕೆ ಅಥವಾ ಒಂದು ಜನಾಂಗಕ್ಕೆ ಸೀಮಿತಗೊಳಿಸಿದಂತೆ ಸೆಕ್ಯುಲರ್ ಆಗಿ ಬಳಸುವ ಸವಾಲು ಲಂಕೇಶರ ಮುಂದಿತ್ತು. ಆಗ ಹುಟ್ಟಿಕೊಂಡವು ಕಿರುನಾಟಕಗಳು. ತಮ್ಮ ವ್ಯಂಗ್ಯ, ಹಾಸ್ಯ, ಕಾವ್ಯಮಯತೆ, ಪೃಥಕ್ಕರಣೆ, ಕಟಕಿ ಮತ್ತು ಆಚಾನಕತೆಯಿಂದಾಗಿ ಅವು ಶ್ರೀರಂಗರಿಗಿಂತ ಭಿನ್ನ ಎನಿಸಿಕೊಂಡವು.

ಸಂಕ್ರಾಂತಿಯಲ್ಲಿ ಭಾಷೆಯ ಬೇರೆ ಬೇರೆ ಆಯಾಮಗಳು ರಚನೆ ಮತ್ತು ಅರ್ಥದ ನೆಲೆಯಲ್ಲಿ ಬಳಕೆಯಾಗಿವೆ. ಗುಣಮುಖದಲ್ಲಿ ತಟಸ್ಥ ಭಾಷೆಯೊಂದರ ಬಳಕೆಯಾಗಿದೆ. ಲಂಕೇಶರ ಸಮಕಾಲೀನರಾದ ಗಿರೀಶ್ ಕಾರ್ನಾಡ್ ಮತ್ತು ಚಂದ್ರಶೇಖರ ಕಂಬಾರ ಇವರು ಬಳಸುವ ಭಾಷೆಯೊಂದಿಗೆ ಇವೆರಡು ನಾಟಕಗಳಲ್ಲಿನ ಭಾಷೆಯನ್ನು ಹೋಲಿಸಿದಾಗ ಲಂಕೇಶ್ ನಾಟಕಗಳು ಭಾಷಾ ಬಳಕೆಯಲ್ಲಿ ಭಿನ್ನವಾಗಿ ನಿಲ್ಲುತ್ತವೆ.

ನವ್ಯಸಾಹಿತ್ಯದ ಬಗ್ಗೆ ಒಂದು ಕುತೂಹಲದ ಪ್ರಶ್ನೆಯೆಂದರೆ, ಮನುಷ್ಯನ ಪ್ರಜ್ಞೆಯ ಹಲವು ಮಜಲುಗಳ ಬಗ್ಗೆ, ಅವನ ಅಸ್ತಿತ್ವದ ಸಂಕೀರ್ಣತೆಯ ಬಗ್ಗೆ ನಮ್ಮ ಅರಿವನ್ನು ಹಿಗ್ಗಿಸಿದ್ದರೂ, ತನ್ನ ಜೀವಂತಿಕೆಯಿಂದ ರುಜುತ್ವದಿಂದ(authenticity) ನಮ್ಮನ್ನು ದಂಗುಗೊಳಿಸಬಲ್ಲ ಒಂದೇ ಒಂದು ಸ್ತ್ರೀ ಪಾತ್ರ ಸಿಕ್ಕದಿರುವುದು ಏಕೆ ಎನ್ನುವುದು. 'ಮುಸ್ಸಂಜೆಯ ಕಥಾಪ್ರಸಂಗ'ದ ಅನನ್ಯವಾದ ಸಾಧನೆಯೆಂದರೆ ಅದು ಈ ಸವಾಲನ್ನು ಎದುರಿಸಿ ರಂಗವ್ವ-ಸಾವಂತ್ರಿಯ ಪಾತ್ರಗಳನ್ನು ಸೃಷ್ಟಿಸಿದೆ. ಮನುಷ್ಯತ್ವವನ್ನು ಭ್ರಷ್ಟಗೊಳಿಸುವ ಅಸ್ತಿತ್ವವನ್ನು ಇಡಿಯಾಗಿ ದಾಖಲಿಸುತ್ತಲೆ ಜೀವನೋನ್ಮುಖತೆಯನ್ನು ಸಮರ್ಥಿಸಬೇಕೆನ್ನುವ ಲಂಕೇಶರ ಆಶಯ ಈ ಪಾತ್ರಗಳಲ್ಲಿ ಈಡೇರಿದೆ. ಈ ಪಾತ್ರಗಳು ಕೇವಲ ಧೋರಣೆಯೊಂದನ್ನು ಸಮರ್ಥಿಸುವ ಸಾಂಕೇತಿಕ ಪಾತ್ರಗಳಲ್ಲ. ಅವುಗಳ ತುಡಿತ ಕಾದಂಬರಿಯ ಉದ್ದೇಶಗಳನ್ನು, ಬರಹಗಾರನ ಧೋರಣೆಗಳನ್ನು ಅಲಕ್ಷ್ಯ ಮಾಡುವಷ್ಟು ಬಲಶಾಲಿಯಾಗಿವೆ. ಈ ಎರಡು ಪಾತ್ರಗಳಿಗೆ ಸುಲಭವಾಗಿ ತೀರ್ಮಾನಿಸಬಹುದಾದ ಒಂದು ಏಕಾಕೃತಿ(monolith) ಇಲ್ಲವೆ ಇಲ್ಲ. ಬದಲಾಗಿ ಅವು ನಿರಂತರವಾಗಿ ಸ್ಫೋಟಗೊಳ್ಳುವ, ಪ್ರತಿಕ್ಷಣದಲ್ಲೂ ಪುನಃ ಸೃಷ್ಟಿಯಾಗುವ ಪ್ರಕ್ರಿಯೆಯಲ್ಲಿರುತ್ತವೆ.

- ಡಾ. ರಾಜೇಂದ್ರ ಚೆನ್ನಿ

(ಅಧ್ಯಯನ: ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂಗ)

'ಗುಣಮುಖ'ದ ದೃಶ್ಯ ವಿನ್ಯಾಸ ಮತ್ತು ತಾತ್ವಿಕತೆ

○ ಜಿ.ರಾಜಶೇಖರ

ಲಂಕೇಶರ 'ಗುಣಮುಖ' (ಪತ್ರಿಕೆ ಪ್ರಕಾಶನ, ಬೆಂಗಳೂರು,೧೯೭೩) ಹಿಂಸೆ ಮತ್ತು ಅಧಿಕಾರಗಳ ನಿರರ್ಥಕತೆಯನ್ನು ಕಾಣಿಸುವ ನಾಟಕ. ಒಂದು ದೃಷ್ಟಿಯಿಂದ ನೋಡಿದರೆ ಲಂಕೇಶರ ಎಲ್ಲ ಬರವಣಿಗೆಯೂ ಹಿಂಸೆ, ಅಧಿಕಾರಗಳ ಶೋಧನೆ. ಆದರೆ ಈ ನಾಟಕದಲ್ಲಿ ಅವರು ಊರು, ಮನೆ, ಮಠ ಕಚೇರಿಗಳಲ್ಲಿ ವ್ಯಕ್ತಿಗೆ ನಿತ್ಯ ಎದುರಾಗುವ ಹಿಂಸೆ ಮತ್ತು ಅಧಿಕಾರಗಳ ಅನುಭವದ ಆಚೆ ನಡೆದು ರಾಜಕೀಯ ಪ್ರಭುತ್ವ ಮತ್ತು ಹಿಂಸೆಗಳ ನಡುವಣ ಸಂಬಂಧವನ್ನು ಶೋಧಿಸುತ್ತಾರೆ. ಚರಿತ್ರೆಯ ಉದ್ದಕ್ಕೂ ಪ್ರಭುತ್ವ ಮತ್ತು ಹಿಂಸೆ, ಒಂದು ಇನ್ನೊಂದನ್ನು ಹಿಂಬಾಲಿಸಿಕೊಂಡು ಬಂದಿವೆ. ೨೦ನೆಯ ಶತಮಾನದಲ್ಲಂತೂ, ಜಗತ್ತನ್ನು ಆಳುತ್ತಿರುವ ರಾಜಕೀಯ ಸಿದ್ಧಾಂತಗಳು - ಬಂಡವಾಳಶಾಹಿ, ಫ್ಯಾಸಿಸಂ, ಕಮ್ಯೂನಿಸಂ - ಎಲ್ಲವೂ ಹಿಂಸೆಯನ್ನು ಸಮರ್ಥಿಸುವ ಸಿದ್ಧಾಂತಗಳು; ಹಿಂಸೆಯ ನೆರವು ಪಡೆದೇ ತಮ್ಮ ಆಳ್ವಿಕೆಯನ್ನು ಜನರ ಮೇಲೆ ಅವು ಹೇರಿವೆ. ಸಿದ್ಧಾಂತಕ್ಕೋಸ್ಕರ ನಡೆಸುವ ಹಿಂಸೆ ಸಮರ್ಪಣ ಮನೋಭಾವದ್ದು ಮತ್ತು ಪವಿತ್ರವಾದದ್ದು ಎಂಬ ಮೌಲ್ಯವನ್ನು ಈ ಎಲ್ಲ ಸಿದ್ಧಾಂತಗಳೂ ತಮ್ಮೊಳಗೆ ಅಳವಡಿಸಿಕೊಂಡಿವೆ. ಸಿದ್ಧಾಂತದ ಹೆಸರಿನಲ್ಲಿ ನಡೆಸುವ ಹಿಂಸೆಗೆ ಕ್ರಿಮಿನಲ್ ಕಾನೂನಿನ ವೈಯಕ್ತಿಕ ಹೊಣೆಗಾರಿಕೆ ಮತ್ತು ಶಿಕ್ಷಾರ್ಹತೆಗಳ ಕಲಮು ಅನ್ವಯವಾಗುವುದಿಲ್ಲ. ಇದರಿಂದಾಗಿ ಒಂದು ಅಸಂಗತ ಸನ್ನಿವೇಶ ನಿರ್ಮಾಣವಾಗಿದೆ. ತನ್ನ ಹೊಟ್ಟೆಪಾಡಿಗಾಗಿ ಚಿಲ್ಲರೆ ಕಳ್ಳತನ ಮಾಡುವವ ಕೂಡ ತನ್ನ ಕ್ರಿಯೆಗೆ ತಾನು ಜವಾಬ್ದಾರ ಮತ್ತು ಶಿಕ್ಷಾರ್ಹ. ಆದರೆ ಸಿದ್ಧಾಂತದ ಹೆಸರಿನಲ್ಲಿ ನೂರಾರು ಜನರನ್ನು ಕೊಲ್ಲುವ ಅಥವಾ ಕೊಲ್ಲುವ ಹತ್ಯಾರಗಳನ್ನು - ಅಣುಬಾಂಬಿನಂತಹವು - ತಯಾರಿಸುವ ವ್ಯವಸ್ಥೆಗೆ ತನ್ನ ಕ್ರಿಯೆಯ ಜವಾಬ್ದಾರಿ ಇಲ್ಲ. ಈ ಜವಾಬ್ದಾರಿರಹಿತ ಹಿಂಸೆಯ ಭಯಾನಕತೆ ಮತ್ತು ಅಸಂಗತತೆಗಳನ್ನು

ಆಲ್ಬರ್ಟ್ ಕಾಮೂ ತನ್ನ ನಾಟಕ,''ಕ್ಯಾಲಿಗುಲ''(ಹ್ಯಾಮಿಶ್ ಹ್ಯಾಮಿಲ್ಟನ್, ಲಂಡನ್, ೧೯೪೭)ಚಿತ್ರಿಸುತ್ತಾನೆ. ರೋಮ್‌ನ ಐಲು ದೊರೆ ಕ್ಯಾಲಿಗುಲ, ಆದರ್ಶದ ಬೆನ್ನು ಹತ್ತಿದವ. ಜನರ ಕ್ಷುಲ್ಲಕ ಬದುಕನ್ನು ಹೊಸ ಮಜಲಿಗೆ, ಮತ್ತು ಎತ್ತರಕ್ಕೆ ಒಯ್ಯುವ ಸಂಕಲ್ಪವೇ ಅವನ ಅಗಾಧ ಹಿಂಸೆಗೆ ಪ್ರೇರಣೆ . ಹಿಂಸೆ ಇಲ್ಲದೆ ಕ್ಯಾಲಿಗುಲ ಕನಸು ಕಾಣುವ ಕ್ರಾಂತಿ ಸಾಧ್ಯವೇ ಇಲ್ಲ. ಕ್ರಾಂತಿ, ಧರ್ಮದ ಕನಸು ಕೂಡ ಆಗಬಹುದು. ಧರ್ಮವೂ ಮನುಷ್ಯನನ್ನು ತನ್ನ ತರ್ಕ ಮತ್ತು ಆದರ್ಶಗಳಿಗೆ ಸರಿಯಾಗಿ ಪುನರ್‌ರೂಪಿಸಲು ಯತ್ನಿಸುತ್ತದೆ. ೩೦ರ ದಶಕದ ಯುರೋಪ್‌ನಲ್ಲಿ ಫ್ಯಾಸಿಸಂ, ನಮ್ಮ ಕಾಲದಲ್ಲಿ ಇರಾನ್‌ನ ಧರ್ಮಗುರುಗಳು, ಅಫಘಾನಿಸ್ತಾನದ ತಾಲಿಬನ್‌ಗಳು, ಮತ್ತು ಭಾರತದ ಹಿಂದೂತ್ವದ ಪರಿವಾರ -ಇವುಗಳ ಹಿಂಸೆಯ ಹಿಂದೆ ಕೂಡ ತಿರುಚಿಕೊಂಡ ಕ್ರಾಂತಿಯ ಕನಸೊಂದಿದೆ. ಧರ್ಮದ ನೆವವಿದ್ದರೂ ಆ ಹಿಂಸೆಯ ಅಂತಿಮ ಉದ್ದೇಶ ರಾಜಕೀಯ ಅಧಿಕಾರ. ಕಾಮೂನ ಕ್ಯಾಲಿಗುಲದಂತೆ ಲಂಕೇಶರ ಗುಣಮುಖ ಕೂಡ , ಈ ಸಿದ್ಧಾಂತ, ಅಧಿಕಾರ ಮತ್ತು ಹಿಂಸೆಗಳ ಒಳಸಂಬಂಧಗಳನ್ನು ಶೋಧಿಸುವ ನಾಟಕ. ಅದರ ಮುಖ್ಯ ಪಾತ್ರ, ನಾದಿರ್ ಬದುಕಿದ್ದು ೧೬೮೮ -೧೭೪೭ರ ಕಾಲಾವಧಿಯಲ್ಲಿ. ಆದರೆ ನಾಟಕದ ಕಾಲವನ್ನು 'ಆಕ್ರಮಣದ, ಆತ್ಮ ನಿರೀಕ್ಷೆಯ ಆಧುನಿಕ ಕಾಲ' ಎಂದು ಲೇಖಕರು ನಮೂದಿಸಿರುವುದು ಅರ್ಥಪೂರ್ಣವಾಗಿದೆ. ೧೭ ಮತ್ತು ೧೮ರ ಶತಮಾನಗಳ ಸಂಧಿಕಾಲದಲ್ಲಿ ಬದುಕಿದ್ದ ನಾದಿರ್ ೨೦ನೆಯ ಶತಮಾನದ ಪ್ರಭುತ್ವದ ಕ್ರೌರ್ಯಕ್ಕೆ ಪ್ರತಿಮೆಯಾಗುವುದು ಅವನ ಅಧಿಕಾರ ಮತ್ತು ಹಿಂಸೆಗಳ ಕಾರಣದಿಂದ; ಮತ್ತು ಒಂದನ್ನು ಇನ್ನೊಂದರಿಂದ ಸಮರ್ಥಿಸುವ ಅವನ ರಾಜಕೀಯದಿಂದ.

ನಾಟಕದ ವಿಶ್ಲೇಷಣೆಗೆ ತೊಡಗುವ ಮೊದಲು , ಚರಿತ್ರೆಯ ಒಂದು ವಿವರವನ್ನು ಗಮನಿಸಬೇಕು. ನಾಟಕದ ನಾಯಕ ನಾದಿರ್ ಇಸ್ಲಾಂ ಧರ್ಮದ ಅನುಯಾಯಿ. ಆತ ಹಿಂದೂಸ್ತಾನದ ಮೇಲೆ ಆಕ್ರಮಣ ನಡೆಸಿದ್ದಾನೆ.''ಇಸ್ಲಾಂ ಧರ್ಮ, ಖಡ್ಗದಿಂದ ದೇವರ ಸಾಮ್ರಾಜ್ಯವನ್ನು ಸ್ಥಾಪಿಸ ಬಯಸುವ ಒಂದು ಅಸಹಿಷ್ಣು ಧರ್ಮ; ಇಸ್ಲಾಂನ ಆಕ್ರಮಣಕ್ಕೆ ಬಲಿಯಾಗಿರುವ ಹಿಂದೂಧರ್ಮ ಉದಾರವಾದದ್ದು. ಅದು ತನ್ನ ಸಹಿಷ್ಣುತೆಯಿಂದಲೇ ಪರರ ಆಕ್ರಮಣಕ್ಕೆ ಮೇಲಿಂದ ಮೇಲೆ ಬಲಿಯಾಗಿದೆ'' ಎಂದು ಹಿಂದುತ್ವವಾದಿಗಳು ಈಗ ಪ್ರಚಾರ ನಡೆಸುತ್ತಿದ್ದಾರೆ . ಅವರ ರಾಜಕೀಯದ ಮೂಲಾಧಾರವೇ ಪರಧರ್ಮಗಳ ಕುರಿತ ಭಯ. ಆದರೆ ಗುಣಮುಖ ನಾಟಕದಲ್ಲಿ ಧರ್ಮದ ಹೆಸರಿನಲ್ಲಿ ನಡೆಯುವ ಹಿಂಸೆಯನ್ನು, ಇಸ್ಲಾಂ ಮತ್ತು ಅದಕ್ಕೆ ಎದುರಾಳಿಯಾಗಿ ಹಿಂದೂಧರ್ಮ ಎಂದು ಸರಳವಾಗಿ ವಿಂಗಡಿಸಲು ಬರುವುದಿಲ್ಲ. ನಾದಿರ್‌ಶಾ ಧ್ವಂಸ ಮಾಡಿದ್ದು ಮೊಘಲ್ ಸಾಮ್ರಾಜ್ಯವನ್ನು. ಸ್ವತಃ ಮುಸ್ಲಿಮರಾದ ಮೊಘಲ್ ದೊರೆಗಳು ದಕ್ಷಿಣ ಭಾರತದ ಮುಸ್ಲಿಮ್ ರಾಜ್ಯಗಳ ಮೇಲೆ ದಂಡೆತ್ತಿ ಬಂದ ಉದಾಹರಣೆಗಳೂ ಚರಿತ್ರೆಯಲ್ಲಿ ಸಾಕಷ್ಟಿವೆ. ಆದರೆ, ಹಿಂದುತ್ವವಾದಿಗಳು, ತಮ್ಮ ಪ್ರತಿಪಾದನೆಗೆ ಅಪವಾದವಾನಿ ನಿಲ್ಲುವ ಇಂತಹ ಉದಾಹರಣೆಗಳ ಬಗ್ಗೆ ಯೋಚಿಸುವುದೇ ಇಲ್ಲ.

ನಾದಿರ್‌ಶಾ ಭಾರತದ ಮೇಲೆ ಆಕ್ರಮಣ ನಡೆಸಿದಾಗ ಮೊಘಲ್ ಸಾಮ್ರಾಜ್ಯ

ಶಕ್ತಿಹೀನವಾಗಿತ್ತು. ಅದರ ಆಳ್ವಿಕೆಗೆ ಯಾವ ಘನ ಉದ್ದೇಶವೂ ಇರಲಿಲ್ಲವಾಗಿ, ಅದು ಲಂಪಟತನ, ಭ್ರಷ್ಟಾಚಾರ ಮತ್ತು ಒಳಸಂಚುಗಳಲ್ಲಿ ಮುಳುಗಿತ್ತು. ಹಾಗೆಂದು ನಾದಿರ್ ಶಾನ ಸೈನಿಕರೇನೂ ದೇವದೂತರಾಗಿರಲಿಲ್ಲ. ನಾಟಕದ ಮೊದಲ ದೃಶ್ಯವೇ ಲೂಟ, ವ್ಯಭಿಚಾರ, ಕುಡಿತ, ಕಳ್ಳತನ ಮುಂತಾದ್ದರಲ್ಲಿ ತೊಡಗಿದ್ದ ಈ ಸೈನಿಕರ ವಿಚಾರಣೆಯೊಂದಿಗೆ ಪ್ರಾರಂಭವಾಗುತ್ತದೆ. ಈ ವಿಚಾರಣೆಯ ನಡುವೆ ನಮಗೆ, ನಾದಿರ್ ಶಾನ ಸೈನ್ಯದಲ್ಲಿ ಅಡುಗೆಯವನಾಗಿದ್ದ ತನ್ವೀರ್ ಎಂಬವನ ಪರಿಚಯವಾಗುತ್ತದೆ(ಪುಟ:೫). ಈ ತನ್ವೀರ್ ಸ್ವಭಾವತಃ ಪುಕ್ಕಲ. ಆದರೆ ದೆಹಲಿಗೆ ಬಂದದ್ದೇ ತಡ, ಅವನೊಬ್ಬ ಧರ್ಮ ದುರಂಧರನಾಗಿಬಿಟ್ಟಿದ್ದಾನೆ! ಎಷ್ಟೆಂದರೂ ವಿಜಯೀ ಸೈನ್ಯದ ಜೊತೆ ಬಂದವನಲ್ಲವೆ? ಸಟ್ಟುಗದ ಬದಲು ಕತ್ತಿ ಹಿಡಿದು ಅವನು ಘೋಷಿಸುತ್ತಾನೆ, ''ನಮ್ಮೊಂದಿಗೆ ಸರ್ವಶಕ್ತ ಅಲ್ಲಾಹು ಇದ್ದಾನೆ... ಕತ್ತಿಯ ಅಲಗು ತುಕ್ಕು ಹಿಡಿಯಲು ಬಿಡಕೂಡದು. ನಯವಂಚಕರ ತಲೆ ಕತ್ತರಿಸುತ್ತ ಹೋದರೆ ಮಾತ್ರ ಎಲ್ಲ ಸ್ಪಷ್ಟವಾಗುತ್ತದೆ'' (ಪುಟ:೬). ತನ್ವೀರ್ ಇಲ್ಲಿ ಇಸ್ಲಾಂಗೆ ಪರಕೀಯವಾದ ಕಾಫಿರರ ಹಿಂದೂ ಧರ್ಮದ ಬಗ್ಗೆ ಹೇಳುತ್ತಿಲ್ಲ. ಬದಲಿಗೆ ವಿಷಯ ಸುಖಗಳಲ್ಲಿ ಮೈಮರೆತು ಧರ್ಮದ್ರೋಹಿಗಳಾಗಿರುವ ಮೊಘಲರ ಬಗ್ಗೆ ಹೇಳುತ್ತಿದ್ದಾನೆ. ಮಡಿವಂತರಿಗೆ ಪರಧರ್ಮ ಬಿಟ್ಟರೆ ತಮ್ಮ ಧರ್ಮದ ಸಡಿಲುನೀತಿಯ ಜನಗಳೇ ದೊಡ್ಡ ಶತ್ರು. ತನ್ವೀರ್, ಇರಾನ್‌ನ ಖೋಮೇನಿಗಳು ಮತ್ತು ಅಫಘಾನಿಸ್ತಾನದ ತಾಲಿಬನ್‌ನ ಮಡಿವಂತರ ಮೂಲಪುರುಷನಾಗಿರಲು ಲಾಯಖ್ಖಾದ ಮನುಷ್ಯ. ಆದರೆ ನಾಟಕದಲ್ಲಿ ಮಾತ್ರ ಅವನೊಬ್ಬ ಹಾಸ್ಯಾಸ್ಪದ ವ್ಯಕ್ತಿ. ಅವನ ಧೈರ್ಯದ ಗುಟ್ಟೇನು ಎಂಬುದು ಪ್ರೇಕ್ಷಕರಿಗೆ, ಅವನು ರಂಗಸ್ಥಳಕ್ಕೆ ಬರುವ ಮೊದಲೇ ಗೊತ್ತಾಗಿದೆ. ಅವನ ಧರ್ಮಯುದ್ಧದಲ್ಲಿ ಅವನ ಜೊತೆಗಿರುವವರು ಚಿಲ್ಲರೆ ಕಳ್ಳರು. ತನ್ವೀರ್ ಮಹಾ ಕ್ರೂರಿ; ಆದರೆ ಅವನೊಬ್ಬ ನಕಲಿ ಮನುಷ್ಯ. ಅವನ ವ್ಯಕ್ತಿತ್ವವೇ ಅಸಂಗತ. ನಾಟಕದ ಮೊದಲ ದೃಶ್ಯದ ಘಟನೆಗಳ ಸಂಯೋಜನೆಯಲ್ಲಿಯೇ ಇದು ಸ್ಪಷ್ಟವಾಗುತ್ತದೆ. 'ಗುಣಮುಖ' ನಾಟಕದ ಮೂರೂ ದೃಶ್ಯಗಳ ಘಟನಾವಳಿಯಲ್ಲಿಯೂ ಈ ವಿನ್ಯಾಸ - ಹಿಂಸೆ, ಅಧಿಕಾರ ಮತ್ತು ಅಸಂಗತತೆ - ಮತ್ತೆ ಮತ್ತೆ ಮರುಕಳಿಸುತ್ತವೆ.

ಮೊದಲನೆಯ ದೃಶ್ಯದಲ್ಲಿ ತನ್ವೀರ್‌ನ ನಂತರ ನಾದಿರ್‌ನನ್ನು ಭೇಟಿಯಾಗುವವ ಸಾದತ್ ಖಾನ್; ದೆಹಲಿ ದರ್ಬಾರಿನ ಒಬ್ಬ ದಿವಾನ. ಅವನು ಶತಾಯಗತಾಯ, ತನ್ನ ಚೂರು ಪಾರು ಅಧಿಕಾರ ಸವಲತ್ತುಗಳಿಗೆ ಅಂಟಿಕೊಂಡಿರಬಯಸುವ ಒಂದು ಹುಳ. ಅದು ನಾದಿರ್‌ಗೆ ಗೊತ್ತು. ಆದರೆ ತನ್ನ ಬಗ್ಗೆ ನಾದಿರಗೆ ಎಲ್ಲ ಗೊತ್ತಿದೆ ಎಂಬುದು ಸಾದತ್‌ಗೆ ಗೊತ್ತಿಲ್ಲ. ಹಾಗಾಗಿ ಸಾದತ್ ಖಾನ್ ಮತ್ತು ನಾದಿರ್ ನಡುವೆ ನಡೆಯುವ ಸಂಭಾಷಣೆ ಪ್ರೇಕ್ಷಕನಿಗೆ ಅಸಂಗತವಾಗಿ ಕೇಳುತ್ತದೆ. ಸಾದತ್ ಖಾನ್ ನಾದಿರ್ ಮುಂದೆ ಹಸ್ತ ಹೊಸೆಯುತ್ತಾನೆ; ತೆವಳುತ್ತಾನೆ; ಮುಖ ಸ್ತುತಿ ಮಾಡುತ್ತಾನೆ. ಆದರೆ ಅದು ಯಾವುದಕ್ಕೂ ಸೊಪ್ಪು ಹಾಕದೆ, ನಾದಿರ್ ಅವನನ್ನು ಒದ್ದು ಹೊರಗೆ ಹಾಕುತ್ತಾನೆ (ಪುಟ ೧೨). ಸಾದತ್ ಖಾನ್‌ನ ನಿರ್ಗಮನದ ನಂತರ ರಂಗ ಪ್ರವೇಶಮಾಡುವವನು ದೆಹಲಿಯ ದೊರೆ ನಜೀರುದ್ದೀನ. ಅವನು ಹೆಸರಿಗೆ ಮಾತ್ರ ದೊರೆ.

ಸಾಮ್ರಾಜ್ಯ ನಾದಿರ್‌ನ ವಶವಾಗಿದೆ. ಆದರೂ ಮೊಘಲ್ ದೊರೆ ತನ್ನ ದೊರೆತನದ ಮರ್ಜಿ ಬಿಡಲಾರ. ಅವನು ಸಹ ಒಂದು ಹುಳ ಎಂಬುದು ನಾದಿರ್‌ನಿಗೆ ಗೊತ್ತಿದೆ. ಇದರಿಂದ ಇನ್ನೊಂದು ಅಸಂಗತ ಅಂಕ ಪ್ರಾರಂಭವಾಗುತ್ತದೆ. ನಜೀರುದ್ದೀನ ಚಕ್ರವರ್ತಿಯ ದಿರಿಸುತೊಟ್ಟ ಒಂದು ಜಿದಿರು ಬೊಂಬೆ. ಆದರೆ ನಾದಿರ್, ವಿಜಯಿಯಾದರೂ, ಅವನ ಸ್ಥಿತಿ ಕೂಡ ಅದಕ್ಕಿಂತ ಮೇಲು ಸ್ತರದ್ದೇನೂ ಅಲ್ಲ. ಅವನ ದೇಹಾರೋಗ್ಯ ಗುಣಪಡಿಸಲಾಗದಷ್ಟು ಕೆಟ್ಟಿದೆ. ದೆಹಲಿಯಲ್ಲಿ ಅವನ ಚಿಕಿತ್ಸೆ ಮಾಡಬಲ್ಲ ಹಕೀಮರು ಸಿಗುತ್ತಿಲ್ಲ. ಮೊಘಲ್ ಆಸ್ಥಾನ ನಾದಿರ್‌ನ ಸಾವಿಗಾಗಿ ಕಾದಿದೆ. ಅವನು ಸಾಯುವವರೆಗೆ, ತಾವು ಹೇಗಾದರೂ ಅಧಿಕಾರಕ್ಕೆ ಅಂಟಿಕೊಂಡರೆ ಮುಂದೆ ತಮ್ಮ ಆಳ್ವಿಕೆ ನಿರಾತಂಕ ಎಂಬ ಭ್ರಮೆಯಲ್ಲಿ ಅವರಿದ್ದಾರೆ. ನಾದಿರ್‌ನಿಗೂ ಅದು ಗೊತ್ತು. ಈ ಅರಿವು ಕೂಡ ಅವನಿಗೆ ಹೊರೆಯಾಗಿದೆ. ತಾನು ಏಕೆ ದೆಹಲಿಗೆ ದಂಡೆತ್ತಿ ಬಂದೆ ಎಂದು ಅವನಿಗೆ ದಿಗ್ಭ್ರಮೆಯಾಗಿದೆ. ದೆಹಲಿಯ ಸಿಂಹಾಸನ ಅವನ ರೋಗವನ್ನು ಗುಣಪಡಿಸಲಾರದು. ನಾದಿರ್‌ನಿಗಾಗಲೀ, ಅವನನ್ನು ಎದುರು ಹಾಕಿಕೊಂಡ ಮೊಘಲ್ ದೊರೆಗಾಗಲೀ, ನಾಟಕದ ಮೊದಲಿಗೆ ಬರುವ ಸಾಮಾನ್ಯ ಸೈನಿಕರ ತೆವಲುಗಳಿಗಿರುವ ಘನತೆ ಕೂಡ ಇಲ್ಲ.

ನಾಟಕಕದ ಎರಡನೆಯ ದೃಶ್ಯದಲ್ಲಿಯೂ, ಒಂದನೆಯ ದೃಶ್ಯದ ತಂತ್ರವನ್ನೇ ಮುಂದುವರಿಸಲಾಗಿದೆ. ಮೊಘಲ್ ಆಸ್ಥಾನದ ಇನ್ನೊಬ್ಬ ದಿವಾನ, ನಿಜಾಮುಲ್ ಉಲ್ ಮುಲ್ಕ್ ತನ್ನ ಭಯ ಆತಂಕಗಳನ್ನು ಕುಡಿತದಲ್ಲಿ ಮರೆಯಲು ಯತ್ನಿಸುತ್ತಿದ್ದಾನೆ. ತನ್ನ ಸಹವರ್ತಿ ಸಾದತ್ ಖಾನ್, ನಾದಿರ ಶಾ ನಿಂದ ಗೂಸಾ ತಿಂದದ್ದು ಅವನ ಭಯವನ್ನು ಇನ್ನಷ್ಟು ಹೆಚ್ಚಿಸಿದೆ. ಆದರೆ ಅವನ ಅಡುಗೆಯಾಳು ಹಮೀದ ಊಟ ತಡವಾದರೆ ಕೋಳಿ ಮಾಂಸ ಕೆಡಬಹುದು ಎಂದು ಚಿಂತಿತನಾಗಿದ್ದಾನೆ (ಪುಟ ೨೩-೨೯). ಅವನಿಗೆ ಅವನ ಚಿಂತೆ; ಇವನಿಗೆ ಇವನ ಚಿಂತೆ! ಇವರಿಬ್ಬರ ಸಂಭಾಷಣೆ ರಂಗಸ್ಥಳದ ಮೇಲೆ ಇನ್ನೊಂದು ಅಸಂಗತ ಸನ್ನಿವೇಶವನ್ನು ಸೃಷ್ಟಿಸುತ್ತದೆ.

ದಿವಾನನಾಗಿ ತನ್ನ ಭವಿಷ್ಯದ ಬಗ್ಗೆ ಭಯಭೀತನಾಗಿರುವ ನಿಜಾಮುಲ್ ಉಲ್ ಮುಲ್ಕ್ ಮತ್ತು ಆ ಹೊತ್ತಿನ ಊಟದ ಬಗ್ಗೆ ತಲೆ ಕೆಡಿಸಿಕೊಂಡಿರುವ ಹಮೀದ - ಈ ಅಸಂಬದ್ಧ ಮುಖಾಮುಖಿ ಇನ್ನಷ್ಟು ಅಸಂಬದ್ಧವಾಗುವುದು ನಾದಿರ್ ಶಾನ ದೂತನ ಪ್ರವೇಶದೊಂದಿಗೆ. ನಾದಿರ್, ಈ ದೂತನ ಮುಖಾಂತರ ನಿಜಾಮುಲ್ ಉಲ್-ಮುಲ್ಕ್‌ನನ್ನು ಬರ ಹೇಳಿದ್ದಾನೆ. ಇವನು ಇನ್ನೂ ಚಿಕ್ಕ ಹುಡುಗ. ಆದರೆ ನಾದಿರ್‌ನ ದೂತನಾದ್ದರಿಂದ, ತನ್ನೀರನ ಹಾಗೆ ಇವನಿಗೂ, ಇವನ ನಿಜ ವ್ಯಕ್ತಿತ್ವ ಮೀರಿದೊಂದು ಹುಸಿ ವ್ಯಕ್ತಿತ್ವ ಪ್ರಾಪ್ತವಾಗಿ ಬಿಟ್ಟಿದೆ. ಅಧಿಕಾರದ ಸುತ್ತ ಮುತ್ತ ಓಡಾಡಿಕೊಂಡಿರುವವರಿಗೆಲ್ಲ ಅಂತಹ ವ್ಯಕ್ತಿತ್ವವಿರುತ್ತದೆ. ಅದರಷ್ಟಕ್ಕೇ ಅದು ಅಸಂಬದ್ಧವಾಗಿದೆ . ಮೊಘಲ್ ಆಸ್ಥಾನದ ದಿವಾನ ಈ ಚಿಕ್ಕ ಹುಡುಗನ ಎದುರಿಗೆ ಹುಳದ ಹಾಗೆ ನುಲಿಯುತ್ತಾನೆ; ಬಹುವಚನದಿಂದ ಕರೆಯುತ್ತಾನೆ; ತಾನು ಮನೆಯಲ್ಲಿ ಇರಲಿಲ್ಲ ಎಂದು ನಾದಿರ್‌ನಿಗೆ ಹೇಳಲು ಸಾಧ್ಯವೇ ಎಂದು ಮಂಡಿ ಊರಿ ಬೇಡಿಕೊಳ್ಳುತ್ತಾನೆ; ಅವನಿಗೆ ಹಣದ ಚೀಲ ಕೊಡುತ್ತಾನೆ; ತನ್ನ ಮುಂಡಾಸು ತೆಗೆದು ಅವನ

ತಲೆಯ ಮೇಲೆ ಇಡುತ್ತಾನೆ. ನಿಜಾಮುಲ್-ಉಲ್ ಮುಲ್ಕನನ್ನು ಅಷ್ಟೆಲ್ಲಾ ಸತಾಯಿಸಿದ ಮೇಲೆ, ಆ ಹುಡುಗ ಅವನಿಗೆ ದೊಡ್ಡ ಉಪಕಾರವೆಂಬಂತೆ ಒಂದು ಘಂಟೆಯ ಕಾಲಾವಕಾಶ ಕೊಡುತ್ತಾನೆ; ಅದಕ್ಕೆ ಪ್ರತಿಯಾಗಿ ಅವನಿಂದ ಹಣದ ಚೀಲ ಕಸಿದುಕೊಳ್ಳುತ್ತಾನೆ (ಪುಟ ೩೩). ಆಳುವವರು ತಮ್ಮ ಘನತೆ ಕಳೆದುಕೊಂಡು ಅಧಿಕಾರದ ವೇಷ-ಭೂಷಣ ಮಾತ್ರ ಉಳಿಸಿಕೊಂಡರೆ ಅದು ಹಾಸ್ಯಾಸ್ಪದವಾಗಿರುತ್ತದೆ ಮಾತ್ರವಲ್ಲ; ಒಳ ಸಂಚು, ಹಿಂಸೆ ಮತ್ತು ಭ್ರಷ್ಟಾಚಾರ ಕೂಡ ಅಂಥವರ ಆಳ್ವಿಕೆಯ ಭಾಗವಾಗಿರುತ್ತವೆ. ನಾಟಕದ ದೃಶ್ಯದಿಂದಲೆ ಸ್ಫುಟವಾಗುವ ಅರ್ಥವಂತಿಕೆ ಇದು.

ನಾಟಕದ ಅಂತಿಮ ದೃಶ್ಯದಲ್ಲಿ ನಾದಿರ್ ಶಾ ಹಕೀಮ ಅಲಾದಿಖಾನ್‌ನನ್ನು ಸಂಧಿಸುತ್ತಾನೆ. ಅಲಾದಿ ಖಾನನಿಗೆ ನಾದಿರ್ ಚಕ್ರವರ್ತಿ ಅಲ್ಲ; ಕೇವಲ ಮನುಷ್ಯ; ಪ್ರಕೃತ ರೋಗಿಯಾಗಿರುವ ಒಬ್ಬ ಮನುಷ್ಯ. ನಾದಿರ್‌ನಿಗೆ ಕೂಡ ಈಗ ಅವನ ದೇಹವನ್ನು ಕಾಡುತ್ತಿರುವ ರೋಗ ಮಾತ್ರ ನಿಜ. ಆದರೆ ಅಲಾದಿಖಾನ್‌ನಿಗೆ ನಾದಿರ್ ಎಲ್ಲ ಮನುಷ್ಯರ ಹಾಗೆ ಒಬ್ಬ ಮನುಷ್ಯ; ಅದಕ್ಕಿಂತ ಹೆಚ್ಚೂ ಅಲ್ಲ; ಕಡಿಮೆಯೂ ಅಲ್ಲ. ಅದಕ್ಕೆ ಪ್ರತಿಯಾಗಿ ನಾದಿರ್ ಶಾನಿಗೆ ತನ್ನ ನೋವಿನಲ್ಲೂ ಕಾಣಸುತ್ತಿರುವುದು ತಾನು ಮಾತ್ರ. ಅಧಿಕಾರ, ಹೆಣ್ಣು, ಹಿಂಸೆ - ಯಾವುದೂ ಈಗ ಅವನ ನೆರವಿಗೆ ಬರುವುದಿಲ್ಲ. ಆದರೆ ತಾನು ಚಕ್ರವರ್ತಿ ಎಂಬ ಭ್ರಮೆ ಇನ್ನೂ ಹೋಗಿಲ್ಲ. ಅಲಾದಿಖಾನ ಹೇಳಿ ಕೇಳಿ ಒಬ್ಬ ಹಕೀಮ. ಚಕ್ರವರ್ತಿಯ ದೇಹಕ್ಕೂ ರೋಗ, ಮುಪ್ಪು ಮತ್ತು ಸಾವು ತಪ್ಪಿದ್ದಲ್ಲ ಎಂಬ ಸರಳ ಸತ್ಯ ಅವನಿಗೆ ಮನದಟ್ಟಾಗಿದೆ. ಅಲಾದಿಖಾನ ಇಹಲೋಕದ ಚಕ್ರವರ್ತಿಗಳನ್ನೆಲ್ಲ ಕಸಕ್ಕಿಂತ ಕಡೆಯಾಗಿ ಕಂಡ ನಮ್ಮ ವಚನಕಾರರು, ದಾಸರು ಮತ್ತು ಸೂಫಿಗಳ ಪರಂಪರೆಗೆ ಸೇರಿದವನು. ಬಸವ ತನ್ನ ಒಂದು ವಚನದಲ್ಲಿ ಹೇಳುತ್ತಾನೆ:

''ವ್ಯಾಧನೊಂದು ಮೊಲನ ತಂದರೆ
ಸಲುವ ಹಾಗಕ್ಕೆ ಬಿಲಿವರಯ್ಯ
ನೆಲನಾಳ್ದನ ಹೆಣನೆಂದರೆ
ಒಂದಡಕೆಗೆ ಕೊಂಬವರಿಲ್ಲ ನೋಡಯ್ಯ
ಮೊಲನಿಂದ ಕರ ಕಷ್ಟ ನರನ ಬಾಳುವೆ
ಸಲೆ ನಂಬೋ ನಮ್ಮ ಕೂಡಲ ಸಂಗಮದೇವನ.''

(ಬಸವಣ್ಣನವರ ವಚನಗಳು-ಸಂ. ಡಾ. ಎಲ್ ಬಸವರಾಜು, ಮೈಸೂರು-೧೯೬೭. ಪುಟ ೬೨) ಈ ಸತ್ಯ ಅಲಾದಿಖಾನನಿಗೆ ಗೊತ್ತಿದೆ. ಆದರೆ ನಾದಿರ್‌ನಿಗೆ ಇನ್ನೂ ಮನವರಿಕೆಯಾಗ ಬೇಕಾಗಿದೆ. ಅವನ ರೋಗದ ಚಿಕಿತ್ಸೆ ಈ ಅರಿವಿನಿಂದಲೇ ಆರಂಭವಾಗಬೇಕು. ಅಲಾದಿಖಾನ ನಾದಿರ್‌ನಿಗೆ, ''ನಿಮ್ಮ ಹೆಸರು ಹೇಳುತ್ತೀರಾ?'' ಎಂಬ ಪ್ರಶ್ನೆಯಿಂದ ತನ್ನ ಚಿಕಿತ್ಸೆ ಶುರು ಮಾಡುತ್ತಾನೆ (ಪುಟ:೪೭). ಅವನ ಪ್ರಶ್ನೆಗೆ ಉತ್ತರವಾಗಿ ನಾದಿರ್, ''ನಾನು ನಾದಿರ್ ಶಾ. ಚಕ್ರವರ್ತಿ ನಾದಿರ್ ಶಾ'' ಎಂದು ಹೇಳುವುದು ಅಸಂಬದ್ಧವಾಗಿ ಕೇಳಿಸುತ್ತದೆ. ಯಾಕೆಂದರೆ ಅವನ ಪ್ರಭುತ್ವ ಮತ್ತು ದೇಹ ಎರಡೂ ಲೊಳಲೊಟ್ಟೆ ಎಂಬುದು ಈಗಾಗಲೇ ಪ್ರೇಕ್ಷಕರಿಗೆ

ಗೊತ್ತಾಗಿ ಹೋಗಿದೆ. ಅಲಾದಿ ಖಾನ ಮತ್ತು ನಾದಿರ್‌ಶಾನ ಮೊದಲ ಭೇಟಿಗೆ ವೈದೃಶ್ಯದಲ್ಲಿ ಬರುವ ಸರಕಾರೀ ಹಕೀಮ ಶಂಶುದ್ದೀನ ಮತ್ತು ನಾದಿರ್‌ನ ಮುಖಾಮುಖಿ, ಈ ದೃಶ್ಯದ ಮುಂದಿನ ಘಟನೆ. ಅಲಾದಿ ಖಾನನ ಉದ್ಧಟತನದಿಂದ ಬೇಸತ್ತ ನಾದಿರ್ ಮೊಘಲ್ ಆಸ್ಥಾನದ ಹಕೀಮ ಶಂಶುದ್ದೀನನನ್ನು ಕರೆಸಿದ್ದಾನೆ. ಇವನನ್ನು ಬಳಸಿಕೊಂಡು ನಾದಿರ್‌ನನ್ನು ಕೊಲ್ಲಬೇಕು ಎಂದು ದಿವಾನ ನಿಜಾಮುಲ್-ಉಲ್-ಮುಲ್ಕ ಒಳಸಂಚು ನಡೆಸಿದ್ದಾನೆ ಎಂಬುದು ನಮಗೆ ಎರಡನೆಯ ದೃಶ್ಯದಲ್ಲಿಯೇ ಗೊತ್ತಾಗಿದೆ (ಪುಟ ೩೯). ಅಂದರೆ ಈತ ತನ್ನ ವೃತ್ತಿಗೆ ನಿಷ್ಠನಾಗಿರುವ ಹಕೀಮ ಅಲ್ಲ; ಅಧಿಕಾರದ ಮರ್ಜಿ ಹಿಡಿಯುವ ದೆಹಲಿಯ ಮತ್ತೊಂದು ಹುಳ. ಇವನು ಮತ್ತು ನಾದಿರ್‌ನ ಭೇಟಿ ನಾಟಕದ ಮತ್ತೊಂದು ಅಸಂಗತ ದೃಶ್ಯವಾಗಿ ಮಾರ್ಪಡುತ್ತದೆ. ಶಂಶುದ್ದೀನ ದೆಹಲಿಯ ನೀರು ಕುಡಿದು ಬೆಳೆದ ಒಬ್ಬ ಭಟ್ಟಂಗಿ. ನಾದಿರ್‌ನಿಗೆ ಅವನು ಎಂಥವನು ಎನ್ನುವುದು, ತನ್ನ ಶಿಫಾರಸು ಪತ್ರಗಳನ್ನು ಅವನು ಮುಂದಿಟ್ಟ ರೀತಿಯಲ್ಲಿಯೇ ಗೊತ್ತಾಗಿ ಹೋಗಿದೆ. (ಅಲಾದಿಖಾನ ಯಾರ ಶಿಫಾರಸು ಪತ್ರವನ್ನೂ ತಂದಿರಲಿಲ್ಲ). ಶಂಶುದ್ದೀನನ ಮುಖಸ್ತುತಿ ಮತ್ತು ಬೆನ್ನೆಲುಬಿಲ್ಲದ ಹುಳದಂತಹ ವರ್ತನೆಯಿಂದ ನಾದಿರ್‌ನಿಗೆ ರೋಸಿ ಹೋಗುತ್ತದೆ. ಅವನನ್ನು ಓಡಿಸಿ ಸಂಗೀತ ನೃತ್ಯಗಳಲ್ಲಿ ತನ್ನ ನೋವು ಮರೆಯಲು ನಾದಿರ್ ಯತ್ನಿಸುತ್ತಾನೆ. ಆದರೆ ಅವು ಕೂಡ ಅರ್ಥಹೀನ ಗದ್ದಲವಾಗಿ ಅವನ ತಲೆ ಚಿಟ್ಟು ಹಿಡಿಸುತ್ತವೆ. ನಾದಿರ್‌ನಿಗೆ, ಅವನ ರೋಗದ ಹಿನ್ನೆಲೆಯಲ್ಲಿ ಅವು ಅರ್ಥಹೀನ ಗದ್ದಲಗಳಾಗಿವೆ. ದೆಹಲಿಯ ರಾಜಕೀಯದ ಹಿನ್ನೆಲೆಯಲ್ಲಿ ಪ್ರೇಕ್ಷಕನಿಗೂ ಅವು ಅಸಂಗತವಾಗಿ ಕಾಣುತ್ತವೆ. ಚಕ್ರವರ್ತಿಯ ಆಸ್ಥಾನದಲ್ಲಿ ಸಂಗೀತ ನೃತ್ಯಗಳು ನಮ್ಮ ಜನಪ್ರಿಯ ನಾಟಕ ಪರಂಪರೆಯ ಒಂದು ಭಾಗ. ಆದರೆ ಪಾತ್ರಗಳು ಮತ್ತು ಪ್ರೇಕ್ಷಕರು - ಎಲ್ಲರಿಗೂ ಅದು ಒಂದು ಅಸಂಗತ ಚಟುವಟಿಕೆಯ ಹಾಗೆ ಕಾಣಿಸುವುದು ಪ್ರಾಯಶಃ ಈ ನಾಟಕದಲ್ಲಿ ಮಾತ್ರ. ಶಂಶುದ್ದೀನನ ತೆವಳುವಿಕೆ, ನಾದಿರ್‌ನ ನರಳಾಟ, ಸಂಗೀತ ನೃತ್ಯಗಳ ಗದ್ದಲ - ದೃಶ್ಯದ ಈ ಅಸಂಗತತೆಯನ್ನು ಇನ್ನಷ್ಟು ಹೆಚ್ಚಿಸುವವನು, ತನ್ವೀರ. ''ತಾವು ಅಲ್ಲಾಹುವನ್ನು ಬಿಟ್ಟು ಬೇರೆ ಯಾರನ್ನೂ ನಂಬಬಾರದು'' ಎಂದು ತನ್ವೀರ್ ನಾದಿರ್‌ನಿಗೆ ಹೇಳುತ್ತಾನೆ (ಪುಟ ೫೮). ಆದರೆ ನಾದಿರ್ ದೇವರು ಕೈಬಿಟ್ಟ ಮನುಷ್ಯ ಎಂದು ತನ್ವೀರ್‌ಗೆ ಗೊತ್ತಿಲ್ಲ. ಹಿಂಸೆಯಿಂದ ದೇವರ ಸಾಮ್ರಾಜ್ಯ ಕಟ್ಟುವ ಅವನ ಸಿದ್ಧಾಂತ ಆ ದೃಶ್ಯದ ಗದ್ದಲದಷ್ಟೆ ಅರ್ಥಹೀನವಾಗಿದೆ. ಅಲಾದಿಖಾನ ಎರಡನೆಯ ಸಲ ನಾದಿರ್‌ನ ಬಳಿ ಬಂದಾಗ, ಅವನಿಗೆ ಅದರ ಅರಿವಾಗಿದೆ. ನಾದಿರ್ ಗುಣವಾಗಿಲ್ಲ; ಆದರೆ ಗುಣಮುಖನಾಗಿದ್ದಾನೆ. ಅರಿವಿನ ಹಾದಿಯಲ್ಲಿ ಅಲಾದಿಖಾನ ಅವನನ್ನು ಮುನ್ನಡೆಸುತ್ತಾನೆ. ನಾದಿರ್‌ನ ಐಹಿಕ ಅಧಿಕಾರಕ್ಕೆ ಅರ್ಥ-ಉದ್ದೇಶಗಳಿಲ್ಲ. ತನ್ವೀರ್ ಕಟ್ಟಬಯಸುವ ಧರ್ಮ ಸಾಮ್ರಾಜ್ಯದಲ್ಲಿ ಧರ್ಮವೇ ನಾಪತ್ತೆ. ಈ ರಾಜಕೀಯ ಮತ್ತು ಅದು ಸೃಷ್ಟಿಸುವ ಹಿಂಸೆ ಎರಡೂ ಅರ್ಥಹೀನ; ಅಸಂಗತ. ನಾದಿರ್‌ಶಾ ಅದನ್ನು ಮನಗಾಣುವ ಮೊದಲೇ ಪ್ರೇಕ್ಷಕನಿಗೆ ಅದು ಅರಿವಾಗಿರುತ್ತದೆ. ಈ ನಾಟಕದಲ್ಲಿ ಗುಣಮುಖನಾಗುವುದು ನಾಯಕ ಮಾತ್ರವಲ್ಲ; ಪ್ರೇಕ್ಷಕ ಕೂಡ.

ಪಿ. ಲಂಕೇಶರ 'ಅವ್ವ' :
ಒಂದು ಹೊಸ ಓದು

○ ಟಿ.ಆರ್. ಚಂದ್ರಶೇಖರ

ಪ್ರಸ್ತಾವನೆ :

ಆಧುನಿಕ ಕನ್ನಡ ಕಾವ್ಯ ಲೋಕದಲ್ಲಿ ಪಿ. ಲಂಕೇಶ್ ಅವರ ಆಚಾರ್ಯ ಕವನ 'ಅವ್ವ' ಮಹತ್ವದ, ಗುರುತ್ವದ ಸ್ಥಾನವನ್ನು ಪಡೆದಿದೆ. ನವ್ಯ ಕಾವ್ಯ ವಿಮರ್ಶೆಯ ಪರಿಭಾಷೆಯಲ್ಲಿ ಹೇಳುವುದಾದರೆ 'ಅವ್ವ' ಕವನವು 'ಸಾವಯವ ಶಿಲ್ಪದ ಸಮಗ್ರೀಕರಣ'ವನ್ನು ಸಾಧಿಸಿದೆ. ಈ ಕವನದ ವಸ್ತುವನ್ನು ಕವಿಯು ಸಾವಯವ ಜೈವಿಕ ನೆಲೆಯಲ್ಲಿ ಪರಿಭಾವಿಸಿಕೊಂಡಿರುವುದರ ಬಗ್ಗೆ ಭಿನ್ನಾಭಿಪ್ರಾಯ ಸಾಧ್ಯ. ಈ ಬಗ್ಗೆ ಮುಂದೆ ಲೇಖನದಲ್ಲಿ ವಿವರವಾದ ಚರ್ಚೆ ಇದೆ. ಶಿಲ್ಪದ ಮೋಹಕತೆಗೆ ಮರುಳಾಗಿ ನಾವು ಕವನದ ವಿಷಯ ವಸ್ತುವನ್ನು ಕವಿಯು ಕಟ್ಟಿರುವ ಬಗೆಯನ್ನು ಮರೆತುಬಿಡಬಾರದು! ೭೦ ಮತ್ತು ೮೦ರ ದಶಕಗಳಲ್ಲಿ ಕನ್ನಡ ಓದುಗರು ಈ ಕವನಕ್ಕೆ ತೆರೆದುಕೊಂಡ ರೀತಿಗೂ ಮತ್ತು ಇಂದು ಓದುಗರು ಕವನದ ಜೊತೆ ನಡೆಸುವ ಅನುಸಂಧಾನಕ್ಕೂ ಮೂಲಭೂತ ವ್ಯತ್ಯಾಸ ಸಾಧ್ಯ. ಹಿಂದೆ ಕವನವನ್ನು ಓದಿದಾಗ ಒಂದು ಬಗೆಯ ರೋಮಾಂಚನ ಉಂಟಾದುದು ಇದೆ. ಆದರೆ ಇಂದು ಕವನವನ್ನು ಓದಿದಾಗ ಅದು ಉತ್ಸಾಹವನ್ನು ಕೆರಳಿಸುತ್ತದೆ ಎಂಬುದರ ಬಗ್ಗೆ ನನಗೆ ಅನುಮಾನವಿದೆ. 'ಜೈವಿಕ ನಿಯತಿ'ಯ ಆಧಾರದ ಮೇಲೆ ಕವನದ ಕಟ್ಟೋಣ ಇರುವುದರಿಂದ ಇಲ್ಲಿ ಅನೇಕ ಪ್ರಶ್ನೆಗಳು ಸಾಧ್ಯ. ಈ ಕವನವು ಪ್ರಕೃತಿಯ ಸಮೃದ್ಧತೆಯನ್ನು, ಅವ್ವನ ಫಲವಂತಿಕೆಯನ್ನು 'ಸೆಲೆಬ್ರೇಟ್' ಮಾಡುತ್ತದೆ. ಆದರೆ ಅವ್ವನ ಸೆರಬ್ರಲ್ ಬಗ್ಗೆ ಕವನ ಏನನ್ನೂ ಹೇಳುವುದಿಲ್ಲ. ಅವ್ವನನ್ನು ಪ್ರಕೃತಿಗೆ ಸಂವಾದಿಯನ್ನಾಗಿ ಮಾಡಿ, ಅವ್ವನ ಸಂತಾನೋತ್ಪತ್ತಿ ಮತ್ತು ಸಂಗೋಪನಾ ಕಾರ್ಯಗಳನ್ನು ವೈಭವೀಕರಿಸಿ ಕವನವು ಸಮಾಜದಲ್ಲಿ ಈಗಾಗಲೆ ಹೆಣ್ಣಿನ ಬಗ್ಗೆ ಇರುವ 'ಎಸೆನ್ಷಿಯಲಿಸ್ಟ್' ಧೋರಣೆಯನ್ನು ಸಮರ್ಥಿಸುತ್ತದೆ - ಮುಂದುವರಿಸುತ್ತಿದೆ ಎಂಬುದನ್ನು ಕುರಿತು ನಾಲ್ಕಾರು ಸಂಗತಿಗಳನ್ನು ಪ್ರಸ್ತುತ ಪ್ರಬಂಧದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಕವನದ - ಕವಿಯ

ಸ್ವಾಯತ್ತತೆಯನ್ನು ,ಅದರ 'Intrinsic'ಗುಣವನ್ನು ಗೌರವಿಸುತ್ತ ಇಲ್ಲಿ ಸಮಾಜ ವಿಜ್ಞಾನಗಳ ನೆಲೆಯಿಂದ 'ಅವ್ವ' ಕವನವನ್ನು ಪರಿಕಿಸುವ ಪ್ರಯತ್ನ ಮಾಡಲಾಗಿದೆ.

ಪ್ರಕೃತಿ-ಸಂಸ್ಕೃತಿ

ಇಲ್ಲಿ ಅವ್ವನನ್ನು ಪ್ರಕೃತಿಗೆ ಸಂವಾದಿಯನ್ನಾಗಿ ಮಾಡಲಾಗಿದೆ ಎಂಬುದನ್ನು ಈಗಾಗಲೇ ಹೇಳಿಯಾಗಿದೆ.ಅವ್ವನನ್ನು ಪ್ರಕೃತಿಗೆ ಸಂವಾದಿಯನ್ನಾಗಿ ಮಾಡಿರುವದಕ್ಕೆ ಕವನದಲ್ಲಿ ದಂಡಿಯಾಗಿ ನಿದರ್ಶನಗಳು ದೊರೆಯುತ್ತವೆ.ವಿಮರ್ಶಕರು ಈಗಾಗಲೆ ಸರಿಯಾಗಿಯೇ ಗುರುತಿಸಿರುವಂತೆ ಈ ಕವನದಲ್ಲಿ ಸಸ್ಯ ಜಗತ್ತಿಗೆ ಹಾಗೂ ಪ್ರಾಣಿ ಜಗತ್ತಿಗೆ ದೊರೆತಿರುವಷ್ಟು ಸ್ಪೇಸು ಮನುಷ್ಯ ಜಗತ್ತಿಗೆ ದೊರೆತಿಲ್ಲ.ಸಸ್ಯ ಮತ್ತು ಪ್ರಾಣಿ ಜಗತ್ತಿಗೆ ದೊರೆತಿರುವ ಸ್ಪೇಸ್‌ನಲ್ಲಿ ಕವನದ ಸಾವಯವ ಬೇರುಗಳನ್ನು ಗುರುತಿಸಬಹುದಾಗಿದೆ.ಇಡೀ ಕವನವು ಸಮೃದ್ಧತೆಯನ್ನು-ಫಲವಂತಿಕೆಯನ್ನು ಭೂಮಿಕೆಯನ್ನಾಗಿ ಮಾಡಿಕೊಂಡಿದೆ.

ಹಸಿರುಪತ್ರ, ಹೂ, ಹಣ್ಣು, ಕಾಯಿ, ಮೆಣಸು, ಅವರೆ, ತೊಗರಿ, ಜೋಳ, ಪೈರು-ಇವು ಇಲ್ಲಿನ ಸಸ್ಯ ಜಗತ್ತು.

ಕರು, ಎಮ್ಮೆ, ಕರಡಿ(ಬನದ), ನಾಯಿ, ಕೋತಿ-ಇವು ಇಲ್ಲಿನ ಪ್ರಾಣಿ ಜಗತ್ತು.

ಅವ್ವ ,ಅಪ್ಪ ,ಮಕ್ಕಳು ಒಂದುಕಡೆ ಮತ್ತು ಅಪ್ರತ್ಯಕ್ಷವಾಗಿ ಸಾವಿತ್ರಿ, ಜಾನಕಿ, ಊರ್ಮಿಳ ಮುಂತಾದವರು ಇನ್ನೊಂದು ಕಡೆ -ಈ ಕವನದಲ್ಲಿ ಮನುಷ್ಯ ಜಗತ್ತನ್ನು ಪ್ರತಿನಿಧಿಸುತ್ತಾರೆ.ಇಲ್ಲಿ ಅವ್ವ ಕಪ್ಪು ನೆಲ.ನೆಲದ ಗುಣವೇನೆಂದರೆ ಅದು ಸುಟ್ಟಷ್ಟು ಸಮೃದ್ಧವಾಗುತ್ತದೆ, ಅದರ ಕಸುವು ವೃದ್ಧಿಸುತ್ತದೆ.ಮಣ್ಣು ಉಳುಮೆಗೆ ಒಳಗಾಗಿ ನೊಂದರೆ ಅಲ್ಲಿ ಹೂ ಹಣ್ಣು ದೊರೆಯುತ್ತದೆ.ಇದೇ ರೀತಿ ಅವ್ವನು ಸಹ ತನ್ನ ದೇಹವನ್ನು ದುಡಿಮೆಗೆ ಒಡ್ಡಿ ಕುಟುಂಬವನ್ನು, ಗಂಡನನ್ನು ,ಮಕ್ಕಳನ್ನು ಸಾಕುತ್ತಾಳೆ.ಈ ಕವನ ಪ್ರಕೃತಿಯನ್ನು ನೆಮ್ಮಿಕೊಂಡಿರುವಷ್ಟು ಸಂಸ್ಕೃತಿಯನ್ನು ನೆಮ್ಮಿಕೊಂಡಿಲ್ಲ.ಇಲ್ಲಿ ಅವ್ವ ತಾನು ಮೊಗೆಯಲ್ಲಿ ನೀರು ಹಾಕುತ್ತಾಳೆ.ಕೈಯಲ್ಲಿ ಹೊಲ ಉಳುತ್ತಾಳೆ.

ಇಡೀ ಕವನದಲ್ಲಿ ಅವ್ವ ಸಂಗೋಪನೆಯಲ್ಲಿ ನಿರತಳಾಗಿರುವುದು ಕಂಡುಬರುತ್ತದೆ. ಇದು ಪ್ರಕೃತಿ ಗುಣ.ಸಂಸ್ಕೃತಿಗೆ ಸಂಪಾದನೆ ಗುಣವಿರುತ್ತದೆ.ಪ್ರಕೃತಿಗೆ ಸಂಗೋಪನೆ ಗುಣವಿರುತ್ತದೆ.ಇಲ್ಲಿನ ಅವ್ವ ಗುಣದ ಸಾಕಾರಮೂರ್ತಿ;ಏಕೆಂದರೆ ಈ ಅವ್ವನಿಗೆ 'ಎಲ್ಲಕೆ ಮನೆತನದ ಉದ್ಧಾರ ಸೂತ್ರ'.ಈ ಅವ್ವ ಬದುಕಿದ್ದು 'ಕಾಳುಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ'. ಪ್ರಕೃತಿಯಂತೆ ಈಕೆಯದು ಹೊಟ್ಟೆಬಟ್ಟೆ ಬದುಕು .ಈಕೆಯ ದುಡಿಮೆಯ ಅಂತಿಮಗುರಿ 'ಮೇಲೊಂದು ಸೂರು, ಅನ್ನ ,ರೊಟ್ಟಿ ,ಹಚಡ.'

ಇಲ್ಲಿ ಕವಿಯು ಕವನದ ಕೊನೆಯಲ್ಲಿ ಕೃತಜ್ಞತೆ ಸಲ್ಲಿಸುವುದು ಅವ್ವನ ಪ್ರಾಕೃತಿಕ/ ಜೈವಿಕ ಗುಣಗಳಾದ 'ಹೆತ್ತದ್ದಕ್ಕೆ' ಮತ್ತು 'ಸಾಕಿದ್ದಕ್ಕೆ'.

ಈ ಕವನದಲ್ಲಿ ಪ್ರಾಣಿಗಳನ್ನು ಪರಿಭಾವಿಕೊಂಡಿರುವ ಬಗೆಯು ವಿಶಿಷ್ಟ ವಾದುದಾಗಿದೆ .ದೈನಂದಿನ ಬದುಕಿನಲ್ಲಿ ನಾಯಿ-ಕೋತಿಗಳ ಗುಣಗಳನ್ನು ಹೀಯಾಳಿಕೆಗೆ , ತೆಗಳಿಕೆಗೆ, ಛೀಮಾರಿ ಹಾಕಲು ಸಾಮಾನ್ಯವಾಗಿ ಬಳಸಲಾಗುತ್ತದೆ.'ಒಳ್ಳೇ ನಾಯಿಯಂತವನು'

ಎಂದೋ,'ಒಳ್ಳೆ ಕೋತಿ ಬುದ್ಧಿ ಅವನದು' ಎಂದೋ ಹೀಗಳೆಯುವಲ್ಲಿ ಇವುಗಳನ್ನು ಬಳಸುವುದು ರೂಢಿಯಲ್ಲಿದೆ. ಆದರೆ ಇಲ್ಲಿ ಕವನದಲ್ಲಿ ನಾಯಿಯ ಗುಣವನ್ನು, ಕೋತಿಯ ಗುಣವನ್ನು ಅತ್ಯಂತ ಪಾಸಿಟಿವ್ ಆಗಿ ನೋಡಲಾಗಿದೆ. ಇಲ್ಲೂ ಕೂಡ ಕವನವು ಪ್ರಕೃತಿಯ ಕಡೆ ತುಯ್ಯುತ್ತಿರುವುದನ್ನು ಕಾಣಬಹುದು.

ಆರ್ಥಿಕೋತ್ಪಾದನೆ ಮತ್ತು ಸಂತಾನೋತ್ಪಾದನೆ

ಜೈವಿಕ ನಿಯತಿಯ ನೆಲೆಯಲ್ಲಿ ಲಿಂಗ ಸಂಬಂಧಗಳನ್ನು ಪರಿಭಾವಿಸಿಕೊಳ್ಳುವ ನೆಲೆಯಲ್ಲಿ ಆರ್ಥಿಕೋತ್ಪಾದನೆ ಮತ್ತು ಸಂತಾನೋತ್ಪಾದನೆಗಳನ್ನು ಪರಸ್ಪರ ಪ್ರತ್ಯೇಕ ಕಾರ್ಯಭಾರವಾಗಿ ವರ್ಗೀಕರಿಸಿಕೊಳ್ಳುವುದು ವಾಡಿಕೆಯಲ್ಲಿದೆ. ಜೈವಿಕ ನಿಯತಿಯನ್ನು ಒಪ್ಪಿಕೊಂಡ ಹೊರಡುವ ಅವ್ವನಿಗೆ ಸಂತಾನೋತ್ಪತ್ತಿ ಕಾರ್ಯಭಾರವನ್ನು ವಹಿಸಿ ಕೈತೊಳೆದುಕೊಂಡಿರುವ ಪರಿ ಆಶ್ಚರ್ಯ ಹುಟ್ಟಿಸುತ್ತದೆ. ನಿಜವಾಗಿ ಕವನದಲ್ಲಿ ಆರ್ಥಿಕೋತ್ಪಾದನೆಯಲ್ಲಿ ತೊಡಗಿರುವವಳು 'ಅವ್ವ'ನೇ ಆಗಿದ್ದಾಳೆ. ಇಲ್ಲಿ ಕಾಸು ಗಂಟಕ್ಕುವುದು ಅವ್ವ ; ಹೆಂಟೆಗೊಂದು ಮೊಗೆ ನೀರು ಚೆಲ್ಲುವುದು ಅವ್ವ ; ಕಾಸಿಗೆ, ಕೆಟ್ಟ ಪೈರಿಗೆ, ಸತ್ತ ಕರುವಿಗೆ, ತಪ್ಪಿಸಿಕೊಂಡ ಮುದಿಯ ಎಮ್ಮೆಗೆ ಪೇಚಾಡುವವಳು ಅವ್ವ. ವಾಸ್ತವವಾಗಿ ಇವಲ್ಲ ಆರ್ಥಿಕೋತ್ಪಾದನೆ. ಆದರೆ ಕವನವು ಇವುಗಳ ಸಾಮಾಜಿಕ ನೆಲೆಗಳನ್ನು ಗುರುತಿಸದೆ ಅವುಗಳ ಜೈವಿಕ ನೆಲೆಗಳನ್ನು ಪರಿಶೋಧಿಸುವಲ್ಲಿ ಮಗ್ನವಾಗಿರುವಂತೆ ಕಾಣುತ್ತದೆ.

ಈ ಕವನದಲ್ಲಿ ಅವ್ವ ದುಡಿಯುತ್ತಾಳೆ, ಮೈ ಮುರಿಯ ದುಡಿಯುತ್ತಾಳೆ. ಆದರೆ ಈ ಎಲ್ಲ ದುಡಿಮೆ - ಬೆಳೆ ಬೆಳೆಯೋದು ಯಾವುದಕ್ಕೆ ಅಂದರೆ ಗಂಡನನ್ನು ಸಾಕಲು! ಮತ್ತು ಮಕ್ಕಳನ್ನು ಬೆಳೆಸಲು. ಈ ಅವ್ವನಿಗೆ ಯಾವುದರ ಬಗ್ಗೆಯೂ ಅಸಮಾಧಾನ ಇಲ್ಲ. ಕೇವಲ ಎರಡರ ಬಗ್ಗೆ ಮಾತ್ರ, ಆಕೆಗೆ ಕೋಪ. ಮಗ ಕೆಟ್ಟರೆ, ಗಂಡ ಬೇರೆ ಕಡೆಹೋದಾಗ ಮಾತ್ರ ಸಿಟ್ಟಿಗೇಳುತ್ತಾಳೆ. ಉಳಿದಂತೆ ಆಕೆಯ ಕೌಟುಂಬಿಕ ಸಂಸಾರ ಸಂಘರ್ಷ ರಹಿತವಾದದ್ದು. ಇದು ಜೈವಿಕ ನಿಯತಿಯಿಂದ ಹುಟ್ಟಿಕೊಳ್ಳಬಹುದಾದ ತಥ್ಯ. ಜೈವಿಕ-ಪ್ರಕೃತಿ ಜನ್ಯ ಇಲ್ಲಿ ಎಷ್ಟು ಪ್ರಖರವಾಗಿದೆಯೆಂದರೆ ಇಲ್ಲಿ 'ಅವ್ವ'ನ ಕೂಡ ಸಹಜವೆನ್ನುವಂತೆ, ನೈಸರ್ಗಿಕವೆನ್ನುವಂತೆ ಸಾಮಾನ್ಯ ರೀತಿಯಲ್ಲಿ ನಡೆದು ಹೋಗುತ್ತದೆ.

ಈ ಕವನದಲ್ಲಿ ಅವ್ವನ ದೃಷ್ಟಿಯಿಂದ ಸಂತಾನೋತ್ಪಾದನೆ ಪ್ರಾಥಮಿಕ, ಪ್ರಧಾನ. ಆರ್ಥಿಕೋತ್ಪಾದನೆಯು ಅನುಭವ ಅಧೀನ. ಹಾಗಾದರೆ ಕವನವು 'ಅವ್ವ'ನ ಅಧೀನ ಸ್ಥಿತಿಗತಿಯ ಸ್ಥಾನಮಾನವನ್ನು ಸಮರ್ಥಿಸುತ್ತಿದೆಯೆ? ಹೌದು ಎಂದು ಹೇಳದೆ ಬೇರೆ ಮಾರ್ಗವಿಲ್ಲ. ಇಲ್ಲಿ ಅವ್ವನ ಆರ್ಥಿಕೋತ್ಪಾದನೆ ಕಾರ್ಯಭಾರವನ್ನು ಸಂತಾನೋತ್ಪತ್ತಿಯ ವ್ಯಾಪ್ತಿಗೆ ಸೇರಿಸಿ ಅವ್ವನ ಬದುಕು ಇರಬೇಕಾದುದೆ ಹೀಗೆ ಎಂಬ ನಿಯತಿಯನ್ನು ಪ್ರತಿಪಾದಿಸುತ್ತಿರುವಂತೆ ಕಾಣುತ್ತದೆ. ಕವನದಲ್ಲಿ ಅವ್ವ ತನ್ನ ದೇಹವನ್ನು ಮನೆತನದ ಉದ್ಧಾರ ಸಾಧ್ಯವಾಲು ತೇದುಕೊಂಡು, ಸುಟ್ಟುಕೊಂಡು ಸೇವೆ ಸಲ್ಲಿಸಿದ್ದಾಳೆ. ಈ altruistic ಗುಣವನ್ನು ಅವ್ವನಿಗೆ ಕವನ ಆರೋಪಿಸುತ್ತಿದೆ. ಅದೇ ಅವ್ವನ ಗುಣವಲ್ಲ. ಕವನದಲ್ಲಿ ಅವ್ವನ

ದುಡಿಮೆಯನ್ನು ಜೈವಿಕ-ಪ್ರಾಕೃತಿಕ ನೆಲೆಗೆ ಸಮಾಜವು ಗಂಟುಹಾಕಿದೆ. ಕವನ ಸ್ಪಷ್ಟವಾಗಿ ಚಿತ್ರಿತವಾಗಿರುವಂತೆ ಅವಳ ದುಡಿಮೆ, ಆಸೆ ಆಕಾಂಕ್ಷೆಗಳಿಗೆ ಸಾಮಾಜಿಕ ಆಯಾಮವಿದೆ.

ಅವ್ವನ ಬದುಕು ಖಾಸಗಿಯಾದದ್ದೆ?

ಜೈವಿಕ ನಿಯತಿಯ ಪ್ರಕಾರ ಅವ್ವನ ಜಗತ್ತು ಖಾಸಗಿಯಾದದ್ದು ಮತ್ತು ಕುಟುಂಬದ ಚೌಕಟ್ಟಿಗೆ ಸೇರಿದ್ದು. ಆಕೆಯ ದುಡಿಮೆಯನ್ನು ಸಾರ್ವಜನಿಕವಾದುದೆಂದು, ಸಾಮಾಜಿಕವಾದುದೆಂದು ಜೈವಿಕ ನಿಯತಿ ಒಪ್ಪುವುದಿಲ್ಲ. ಆದರೆ ಕವನದಲ್ಲಿ ಅವ್ವ ಮನೆಯೊಳಗಿದ್ದುದು ಇಲ್ಲವೆ ಇಲ್ಲ. ಹೆಂಟೆಗೊಂದು ಮೊಗೆ ನೀರು ಚೆಲ್ಲುವಲ್ಲಿ, ತಪ್ಪಿಸಿಕೊಂಡ ಮುದಿಯ ಎಮ್ಮೆಯನ್ನು ಹುಡುಕುವಲ್ಲಿ, ಕೆಸರುಗದ್ದೆಯಲ್ಲಿ, ಕಪ್ಪು ನೆಲದಲ್ಲಿ ಆಕೆಯ ಬದುಕು ಅರಳಿದೆ. ಇಲ್ಲಿ ಅವ್ವನ ಬದುಕು ಖಾಸಗಿಯಾದುದು, ಖಾಸಗಿಯದ್ದನ್ನಾಗಿ ಮಾಡಲು, ಕುಟುಂಬದ ಚೌಕಟ್ಟಿಗೆ ಮಿತಗೊಳಿಸಲು ಪ್ರಯತ್ನಿಸಲಾಗಿದೆ. ಆದರೆ ಕವಿಯ ಉದ್ದೇಶ ಮೀರಿ ಕವನವು ಅವ್ವನ ಸಾಮಾಜಿಕ, ಸಾರ್ವಜನಿಕ, ಸಾಂಸ್ಕೃತಿಕ ಆಯಾಮವನ್ನು ಅನಾವರಣಗೊಳಿಸಿಬಿಡುತ್ತದೆ. ಇಡೀ ಕವನದಲ್ಲಿ ಅವ್ವ ಮನೆಯೊಳಗಿದ್ದುದರ ಸೂಚನೆ 'ಉಗಾದಿಯ ಚಂದ್ರ ಮತ್ತು ಹೋಳಿಗೆಯ ಸಂಭ್ರಮ'ದಲ್ಲಿ ಮಾತ್ರ ಸಿಗುತ್ತದೆ. ಉಳಿದಂತೆ ಅವ್ವನ ಜಗತ್ತು 'ಪಬ್ಲಿಕ್' ಆಗಿರುವುದು ಸ್ಪಷ್ಟವಿದೆ. ವಾಸ್ತವವಾಗಿ ಉಗಾದಿಯ ಚಂದ್ರ ಇಲ್ಲಿ ಬರುವುದು ಅವ್ವನ ಪ್ರಾಯವನ್ನು ಸೂಚಿಸುವ ಸಲುವಾಗಿ! ಅಂದ ಮೇಲೆ ಅವ್ವನ ಬದುಕು ಸಂಪೂರ್ಣವಾಗಿ ಸಾರ್ವಜನಿಕವಾದುದಾಗಿದೆ.

ಅವ್ವನ ದೈನಂದಿನ ಹಿತಾಸಕ್ತಿಗಳು

ಮಹಿಳೆಯರ ಹಿತಾಸಕ್ತಿಗಳ ಹಿಂದಿನ ರಾಜಕಾರಣವನ್ನು ಕುರಿತಂತೆ ಸ್ತ್ರೀವಾದಿಗಳು ಅತ್ಯಂತ ಉಪಯುಕ್ತವಾದ ಚರ್ಚೆ ನಡೆಸಿಕೊಂಡು ಬಂದಿದ್ದಾರೆ. ಈ ದಿಶೆಯಲ್ಲಿ ಮೊಲಿನಿಕ್ಸ್ (Molyneux.M)ಳ ಕಾಣಿಕೆ ತುಂಬಾ ಮಹತ್ವವಾದುದು. ಮೊಲಿನಿಕ್ಸ್, ಮಹಿಳೆಯ ಹಿತಾಸಕ್ತಿಗಳನ್ನು, ಮಹಿಳೆಯ ಅಗತ್ಯಗಳನ್ನು ಎರಡು ಗುಂಪು ಮಾಡುತ್ತಾಳೆ. ಮೊದಲನೆಯದು ಮಹಿಳೆಯರ ದೈನಂದಿನ ಹೊಟ್ಟೆ ಬಟ್ಟೆಯ ಅಗತ್ಯಗಳು; ಇವುಗಳನ್ನು ಆರ್ಥಿಕ ಹಿತಾಸಕ್ತಿಗಳು ಎಂದು ಕರೆಯಬಹುದು. ಎರಡನೆಯದು ಮಹಿಳೆಯರ ಸಂಘರ್ಷಣಾತ್ಮಕ ಅಗತ್ಯಗಳು. ಇವುಗಳನ್ನು ಲಿಂಗ ಸಂಬಂಧಿ ಸಾಮಾಜಿಕ ಅಗತ್ಯಗಳು ಎಂದು ಕರೆಯಬಹುದು. ಆಹಾರ, ಆರೋಗ್ಯ, ಅಕ್ಷರ, ಆಸರೆ, ಮುಂತಾದವು ಆರ್ಥಿಕವೆನ್ನಬಹುದಾದ, ದೈನಂದಿನ ಹೊಟ್ಟೆ ಬಟ್ಟೆಯ ಅಗತ್ಯಗಳು. ಇವುಗಳನ್ನು ಪೂರೈಸಿಕೊಡಲು ಸಮಾಜ-ಸರ್ಕಾರ ಹಿಂದು ಮುಂದು ನೋಡುವುದಿಲ್ಲ. ಏಕೆಂದರೆ ಅದರಿಂದ ಸಮಾಜ-ಸರ್ಕಾರಗಳು ಕಳೆದುಕೊಳ್ಳುವದೇನೂ ಇಲ್ಲ. ಆದರೆ ಮಹಿಳೆಯರ ಲಿಂಗಸಂಬಂಧಿ ಅಗತ್ಯಗಳು, ಸಂಘರ್ಷಣಾತ್ಮಕ ಹಿತಾಸಕ್ತಿಗಳನ್ನು ಪೂರೈಸುವುದಿರಲಿ, ಅವುಗಳನ್ನು ಒಪ್ಪಿಕೊಳ್ಳಲು ಕೂಡ ಸಮಾಜ-ಸರ್ಕಾರಗಳು ಸಿದ್ಧವಿಲ್ಲ. ಮೊಲಿನಿಕ್ಸ್ ಹೇಳುವ ಮಹಿಳೆಯರ ಸಂಘರ್ಷಣಾತ್ಮಕ ಹಿತಾಸಕ್ತಿಗಳು ಯಾವುವೆಂದರೆ, ಲಿಂಗ ಸಂಬಂಧಿ ಶ್ರಮ ವಿಭಜನೆಯ ನಾಶ, ಮಕ್ಕಳ ಪೋಷಣೆ ಮತ್ತು ಗೃಹವಾರ್ತೆ ಜವಾಬುದಾರಿಗಳ ಹಂಚಿಕೆ, ಗಂಡಸರ ಹಿಂಸೆ, ಮಹಿಳೆಯರ ಲೈಂಗಿಕ ಶೋಷಣೆ, ಬಲವಂತ ಮದುವೆ ಇವೇ

ಮುಂತಾದವುಗಳ ವಿರುದ್ಧದ ರಕ್ಷಣೆ .

'ಅವ್ವ' ಕವನವು ಮಹಿಳೆಯರ ದೈನಂದಿನ ಹೊಟ್ಟೆ ಬಟ್ಟೆ ಅಗತ್ಯಗಳ ಬಗ್ಗೆ, ಹಿತಾಸಕ್ತಿಗಳ ಬಗ್ಗೆ ಮಾತ್ರ ಮಾತನಾಡುತ್ತದೆ. ಮಹಿಳೆಯರ, ಅವ್ವನ ಸಂಘರ್ಷಣಾತ್ಮಕ ಹಿತಾಸಕ್ತಿಗಳ ಬಗ್ಗೆ ಎಲ್ಲೂ ಸೂಚನೆಯನ್ನು ನೀಡುವುದಿಲ್ಲ. ಚಿಕ್ಕ ಮಕ್ಕಳನ್ನು ಅವ್ವನೆ ಯಾಕೆ ಹೊತ್ತು ಸಾಕಬೇಕು? ಗಂಡನಿಗಾಗಿ ಅವ್ವ ಕಾಸು ಗಂಟಕ್ಕುವುದು ಯಾಕೆ? ಅವಳಿಗಾಗಿ 'ಅಪ್ಪ' ಏನು ಮಾಡಿದ? ಅಪ್ಪ ಯಾಕೆ ಮಕ್ಕಳನ್ನು ಸಾಕುವ ಜವಾಬುದಾರಿ ಹೊರಬಾರದು? ಕವನದಲ್ಲಿ ಮುದುಕಿ ಅಳೋದು ಕಾಸಿಗೆ, ಕೆಟ್ಟ ಪೈರಿಗೆ, ಸತ್ತ ಕರುವಿಗೆ! ಅವಳಿಗಾಗಿ ಅವಳು ಯಾಕೆ ಉರಿದೇಳಲಿಲ್ಲ? ಅವಳು ಉರಿದೇಳದ ಹಾಗೆ ಮಾಡಿರುವ ಸಂಗತಿಯಾದರೂ ಯಾವುದು? ಇಂತಹ ಪ್ರಶ್ನೆಗಳ ಬಗ್ಗೆ 'ಅವ್ವ' ಕವನ ಏನನ್ನೂ ಹೇಳುವುದಿಲ್ಲ. ಲಿಂಗ ಸಂಬಂಧಗಳ ನೆಲೆಯಲ್ಲಿ, ಲಿಂಗ ಸಂಬಂಧಿ ಸಂಘರ್ಷದ ನೆಲೆಯಲ್ಲಿ ಕವನವು ಅವ್ವನನ್ನು ನೋಡಲು ವಿಫಲವಾಗಿದೆ. ಅವ್ವನನ್ನು ಕವನವು ಕೇವಲ Demographic entity ಯಾಗಿ ನೋಡುತ್ತದೆ ವಿನಾ ಆಕೆಯನ್ನು Social reality ಯಾಗಿ ನೋಡುವುದಿಲ್ಲ. 'ಅವ್ವ' ಕೇವಲ demographic ಸಂಗತಿಯಲ್ಲ. ಅಲ್ಲಿ ಲಿಂಗ ಸಂಬಂಧಗಳ ಪ್ರಶ್ನೆ ಇದೆ- ಜೆಂಡರ್ ಪ್ರಶ್ನೆ ಇದೆ.

★★★

'ಅವ್ವ' ಶ್ರೇಷ್ಠ ಕವನ ಎಂಬುದರ ಬಗ್ಗೆ ನನಗೆ ಅನುಮಾನವಿಲ್ಲ. ಈ ಮಾತನ್ನು ಮೊದಲೇ ಹೇಳಿದ್ದೇನೆ. ಇದು ಸರಳವಾದ ಕವನವಲ್ಲ. ಅವ್ವನ ಬಗ್ಗೆ ಕವನವೇ ಹೇಳುವ 'ಸುಟ್ಟಷ್ಟು ಕಸುವು' ಎಂಬಂತೆ ಮತ್ತೆ ಮತ್ತೆ ಓದಿಸಿಕೊಳ್ಳುವ ಕವನ. ವಿವಿಧ ಆಯಾಮಗಳನ್ನು ತನ್ನ ಶರೀರದೊಳಗೆ ಅಡಗಿಸಿಕೊಂಡಿದೆ. ಈ ಕವನದ ಅವೈದಿಕ ಸ್ವರೂಪದ ಬಗ್ಗೆಯೂ ಮಾತನಾಡಬಹುದು. ಶೂದ್ರ ನೆಲೆಗಳ ಬಗ್ಗೆ ಕೂಡ ಚರ್ಚಿಸಬಹುದು. 'ಬನದ ಕರಡಿಗೆ ನಿಮ್ಮ ಭಗವದ್ಗೀತೆ ಬೇಡ' ಎನ್ನುವಲ್ಲಿ, 'ಚರಿತ್ರ ಪುಸ್ತಕದ ಶಾಂತ ಶ್ವೇತ ಗಂಭೀರೆಯಲ್ಲ' ಎನ್ನುವಲ್ಲಿ, 'ದೇವರ ಪೂಜಿಸಲಿಲ್ಲ, ಹರಿಕತೆ ಕೇಳಲಿಲ್ಲ, ಮುತ್ತೈದೆಯಾಗಿ ಕುಂಕುಮ ಕೂಡ ಇಡಲಿಲ್ಲ' ಎನ್ನುವಲ್ಲಿ ಕವನದ ಅವೈದಿಕ-ಶೂದ್ರ ನೆಲೆಗಳನ್ನು ಗುರುತಿಸಬಹುದಾಗಿದೆ. ಆದರೆ ಮೂಲಭೂತವಾಗಿ ಕವನವು 'ಅವ್ವ'ನಿಗೆ ಸಾಂಸ್ಕೃತಿಕವಾದ ಸಾಮಾಜಿಕವಾದ ನೆಲೆಯಿದೆ ಎಂಬುದನ್ನು ಸೂಚಿಸುವುದಿಲ್ಲ. 'ಜೈವಿಕ ನಿಯತಿ'ಗೆ ಅವ್ವನ ಬದುಕನ್ನು ಕವನ ಒಪ್ಪಿಸಿಬಿಟ್ಟಿದೆ. ಸಂತಾನೋತ್ಪತ್ತಿಗೆ, ಸಂಗೋಪನೆಗೆ ಅವ್ವನನ್ನು ಕಟ್ಟಿಹಾಕಿರುವ ಕವನವು ಚಿತ್ರಿಸುವುದು ಮಾತ್ರ. ಆಕೆಯ ಆರ್ಥಿಕೋತ್ಪಾದನೆ ಬಗ್ಗೆ, ಸಂಪಾದನೆ ಚಟುವಟಿಕೆಗಳ ಬಗ್ಗೆ ಎನ್ನುವುದು ತುಂಬಾ ವಿಶಿಷ್ಟವಾದ ಸಂಗತಿಯಾಗಿದೆ. ಈ ಕಾರಣಕ್ಕೆ ಕವನ ಯಶಸ್ವಿಯೂ ಆಗಿಬಿಟ್ಟಿದೆ ಎನಿಸುತ್ತದೆ. ಆದರೆ ಪ್ರಕೃತಿಗೆ ಅವ್ವನನ್ನು ಸಮೀಕರಿಸಿ ಕವನವು ಅವಳ ಅಧೀನ ಸ್ಥಿತಿಯನ್ನು ಒಪ್ಪಿಕೊಂಡಂತೆ ಕಾಣುತ್ತದೆ. ಇದು ಇಲ್ಲಿನ ಸಮಸ್ಯೆ.

ಲಂಕೇಶರ ಕಥೆಗಳು

೦ ಡಾ.ಎಚ್.ಎಸ್.ರಾಘವೇಂದ್ರ ರಾವ್

ಕಳೆದ ಮೂರು ದಶಕಗಳಲ್ಲಿ ಕನ್ನಡದ ಸೃಜನಶೀಲತೆಯು ಎದುರಿಸಿದ ಸವಾಲುಗಳು ಹಾಗೂ ಕಂಡುಕೊಂಡ ಅರ್ಥಪೂರ್ಣ ಉತ್ತರಗಳ ಒಂದು ಮುಖ್ಯ ಮಾದರಿಯನ್ನು, ೧೯೯೨ರಲ್ಲಿ ಪ್ರಕಟವಾಗಿರುವ ಪಿ.ಲಂಕೇಶರ ಸಮಗ್ರ ಕಥೆಗಳ ಸಂಕಲನದಲ್ಲಿ ಗುರುತಿಸಬಹುದು.ತನಗೆ ಆ ಕ್ಷಣದಲ್ಲಿ ಮುಖ್ಯವೆನಿಸುವ ಸಾಮಾಜಿಕ ಕ್ರಿಯೆಯಲ್ಲಿ ಆಳವಾಗಿ ತೊಡಗಿಸಿಕೊಳ್ಳುವುದರಿಂದ, ಹಾಗೆಯೇ ಕಲಾಸೃಷ್ಟಿಯ ಏಕಾಂತದಲ್ಲಿ ಹೊಸ ಸಾಧ್ಯತೆಗಳ ಅನ್ವೇಷಣೆಯಿಂದ ಲಂಕೇಶರು ಕನ್ನಡದ ಕಥೆಗಾರರ ನಡುವೆ ಅನನ್ಯವಾದ ಸ್ಥಾನವನ್ನು ಪಡೆದುಕೊಂಡಿದ್ದಾರೆ .ಮನುಷ್ಯನ ಮನಸ್ಸು ಹಾಗೂ ಅವನು ಕಟ್ಟಿಕೊಂಡಿರುವ ಜಗತ್ತಿನ ಸಂಕೀರ್ಣತೆ,ವೈವಿಧ್ಯತೆಗಳನ್ನು ಬೆರಗು, ವಿಷಾದ ಹಾಗೂ ಉಲ್ಲಾಸಗಳಿಂದ ನೋಡುವಾಗಲೂ ಅವೆಲ್ಲವನ್ನೂ ತನ್ನದೇ ಆದ ದಾರ್ಶನಿಕ, ನೈತಿಕ ಚೌಕಟ್ಟಿನೊಳಗೆ ಅರ್ಥೈಸುವ, ಬೆಲೆಕಟ್ಟುವ ಪ್ರಯತ್ನವನ್ನು ಅವರು ಕೈಬಿಡುವುದಿಲ್ಲ.ಇಂಥ ಬರವಣಿಗೆಯ ಯಶಸ್ಸು ಲೇಖಕರು ಜೀವನವನ್ನು ಗ್ರಹಿಸುವ ರೀತಿಯ ಮುಕ್ತತೆ ಮತ್ತು ಚಲನಶೀಲತೆಗಳನ್ನು ಅವಲಂಬಿಸಿರುತ್ತದೆ. ಇಲ್ಲಿನ ಮೂವತ್ತೇಳು ಕಥೆಗಳಲ್ಲಿ ಈ ಬಗೆಯ ಜೀವಂತಿಕೆಯನ್ನು ಉಳಿಸಿಕೊಳ್ಳಲು ಲಂಕೇಶರು ಪಟ್ಟಿರುವ ತಲ್ಲಣ, ತಹತಹಗಳು, ಕಂಡುಕೊಂಡಿರುವ ಕಲೆಯ ಹೊರದಾರಿಗಳು ದಾಖಲಾಗಿವೆ.ಕತೆಗಳ ಈ ಪರಿಶೀಲನೆಯು ಕಥೆಗಾರನ ವ್ಯಕ್ತಿತ್ವದ ಇತರ ಆಯಾಮಗಳನ್ನು ಹೊರಗಿಡುವುದು ಅನಿವಾರ್ಯ. ಆದರೆ ,ಕನ್ನಡ ಸಾಹಿತ್ಯದ ಇಂದಿನ ಸಂದರ್ಭದಲ್ಲಿ ಲಂಕೇಶರ ಒಟ್ಟು ಕೆಲಸದ ಸಾಂಸ್ಕೃತಿಕ ಮಹತ್ವವನ್ನು ಮರೆಯಬಾರದು.ಅವರ ಈಚಿನ ಕಥೆಗಳಂತೂ, ಸಮುದಾಯದೊಂದಿಗೆ ಸೇತುವೆಗಳನ್ನು ಕಟ್ಟಿಕೊಳ್ಳುವ ಪ್ರಯತ್ನದ ಉಪಉತ್ಪನ್ನಗಳಂತೆಯೇ ಮೂಡಿಬಂದಿವೆ.

ಈ ಕಥೆಗಳನ್ನು ಒಟ್ಟಿಗೆ ನೋಡಿದಾಗ ಬೇರೆ ಬೇರೆ ಹಂತಗಳ ನಡುವೆ ಒಡಕು ಕಾಣಿಸುವುದಿಲ್ಲ. ಬದಲಾಗಿ ಮೊದಲ ಕಥೆಯಿಂದ ಕೊನೆಯ ಕಥೆಯವರೆಗೆ ಕೆಲವು ಅಂಶಗಳು ಸತತವಾಗಿ ಉಳಿದುಕೊಂಡುಬಂದಿರುವುದು ನಮಗೆ ಗೋಚರವಾಗುತ್ತದೆ. ಮನುಷ್ಯನನ್ನು ಕುರಿತಾದ ಪ್ರೀತಿ, ಆದರ , ಅವನ ಕ್ಷುಲ್ಲಕತೆ ಹಾಗೂ ಸ್ವಾರ್ಥಗಳನ್ನು ಕುರಿತ ವಿಷಾದ, ಆಕ್ರೋಶಗಳು ಮೊದಮೊದಲ ಕತೆಗಳ ಸ್ಥಾಯಿಯಾದರೆ, ಮನುಷ್ಯನಿಗೆ ಸಾಧ್ಯವಿರುವ ಉದಾತ್ತತೆ, ಘನತೆಗಳ ತಿಳಿವಳಿಕೆ ಈಚಿನ ಕಥೆಗಳ ಸ್ಥಾಯಿ. ಇತರರ ಜಗತ್ತನ್ನು ತನ್ನ ದೃಷ್ಟಿಕೋನದಿಂದ , ಯಾವುದೇ ಭಾವುಕತೆಯಾಗಲೀ, ಆದರ್ಶಪ್ರಿಯತೆಯಾಗಲೀ ಇಲ್ಲದೆ ನೋಡುವ ಪ್ರಯತ್ನವು, ಮನೋಧರ್ಮವು ಕ್ರಮೇಣ ಇತರರ ದೃಷ್ಟಿಕೋನಗಳನ್ನೂ ತನ್ನೊಳಗೆ ಕೂಡಿಸಿಕೊಳ್ಳುತ್ತದೆ. ಕೊನೆಗೆ ಇಡೀ ಜಗತ್ತನ್ನು ಮನುಷ್ಯನಿಗೆ ಸಹಜವಾದ ಮಾರ್ದವದಿಂದ, ಕಲಾವಿದನಿಗೆ ಸಹಜವಾದ ನಿರ್ಲಿಪ್ತತೆಯಿಂದ ಕಥೆಗಳಲ್ಲಿ ಸೃಷ್ಟಿಸುವುದು ಸಾಧ್ಯವಾಗುತ್ತದೆ. ಇದು ಲಂಕೇಶರಿಗೆ ಪ್ರಿಯರಾದ ಅಲ್ಬರ್ಟ್ ಕಮು ಮತ್ತು ಟಾಲ್‌ಸ್ಟಾಯ್‌ರಂಥ ಲೇಖಕರು ಹಾಕಿಕೊಟ್ಟಿರುವ ಮಾದರಿ. ನವ್ಯರೆಂದೋ, ವಾಸ್ತವತಾವಾದಿಗಳೆಂದೋ ಹಣೆಪಟ್ಟಿ ಕಟ್ಟಿಸಿಕೊಂಡ ಈ ಲೇಖಕರ ತೀವ್ರವಾದ ಸಾಮಾಜಿಕಬದ್ಧತೆ ಮತ್ತು ಕ್ರಿಯಾಶೀಲತೆಗಳನ್ನು ನೆನಪು ಮಾಡಿಕೊಂಡಾಗ- ನನ್ನ ಹೋಲಿಕೆಯ ಔಚಿತ್ಯ ಮನದಟ್ಟಾಗುತ್ತದೆ. ಲಂಕೇಶರ 'ದಾಳಿ' ಕಥೆಯಲ್ಲಿ ರಜಾಕರರ ಭಯವು ಮೂಡಿಸಿದ ವಾತಾವರಣವು ಮನುಷ್ಯ ಸ್ವಭಾವದ ನಿಗೂಢತೆಯ ಹುಡುಕಾಟಕ್ಕೆ ಹಿನ್ನೆಲೆಯಾಗಿರುವಂತೆಯೇ, ಕಮೂನ 'ಪ್ಲೇಗ್' ಕಾದಂಬರಿಯಲ್ಲಿ ರೋಗವೊಂದು, ಯುದ್ಧಭಯಕ್ಕೆ ಸಂಕೇತವಾಗುತ್ತಲೇ ಮಾನವನ ಅಂತರಂಗದ ಆಳ-ಅಗಲಗಳನ್ನು ಶೋಧಿಸಿಬಿಡುತ್ತವೆ.

ಆದ್ದರಿಂದಲೇ ಲಂಕೇಶರ ಕಥೆಗಳನ್ನು ನಾವು ಅಭ್ಯಾಸ ಮಾಡಬೇಕಾದದ್ದು ಅವರು ಸೂಚಿಸುವ ಸಾಮಾಜಿಕ ಸಿದ್ಧಾಂತಗಳ, ಪರಿಹಾರಗಳ ಸರಿ ತಪ್ಪುಗಳ ಮೇಲೆ ಅಲ್ಲ; ಅನುಷ್ಠಾನ ಸಾಧ್ಯತೆಗಳ ಹಿನ್ನೆಲೆಯಲ್ಲಿ ಅಲ್ಲ. ಗಾಂಧಿವಾದವೋ, ಸಮಾಜವಾದವೋ ಅವರ ಗ್ರಹಿಕೆಯ ನೆಲೆಗಳನ್ನು ವಿಸ್ತರಿಸಬಹುದು, ಧೋರಣೆಗಳನ್ನು ರೂಪಿಸಬಹುದು. ಅವು ಕೂಡ ಇತರ ಲೇಖಕರಿಗಿದ್ದ ಫ್ಯಾಡ್‌ಗಳಂತೆಯೇ ನಿರೀಕ್ಷಿತ ಗುರಿಯನ್ನು ತಲುಪಿಸದಿರಬಹುದು. ಆದರೆ ಅವರು ಬರೆದ ಕಥೆಗಳು ಮಾತ್ರ, ಇಂಥ ಯಾವುದೇ ಆಳತೆಗೋಲಿಗೂ ಅಧೀನವಾಗದ, ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಳ್ಳುತ್ತವೆ. ಲೇಖಕನ ವ್ಯಕ್ತಿತ್ವದ, ಕಾಣುವ, ಕಟ್ಟುವ ಸಾಮರ್ಥ್ಯದಲ್ಲಿ ಆದ ವಿಕಾಸದ ಪರಿಣಾಮವಾಗಿಯೂ, ಅವೆಲ್ಲದರಿಂದ ಆಚೆ ಇರುವ ಭಾಷಿಕ ಶರೀರದಲ್ಲಿ ಅವುಗಳ ಅರ್ಥವಂತಿಕೆ ಅಡಗಿರುತ್ತವೆ. ಓದುಗನಲ್ಲಿ ಹೊಸಜೀವ ಪಡೆಯಲೆಂದು ಕಾಯುತ್ತಿರುತ್ತವೆ.

ಹೀಗೆ ನೋಡಿದಾಗ ಲಂಕೇಶರ ಕಥೆಗಳು ಜೀವನವನ್ನು ಒಳಗೊಳ್ಳುವ, ಗ್ರಹಿಸುವ ರೀತಿಯಲ್ಲಿ ಕೆಲವು ಮುಖ್ಯ ಬಗೆಗಳನ್ನು ಗುರುತಿಸಬಹುದು. ಮೊದಲನೆಯ ಬಗೆಯಲ್ಲಿ ಬಾಲ್ಯಾನುಭವದ ಜಗತ್ತು ಕಥೆಗಾರನ ಸೃಜನಶೀಲ ನೆನಪುಗಳ ಬಲದಿಂದ ಮರುಹುಟ್ಟನ್ನು

ಸಾಹಿತ್ಯ ಸಂವಾದ :೫೪-೫೫

ಪಡೆಯುತ್ತದೆ. ಅಂದಿನ ಮುಗ್ಧತೆ ಹಾಗೂ ಅವಮಾನದ ಕ್ಷಣಗಳ ಮಾಂಟೇಜ್, ಅಂದು ಅರ್ಥವಾಗದ ನೋವಿಗೆ ಕಾರಣವಾದ ಅನುಭವಗಳನ್ನು ಇಂದಿನ ಕಲಾವಿದನ ಹರಿತವಾದ ತಿಳುವಳಿಕೆಯ ಮೂಲಕ ಸಂಕೀರ್ಣವಾಗಿ ಅರ್ಥಮಾಡಿಕೊಳ್ಳುತ್ತದೆ. ಅಂದು ಆಕ್ರೋಶಕ್ಕೆ ಕಾರಣವಾಗಿದ್ದು ಇಂದು ಅನುಕಂಪವನ್ನು ಹುಟ್ಟಿಸುತ್ತದೆ. 'ಉಮಾಪತಿಯ ಸ್ಕಾಲರ್ ಶಿಪ್ ಯಾತ್ರೆ', 'ಮುಸ್ಸಂಜೆಯ ಕಥಾ ಪ್ರಸಂಗ'(ಕಾದಂಬರಿ) ಮುಂತಾದ ಕಡೆ ಪ್ರತ್ಯಕ್ಷರಾಗುವ ಬಾಲಕರು ಪ್ರೇಕ್ಷಕರು ಮಾತ್ರವಲ್ಲ, ಪಾತ್ರಧಾರಿಗಳೂ ಹೌದು.

ಕುತೂಹಲದ ಸಂಗತಿಯೆಂದರೆ ಲಂಕೇಶರ ಮೊದಮೊದಲಿನ ಕಥೆಗಳಲ್ಲಿ ಈ ಬಾಲ್ಯಾನುಭವದ ಲೋಕವು ಗೈರುಹಾಜರಾಗಿರುವುದು. ಅಂದಿನ ತರುಣ ಕಲಾವಿದನಿಗೆ ತಕ್ಷಣದ ಸಮಸ್ಯೆಯಾಗಿದ್ದು ನಾಗರಿಕತೆ ಮತ್ತು ಗ್ರಾಮೀಣತೆಗಳ ತಾಕಲಾಟ, ಸ್ವಯಂಘೋಷಿತ ನೈತಿಕತೆಗೂ, ಪ್ರವೃತ್ತಿಜನ್ಯ ನಡವಳಿಕೆಗಳಿಗೂ ಇರುವ ಅಂತರ, ಸಂಸ್ಕೃತಿ-ಪ್ರವೃತ್ತಿಗಳ ನಡುವಿನ ಘರ್ಷಣೆ ಮುಂತಾದವು ಅವರ ಮೊದಲ ಎರಡು ಸಂಕಲನಗಳನ್ನು ದಟ್ಟವಾಗಿ ಆವರಿಸಿರುವ ಕಾಳಜಿಗಳು. ಆದರೆ 'ಕುರುಡು ಕಾಂಚಾಣ', 'ನಮ್ಮನಡುವಿನ ಹುಡುಗ' ಮುಂತಾದ ಕಥೆಗಳನ್ನು ಸ್ವಯಂಕೇಂದ್ರಿತವಾದ ನವ್ಯ ಕಥೆಗಳೆಂದು ಬದಿಗೆ ತಳ್ಳುವುದು ಖಂಡಿತಾ ಸಾಧ್ಯವಿಲ್ಲ. ಹಾಗಿಲ್ಲದ ವಸ್ತುನಿಷ್ಠತೆಯನ್ನು ಲಂಕೇಶರು ತಮ್ಮ ಮೊದಲ ಕೆಲವು ಸಂಕಲನಗಳಲ್ಲಿ ಅನುಮಾನವಿಲ್ಲದೆ ತೋರಿಸಿದ್ದಾರೆ. ಹಾಗೆ ನೋಡಿದರೆ ಈಚಿನ ಕಥೆಗಳಲ್ಲಾದರೂ 'ತಾನು ಈಗ ನೋಡುತ್ತಿರುವ ಜಗತ್ತನ್ನು ಅದರ ಎಲ್ಲ ಸಂಕೀರ್ಣತೆಯೊಂದಿಗೆ ಗ್ರಹಿಸುತ್ತಿದ್ದೇನೆ' ಎಂಬ ನಂಬಿಕೆ ಇದೆ. ಹಳೆಯ ಕಥೆಗಳಲ್ಲಿ ಬದುಕಿನ ನಿಗೂಢತೆಯನ್ನು ಕುರಿತ ಅನುಮಾನ, ವಿಸ್ಮಯಗಳು ಇವೆ. ಅದೂ ಅಲ್ಲದೆ 'ನಿವೃತ್ತರು', 'ವಾಮನ', 'ರೊಟ್ಟಿ'ಯಂಥ ಕಥೆಗಳು ಸ್ವಯಂಕೇಂದ್ರಿತವೂ ಅಲ್ಲ. ಅನ್ಯರ ಬದುಕಿನ ಬಗೆಗಿನ ಗಾಢವಾದ ಕುತೂಹಲ ಲಂಕೇಶ್‌ರ ಎಲ್ಲ ಕಥೆಗಳನ್ನೂ ವ್ಯಾಪಿಸಿದೆ. ಬದಲಾಗುತ್ತ ಬಂದಿರುವುದು ಅದರ ಬಗ್ಗೆ ತಳೆಯುವ ಭಾವನಾತ್ಮಕವಾದ, ವೈಚಾರಿಕವಾದ ನಿಲುವುಗಳು ಮಾತ್ರ.

ಇನ್ನೊಂದು ಗುಂಪು ಕಥೆಗಳಲ್ಲಿ ಕಥೆಗಾರರು ಹಳ್ಳಿಯ ಬದುಕನ್ನು ಅದರೊಂದಿಗಿನ ಭೂತಕಾಲದ ಕೊಂಡಿಗಳನ್ನು ಕಳಚಿಕೊಳ್ಳದ, ನಿರ್ಲಿಪ್ತ ಪ್ರವಾಸಿಯಂತೆ ನೋಡುತ್ತಾರೆ. ಸದ್ಯದ, ನಿರೂಪಕನ ನಗರದ ಬದುಕು ಮತ್ತು ಅದೇ ನಿರೂಪಕನೆ ಎದುರಿಸಬೇಕಾಗುವ ಹಳ್ಳಿಯ ಬದುಕನ್ನು ಪರಸ್ಪರ ಅರ್ಥಶೋಧನೆಗೆಂದು ಬಳಸಿಕೊಳ್ಳಲಾಗುತ್ತದೆ. ಇವನು ಹಳ್ಳಿಯಲ್ಲೂ ಆಗಂತುಕ. ಈ ಸ್ಥಿತಿಯು ಇಡೀ ಒಂದು ತಲೆಮಾರಿನ ಅನುಭವವೂ ಆಗುವುದರಿಂದ ಮುಖ್ಯವಾಗುತ್ತದೆ. 'ಒಬ್ಬಂಟಿ', 'ಕೆರೆಯ ನೀರನು ಕೆರೆಗೆ ಚೆಲ್ಲಿ', 'ತಂದೆ', 'ಮಾರಲಾಗದ ನೆಲ' ಮುಂತಾದವು ಈ ರೀತಿಯ ಕಥೆಗಳು.

ಬೇರೆ ಕೆಲವು ಕಥೆಗಳಲ್ಲಿ ನಿರೂಪಕನು ಅನುಭವಗಳನ್ನು ನೋಡಿ ದಾಖಲೆ ಮಾಡುವ ಪ್ರಜ್ಞೆಯಾಗಿಯೂ ಉಳಿಯುವುದಿಲ್ಲ. ಕಥೆಯು ಸ್ವಾನುಭವದ ಹೊರ ಲಕ್ಷಣಗಳನ್ನು ಸಂಪೂರ್ಣವಾಗಿ ಕಳೆದುಕೊಂಡಿರುತ್ತದೆ. ಕಥೆಗಾರನಿಗಿರುವುದು ಸಂಭಾವ್ಯವಾದ ಘಟನೆಗಳನ್ನು

ಆಯ್ದು, ಮುಂದಿನ ಅವುಗಳ ಮುಖಾಮುಖಿಯಲ್ಲಿಯೇ ಅರ್ಥವನ್ನು ಹುಟ್ಟಿಸುವವನಾಗಿ ಮಾತ್ರ.'ವಾಸನೆ','ಗುತ್ತಿ ಗೀತಾ ಆದದ್ದು','ರೊಟ್ಟಿ' ಮುಂತಾದ ಕೆಲವು ಮುಖ್ಯ ಕಥೆಗಳು ಈ ಮಾದರಿಯವು.ಇಲ್ಲಿನದು ವಸ್ತುನಿಷ್ಠತೆಯನ್ನು ಇನ್ನೊಂದು ದಿಕ್ಕಿನಿಂದ ಸಾಧಿಸುವ ಪ್ರಯತ್ನ.

ಸಮಗ್ರವಾಗಿ ನೋಡುವಾಗ,'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ' ಸಂಕಲನಕ್ಕೆ ವಿಶೇಷ ಮಹತ್ವವಿದೆ.ಇಲ್ಲಿನ ಕೇವಲ ನಾಲ್ಕು ಕಥೆಗಳು ನೂರನಾಲ್ಕು ಪುಟಗಳನ್ನು ಆಕ್ರಮಿಸಿದ್ದು,ಲಂಕೇಶರು ಬರೆದ ಅತೀ ದೀರ್ಘ ಕಥೆಗಳಾಗಿವೆ.ರೂಪದ ದೃಷ್ಟಿಯಿಂದ ಇವು ನೀಳ್ಗತೆ,ಕಿರು ಕಾದಂಬರಿ ಮುಂತಾದ ಹಲವು ನಿರ್ವಚನೆಗಳಿಗೆ ಯೋಗ್ಯವಾಗಿವೆ.ಈ ಸಂಕಲನವು ಒಂದು ರೀತಿಯ 'ಆಯಾಸ ಬಿಂದು' (exhaustion point) ಅಥವಾ ಹತಾಶೆಯನ್ನು ತೋರಿಸುವುದೇನೋ ಎನ್ನುವಂತೆ ಅದರ ನಂತರದ ಹದಿನಾಲ್ಕು ವರ್ಷಗಳು ಅವರು ಒಂದೇ ಒಂದು ಕಥೆಯನ್ನು ಬರೆದಂತೆ ತೋರುವುದಿಲ್ಲ.ಈ ಸಂಕಲನದಲ್ಲಿನ ಕಥೆಗಳದು 'ದೇವರಿಲ್ಲದ ಜಗತ್ತು',ಮೌಲ್ಯಗಳಿಲ್ಲದ ,ಆಶಾವಾದದ ಮಿಂಚೂ ಇಲ್ಲದ ಜಗತ್ತು.

ಆದರೆ,'ಕಲ್ಲು ಕರಗುವ ಸಮಯ'(೧೯೯೦) ಸಂಕಲನದಲ್ಲಿ ಕಥೆಗಾರನ ಹೊಸಹುಟ್ಟು ಸಂಭವಿಸಿದೆ.ಇಲ್ಲಿ ಅವನು ಹುಸಿಯಾದ ವಿಗ್ರಹಗಳನ್ನು ಕೆಡವುತ್ತಾನೆ ಮಾತ್ರವಲ್ಲ ಅದಕ್ಕಿಂತ ಹೆಚ್ಚು ಉತ್ಸಾಹದಿಂದ,ಹುಸಿಯಲ್ಲದ ವಿಗ್ರಹಗಳನ್ನು ಕಟ್ಟಿಕೊಡುತ್ತಾನೆ.ಹೀಗೆ ಮಾಡಲು ನಂಬಿಕೆ ಬೇಕು,ಕನಸುಗಳು ಬೇಕು,ಆಶಾವಾದ ಬೇಕು. ಇಲ್ಲಿನ ಕಥೆಗಳು ಇವೆಲ್ಲವನ್ನೂ ಕಂಡುಕೊಳ್ಳುವುದು,ಜನರ ನಡುವೆ.ಅದೂ ಶೋಷಿತರೂ, ನಿರ್ಲಕ್ಷಿತರೂ ಆದ ಮುಖವಿಲ್ಲದ ಸಾಮಾನ್ಯರ ನಡುವೆ.ಮತ್ತೊಂದು ಮರೆಯಬಾರದ ಮಾತೆಂದರೆ ತಾನು ಕೆಡವ ಬಯಸುವ ವಿಗ್ರಹಗಳನ್ನು ಅನುಕಂಪದಿಂದ,ತಿಳುವಳಿಕೆಯಿಂದ ನೋಡುವದು ಕಥೆಗಾರನಿಗೆ ಸಾಧ್ಯವಾಗಿದೆ.'ಸಹಪಾಠಿ' ಕಥೆಯ ಬಸವೇಗೌಡನಾಗಲೀ, 'ಮುಟ್ಟಿಸಿಕೊಂಡವನು' ಕಥೆಯ ಬಸಲಿಂಗ,'ಉಗಿದ ಊರಿನವರು' ಕಥೆಯ ಚೆಲುವಮ್ಮ-ಭೈರಪ್ಪನಾಗಲೀ,ಕಥೆಗಾರನ ದ್ವೇಷ,ಆಕ್ರೋಶಗಳ ಗುರಿಗಳಲ್ಲ.ಹೀಗೆಯೇ 'ವೃಕ್ಷದ ವ್ಯಕ್ತಿ'ಯ ಪಾರ್ವತಮ್ಮ,'ಕಲ್ಲು ಕರಗುವ ಸಮಯ'ದ ಶ್ಯಾಮಲ,'ದೇವಿ'ಯ ದೇವೀರಮ್ಮ ಅಥವಾ 'ಮುಟ್ಟಿಸಿಕೊಂಡವನು' ಕಥೆಯ ಡಾ.ತಿಮ್ಮಪ್ಪ ಮುಂತಾದ ಪಾತ್ರಗಳು ವಸ್ತುಸ್ಥಿತಿಗಿಂತ ಹೆಚ್ಚಾಗಿ,ಭವಿಷ್ಯದ ಸಾಧ್ಯತೆಗಳ ಕಡೆಗೆ ಕೈಮಾಡುತ್ತಿರುತ್ತವೆ.ಇಂಥ ಕಡೆ ಲೇಖಕನ ಕಾಣ್ಕೆಯು ಕಥೆಗಳ ಸ್ವರೂಪವನ್ನು ನಿರ್ಧರಿಸುತ್ತದೆ.ಚಿತ್ರಿತವಾದ ವಾಸ್ತವದ ಅಧಿಕೃತತೆ ಮತ್ತು ಆಶಾಚಿಂತನೆಗಳ ನಡುವಿನ ಗಡಿಗೆರೆಗಳು ಎಲ್ಲಿಯೋ ಅಳಿಸಿ ಹೋದವೇನೋ ಎಂಬ ಶಂಕೆಗೆ ಅವಕಾಶವಾಗುತ್ತದೆ.ಈ ಕಥೆಗಳಿಂದ ಸೂಚಿತವಾದ ಜಗತ್ತಿನ ಆರೋಗ್ಯ ಮತ್ತು ಅಪೇಕ್ಷಣೀಯತೆಗಳ ಬಗ್ಗೆ ಯಾವ ಅನುಮಾನಕ್ಕೂ ಆಸ್ಪದವಿಲ್ಲದಿರಬಹುದು.ಆದರೆ ಮಾಸ್ತಿಯವರ ಹಲವು ಮುಖ್ಯ ಕಥೆಗಳಲ್ಲಿ ಆಗುವಂತೆ ,ಈ ಕಥೆಗಳೂ ಲೇಖಕನ ದರ್ಶನಕ್ಕೆ ಒಡ್ಡಿದ ದೃಷ್ಟಾಂತಗಳು ಮಾತ್ರವೇ ಎಂತೆನ್ನುವ ಪ್ರಶ್ನೆಗೆ ಉತ್ತರ ಹುಡುಕುವ ಅಗತ್ಯವಿದೆ.

ಕೆಲವು ಕಥೆಗಳು ಲೇಖಕರ ನಿಯಂತ್ರಣವನ್ನೂ ಮೀರಿ ಅವರಿಗೇ ಅಚ್ಚರಿ ಹುಟ್ಟಿಸುವ ಆಯಾಮುಗಳನ್ನು ಪಡೆದುಕೊಂಡಂತೆ ತೋರುತ್ತವೆ.('ಒಂದು ಬಾಗಿಲು','ಕಣ್ಮರೆ', 'ಉರಿದಉರಿನವರು').ಬೇರೆ ಕೆಲವು ಕಥೆಗಳಲ್ಲಿ ತಾನು ಹೇಳಬೇಕಾದುದನ್ನು ಓದುಗರಿಗೆ ಕಥೆಯೊಂದರ ಮೂಲಕ - ಬೇರೆಯವರು ಬರೆದ ಕಥೆಯ ಜ್ಞಾಪಕ ರೂಪವಾದರೂ ಸರಿ - ಸರಳವಾಗಿ ಹೇಳಬೇಕೆಂಬ ತುರ್ತು ಕಂಡುಬರುತ್ತದೆ.ಇಂಥ ಕಥೆಗಳಲ್ಲಿ ರಚನಾಕ್ರಮವು ತಿರುವು ಮುರುವಾಗಿ,ಕಥೆಯ ವಿವರಗಳು ಬಹುಮಟ್ಟಿಗೆ ವಸ್ತುವಿನಿಂದಲೂ ನಿಯಂತ್ರಿತವಾಗಿರುತ್ತವೆ.ಅವು ಸ್ವತಃ ಕಥೆಗಾರನಿಗೆ ತಿಳಿದು ಬಂದಿರುವ ಸಂಕೀರ್ಣತೆಯಿಂದ ಆಚೆಗೆ ಮುಕ್ತತೆಯನ್ನು ಪಡೆದಿರುವುದಿಲ್ಲ.

ಈ ಕಥೆಗಳು ಸಮಕಾಲೀನ ಕನ್ನಡ ಸಾಹಿತ್ಯದ ಕೆಲವು ಮುಖ್ಯ ಸಮಸ್ಯೆಗಳನ್ನು, ಆಶಯಗಳನ್ನು ತಮ್ಮದೇ ಆದ ರೀತಿಯಲ್ಲಿ ಸ್ಪಂದಿಸುವುದರಿಂದ ಬಹಳ ಮುಖ್ಯವಾಗುತ್ತವೆ. ದಲಿತರು,ಹಿಂದುಳಿದವರು ಹಾಗೂ ಹೆಣ್ಣುಮಕ್ಕಳ ವಿಷಾದದ ಸ್ವರೂಪವನ್ನು ಅವರಷ್ಟೇ ತೀವ್ರವಾಗಿ ಅನುಭವಿಸುವ,ಮಂಡಿಸುವ ಈ ಕಥೆಗಳು ಸಿಕ್ಕನ್ನು ಬಿಡಿಸಲು ಪ್ರಯತ್ನಿಸುವುದು ಮಾತ್ರ ಮಾನವತಾವಾದ ಮತ್ತು ಪ್ರೀತಿಯ ಫಲವಾದ ಹೃದಯ ಪರಿವರ್ತನೆಯ ನೆಲೆಯಲ್ಲಿಯೇ.ಬದುಕಿನ ಸುಖಗಳ ಬಗೆಗಿನ ತೆರೆದ ಮನಸ್ಸು,ಆತ್ಮಗೌರವ ಮತ್ತು ಕ್ಷುಲ್ಲಕವಾದುದರ ಬಗೆಗಿನ ತಿರಸ್ಕಾರದ ಫಲವಾದ ಲಂಕೇಶರ ಸ್ತ್ರೀಪಾತ್ರಗಳು,ಹೆಣ್ಣಿನ ತ್ಯಾಗಪರತೆಗೆ ಒತ್ತು ಕೊಡುತ್ತಿದ್ದ,ಪಾರಂಪರಿಕ ಮಹಿಳೆಯರಿಗಿಂತ ಭಿನ್ನವಾಗಿದ್ದರೂ ಅವರ ಹಾಗೆಯೇ ಚೈತನ್ಯದ,ಪೋಷಕಶಕ್ತಿಯ ಕೇಂದ್ರಗಳಾಗಿದ್ದಾರೆ .ಆದರೆ ಈ ಕಥೆಗಳ ಒಟ್ಟು ತುಡಿತವಿರುವುದು ಪ್ರೀತಿಪೂರ್ಣವಾದ ತಿಳುವಳಿಕೆ ಹಾಗೂ ಒಪ್ಪಂದಗಳ ಕಡೆಗೆ ವಿನಾ ಅನಿವಾರ್ಯವಾದ,ಹಿಂಸ್ರಕವಾದ ಮುಖಾಮುಖಿಯ ಕಡೆಗಲ್ಲ.ಈ ಮಾತಿಗೆ ಅತ್ಯುತ್ತಮ ನಿದರ್ಶನವೆಂದರೆ ಆಕ್ರಮಣಕಾರ ಹಾಗೂ ಆಕ್ರಮಿತರ ನಡುವಿನ ವ್ಯತ್ಯಾಸವನ್ನೇ ಅಳಿಸಿಹಾಕಿ,ಯಾವುದೇ ಶಠ ನಿಲುವಿನ ಪರಿಣಾಮುವಾದ ಬರ್ಬರತೆಯ ಮೇಲೆ ಬೆಳಕುಚೆಲ್ಲುವ 'ದಾಳಿ' ಕಥೆ.ಈ ಕಥೆಯ ಮಲ್ಲಿ 'ಕಂಬನಿ ತುಂಬಿದ ಕಣ್ಣುಗಳ ಮೂಲಕ' ಕಂಡುಕೊಳ್ಳುವ ಕ್ರೌರ್ಯ ಮತ್ತು ಅದಕ್ಕೆ ಮುಂದಿನ ಘಟನೆಗಳು ಒಟ್ಟು ಆ ಸನ್ನಿವೇಶದ ಬಗ್ಗೆ ಲಂಕೇಶರ ಸದ್ಯದ ನಿಲುವನ್ನು ಸಮರ್ಥವಾಗಿ ಹೇಳುತ್ತವೆ.ಅನ್ಯಾಯಕ್ಕೆ ಗುರಿಯಾದ ಸಮುದಾಯವೊಂದು ಕ್ರಮೇಣ ಧೈರ್ಯ,ಆತ್ಮವಿಶ್ವಾಸ,ಪ್ರತಿಭಟನೆಯ ಎಚ್ಚರಗಳನ್ನು ಸಂಪಾದಿಸುತ್ತಾ ತನ್ನಲ್ಲಿ ಮೊದಲಿನಿಂದಲೂ ಇದ್ದ ವಿವೇಕ,ಪ್ರತಿಭೆಗಳನ್ನು ಬಯಲಿಗೆ ತರುವ ಪವಾಡವು ಈ ಕಥೆಗಳಲ್ಲಿ ಸಮರ್ಥವಾಗಿ ನಡೆದಿದೆ.ಇದೆಲ್ಲವನ್ನೂ ಈಗಾಗಲೇ ಆಗಿಹೋಗಿರುವ ಸಾಧನೆಯೆಂದು ತೋರಿಸದೆ,ಈಗ ನಡೆಯುತ್ತಿರುವ ಬದಲಾವಣೆ ಎನ್ನುವಂತೆ ಗ್ರಹಿಸಲಾಗಿದೆ.ಆದ್ದರಿಂದ ಸನ್ನಿವೇಶದ ಸಂಕೀರ್ಣತೆಯು ಮಾಯವಾಗಿಲ್ಲ.ಈ ಸಂಕಲನದ ಬೇರೆ ಬೇರೆ ಕಥೆಗಳನ್ನು ಪರಸ್ಪರ ಪೂರಕವಾದ ಸ್ಥಿರಚಿತ್ರಗಳಂತೆ(Montage) ನೋಡಿದಾಗ ನಮಗೆ ಸಮಗ್ರ ಸನ್ನಿವೇಶದ ಗ್ರಹಿಕೆ ಸಿಗುತ್ತದೆ.ಉದಾಹರಣೆಗೆ 'ಸಹಪಾಠಿ' ಕಥೆಯ ಭಗವಾನ್ ಪ್ರಾರಂಭಿಸಿದ ಕೆಲಸವು 'ಮುಟ್ಟಿಸಿಕೊಂಡವನು' ಕಥೆಯ

ಡಾ. ತಿಮ್ಮಪ್ಪನವರಲ್ಲಿ ಮುಂದುವರಿಯುತ್ತದೆ. 'ಕಣ್ಮರೆ' ಕಥೆಯಲ್ಲಿ ಭ್ರಮರ, ಸಾವಿತ್ರಿ, ಅಚ್ಚಮ್ಮರು ಅನುಭವಿಸಿದ ಸೋಲು ಮತ್ತು ಹತಾಶೆಗಳು,'ಕಲ್ಲು ಕರಗುವ ಸಮಯ'ದ ಶ್ಯಾಮಲ ಹಾಗೂ 'ದೇವಿ'ಯ ನಾಯಕಿಯರಲ್ಲಿ ಸಾರ್ಥಕತೆಯನ್ನು ಪಡೆದುಕೊಳ್ಳುತ್ತವೆ. 'ಕೃತಜ್ಞತೆಯ'ಯ ನಿರ್ಮಲಾಗೆ ತೆರೆಯದ ಬಾಗಿಲು 'ಸುಭದ್ರ' ಕಥೆಯ ನಾಯಕಿಗೆ ತೆರೆಯುತ್ತದೆ. ಎಂದರೆ ಹಿಂದೆಂದೂ ಕಂಡರಿಯದ, ಬದಲಾವಣೆಯ ಮಹಾಪೂರದಲ್ಲಿ ನಿಮಿರಿದ ವಿವಿಧ ಪಾತ್ರಗಳ 'ಗತಿ-ಸ್ಥಿತಿ'ಗಳನ್ನು ದಾಖಲೆಮಾಡುತ್ತಾ ಹೋದಂತೆ ವಿಶ್ವರೂಪದರ್ಶನವು ಸಾಧ್ಯವಾಗುತ್ತದೆ. ಲಂಕೇಶರ ಮೊದಲ ಕಥೆಗಳು ಕೂಡ ಅರವತ್ತರ ದಶಕದ ಮಧ್ಯಮವರ್ಗದ ಬದುಕಿನ ಖೊಟ್ಟತನವನ್ನು ಹೀಗೆಯೇ ಅನಾವರಣ ಮಾಡಿದ್ದವೆಂಬ ಸಂಗತಿಯನ್ನು ಮರೆಯಬಾರದು. ಇಲ್ಲಿಯೂ ಕೆಲಸ ಮಾಡಿರುವ ಪ್ರತಿಭೆಯು ಅದೇ. ಆದರೆ ಆ ಪ್ರತಿಭೆಯ ತೆಕ್ಕೆಗೆ ಸಿಕ್ಕಿರುವ ಸಮುದಾಯ ಇನ್ನಷ್ಟು ವಿಶಾಲವಾದುದು. ಅವರು ತಲುಪಿರುವ ಅಂತರಂಗದ ಆಳಗಳು ಮೊದಲಿಗಿಂತ ಗಾಢವಾದವು.

★ ★ ★

ಲಂಕೇಶರ ಕಥೆಗಳ ಕಲೆಗಾರಿಕೆಯ ಬಗ್ಗೆ ಕೆಲವು ಮುಖ್ಯ ಸಂಗತಿಗಳನ್ನು ಇನ್ನುಮುಂದೆ ಪರಿಶೀಲಿಸಲಾಗಿದೆ. ಕನ್ನಡ ವಿಮರ್ಶೆಯು 'ಕಲ್ಲು ಕರಗುವ ಸಮಯ'ದ ಕಥೆಗಳಿಗೆ ಸ್ಪಂದಿಸುವಾಗ ಅವರ ಮೊದಲಿನ ಕಥೆಗಳ ತೀವ್ರತೆಯನ್ನೋ ಅಥವಾ ಭಾವಗೀತಾತ್ಮಕತೆಯನ್ನೋ ಪ್ರಶಂಸಿಸಿ ಅವು ಇಲ್ಲಿ ಇಲ್ಲವೆಂಬ ಆಕ್ಷೇಪಣೆಯನ್ನು ಮಾಡಲಾಗಿದೆ. ಅಥವಾ ಅವರು ತಮ್ಮ ಈಚಿನ ಕಥೆಗಳಲ್ಲಿ, 'Form ಬಗ್ಗೆ ತೀರಾ ತಲೆಕೆಡಿಸಿಕೊಳ್ಳದೆ ಬರೆಯುತ್ತಿದ್ದಾರೆ','ಲಂಕೇಶರು ಈಚೆಗೆ ತಮ್ಮ ಬರವಣಿಗೆಯ ಧಾಟಿ, ಶೈಲಿ ಮತ್ತು ಬಂಧದ ನಿಷ್ಠೆಗಳ ಬಗ್ಗೆ ಪ್ರಜ್ಞಾಪೂರ್ವಕವಾಗಿ ಎಂಥ ದಿವ್ಯ ನಿರ್ಲಕ್ಷ್ಯ ತೋರುತ್ತಿದ್ದರೂ ಅವರ ಕಥೆಗಳು ಉತ್ತಮ ಕಲಾಕೃತಿಗಳೂ ಆಗಿರುವುದು ಮೆಚ್ಚುಗೆ, ಗೌರವ ಹುಟ್ಟಿಸುತ್ತವೆ'(ಟಿ.ಪಿ. ಅಶೋಕ; ಸಾಹಿತ್ಯ ಸಂದರ್ಭ-೯೯ ; ಪುಟ ೧೫೩, ೧೫೪) ಮುಂತಾದ ಗೊಂದಲಹುಟ್ಟಿಸುವ ಮಾತುಗಳೂ ಬಂದಿವೆ.

ಈ ಅಭಿಪ್ರಾಯಗಳನ್ನು ಒಪ್ಪುವುದು ಬಿಲ್‌ಕುಲ್ ಸಾಧ್ಯವಿಲ್ಲ. ಮೊದಲನೆಯದಾಗಿ ಸಣ್ಣಕಥೆಯಂಥ ಸಾಹಿತ್ಯ ಪ್ರಕಾರದಲ್ಲಿ ಬಹುಮುಖೀ ದೃಷ್ಟಿಕೋನವನ್ನು ತರುವ ಪ್ರಯತ್ನದಲ್ಲಿ ಅವರು ಭಾವ ತೀವ್ರತೆಯನ್ನು ಬಿಟ್ಟುಕೊಡುತ್ತಾರೆ ಅಥವಾ ನಿಯಂತ್ರಿಸುತ್ತಾರೆ. ಈಚಿನ ಕಥೆಗಳ ನಿರೂಪಣಾ ಶೈಲಿ ತಣ್ಣಗಿದೆಯೆಂದ ಮಾತ್ರಕ್ಕೆ ಅವುಗಳ ಪಾತ್ರಗಳು ನಿರ್ಭಾವುಕವಾಗಿವೆಯೆಂದು ಅರ್ಥವಲ್ಲ. ಉದಾಹರಣೆಗೆ 'ತೋಟದವನು' ಕಥೆಯ ತಮ್ಮಣ್ಣ ತನ್ನ ಕಥೆ ಹೇಳುವಾಗ ಮತ್ತು 'ಉಮಾಪತಿ...' ಕಥೆಯ ನಾಯಕ ತನ್ನ ಕಥೆ ಹೇಳುವಾಗ ಇರುವ ತೀವ್ರತೆ ಒಂದೇ ಬಗೆಯದು. ಆದರೆ ಶೈಲಿಯ ಬದಲಾವಣೆಯ ಮೂಲಕವಾಗಿ ಆ ಕಥೆಗಳು ಬೀರುವ ಪರಿಣಾಮ ಮಾತ್ರ ಭಿನ್ನವಾಗುತ್ತವೆ. ನಾವು ಉಮಾಪತಿಯ ಜೊತೆ ಜೊತೆಯಲ್ಲಿ ಅನುಭವಿಸಿದರೆ, ತಮ್ಮಣ್ಣನನ್ನು ಹೊರಗಿನಿಂದ

ಸಾಹಿತ್ಯ ಸಂವಾದ :೫೪-೫೫

ನೋಡುತ್ತೇವೆ. ಈ ಸ್ಥಿತ್ಯಂತರ ಉದ್ದೇಶಪೂರ್ವಕವಾದುದು. 'ನವ್ಯಕಥೆ'ಯ ಅರ್ಥಪೂರ್ಣ ಮುಂದುವರಿಕೆ ಇಲ್ಲಿದೆ.

ಅದೇ ರೀತಿಯಲ್ಲಿ ಕಲಗಾರಿಕೆಯ ಅತ್ಯುನ್ನತ ಸಾಧ್ಯತೆಯು, ಕಲೆ ಎಂಬ ಸಂಗತಿಯು ಓದುಗರ ಗಮನಕ್ಕೆ ಬಾರದ ಹಾಗೆ ಅಡಗಿರುವುದರಲ್ಲೇ ಇದೆ. ಲಂಕೇಶರು ತಮ್ಮ ಈಚಿನ ಸಂಕಲನದ ಕಥೆಗಳಲ್ಲಿ ಈ ಬಗೆಯ ಸೃಜನಶೀಲ ಪ್ರತಿಭೆಯನ್ನು ಪೂರ್ಣಪ್ರಮಾಣದಲ್ಲಿ ಉಪಯೋಗಿಸಿಕೊಂಡಿದ್ದಾರೆ. ಇವು ಅತ್ಯಂತ ಎಚ್ಚರ ವಹಿಸಿ, ಭಾಷೆ, ಶೈಲಿ, ರಚನೆ, ಅಲಂಕಾರದ ಬಗ್ಗೆ ಗಮನವಿಟ್ಟು ಬರೆದ ಕಥೆಗಳು. ಮೊದಲನೆಯದಾಗಿ, ಇಂದಿನ ಸಾಮುದಾಯಿಕ ಜೀವನದಲ್ಲಿ ಈ ಕಥೆಗಳಲ್ಲಿ ಮಂಡಿತವಾಗಿರುವ ಬದುಕಿನ ನೇರ ಪ್ರತಿಕೃತಿಗಳು ಇಲ್ಲ. ನಿರ್ಮಲಾ, ಶ್ಯಾಮಲಾ, ದೇವಿ, ತಮ್ಮಣ್ಣನಂಥವರಲ್ಲಿ ಸಾಧ್ಯತೆಯಾಗಿ ಮಾತ್ರ ಇರಬಹುದಾದುದನ್ನು, ಕಥೆಗಳಲ್ಲಿ ಸಾಧ್ಯವಾಗಿಸಿರುವುದು ಇಲ್ಲಿನ ಹಿರಿಮೆ. ಕಥೆಯೊಳಗಿನ ಘಟನೆಗಳ ಆಯ್ಕೆ ಮತ್ತು ಸಂಯೋಜನೆಯು ಕೂಡಾ ಯಥಾಸ್ಥಿತಿಯ ಕಾಲಾನುಕ್ರಮ ವರದಿಯೇನೂ ಅಲ್ಲ. 'ಸಹಪಾಠಿ', 'ಮಾರಲಾಗದ ನೆಲ', 'ಜೊತೆಗಾರ' ಮುಂತಾದ ಕಥೆಗಳಲ್ಲಿ ಈ ಬಗೆಯ ಸಂಯೋಜಕ ಪ್ರತಿಭೆಯನ್ನು ಸ್ಪಷ್ಟವಾಗಿ ಗುರುತಿಸಬಹುದು.

ಹಾಗೆಯೇ ಈ ಕಥೆಗಳಲ್ಲಿ ಒಂದು ಬಗೆಯ ಶೈಲೀಯ ತಟಸ್ಥತೆಯನ್ನು (stylistic neutrality) ಬೇಕು ಬೇಕೆಂದೇ ರೂಢಿಸಿಕೊಳ್ಳಲಾಗಿದೆ. ತಮಗೆ ಪರಿಚಿತವಾದ ಶಿವಮೊಗ್ಗ ಜಿಲ್ಲೆಯ ಗ್ರಾಮೀಣ ಉಪಭಾಷೆಯನ್ನು ಬಳಸದೆ ಇರುವುದನ್ನು ಇಂಥ ಒಂದು ತಾಂತ್ರಿಕ ತೀರ್ಮಾನವೆಂದೇ ತಿಳಿಯಬೇಕು. ಇವರದೇ 'ಮುಸ್ಸಂಜೆಯ ಕಥಾ ಪ್ರಸಂಗ' ಅಥವಾ 'ಅಕ್ಕ' ಕಾದಂಬರಿಯ ಭಾಷೆಯೊಂದಿಗೆ ಈ ಸಂಕಲನದ ಸಂಭಾಷಣೆಗಳ ಭಾಷೆಯನ್ನು ಹೋಲಿಸಿದಾಗ ಈ ಮಾತು ಸ್ಪಷ್ಟವಾಗುತ್ತದೆ. ಇವರ ನಂತರದ ಹಲವು ತರುಣ ಪ್ರತಿಭಾವಂತ ಕಥೆಗಾರರು (ದೇವನೂರು ಮಹಾದೇವ, ಬೆಸಗರ ಹಳ್ಳಿ ರಾಮಣ್ಣ, ಕುಂವೀ, ಬೊಳುವಾರು ಇತ್ಯಾದಿ) ಉದ್ದೇಶ ಪೂರ್ವಕವಾಗಿಯೇ ಉಪಭಾಷೆಯ ಬಳಕೆಗೆ ಒತ್ತುಕೊಡುವಾಗ ಲಂಕೇಶರು ತಳೆಯುವ ಈ ನಿಲುವು ಚಿಂತನಯೋಗ್ಯವಾಗಿದೆ. ಇಂಥದೊಂದು ಶೈಲಿಯನ್ನು ಬಳಸುವುದರಿಂದ ಒಟ್ಟು ಸನ್ನಿವೇಶಕ್ಕೆ ಕೆಲವು ಮಾರ್ಗದರ್ಶಕವಾದ ಒಳನೋಟಗಳನ್ನು ನೀಡಬಹುದು.

ಇಲ್ಲಿನ ಅನೇಕ ಕಥೆಗಳು ಹೊರ ಜಗತ್ತಿನ ಬಗ್ಗೆ ಮಾತನಾಡುವಾಗ, ಅದೆಲ್ಲವನ್ನೂ ಒಂದು ಪಾತ್ರದ ಪ್ರಜ್ಞೆ ಅಥವಾ ನಿರೂಪಕನ ಪ್ರಜ್ಞೆಯ ಮೂಲಕ ಸೋಸಿಬರುವ ಹಾಗೆ ರೂಪಿಸಿರುವುದು ತಂತ್ರದ ದೃಷ್ಟಿಯಿಂದ ಗಮನಿಸಬಹುದಾದ ಸಂಗತಿ. ಇದರಿಂದ ಕಥೆಗಾರನು ಘಟನೆಗಳ ಬಗ್ಗೆ ತನ್ನ ವ್ಯಾಖ್ಯಾನವನ್ನೋ ಅಥವಾ ಕಥೆಯಾಚೆಗೆ ನಿಲ್ಲುವ ಸ್ಥೂಲಹೇಳಿಕೆ (Meta Statement)ಗಳ ಮೂಲಕ ಓದುಗರಿಗೆ ಸೂಚನೆಯನ್ನೋ ನೀಡುವುದು ಸಾಧ್ಯವಾಗುತ್ತದೆ. ಇಂಥ ಮಾತುಗಳು ಓದುಗನು ಇಡೀ ಕಥೆಯನ್ನು ಬೇರೆ ರೀತಿಯಲ್ಲಿ ನೋಡುವಂತೆ ಪ್ರೇರಿಸುತ್ತದೆ.

ಉದಾಹರಣೆಗೆ : 'ತೋಟದವನು','ಮಾರಲಾಗದ ನೆಲ' ಮತ್ತು'ಕಣ್ಮರೆ ' ಕಥೆಗಳು ಈ ವಾಕ್ಯಗಳಿಂದ ಮುಕ್ತಾಯವಾಗುತ್ತವೆ :

೧.'ಕ್ಷಮಿಸಿ ವಿವರವಾಗಿ ಬರೆಯಲಾಗದ ಅನ್ನಿಸಿದ್ದನ್ನು ಹಾಗೇ ಹೇಳಿದ್ದೇನೆ. ಇದೆಲ್ಲ ನಾನು ನನ್ನ ಕನಸಿನಲ್ಲಿ ಕಂಡದ್ದು'

೨.'ಎಲ್ಲ ಮಾತುಗಳು ತಮ್ಮಿಂದ ಹೊರಗೇ ಬಿಡುವ ಸಂಗತಿಗಳನ್ನು ನೆನೆದು ನನ್ನ ಮನಸ್ಸು ಭಾರವಾಗಿತ್ತು'.

೩.'ಇಬ್ಬರು ಹುಡುಗಿಯರ ಕನಸುಗಳೂ ಭಿನ್ನ ರೀತಿಯಲ್ಲಿ ಕಮರಿದ್ದವು. ಇವು ಹುಡುಗರ ಕನಸಲ್ಲ ಎಂದು ಹೇಳುವುದು ಹೇಗೆ?'

ಲಂಕೇಶರ ಮಾತಿನಲ್ಲೇ ಹೇಳುವುದಾದರೆ ಅವರು ಕಲ್ಪಿಸಿಕೊಂಡ ವಾಚಕ ಮಹಾಶಯರಿಗೆ ಆನಂದದಾಯಕವಾಗಬಲ್ಲ ಕಥಾವಸ್ತುಗಳೆಂದರೆ -''ಹಣ, ವಿದ್ಯೆ, ಜಾತಿ, ಕುಸ್ತಿ ಮತ್ತು ಪ್ರೇಮ''. ಇವುಗಳಿಗೆ ,ಕಾದಂಬರಿಯಲ್ಲಿ ಬರುವ ಹೆಂಡ, ಹಾದರ, ಹಾಗೂ ಜೂಜು ಸೇರಿಸಿದರೆ ಈ ಪಟ್ಟಿ ಪೂರ್ಣವಾಗುತ್ತದೆ. ನಡು ನಡುವೆಯೇ ಈ ಓದುಗರು ಆಲಸಿಗಳಾಗುತ್ತಾರೆ; ಮತ್ತು ಸುಲಭವಾಗಿ ಮರೆತು ಬಿಡುವವರಾದ್ದರಿಂದ ಮೇಲಿಂದ ಮೇಲೆ ನೆನಪು ಮಾಡಿಕೊಡುವ ಅವಶ್ಯಕತೆಯುಂಟಾಗುತ್ತದೆ. ಗಜಿಬಿಜಿ ಗೊಂದಲಕ್ಕೆ ಒಳಗಾಗುವ ಸ್ವಭಾವದವರಾದ್ದರಿಂದ ಈಗ ಹೇಳಬೇಕಾದ್ದನ್ನು ಈಗಲೇ ಹೇಳದೇ - ಹಿಂದಿನ, ಅದಕ್ಕೂ ಹಿಂದಿನ ಕೆಲವು ಸಂಗತಿಗಳನ್ನು, ವಾಚಕರ ತಾಳ್ಮೆ ಬೇಡುತ್ತಲೇ, ಮೊದಲು ಹೇಳಬೇಕಾಗುತ್ತದೆ. ಸುಲಭವಾಗಿ ಹಾಲು ಕೊಡದ ಆಕಳು ಮಂಜ ಅದನ್ನು ಹಿಡಿದುಕೊಂಡದ್ದೇ ಏನೇನೂ ತೊಂದರೆ ಕೊಡದೆ ಹಾಲು ಕೊಟ್ಟದ್ದು ಮಂಜನ ಸ್ಪರ್ಶದಿಂದಾಗಿ ಎಂದು ಓದುಗರು ತಪ್ಪು ತಿಳಿಯದಿರಲಿ ಎಂದು, ಆಕಳು ಹಾಲು ಕೊಟ್ಟದ್ದು ಕೆಚ್ಚಲ ಭಾರದಿಂದ ಎಂದು ವಿವರಣೆ ಕೊಟ್ಟು ವಾಚಕರ ತಿಳಿವು ಹೆಚ್ಚಿಸುವಂತೆ ಕಟಿಗುಳಿ ಇಡಬೇಕಾಗುತ್ತದೆ. ಅಂತೂ ಅತ್ಯಂತ ವಿಸ್ತೃತವಾದ, ಪ್ರಬುದ್ಧತೆಯ ಎಲ್ಲ ಸ್ತರಗಳನ್ನೂ ಒಳಗೊಂಡ ವಾಚಕ ವೃಂದವನ್ನು ಕಣ್ಣೆದುರು ಕುಳ್ಳಿರಿಸಿಕೊಂಡು ಅವರೆಲ್ಲರಿಗೂ ಪ್ರಿಯವಾಗುವಂತೆ, ತುಂಬಾ ಪ್ರೀತಿಯಿಂದ, ಉತ್ಸಾಹದಿಂದ ಎಲ್ಲವನ್ನೂ ವ್ಯಾಖ್ಯಾನಿಸುತ್ತ, ವಾಚಕರಿಗೆ ಯೋಚನಾ ಲಹರಿಗಳನ್ನು ಹರಿಸುವ ಸ್ವಾತಂತ್ರ್ಯವನ್ನು ಕೊಟ್ಟರುವಾಗಲೂ ಅವರಲ್ಲಿ ಸಂಪೂರ್ಣ ವಿಶ್ವಾಸ ಇಡುವ ಧೈರ್ಯ ಇಲ್ಲದವರ ಹಾಗೆ ಲೇಖಕ ಶಿಕ್ಷಕರಾಗುತ್ತಾರೆ; ಪ್ರಿಯ ವಾಚಕನನ್ನು ಸಂಬೋಧಿಸುವ ರೀತಿಗಳನ್ನು, ಸಂಬೋಧಿಸುವ ಸಂದರ್ಭಗಳನ್ನು ಲಕ್ಷ್ಯಕ್ಕೆ ತಂದುಕೊಂಡರೆ ಇದು ಸ್ಪಷ್ಟವಾದೀತು. ನನಗನ್ನಿಸುವ ಮಟ್ಟಿಗೆ ತಾನು ಹುಟ್ಟಿಸಿದ ಅರ್ಥಪ್ರಪಂಚ ಈಗ ವಾಚಕರ ಸೃಜನಶೀಲ ಪ್ರತಿಕ್ರಿಯೆಯಲ್ಲಿಯೇ ನಿಜವಾಗಬೇಕೆಂಬ ನಿಲುವಿನಲ್ಲಿ ಇಲ್ಲಿ ವಿಶ್ವಾಸ ಪ್ರಕಟವಾಗಿಲ್ಲ; ವಾಚಕರೊಡನೆ ಇಲ್ಲಿ ನಡೆಯುವ ಸಂವಾದ ಸಮಾನ ಪಾತಳಿಯ ಜೊತೆಗಾರಜೀವಿಯೊಂದಿಗೆ ಎಂದು ಅನ್ನಿಸುವುದಿಲ್ಲ.

- ಯಶವಂತ ಚಿತ್ತಾಲ

(ಸಾಹಿತ್ಯದ ಸಪ್ತ ಧಾತುಗಳು : ಸೃಜನ ಪ್ರಕ್ರಿಯೆ : ಮೂರು ಸಮಕಾಲೀನ ಕಾದಂಬರಿಗಳಲ್ಲಿ...)

ಲಂಕೇಶರ ಕಥೆಗಳು :

ಒಂದು ಸ್ತ್ರೀವಾದೀ ಪ್ರವೇಶದ ಸಾಧ್ಯತೆ...

○ ಪದ್ಮಿನಿ ಹೆಗಡೆ

ಬೆಂಗಳೂರಿನ ಪತ್ರಿಕೆ ಪ್ರಕಾಶನದವರು ೧೯೯೨ ರಲ್ಲಿ ಪ್ರಕಟಿಸಿದ 'ಪಿ.ಲಂಕೇಶರ ಸಮಗ್ರ ಕಥೆಗಳು' ಸಂಕಲನದಲ್ಲಿ, ಅದರ ಮುನ್ನುಡಿಯಲ್ಲಿ ಹೇಳಿರುವಂತೆ ೧೯೫೮ ರಿಂದ ೧೯೯೧ರವರೆಗೆ ಬರೆದ ಎಲ್ಲ ೩೭ ಕಥೆಗಳು ಇವೆ. ಇಲ್ಲಿ 'ಕೆರೆಯ ನೀರನು ಕೆರೆಗೆ ಚೆಲ್ಲಿ', 'ನಾನಲ್ಲ', 'ಉಮಾಪತಿಯ ಸ್ಕಾಲರ್‌ಷಿಪ್ ಯಾತ್ರೆ', 'ಕಲ್ಲು ಕರಗುವ ಸಮಯ' ಎಂಬ ನಾಲ್ಕು ಕಥಾ ಸಂಕಲನಗಳ ಗುಚ್ಛ ಇದೆ.

ಇಲ್ಲಿಯ ಕಥೆಗಳು ವ್ಯಕ್ತಿಯು ಮುಖ್ಯವಾಗಿ ಬಯಸುವುದು ದೈಹಿಕ ಸುಖ, ಭೌತಿಕ ಸಮೃದ್ಧಿ, ಸಮರಸದ ಕೌಟುಂಬಿಕ ಜೀವನ, ನಿಷ್ಕಳಂಕವಾದ, ಸ್ವಾರ್ಥದ ಸೋಂಕಿಲ್ಲದ, ಸಹಜ ಪ್ರೀತಿ ಎಂಬುದರ ಕಡೆಗೆ ಗಮನವನ್ನು ಸೆಳೆಯುತ್ತವೆ. ವ್ಯಕ್ತಿಯ ಈ ಬೇಡಿಕೆಗಳ ಪೂರೈಕೆಗೆ ಅಡ್ಡಿ ಇರುವುದನ್ನು ಸ್ತ್ರೀಪರ ಸಹಾನುಭೂತಿಯಿಂದಲೇ ಈ ಕಥೆಗಳು ಗಮನಿಸುತ್ತವೆ. ಸ್ತ್ರೀಯರ ದೈಹಿಕ ಸುಖದ ಬೇಡಿಕೆಯ ಪೂರೈಕೆಗೆ ಇರುವ ಅಡ್ಡಿಗಳನ್ನು -

೧. ವಿವಾಹ ಮಾಡಿಕೊಳ್ಳಲು ಸಾಧ್ಯವಾಗದೇ ಇರುವುದು.

೨. ವಿವಾಹಿತರಾಗಿದ್ದರೂ ದುಶ್ಚಟಕ್ಕೆ ಬಲಿಯಾದ, ಇನ್ನೊಬ್ಬ ಹೆಣ್ಣಿನ ಸಹವಾಸವನ್ನು ಬಯಸಿದ, ಅಥವಾ ಹಣ, ಆಸ್ತಿ, ಅಧಿಕಾರಗಳೇ ಜೀವನದ ಸಾರ ಸರ್ವಸ್ವ ಎಂದುಕೊಂಡ ಗಂಡನ ನಿರ್ಲಕ್ಷ್ಯಕ್ಕೆ ತುತ್ತಾಗಿರುವುದು ಅಥವಾ ಗಂಡನಿಂದ ತ್ಯಜಿಸಲ್ಪಟ್ಟವರಾಗಿರುವುದು.

೩. ಗಂಡನನ್ನು ಕಳೆದುಕೊಂಡು ಪುನರ್ವಿವಾಹವಾಗುವ ಅವಕಾಶದಿಂದ ವಂಚಿತರಾಗಿರುವುದು ಎಂದು ಗುರುತಿಸುತ್ತವೆ.

ಮತ್ತು -

೧. ಗಂಡ ಹೆಂಡತಿಯರ ವಿಚಾರಧಾರೆಗಳಲ್ಲಿ ಅತಿಯಾದ ಅಂತರವಿರುವುದು.

೨. ಹೆಂಡತಿಯು ಗಂಡನನ್ನು ಅರ್ಥಮಾಡಿಕೊಂಡಿಲ್ಲದಿರುವುದು, ಗಂಡನ ಹೆಜ್ಜೆಗಳಲ್ಲಿ ತನ್ನ ಹೆಜ್ಜೆಯನ್ನು ಇಡದಿರುವುದು.

೩. ಗಂಡನಿಗೆ ಹೆಂಡತಿಯ ಲೈಂಗಿಕ ನಿಷ್ಠೆಯಲ್ಲಿ ಸಂದೇಹವಿರುವುದು.

೪. ಗಂಡಹೆಂಡತಿಯರ ನಡುವೆ ಪರಸ್ಪರ ಪ್ರೀತಿ ಗೌರವ ಪಾರದರ್ಶಕ ಸಂಬಂಧ ಇಲ್ಲದಿರುವುದು.

೫. ಗಂಡನಿಗೆ ಸಾಂಸಾರಿಕ ಜೀವನದ ಬಗೆಗೆ ಬೇಸರ ಹೆಂಡತಿಗೆ ನಿರಾಸಕ್ತಿ ಇರುವುದು.

೬. ಗಂಡು ಹೆಣ್ಣನ್ನು ಭೋಗವಸ್ತುವಿಗಿಂತ ಮಿಗಿಲಾಗಿ ಭಾವಿಸದೇ ಇರುವುದು.

೭. ಹೆಣ್ಣು ವೇಶ್ಯೆಯಂತೆ ಬದುಕುತ್ತಿರುವುದು.

೮. ಭೌತಿಕ ಸಮೃದ್ಧಿಯನ್ನು ಪಡೆಯುವ ಆಸೆಗೆ ಮಿತಿ ಹಾಕಿಕೊಳ್ಳದ ಗಂಡು ಆ ಆಸೆಯ ಪೂರೈಕೆಗೆ ಹೆಣ್ಣನ್ನು ಒಂದು ಸಾಧನವನ್ನಾಗಿ ಬಳಸಿಕೊಳ್ಳುವುದು.

೯. ಜಾತಿ ಧರ್ಮ ಪ್ರತಿಷ್ಠೆಗಳ ಬೇಲಿಯನ್ನು ಗಂಡು ಹೆಣ್ಣು ಇಬ್ಬರು ಕಟ್ಟಿಕೊಂಡಿರುವುದು.

೧೦. ಅವಾಸ್ತವ ಆದರ್ಶಗಳನ್ನು ಕಲ್ಪಿಸಿಕೊಂಡಿರುವುದು

-ಇವು ಸಮರಸ ಕೌಟುಂಬಿಕ ಜೀವನಕ್ಕೆ ಇರುವ ಪ್ರಮುಖ ಅಡ್ಡಿಗಳೆಂದು ಈ ಕಥೆಗಳು ಸೂಚಿಸುತ್ತವೆ.

ಹಿಗೆ ಇರುವ ಅಡ್ಡಿಗಳಿಂದಾಗಿ ವ್ಯಕ್ತಿಗೆ ಮಾನವೀಯ ಬದುಕು ಅಸಾಧ್ಯವಾಗಿದೆ ಎನ್ನುವ ಈ ಕಥೆಗಳು ಮಾನವೀಯವಾಗಿ ಬದುಕಲು ಬಯಸಿಯೂ ಬದುಕಲಾರದೇ ಹೋಗುವ ವ್ಯಕ್ತಿ ಚಡಪಡಿಸುವುದನ್ನು ಚಿತ್ರಿಸುತ್ತವೆ. ಆದರೆ ಹೀಗೆ ಚಡಪಡಿಸುವವನು ಗಂಡು ಮಾತ್ರ ಎನ್ನುವುದನ್ನು ಹೇಳುವ ಈ ಕಥೆಗಳು ಗಂಡನ್ನು ವೈಭವೀಕರಿಸುತ್ತವೆ. ಚಡಪಡಿಕೆಯ ಮೂಲಕಾರಣ ಅತೃಪ್ತ ಕಾಮ ಎನ್ನುತ್ತವೆ. ಎಲ್ಲ ಸಮಸ್ಯೆಗಳಿಗೆ ಪರಿಹಾರ ಶುದ್ಧ ಸಹಜ ಬೇಲಿರಹಿತವಾದ ಲೈಂಗಿಕ ಸಾಹಚರ್ಯ ಎಂದು ಸೂಚಿಸುತ್ತವೆ.

ಲೈಂಗಿಕ ಸುಖಾಪೇಕ್ಷೆ ಸಹಜವಾದದ್ದು ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಇಡೀ ಬದುಕೇ ಲೈಂಗಿಕ ಸುಖದ ಮೇಲೆ ನಿಂತಿದೆ, ಲೈಂಗಿಕ ಸುಖದ ಮುಂದೆ ಯಾವ ಮೌಲ್ಯಕ್ಕೂ ಬೆಲೆ ಇಲ್ಲ. ಮುಖಾಮುಖಿಯಾಗಿ ನಿಂತ ಸಾವೂ ಕೂಡ ಲೈಂಗಿಕ ಸುಖಾಪೇಕ್ಷೆಗೆ ತಡೆ ಅಲ್ಲ ಎಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ? ಇಂಥ ಕಥೆಗಳು ಬದುಕಿಗೆ ಇರುವ ಇತರ ಮಾನವೀಯ ಆಯಾಮಗಳನ್ನು ಗುರುತಿಸುವುದೇ ಇಲ್ಲ. ಜೊತೆಗೆ 'ಸಾಗರದಲ್ಲಿ ಮಧ್ಯರಾತ್ರಿಯಲ್ಲಿ ತಿಳವಳ್ಳಿಯ ಜೊತೆ ತಪ್ಪಿಸಿಕೊಂಡು ಹೋಗಿ ಸೆಕೆಂಡ್ ಶೋ ನೋಡಿಬಂದು ಸ್ಟೇಷನ್ನಿನ ಬಾಳೆಹಣ್ಣಿನ ಸಿಪ್ಪೆಗಳ ನಡುವೆ ತೋಳಿನಲ್ಲಿ ತೋಳುಹಾಕಿ ಬೆಳಕರಿಸಿದ ಶಾಂತಾಗೆ ಜಗತ್ತು ಚೊಕ್ಕ ಸ್ಥಳ. ಹಾಗಿರಲು ನನಗೆ ಸಾಧ್ಯವಿದ್ದಿದ್ದರೆ ' ಎಂದು 'ಗೊಮ್ಮಟೇಶ' ಕಥೆಯ ಪಾತ್ರ ಭಾವಿಸುವಂತೆ, ನೀತಿ ನಿಯಮಗಳ ಅಂಕೆಯ ಗೋಜಿಲ್ಲದೆ, ಮುಕ್ತ ಲೈಂಗಿಕತೆಯನ್ನು ಅದರ ಆಗುಹೋಗುಗಳ ಪರಿವೆ ಇಲ್ಲದೆ, ಲೈಂಗಿಕ ಸುಖಕ್ಕಿಂತ ಮಿಗಿಲಾಗಿ ಬದುಕಿನ ಯಾವ ಸಂಗತಿಯೂ ಇಲ್ಲ ಎಂಬುದನ್ನೇ ಎತ್ತಿ ಹಿಡಿಯುತ್ತವೆ. ಲೈಂಗಿಕ ಸುಖವನ್ನು ಜೀವನದ ಸಾರಸರ್ವಸ್ವ ಎಂದು ಭಾವಿಸದೆ ಇರುವ 'ಕಣ್ಮರೆ' ಕಥೆಯ

ಅಚ್ಚಮ್ಮನಂತಹವರ ನಿಲುವು ತೋರಿಕೆಯದು ಎನ್ನುತ್ತವೆ. ರಜಕಾರರ ಧಾಳಿಯ ನಿರೀಕ್ಷೆಯಲ್ಲಿ ಜನ ನೀತಿ ಅನೀತಿಗಳ ನಡುವಿನ ಗೆರೆಯನ್ನು ಗುರುತಿಸುವ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಆ ಹಂತದಲ್ಲಿ ವಾಸ್ತವಿಕವಾಗಿ ಧಾಳಿಮಾಡಿದ ರಜಕಾರರ ಗುಂಪಿನಲ್ಲಿದ್ದ ಮುಸ್ಲಿಂ ಹುಡುಗ ಹಿಂದೂ ಹುಡುಗಿಯೊಂದಿಗೆ ಹೊಂದುವ ಲೈಂಗಿಕ ಸಾಹಚರ್ಯವನ್ನು ಸಹಜ ಪ್ರೀತಿಯ ಪ್ರಕಟಣೆಯ ಒಂದು ರೂಪ ಎಂದು ಚಿತ್ರಿಸುವ 'ಧಾಳಿ' ಕಥೆಯು ವೈಯಕ್ತಿಕವಾಗಿ ತನಗೆ ಇಷ್ಟವಾದದ್ದು ಎಂದು ಮುನ್ನುಡಿಯಲ್ಲಿ ಹೇಳಿಕೊಳ್ಳುವ ಲಂಕೇಶರ ವೈಯಕ್ತಿಕ ಅಭಿಪ್ರಾಯವೂ ಒಟ್ಟಾರೆ ಕಥೆಗಳ ಅಭಿಪ್ರಾಯವೂ ಒಂದೇ ಎಂಬುದು ಗಮನಿಸಬೇಕಾದ ಸಂಗತಿ. ಮುಕ್ತ ಲೈಂಗಿಕತೆಯ ಪ್ರತಿಪಾದಕನಾಗಿ ನಿಲ್ಲುವ ಲಂಕೇಶ(ರಾವಣ)ನ ಮುಂದೆ ರಾಮ ವಿಜೃಂಭಿಸುವುದು ತಾನು ಪ್ರತಿಪಾದಿಸುವ ಕಟ್ಟುಪಾಡಿನ ಬದುಕಿನ ಆದರ್ಶದಿಂದಾಗಿ. ಒಂದು ಹೆಣ್ಣನ್ನು ನೋಡಿದರೆ ಅಕ್ಕ ತಂಗಿ ಅವ್ವ ಎಂದುಕೊಳ್ಳುವ ಭಾವ ಕೃತಕವಾದದ್ದು ಅವಳನ್ನು ಭೋಗಿಸುವ ಭಾವವೇ ಸಹಜವಾದದ್ದು ಎನ್ನುವ ವಿಚಾರವಾದಿ ಲೇಖಕನಿಗೆ ಸಮಾಜವು ಲೈಂಗಿಕ ಜೀವನಕ್ಕೆ ಸಂಬಂಧಿಸಿದಂತೆ ಆರೋಗ್ಯಕರ ವ್ಯವಸ್ಥೆಗೆ ಒಳಪಡಬೇಕು ಎಂಬ ಆಶಯವು ಅವಾಸ್ತವಿಕವಾದ ಆದರ್ಶ ಎನ್ನಿಸುವುದು ಆಶ್ಚರ್ಯದ ಸಂಗತಿ. ೩ ವರ್ಷದ ಹುಡುಗಿಯ ಮೇಲೂ ಅತ್ಯಾಚಾರ ನಡೆಯುವುದು, ವೇಶ್ಯಾಗೃಹಗಳಿಗೆ ತಮ್ಮ ಹುಡುಗಿಯರನ್ನು ಮಾರಿ ಅವರ ಬದುಕನ್ನು ಮೂರಾಬಟ್ಟೆ ಮಾಡುತ್ತಿರುವಂತಹ ಸಂಗತಿಗಳು ಕಟ್ಟುಪಾಡಿನ ಬದುಕು ವಾಸ್ತವಿಕವಾದ ಒಂದು ಅಗತ್ಯ ಎಂಬುದನ್ನು ಎತ್ತಿಹಿಡಿಯುತ್ತಿರುವಾಗ ಲೈಂಗಿಕ ಸುಖದ ಬೇಡಿಕೆಗೆ ಚೌಕಟ್ಟು ಇರಬೇಕಾದದ್ದು ಯೋಗ್ಯ ಎನ್ನುವ ಮಾತು ಜವಾಬ್ದರಿ ಲೇಖಕನಿಂದ ಬರಬೇಕಾಗುತ್ತದೆ. ಸಹಜವಾದದ್ದನ್ನೆಲ್ಲ ಯಥಾವತ್ತಾಗಿ ಒಪ್ಪಿಕೊಳ್ಳಬೇಕು ಎಂದಾದರೆ ವಿಜ್ಞಾನವನ್ನು ಬದಿಗಿರಿಸಬೇಕಾಗುತ್ತದೆ. ಸಹಜ ಪ್ರಕೃತಿಯನ್ನು ನಮಗೆ ಬೇಕಾದಂತೆ ಬಗ್ಗಿಸಿಕೊಳ್ಳುವ ವಿಜ್ಞಾನ ಯೋಗ್ಯವಾದದ್ದು ಎನ್ನುವುದಾದರೆ ಲೈಂಗಿಕ ಬೇಡಿಕೆಯನ್ನು ವೈಯಕ್ತಿಕ, ಸಾಮುದಾಯಿಕ ಹಿತಾಸಕ್ತಿಯ ದೃಷ್ಟಿಯಿಂದ ವ್ಯವಸ್ಥೆಗೆ ಒಳಪಡಿಸುವವದೂ ಯೋಗ್ಯವಾದದ್ದೇ ಆಗುತ್ತದೆ.

ಬದುಕು ಕೇವಲ ಲೈಂಗಿಕ ಸುಖವನ್ನು ಪಡೆಯುವುದಕ್ಕೆ ಸೀಮಿತವಾಗಿಯೂ ಇಲ್ಲ. ಸ್ತ್ರೀ ಪುರುಷರಿಗೆ ಅವರದೇ ಆದ ವ್ಯಕ್ತಿತ್ವವಿರುತ್ತದೆ. ಆ ವ್ಯಕ್ತಿತ್ವಕ್ಕೆ ಅನುಗುಣವಾದ ಕನಸುಗಳಿರುತ್ತವೆ. ಆ ಕನಸುಗಳು ವೈಯಕ್ತಿಕ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ, ಕಲಾತ್ಮಕವಾಗಿ ಕಾರ್ಯಭಾರವನ್ನು ನಿರ್ವಹಿಸುವುದಕ್ಕೆ, ಇತರರ ಕಷ್ಟಸುಖಗಳಿಗೆ ಸ್ಪಂದಿಸುವುದಕ್ಕೆ, ವೈಯಕ್ತಿಕ ಮತ್ತು ಸಾಮುದಾಯಿಕ ಸ್ವಾತಂತ್ರ್ಯ ಘನತೆಗಳನ್ನು ಎತ್ತಿಹಿಡಿಯುವುದಕ್ಕೆ ಹೀಗೆ ಹತ್ತು ಹಲವು ಆಶಯಗಳ ಪ್ರತೀಕಗಳಾಗಿರುತ್ತವೆ. ಇಂದು ಕೆಲವು ಸ್ತ್ರೀಯರಾದರೂ ಮನೆ ಗಂಡ ಮಕ್ಕಳು ಎನ್ನುವ ಸೀಮಿತ ಚೌಕಟ್ಟನ್ನು ದಾಟುತ್ತಿದ್ದಾರೆ. ಜಗತ್ತಿನ ವೈಶಾಲ್ಯವನ್ನು ಅನುಭವಿಸಲು ತಮ್ಮನ್ನು ತೆರೆದುಕೊಳ್ಳುತ್ತಿದ್ದಾರೆ. ತಮ್ಮ ವೈಯಕ್ತಿಕ ಪ್ರತಿಭೆಯ ಫಲವನ್ನು ಸಮುದಾಯಕ್ಕೆ ಕಾಣಿಕೆಯಾಗಿ ಕೊಡಲು ಮುಂದಾಗುತ್ತಿದ್ದಾರೆ.

ಇಂತಹ ಪ್ರಯತ್ನಕ್ಕೆ ಲಂಕೇಶರ ಕಥೆಗಳು ತೊಡರುಗಾಲನ್ನಿಡುತ್ತವೆ ಎಂದೇ ಅನ್ನಿಸುತ್ತದೆ.

ಬಹುಪಾಲು ಕಥೆಗಳಲ್ಲಿ ಸ್ತ್ರೀಯರ ಪ್ರವೇಶ ಯಾವುದೇ ಸಂದರ್ಭದಲ್ಲಿ ಕಂಡುಬರಲಿ ಅವರ ಅಂಗಾಂಗದ ವರ್ಣನೆಗಳು ಬಹುಮುಖ್ಯ ಎನ್ನುವಂತೆ ಬರುತ್ತವೆ. ಆ ವರ್ಣನೆಗಳು ಗಂಡಿನ ದೃಷ್ಟಿಯಿಂದ ಕಾಮ ಪ್ರಚೋದನೆಯನ್ನುಂಟುಮಾಡುವ ವರ್ಣನೆಗಳೇ ಆಗಿರುತ್ತವೆ. ಸ್ತ್ರೀಯನ್ನು ಕುರಿತ ಗಂಡಿನ ಮೆಚ್ಚಿಕೆಯು ಅವಳನ್ನು ಭೋಗಿಸುವ ಉದ್ದೇಶ ಹೊಂದಿರುವಂತೆ ಬರುತ್ತದೆ. ಅವಳನ್ನು ಭೋಗಿಸುವುದಕ್ಕಾಗಿ ಗಂಡು ಯಾವ ಮಾರ್ಗವನ್ನಾದರೂ ಅನುಸರಿಸುತ್ತಾನೆ ಎನ್ನುವುದನ್ನು 'ಗುತ್ತಿಗೀತ ಆದದ್ದು', 'ಕೊನೆ', 'ಮಾರಲಾಗದ ನೆಲ' ಕಥೆಗಳು ವಿಶೇಷವಾಗಿ ಚಿತ್ರಿಸುತ್ತವೆ. 'ಕಲ್ಲು ಕರಗುವ ಸಮಯ'ದಲ್ಲೂ ಹೆಣ್ಣಿನ ವ್ಯಕ್ತಿತ್ವದ ಘನತೆಯನ್ನು ಪ್ರತಿಪಾದಿಸುವುದಕ್ಕೆ ಜಾಗ ಇಲ್ಲ. ಹೀಗೆ ಸ್ತ್ರೀಯನ್ನು ಭೋಗಿಸುವುದೂ ಸಹಜ ಎಂದು ಒಪ್ಪಿಕೊಂಡುಬಿಡುವಂತೆ, ಭೌತಿಕ ಸಮೃದ್ಧಿಗಾಗಿ ಅಥವಾ ಭೌತಿಕ ಸಮೃದ್ಧಿಯ ಪ್ರದರ್ಶನದ ಭಾಗವಾಗಿ ಸ್ತ್ರೀಯನ್ನು ಭೋಗಸಾಧನವನ್ನಾಗಿ ಬಳಸಿಕೊಂಡು ಬಿಡುವುದನ್ನೂ ಸುಮ್ಮನೆ ಒಪ್ಪಿಕೊಂಡು ಬಿಡುವ ಲೇಖಕ, 'ಕುರುಡು ಕಾಂಚಾಣ'ದಲ್ಲಿ, 'ನಮ್ಮ ನಡುವಿನ ಹುಡುಗ'ದಲ್ಲಿ, ಅಥವಾ 'ಅಸ್ವಸ್ಥರು' ಕಥೆಯಲ್ಲಿ, ಗಂಡು ವೈಚಾರಿಕ ನಿಲುವು ಎಂದುಕೊಂಡದ್ದಕ್ಕೆ ವಿರೋಧಿಯಾಗಿ ನಿಂತ ಹೆಣ್ಣನ್ನು ದೂಷಿಸುವಂತೆ, 'ಜೊತೆಗಾರ' ಕಥೆಯಲ್ಲಿ ಜೋಸೆಫೈನಳನ್ನು, 'ಮಾರಲಾಗದ ನೆಲ' ಕಥೆಯಲ್ಲಿ ಸಾವಂತ್ರಿಯನ್ನು ಆಸ್ತಿಯನ್ನು ಉಳಿಸಿಕೊಳ್ಳಲು ಸಾಧನವಾಗಿ ಮಾಡಿಕೊಳ್ಳುವ ಗಂಡನ್ನ ದೂಷಿಸುದಿರಲಿ ವಿರೋಧಿಸುವ ಧ್ವನಿಯನ್ನೂ ಎತ್ತುವುದಿಲ್ಲ. ಬದಲಿಗೆ ಆಸ್ತಿಯನ್ನು ಉಳಿಸಿಕೊಳ್ಳುವ, ಕಬಳಿಸುವ ಪ್ರಕ್ರಿಯೆಯನ್ನು ಒಂದು ರೀತಿಯಲ್ಲಿ ವಸ್ತುನಿಷ್ಠ ಎನ್ನುವಂತೆ ವರ್ಣಿಸುವುದು ಕಂಡುಬರುತ್ತದೆ. ಇನ್ನೊಬ್ಬ ತನ್ನ ಹೆಂಡತಿಯ ಮೇಲೂ ತಾಯಿಯ ಮೇಲೆ ಅಥವಾ ಅಕ್ಕನ ಮೇಲೋ ಕಣ್ಣು ಹಾಕಿದರೆ ಚಡಪಡಿಸಿ ಅಬ್ಬರಿಸುವ ಗಂಡು ತಾನೇ ಇನ್ನೊಬ್ಬಳ ಮೇಲೆ ಲೈಂಗಿಕ ದೃಷ್ಟಿ ಬೀರಿದರೆ ಅದಕ್ಕೆ ಸಮರ್ಥನೆ ಕೊಟ್ಟುಕೊಳ್ಳುವುದು ಕಂಡುಬರುತ್ತದೆ.

ಲಂಕೇಶರ ಕಥಾ ಪ್ರಪಂಚದಲ್ಲಿ ಗಂಡು ಹೆಣ್ಣಿನ ಕೂಡುವಿಕೆಯು ಸಮಸ್ಯೆಯನ್ನು ಎದುರಿಸಲಾರದವನು ಮೊರೆಹೋಗುವ ಒಂದು ಆಶ್ರಯತಾಣವೆಂಬಂತೆ ಚಿತ್ರಿತವಾಗಿ, ಗಮನಿಸಲು ಹೊರಟ ಸಮಸ್ಯೆಯು ಪೇಲವವಾಗಿ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತದೆ. 'ಸ್ಟೆಲ್ಲಾ ಎಂಬ ಹುಡುಗಿ' ಕಥೆಯಲ್ಲಿ ಸ್ಟೆಲ್ಲಾಳ ಸಮಸ್ಯೆಯು ಹಳ್ಳಿಯಲ್ಲಿದ್ದ ಅವಳ ಭೂಮಿಯನ್ನು ಮಾರಿ ಹಣ ಕೊಡಬೇಕೆಂದು ಒತ್ತಾಯಿಸುತ್ತಿರುವ ಗಂಡನನ್ನು ಹೇಗೆ ತಡೆಯುವುದು, ಮತ್ತು ಹಣಕೊಡದೆ ಗಂಡನನ್ನು ತನ್ನ ಸಂಸಾರ ಸಂಗಾತಿಯನ್ನಾಗಿ, ಜವಾಬ್ದಾರನಾದ ಪಾಲುದಾರನನ್ನಾಗಿ ಉಳಿಸಿಕೊಳ್ಳುವುದು ಹೇಗೆ ಎಂಬುದು. ಆದರೆ ಆ ಕಥೆಯು ಈ ಸಮಸ್ಯೆಯನ್ನು ಗಂಭೀರವಾಗಿ ಗಮನಿಸುವುದರ ಬದಲಿಗೆ ನರ್ಸ್ ಆಗಿರುವ ಅವಳ ದೈಹಿಕ ಸಾಹಚರ್ಯವನ್ನು ಬಯಸುವ ರೋಗಿ, ಪ್ರಿಯಕರ, ಗಂಡ ಇವರ ನಡಾವಳಿಯನ್ನು ಪ್ರಧಾನವಾಗಿಸುತ್ತದೆ. ವಾಸ್ತವ ಬದುಕಿನಲ್ಲಿ ಪ್ರತಿಯೊಬ್ಬರಿಗೂ ಅವರದೇ

ಆದ ಸಮಸ್ಯೆಗಳಿರುತ್ತವೆ. ಆ ಸಮಸ್ಯೆಗಳಿಗೆ ಸಾಧ್ಯತೆಯ ನೆಲೆಯಲ್ಲಿ ಬದುಕುವುದನ್ನೇ ಪರಿಹಾರವಾಗಿ ಕಂಡುಕೊಳ್ಳಬೇಕಾಗುತ್ತದೆ. ಭಾವುಕತೆಯಿಂದ ಅಥವಾ ಸಮಸ್ಯೆಗೆ ಬೆನ್ನುಹಾಕುವುದರಿಂದ ಬದುಕು ಸಿದ್ಧಿಸುವುದಿಲ್ಲ. ಇದನ್ನು, ಸ್ತ್ರೀಯರ ದೃಷ್ಟಿಯಿಂದಲಂತೂ ಅವರ ಪರವಾದ ಸಹಾನುಭೂತಿ ಇರುವ ಲೇಖಕ ಅತ್ಯಗತ್ಯವಾಗಿ ಪ್ರಸ್ತಾಪಿಸಬೇಕು. ಮದುವೆಯಾಗಬೇಕು, ಲೈಂಗಿಕ ಸುಖವನ್ನು ಅನುಭವಿಸಬೇಕು, ಗಂಡಿನ ಭದ್ರ ಕವಚದ ಒಳಗೆ ಸುರಕ್ಷಿತವಾಗಿ ಇರಬೇಕು ಎಂದು ಸ್ತ್ರೀಯರು ಕನಸು ಕಾಣುತ್ತಿರುವುದರಿಂದಾಗಿಯೇ ಅವರು ವೈಯಕ್ತಿಕವಾಗಿ ಸಶಕ್ತರಾಗಿ ರೂಪುಗೊಳ್ಳಲಾರದೇ ಹೋಗಿದ್ದಾರೆ. ಇದರಿಂದಾಗಿಯೇ ಅವರ ಕನಸನ್ನು ನನಸನ್ನಾಗಿಸದ ಪರಿಸ್ಥಿತಿಯಿಂದಾಗಿ ಹುಟ್ಟಿಕೊಂಡಿರುವ ವೇಶ್ಯಾಪದ್ಧತಿ, ದೇವದಾಸಿ ಪದ್ಧತಿ, ಹುಡುಗಿಯರ ಮಾರಾಟ, ಗಂಡನೊಂದಿಗಿನ ಸಹ ಜೀವನಕ್ಕಾಗಿ ತನ್ನದು ಎನ್ನುವುದನ್ನೆಲ್ಲ ಗೋರಿಯಲ್ಲಿ ಹೂತಿಡಬೇಕಾಗಿರುವುದೇ ಮೊದಲಾದ ಸಮಸ್ಯೆಗಳಿಂದ ಸ್ತ್ರೀಯರ ಬದುಕು ಜರ್ಝರಿತವಾಗಿದೆ. ಸ್ತ್ರೀಮುಕ್ತಿ ಸಂಘಟನೆಗಳು ಗುರುತಿಸುವಂತೆ ಸ್ತ್ರೀಯರ ಜೀವನದಲ್ಲಿ ವಿಶೇಷವಾಗಿ, ಮತ್ತು ಒಟ್ಟಾರೆ ಜನ ಜೀವನದಲ್ಲಿ ಸಾಮಾನ್ಯವಾಗಿ, ಕಂಡುಬರುವ ಸಮಸ್ಯೆಗಳಿಗೆ ಮುಖ್ಯಕಾರಣ ಗಂಡುಹೆಣ್ಣಿನ ನಡುವಿನ ಸಂಬಂಧದಲ್ಲಿ ಅಧಿಕಾರವು ಶ್ರೇಣ್ಯಾತ್ಮಕವಾಗಿ ಇರುವುದೇ ಆಗಿದೆ. ಲೈಂಗಿಕ ಸಾಹಚರ್ಯಕ್ಕೆ ಸಂಬಂಧಿಸಿದಂತೆ ಸ್ತ್ರೀ ದುರ್ಬಲ ಸ್ಥಾನದಲ್ಲಿದ್ದಾಳೆ. ಅವಳು ಲೈಂಗಿಕ ಸುಖವನ್ನು ಗಂಡನ್ನು ಅನುನಯಿಸಿ, ತನ್ನ ಅಂಗಾಂಗಳನ್ನು ಪ್ರದರ್ಶಿಸುವುದರ ಮೂಲಕ ಅವನನ್ನು ಆಕರ್ಷಿಸಿ ಅಥವಾ ತನ್ನ ಸೌಂದರ್ಯದಿಂದ ಅವನನ್ನು ವಶೀಕರಿಸಿಯೇ ಪಡೆಯಬೇಕು. ಗಂಡು ಕಚನಂತೆ ನಿರಾಕರಿಸಿದರೆ ಅವಳು ಬಲಾತ್ಕರಿಸಲಾರಳು. ಶಾಪಕೊಡುತ್ತೇನೆಂದೋ, ಗುಂಪಿನಲ್ಲಿ ಅಡ್ಡ ಕಟ್ಟಿ ಪ್ರಾಣಾಪಾಯ ಒಡ್ಡುತ್ತೇನೆಂದೋ ಹೆದರಿಸಿ ಅವನನ್ನು ಒಪ್ಪಿಸಲು ಪ್ರಯತ್ನಿಸಬಹುದು ಅಷ್ಟೆ. ಆದರೆ ಗಂಡಿಗೆ ಹೆಣ್ಣಿನ ಒಪ್ಪಿಗೆಬೇಕಾಗುವುದೇ ಇಲ್ಲ. ಇದೇ ಗಂಡಿನ ಸಾಧ್ಯತೆಗೆ, ಕ್ರೌರ್ಯಕ್ಕೆ, ಆಧಿಪತ್ಯಕ್ಕೆ ಕಾರಣವಾಗಿದೆ. ಸ್ತ್ರೀ ವೈಚಾರಿಕವಾಗಿ ದುರ್ಬಲ ಆಗಿದ್ದರೆ, ಗಂಡಿನ ಅತ್ಯಾಚಾರಕ್ಕೆ ತಲೆಬಾಗಿದ್ದರೆ ಅದಕ್ಕೆ ಇದೇ ಕಾರಣ. ಲೈಂಗಿಕ ಜೀವನಕ್ಕೆ ಸಂಬಂಧಿಸಿದಂತೆ ಏಕಮುಖವಾಗಿ ಕಟ್ಟುಪಾಡುಗಳು ಅವಳಿಗೆ ಮಾತ್ರ ಇರುವುದಕ್ಕೂ ಅದೇ ಕಾರಣ. ಇದನ್ನು ಗಂಡು ಅರ್ಥಮಾಡಿಕೊಳ್ಳಬೇಕಾಗಿದೆ. ಗಂಡು ಹೆಣ್ಣಿನ ಸಂಬಂಧ ಇಂದು ಸಮಾನ ನೆಲೆಯಲ್ಲಿ ಪರಸ್ಪರ ಭಾವಿಸಿ ರೂಪಿಸಿಕೊಳ್ಳಬೇಕಾದ್ದು ಆಗಿದೆ. ಈ ಸಂಬಂಧ ಕೇವಲ ಲೈಂಗಿಕವೂ ಅಲ್ಲ, ಸಂತಾನೋತ್ಪತ್ತಿಯ ಉದ್ದೇಶವನ್ನು ಮಾತ್ರ ಹೊಂದಿರುವಂತಹುದೂ ಅಲ್ಲ. ದೈಹಿಕ ಕೂಟಕ್ಕಿಂತ ಮನಸ್ಸುಗಳ ಮೇಳೈಸುವಿಕೆ ಮುಖ್ಯವಾದದ್ದು. ಇಬ್ಬರೂ ಕೈ ಕೈ ಕೂಡಿಸಿ ಕೌಟುಂಬಿಕ ಜೀವನವನ್ನು, ಅದರ ಜವಾಬ್ದಾರಿಯನ್ನು ಒಪ್ಪಿಕೊಂಡರೆ ಮಾತ್ರ ಸಮರಸ ಬದುಕು ಸಾಧ್ಯವಾಗುತ್ತದೆ.

ಆದರೆ ಲಂಕೇಶರ ಕಥೆಗಳು ಸಮರಸದ, ವೈಚಾರಿಕವಾದ ಮತ್ತು ಮಾನವೀಯ ಬದುಕಿಗೆ ಅಡ್ಡಿಯಾಗಿರುವುದು ಹೆಣ್ಣೇ ಎಂದು ದೊಡ್ಡ ದನಿಯಲ್ಲಿ ದೂಷಿಸುತ್ತವೆ. 'ಕುರುಡು ಕಾಂಚಾಣ' ಕಥೆಯಲ್ಲಿಯ ಕ್ಷೌರಿಕನಿಗೆ ತಾಯಿಯ ಮೃತ ಸಂಸ್ಕಾರಕ್ಕಾಗಿ ವಾಗ್ದಾನ ಮಾಡಿದ

೧೫ ರೂಪಾಯಿಗಳನ್ನು ಕೊಡದೇ ಹೋದರೆ ಅದಕ್ಕೆ ಹೆಂಡತಿ ಎತ್ತಿದ ತಕರಾರುಗಳೇ ಪ್ರಧಾನ ಕಾರಣ. ಪ್ರಾಣಾಪಾಯವನ್ನು ಲೆಕ್ಕಿಸದೆ 'ನಮ್ಮ ನಡುವಿನ ಹುಡುಗ' ಕಥೆಯಲ್ಲಿಯ ಆಳು, ಬಾಲಕ ಮುನಿಯ ಸೈಕಲ್ ಹೊಡಿತಾ ಇದ್ದುದಕ್ಕೆ, ಅವನು ಮನೆಗೆ ಹಿಂತಿರುಗದೇ ಇದ್ದುದಕ್ಕೆ, ಅವನನ್ನು ಹುಡುಕುತ್ತಾ ಊಟ ತಿಂಡಿ ಶ್ರಮ ಕಾರ್ಗತ್ತಲುಗಳ ಪರಿವೆಇಲ್ಲದೆ ಅಲೆದಾಡಬೇಕಾಗಿ ಬಂದುದಕ್ಕೆ , ಆ ಸಂದರ್ಭದಲ್ಲಿ ಕೆಟ್ಟುಹೋದ ಸ್ಕೂಟರನ್ನು ತಾನೇ ಮನೆಯವರೆಗೆ ತಳ್ಳಿಕೊಂಡು ತರಬೇಕಾಗಿ ಬಂದುದಕ್ಕೆ, ಹೆಂಡತಿ ಮುನಿಯನ ಬಗೆಗೆ ತಳೆದ ಧೋರಣೆಯೇ ಮುಖ್ಯ ಕಾರಣ ಎಂದು ವಿವರಿಸಲಾಗುತ್ತದೆ .'ಅಸ್ವಸ್ಥರು' ಕಥೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನ ಮಾಡಿ, ಜನರಿಂದ ಡಾಕ್ಟರ್‌ನಿಂದ ಅವಮರ್ಯಾದೆಗೆ ಗುರಿಯಾಗುವಂತೆ ಮಾಡಲು ಹೆಂಡತಿಯ ನಡೆವಳಿಕೆ ಮತ್ತು ಮಾತಿನ ರೀತಿಗಳೇ ಪ್ರಮುಖ ಕಾರಣ. ಹೀಗೆ ಹೆಣ್ಣನ್ನು ದೂಷಿಸುವ ಧ್ವನಿ ದೊಡ್ಡದಾಗಿ ಕೇಳಿ ಬರುತ್ತದೆ. ಹೆಂಡತಿಯ ಆಶೋತ್ತರಗಳನ್ನು ಗೋರಿಯಲ್ಲಿ ಹೂತು ತಾನೇತಾನಾಗಿ ವಿಜೃಂಭಿಸುವಾಗಲೂ ಹೆಂಡತಿಯ ಸಭ್ಯತೆ, ವಿಧೇಯತೆ, ಮೌನ ಸಹನೆಗಳೇ ಇಂಥ ಅಯೋಗ್ಯ ವಿಜೃಂಭಣೆಗೆ ಕಾರಣ ಎನ್ನುವ, ಒಂದು ರೀತಿಯ, ಆತ್ಮ ಸಮರ್ಥನೆಯ ಧ್ವನಿ ದೊಡ್ಡದಾಗಿ ಕೇಳಿಬರುತ್ತದೆ. ಇಂಥ ವಿಜೃಂಭಣೆ ತಪ್ಪು ಎಂಬ ಮಾತಾಗಲಿ, ತನ್ನಿಂದ ಹೆಂಡತಿಗೆ, ಹೆಣ್ಣಿಗೆ ಅನ್ಯಾಯವಾಯಿತು ಎಂಬ ಪಶ್ಚಾತ್ತಾಪವಾಗಲೀ, ಹೆಂಡತಿಯ ಬೌದ್ಧಿಕ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ತಾನು ನಿರ್ಮಿಸಿಲ್ಲ ಎಂಬ ಆತ್ಮ ಶೋಧನೆಯಾಗಲೀ ಲಂಕೇಶರ ಯಾವ ಕಥೆಯಲ್ಲೂ ಕಂಡುಬರುವುದಿಲ್ಲ. 'ದಾಹ', 'ಕೃತಜ್ಞತೆ' ಯಂತಹ ಒಂದೆರಡು ಕಥೆಗಳಲ್ಲಿ ತನ್ನಿಂದ ಅನ್ಯಾಯವಾಯಿತು ಎಂಬ ಪಾಪ ನಿವೇದನೆ ಇದ್ದರೂ ಅದೂ ಸಹ ಒಂದು ರೀತಿಯ ವೈಭವೀಕರಣವೇ ಆಗಿರುವುದು ಕಂಡು ಬರುತ್ತದೆ.

ಸ್ತ್ರೀಯ ಸಂಗ ಸುಖಬೇಕು, ಅವಳಿಗಾಗಿ ಮಿಡಿಯುವ ಹೃದಯವಂತಿಕೆಬೇಕು ಎಂಬುದು ಒಟ್ಟಾರೆ ಸಂಕಲನದಲ್ಲಿ ಸ್ಪಷ್ಟವಾಗಿದ್ದರೂ ಅವಳನ್ನು ಒಂದು ಸಾಧನದಂತೆ ಬಳಸಿಕೊಳ್ಳುವ ಅವಕಾಶ ಸಾಧ್ಯವಾಗದಂತೆ, ಅವಳನ್ನೂ ಎಚ್ಚರಿಸಬೇಕು. ಗಂಡನ್ನೂ ಎಚ್ಚರಿಸಬೇಕು ಎಂತೆನ್ನುವ ದಿಕ್ಕಿನಲ್ಲಿ ಆಗಬೇಕಾದ ಸಾಮಾಜಿಕ ಬದಲಾವಣೆಯ ಕಡೆಗೆ ಬೆರಳು ಮಾಡಿತೋರಿಸಬೇಕು ಎನ್ನುವುದು ಮಾತ್ರ ಲಂಕೇಶರ ಕಥೆಗಳಲ್ಲಿ ಸ್ಪಷ್ಟವಾಗಿ ಮೂಡಿಬಂದಿಲ್ಲ. ಕಥೆಯ ತುಂಬ ಭೋರ್ಗರೆಯುವ ಗಂಡಿನ ಅಬ್ಬರದ ಸದ್ದಿಲ್ಲದೆ, ಅವು ಯಾವ ವೈಚಾರಿಕ ನೆಲೆಗಟ್ಟಿನ ಪ್ರಸ್ತಾಪವೂ ಇಲ್ಲದೆ ಒಮ್ಮೆಗೇ ಸಂಪೂರ್ಣವಾಗಿ ತಣ್ಣಗಾಗಿ ಬಿಡುತ್ತದೆ. ಆದರೆ ಇವುಗಳಲ್ಲಿ ಹೆಣ್ಣಿನ ದೋಷಗಳನ್ನು ಎತ್ತಿಹಿಡಿಯುವ ಮಾತುಗಳು ಮಾತ್ರ ಎದ್ದು ಕಾಣುತ್ತಿರುತ್ತವೆ.

ನಮ್ಮ ಮುಖ್ಯ ದುರಂತವೆಂದರೆ ವ್ಯಕ್ತಿ, ಮುಖ್ಯವಾಗಿ ಗಂಡು, ತನಗೆ ಮತ್ತು ಸಮಾಜಕ್ಕೆ ಅನ್ವಯವಾಗುವ ಕಾನೂನನ್ನು ಪಾಲಿಸುವುದಕ್ಕಿಂತ ಉಲ್ಲಂಘಿಸುತ್ತಿರುವುದು ಮತ್ತು ತನ್ನ ಮೂಗಿನ ನೇರಕ್ಕೆ ಕಾನೂನನ್ನು ವ್ಯಾಖ್ಯಾನಿಸುವುದು ಆಗಿದೆ. ಪಾಪಪ್ರಜ್ಞೆ ಢಾಳಾಗಿ ಇರುವವರು ಮಾತ್ರ ತಮಗೆ ತಾವೇ ಕಾನೂನಿನ ಬದ್ಧತೆಯನ್ನು ತಮ್ಮ ಬದುಕಿಗೆ

ಕಲ್ಪಿಸಿಕೊಳ್ಳುತ್ತಾರೆ. ವಿಚಾರವಾದಿ ಲೇಖಕರೆಂದೆನಿಸಿಕೊಂಡವರಾದರೂ, ಗಂಡು ಮಾಡಿಕೊಳ್ಳುವ ಆತ್ಮಶೋಧನೆಯು ಕಾನೂನಿಗೆ ಬದ್ಧವಾದದ್ದು ಎನ್ನಬಹುದಾದಂಥ ಬದ್ಧತೆಯನ್ನು ತನಗೆ ತಾನೇ ಕಲ್ಪಿಸಿಕೊಳ್ಳುವುದರಲ್ಲಿ ಮುಕ್ತಾಯವಾಗುವ ಚಿತ್ರವನ್ನು ಸ್ಪಷ್ಟವಾಗಿ ಸಮುದಾಯದ ಮುಂದೆ ಇಟ್ಟರೆ ಮಾತ್ರ, ಸ್ತ್ರೀಯರ ಬಗೆಗೆ ತೋರಿಸುವ ಅತಿರೇಕದ, ಅತಿ - ಆಚಾರಗಳನ್ನು ತಡೆಯುವ ವಾತಾವರಣ ನಿರ್ಮಾಣಗೊಳ್ಳುತ್ತದೆ. ಬಹುಶಃ ಲಂಕೇಶರು ಮತ್ತೆ ಮತ್ತೆ ಪ್ರಸ್ತಾಪಿಸುವ ಮಾನವೀಯ ಬದುಕು ಆಗ ಎಲ್ಲರಿಗೂ ಸಾಧ್ಯವಾಗುತ್ತದೆ.

'ಉಲ್ಲಂಘನೆ' ಸಂಕಲನದಲ್ಲಿನ ಕತೆಗಳನ್ನು ಕತೆಗಳೆನ್ನುವುದಕ್ಕಿಂತ 'ಪ್ರಸಂಗ'ಗಳೆಂದು ಕರೆಯಬಹುದೇನೋ! ಲಂಕೇಶರ ಬರವಣಿಗೆಯ ಸ್ವರೂಪವನ್ನು ನಿರ್ದಿಷ್ಟ ಪ್ರಕಾರವೊಂದರಲ್ಲಿ ಶಿಸ್ತುಬದ್ಧವಾಗಿ ವಿಂಗಡಿಸಿ ಮಾತನಾಡುವುದು ಕಷ್ಟ. ಅವರ ಅನೇಕ ಟಿಪ್ಪಣಿಗಳು ಕತೆಗಳಾಗಿ, ವಿಮರ್ಶೆಗಳಾಗಿ, ಕವಿತೆಯಾಗಿ ರೂಪುಗೊಂಡು ಬಿಡುತ್ತವೆ. ಈ ಎಲ್ಲವನ್ನು ಒಂದು ಹದದಲ್ಲಿ ಹಿಡಿದಿಡುವ ಮೂಲಧಾತುವೆಂದರೆ ಅವರ 'ಮುಕ್ತತೆ' ಹಾಗೂ 'ಅದಮ್ಯ ಸೃಜನಶೀಲ ಶಕ್ತಿ'. ಲಂಕೇಶರ ವಸ್ತು ಪ್ರಪಂಚ-ನಮಗೆ ತೀರ ಪರಿಚಿತವಾದಂಥದು. ದಿನನಿತ್ಯದ ಬದುಕಿನಲ್ಲಿ ನಾವು ಮತ್ತೆ ಮತ್ತೆ ಮುಖಾಮುಖಿಯಾಗುವಂಥದು. ಆದರೆ ಅಂಥ 'ವಸ್ತು'ಗಳ ಮೂಲಕ ಲಂಕೇಶರು ಮೂಡಿಸುವ 'ದರ್ಶನ' ಮಾತ್ರ ಪ್ರತಿಭಾವಂತ ಕಲಾವಿದನಿಗೆ ಮಾತ್ರ ಸಾಧ್ಯವಾಗುವಂಥದು. ಸಾಮಾನ್ಯ ಲೇಖಕನ ಕೈಯಲ್ಲಿ ವರದಿಯಾಗಿಬಿಡಬಹುದಾದ ಈ ರೀತಿಯ ಬರವಣಿಗೆ ಮೇಲ್ನೋಟಕ್ಕೆ ಸರಳವೆನ್ನಿಸಿದರೂ, ಹೆಚ್ಚು ಸವಾಲನ್ನು ಒಡ್ಡುವಂಥದು. ವಸ್ತುವಿನ ಲಯ, ಜೀವ, ಹಿಡಿಯದೆ ಇಂಥ ಬರವಣಿಗೆ ಸಾಧ್ಯವಿಲ್ಲ. ಹೀಗಾಗಿ ಸೂಕ್ಷ್ಮ ಮನಸ್ಸಿನ ಮೆಚ್ಚುಗೆಯನ್ನು ಪಡೆಯುವ ಇಂಥ ಬರವಣಿಗೆ ಕೆಲವೊಮ್ಮೆ ನೀರಸವೆನ್ನಿಸಿ ಟೀಕೆಗೂ ಕಾರಣವಾಗಿಬಿಡಬಹುದು. ''ಈ ಕತೆಗಳು ವರದಿಯ ಧಾಟಿಯಲ್ಲಿ ತೊಡಗುತ್ತ ಒಂದು ರೀತಿಯ ವಿಶಿಷ್ಟವಾದ ನಿರ್ಲಿಪ್ತತೆಯನ್ನು ಪಡೆದುಕೊಳ್ಳುತ್ತವೆ. ಆದರೆ ನಿರ್ಲಿಪ್ತತೆಯನ್ನು ಪಡೆದುಕೊಳ್ಳುತ್ತಿರುವಾಗಲೇ ಅವರ ಹಿಂದಿನ ಕತೆಗಳಲ್ಲಿದ್ದ ವೈಯಕ್ತಿಕ ಕಳವಳದ ಮೂಲಕ ಬರುವ ಲಿರಿಕಲ್ ಗುಣವನ್ನು ಕಳೆದುಕೊಂಡುಬಿಡುತ್ತವೆ... ಕಲ್ಲುಕರಗುವ ಸಮಯದ ಕತೆಗಳು ಈ ಹಿನ್ನೆಲೆಯಲ್ಲಿ ನಮ್ಮಲ್ಲಿ ಅತೃಪ್ತಿಯನ್ನುಂಟುಮಾಡುತ್ತವೆ'' ಎಂಬಂಥ ಸರಳ ಅಭಿಪ್ರಾಯಗಳು ಹುಟ್ಟಿಕೊಳ್ಳುತ್ತವೆ. 'ತೀರ ವೈಯಕ್ತಿಕವಾಗುವುದು ಗೊತ್ತಿದ್ದರೆ ಮಾತ್ರ ಕಲೆಯಾಗಿ ಅದು ಸಾರ್ವಜನಿಕವಾಗುವ ಶಕ್ತಿ ಪಡೆಯುತ್ತದೆ' ಎಂದು ದೃಢವಾಗಿ ನಂಬುವ ಲಂಕೇಶರ ಬರವಣಿಗೆಯ ಮೂಲಗುಣವೇ ವೈಯಕ್ತಿಕ ಕಳಕಳಿಯ ಆಪ್ತ ಧಾಟಿ. ವಾಸ್ತವ, ಬೆಳದಿಂಗಳ ದಾಹ, ರುದ್ರಾಣಿಯ ಸುಪ್ತಕತೆ, ನನ್ನ ಅಣ್ಣನ ನೆನಪು ಇವೆಲ್ಲವೂ ನಮಗೆ ಇಷ್ಟವಾಗುವುದು ಇಂಥ ವೈಯಕ್ತಿಕ ಸ್ಪರ್ಶದ ಮೂಲಕವೇ.

- ಡಾ. ನರಹಳ್ಳಿ ಬಾಲಸುಬ್ರಮಣ್ಯ

(ಸಾಹಿತ್ಯ ಸಂಸ್ಕೃತಿ : ಉಲ್ಲಂಘನೆ ಮತ್ತು ಇತರ ಕತೆಗಳು)

ನೆನಪು ಕೆದರಿದ ಒಂದು ಭಾಷಣ*

○ ಪಿ.ಲಂಕೇಶ್

ಉಡುಪಿಯ ಕಲಾರಸಿಕರೆ, ಮಿತ್ರರೆ ಮತ್ತು ಮಹಿಳೆಯರೆ ಈ ಸಂದರ್ಭದಲ್ಲಿ ನಿಮ್ಮನ್ನ ನೋಡ್ದಾಗ ನನಗೆ ಬಹಳ ಸಂತೋಷದ ಸಂಗತಿ ಎಂದರೆ ನಮ್ಮ ಜೊತೆಗೆ ನಾನು ಏಳು ವರ್ಷದ ಹಿಂದೆ ನೋಡಿದ ಗಿರೀಶ್ ಕಾರ್ನಾಡ್ ಅವರಿದ್ದಾರೆ. ಗಿರೀಶ್ ಕಾರ್ನಾಡರೂ ನಮ್ಮೆಲ್ಲರ ಥರಾನೇ ಬಹಳ ದಿವಸ ತಪ್ಪಿಸ್ಕಂಡಿದಾರೆ ...ಕನ್ನಡದಲ್ಲಿ ನಾನು ಯಾವುದೇ ಪೂರ್ವಾಗ್ರಹ ಅಥವಾ ವ್ಯಾಮೋಹ ವಹಿಸದೆ ಹೇಳೋದಾದ್ರೆ...ತುಂಬಾ ಮಹತ್ವಾಕಾಂಕ್ಷೆಯಿಂದ ಬರೆದ ಒಂದೇ ಒಂದು ನಾಟ್ಕ 'ತುಘಲಕ್'. ಅವ್ರನ್ನ ಇವತ್ತು ಬೆಳಗ್ಗೆ ನೋಡ್ದಾಗ ನನಗೆ ಬಹಳ ಸಂತೋಷ ಆಯ್ತು. ಇಂಥಾ ಸಂಕಿರಣದಲ್ಲಿ ನಾವು ಸಮಕಾಲೀನ ನಾಟಕಗಳ ಕುರಿತು ಮಾತಾಡುವಾಗ, ರಂಗಭೂಮಿಯ ಬಗ್ಗೆ ಚರ್ಚೆ ಮಾಡೋವಾಗ ಕಾರ್ನಾಡ್ ಇಲ್ಲಿದ್ದುದು ಬಹಳ ಸಂತೋಷ ಆಯ್ತು. ಆದರೆ ಜೊತೆಗೇ ಕೆಲವು ಪ್ರಶ್ನೆಗಳು ಕೂಡ ನನ್ನ ಮನಸ್ಸಿಗೆ ಬಂದ್ವು ...ಯಾಕೆ ಈ ನನ್ನನ್ನು ಇದಕ್ಕೆ ಕರೆದ್ರು ಅಂತ. ಆಗ ನಮ್ಮ ಹುಡುಗ್ರು ಹೇಳಿದ್ರು 'ನೀವು ನಾಟ್ಕ ಬರ್ದಿದ್ರಲ್ಲ ಸರ್, ಅದ್ಕೇ ಇರ್ಬಹುದು'. ಆಗ ಯೋಚನೆ ಮಾಡಿದ್ರೆ ನನ್ನ ಮನಸ್ಸಿಗೆ ಬಂದದ್ದು ಎರಡೋ ಮೂರೋ ನಾಟ್ಕ. ನಾನು ನನ್ನ ನಾಟ್ಕಗಳನ್ನು ಓದೋಕೆ ಮತ್ತು ನೋಡೋಕೆ ಇಷ್ಟಪಡಲ್ಲ. 'ತೆರೆಗಳು' ಅಂತ ಚಿಕ್ಕ ನಾಟ್ಕ ಬರ್ದೆ. ಅದನ್ನ ಕೆಲವರು ಭಾಳ ಒಳ್ಳೇ ನಾಟ್ಕ ಅಂತ ಹೇಳಿದ್ರು... ಅದ್ರಲ್ಲಿ ನಾನು ಏನು ಬರ್ದೆ ಅಂತ ಯೋಚ್ನೆ ಮಾಡ್ದೆ. ಆ ನಾಟ್ಕದಲ್ಲಿ ಒಂದು ಕ್ರಿಯೆ ಇದೆಯೇ? ಯಾವ ತರಹದ ಕ್ರಿಯೆ? ನಾಟ್ಕ ಅಂದೊಡನೆ ಕ್ರಿಯೆ ಬೇಕು ಅಂತ ಹೇಳ್ತೀರ? ಬರೀ ಕ್ರಿಯೆಯಿಂದ ನಾಟ್ಕ ಆಗಲ್ಲ ಅಂತಾನೂ ಅನಸ್ಸುತ್ತೆ ನಿಮ್ಗೆ... ಒಬ್ಬ ಮನುಷ್ಯ ಇಲ್ಲಿಂದ ಅಲ್ಲಿಗೆ ಹೋದ ಅಲ್ಲಿಂದ ಇಲ್ಲಿಗೆ ಬಂದ ಅಂತ ನಾವು ನಾಟ್ಕ ಮಾಡಲ್ಲ. ಒಬ್ಬ ಮನುಷ್ಯ ಆಳದಲ್ಲಿ ಏನು ಯೋಚ್ನೆ ಮಾಡ್ದ - ಅದನ್ನ ನಾಟ್ಕ

ಮಾಡ್ತೇವೆ. ಆತನ ಒಳಗಿನ ಜೀವನ ನಾಟ್ಕವನ್ನು ಮಾಡತ್ತೆ. ಇಲ್ದೇ ಇದ್ರೆ ಎಲ್ರೂ ನಾಟಕಕಾರರಾಗ್ತಾ ಇದ್ರು...

ಆ ನಾಟ್ಕದಲ್ಲಿ ನಾನು ಏನನ್ನ ಬರ್ದೆ ಅಂತ ಯೋಚ್ನೆ ಮಾಡಿದ್ರೆ- ಒಬ್ಬ ಮನುಷ್ಯನ ಚಿತ್ತಶುದ್ಧಿಯಿಲ್ಲದೆ ಇದ್ದಾಗ ಅವನ ಕ್ರಿಯೆಗಳು ಒಂದು ಹಿಪೊಕ್ರೆಸಿಯ ಗೊಂದಲ ಸ್ಥಿತಿಯನ್ನು ತಲುಪಿ ಅವನ ಬಲಿಯಾಗುತ್ತೆ ...ಇನ್ನೊಂದು ನಾಟ್ಕ ನನಗೆ ನೆನಪಾಗ್ತಾ ಇರೋದು 'ಕ್ರಾಂತಿ ಬಂತು ಕ್ರಾಂತಿ' ಅಂತ...ನಮ್ಮಲ್ಲಿ ಬಹಳ ಸೇಲೇಬಲ್ ಕೊಮೊಡಿಟಿ, ಕ್ರಾಂತಿ... ನೀವು ಬಹಳ ಕ್ರಿಯಾಶಾಲಿಗಳಾಗಿ ಹಣ ಮಾಡದೇ ಇರಬಹುದು. ಬಹಳ ಕಷ್ಟಪಟ್ಟು ಕೆಲಸ ಮಾಡಿ ಹಣ ಮಾಡದೇ ಇರಬಹುದು. ಆದರೆ ನಮ್ಮ ಬುದ್ಧಿಜೀವಿಗಳು ಕ್ರಾಂತಿಯ ಬಗ್ಗೆ ಮಾತಾಡಿ ಬಹಳ ಸಂಪತ್ತನ್ನಗಳಿಸ್ತಾರೆ... ಈ ನಾಟಕದಲ್ಲಿ ಒಬ್ಬ ಬುದ್ಧಿಜೀವಿ ಸದಾ ತನ್ನ ವಿದ್ಯಾರ್ಥಿಗಳೆದುರು ಕ್ರಾಂತಿಯ ಬಗ್ಗೆ ಮಾತಾಡ್ತ ಅದರಿಂದ ತನ್ನ ವೃತ್ತಿಯಲ್ಲಿ ಅಭಿವೃದ್ಧಿಯನ್ನು ಸಾಧಿಸ್ತ ಕೊನೆಗೆ ಸಿಕ್ಕಿಹಾಕಿಕೊಂಡ ಪರಿಸ್ಥಿತಿ... ಮಾತಾಡ್ತ ಇರೋದು ಬಹಳ ಸುಲಭ, ಆದರೆ ಒಂದು ವಿಷಮ ಪರಿಸ್ಥಿತಿಯಲ್ಲಿ ನಿಮಗೆ ಏನಾಗತ್ತೆ ಅಂತ ...

...ಮೂರನೇ ನಾಟ್ಕ ನನಗೆ ನೆನಪಾಗ್ತಿರೋದು, 'ಸಂಕ್ರಾಂತಿ'. ಒಂದು ಬದಲಾಗುತ್ತಿರುವ ಸಮಾಜದಲ್ಲಿ transitional period ನಲ್ಲಿ ನಿಮ್ಮ ಧರ್ಮದ ಕಲ್ಪನೆ ಮತ್ತು ಪ್ರೇಮದ ಕಲ್ಪನೆ ಹ್ಯಾಗೆ - ಭಾವವೂ ಕೂಡ ಬದಲಾವಣೆಯನ್ನು ಪಡೀದೇ ಇದ್ರೆ ಒಂದು ದುರಂತಕ್ಕೆ ಎಡೆಮಾಡಿ ಕೊಡತ್ತೆ ಅಂತ . ಅದು ಬಸವಣ್ಣನ ಬಗ್ಗೆಯೂ ಅಲ್ಲ. ಬಿಜ್ಜಳನ ಬಗ್ಗೆಯೂ ಅಲ್ಲ. ನೀವು ಪ್ರೇಮ ಮಾಡುವುದು ಕೂಡ ನಿಮ್ಮ ಜಾತಿಯ ಅಹಂಕಾರದಿಂದ ಇರಬಹುದು, ಧರ್ಮದ ಅಹಂಕಾರದಿಂದ ಇರಬಹುದು. ನೀವು ಧರ್ಮವನ್ನು ಒಪ್ಪೋದು ಕೂಡಾ ಇನ್ನಾವುದೋ ಒಂದು ನೆಪದಲ್ಲಿ ಇರಬಹುದು ಎನ್ನುವಂಥಾ ಒಂದು ವಿಷಯವನ್ನು ನಾನು ಅಲ್ಲಿಡ್ತೇನೆ ...

ಈ ನಾಟಕಗಳ ಬಗ್ಗೆ ನಾನು ಯೋಚ್ನೆ ಮಾಡ್ದಾಗೆಲ್ಲ ಅನ್ಸಿದ್ದು -ನಮ್ಮ innerlife- ಒಳಜೀವನ ದೃಷ್ಟಿ... ಜೀವನದ ಬಗ್ಗೆ ತೀವ್ರವಾದ ಚಿಂತನೆ ಇಲ್ದೆ ಇದ್ರೆ ನಾಟಕಗಳೇ ಆಗ್ತಾ ಇರ್ಲಿಲ್ಲ. ಈಗ ಇದ್ದಕ್ಕಿದ್ದ ಹಾಗೆ ನಾನು ಈ ಕೆಲವು ನಾಟಕಗಳನ್ನು-ಅವನ್ನು ಒಳ್ಳೇ ನಾಟ್ಕ ಅಂತ ಹೇಳ್ಕೊಳ್ತಾ ಇಲ್ಲ... ನಾನು ರಂಗ ಭೂಮಿಗೆ ಅಮೂಲ್ಯವಾದ ಕಾಣಿಕೆ ಸಲ್ಲಿದೇನೆ ಅಂತ ಹೇಳ್ಕೊಳ್ತಾ ಇಲ್ಲ... ಅವು ಬಹಳ ಅರ್ಥಪೂರ್ಣವಾದ ಕೃತಿಗಳು ಎಂದೂ ಹೇಳ್ಕೊಳ್ತಾ ಇಲ್ಲ... ಯಾಕೆ ಬರೆದೆ ಅಂತ ಹೇಳಿದ್ರೆ, ನಾಟಕಗಳು ಸಾಧಾರಣವಾಗಿ ಹೊರಗಿನ ಘರ್ಷಣೆಯನ್ನು ಹೇಳಿದ್ರೂ ಕೂಡ ಒಳಗಿನ ಜೀವನವನ್ನು ಅವು ತೋರ್ಸದಿದ್ರೆ ಅವು ನಾಟ್ಕಗಳೇ ಆಗಲ್ಲ. ಹೀಗೆ ಇದ್ದಕ್ಕಿದ್ದ ಹಾಗೆ ನಾನು ಬರೆದವನು... ನಾಟ್ಕ ಬರೆಯೋದನ್ನೇ ಬಿಟ್ಬಿಟ್ಟೆ. ಅದಕ್ಕೆ ಹಲವಾರು ಕಾರಣಗಳಿದ್ವು.

ಈ ಮಧ್ಯೆ ನನ್ನ ಮೇಲೆ ಬಹಳ ಪ್ರಭಾವ ಬೀರಿದ ಕೃತಿ - ಕಾಮೂ ಬರೆದ 'ಪ್ಲೇಗ್'. ನಾವು ಮನುಷ್ಯರಾಗಿ ಯೋಚ್ನೆ ಮಾಡ್ತಿರ್ತೇವೆ... ಮನುಷ್ಯರಾಗಿ ಚಿಂತನೆ ಮಾಡ್ತಿರ್ತೇವೆ. ಆದರೆ ಯಾಕೆ ಜೀವನ ಮಾಡ್ತಿದೇವೇ? ನಮ್ಮ ದಿನನಿತ್ಯದ - ದಿನ ದಿನದ ಈ ಜೀವನದ ಅರ್ಥವೇನು

ಅಂತ ಒಂದ್ಸಲಾನೂ ಯೋಚ್ನೆ ಮಾಡಿರಲ್ಲ ....ಇಡೀ ಸಮಾಜಕ್ಕೆ ಪ್ಲೇಗ್ ಹೊಡೆದಿದ್ರೂ ಕೂಡ ಆ ಪ್ಲೇಗ್ ನಮಗೆ ಗೊತ್ತಿರಲ್ಲ! ಇಡೀ ಸಮಾಜಕ್ಕೆ ಒಂದು ರೋಗ ಬಡಿದಿದ್ರೆ ಕೂಡ ಆ ರೋಗ ಗೊತ್ತಿರಲ್ಲ ನಮಗೆ ...!

ಅಲ್ಜೀರಿಯಾದ ಒಂದು ಪಟ್ಟಣದಲ್ಲಿ ಪ್ಲೇಗ್ ಬಂದ್ಬಿಡತ್ತೆ. ಆಗ ಅಲ್ಲಿನ ಪುರೋಹಿತ-ಪ್ರೀಸ್ಟ್-ಒಂದು ಭಾಷಣ ಕೊಡ್ತಾನೆ (ನನಗೆ ನೆನಪಿರುವ ಎರಡು ಮೂರು ಘಟನೆಗಳನ್ನ ಹೇಳ್ತೀನೆ) 'ಎಲ್ಲಾ ಪಟ್ಟಣಗಳನ್ನೂ ಬಿಟ್ಟು ಈ ಪಟ್ಟಣಕ್ಕೆ ಯಾಕಪ್ಪಾ ಬಂತು ಪ್ಲೇಗು...? ಯಾಕೆಂದರೆ ನೀವೆಲ್ಲಾ ಪಾಪಿಗಳು. ನಿಮ್ಮ ಪಾಪಕ್ಕೆ ...ಸರಿಯಾಗಿ ಒಬ್ಬ ಡಾಕ್ಟ್ರು ಅಲ್ಲಿ ಇರ್ತಾನೆ. ಅವನು ಬನ್ನಿಸ್ವಾಮಿ ಅಂತ ಈ ಪ್ರೀಸ್ಟನ್ನ ಕರಕೊಂಡು ಹೋಗಿ ಒಂದು ಮೂರುವರ್ಷದ ಮಗೂನ ತೋರಿಸ್ತಾನೆ. ಆ ಮಗೂಗೆ ಪ್ಲೇಗ್ ಬಂದಿರತ್ತೆ. ಪ್ರೀಸ್ಟ್ ಆ ಮಗೂಗೆ ಆಶೀರ್ವಾದ ಮಾಡಿ ದೇವರಿಗೆ ಪೂಜೆ ಸಲ್ಲಿಸಿದರೆ ನಿನಗೆ ಗುಣವಾಗುತ್ತೆ ಅಂತ ಹೇಳ್ತಾನೆ... ಆದರೆ ಮಗು ಸತ್ತು ಹೋಗಿ ಬಿಡತ್ತೆ. ಮತ್ತೆ ಅಲ್ಲಿಗೆ ಹೋಗ್ಬಿಟ್ಟು ಪ್ರೀಸ್ಟ್ ಮಾತಾಡ್ತಾನೆ 'ನಾವೆಲ್ಲ ಪಾಪಿಗಳಾದ್ರಿಂದ ಈ ನಗರಕ್ಕೆ ಪ್ಲೇಗ್ ಬಂದಿದೆ. ಆದ್ರಿಂದ ಪ್ರಾರ್ಥನೆ ಸಲ್ಲಿಸೋಣ'. ಎರಡೇ ದಿನದಲ್ಲಿ ಪ್ರೀಸ್ಟ್‌ನಿಗೂ ಪ್ಲೇಗ್ ಬರತ್ತೆ...'ಡಾಕ್ಟರು ತನ್ನದೇ ರೀತಿಯಲ್ಲಿ ಸೇವೆ ಸಲ್ಲಿಸ್ತಾನೇ ಇರ್ತಾನೆ. ವೈದ್ಯಕೀಯದ ಯಾವ ಪ್ರಯತ್ನವೂ ಕೂಡ ಆತನನ್ನು ಉಳಿಸೋಕಾಗಲ್ಲ, 'ಇದು ನಮ್ಮ ಪಾಪವೋ ನಿಮ್ಮ ಪಾಪವೋ ಅಥವಾ ಯಾರ ಪಾಪ? ಮಗು ಏನು ಪಾಪ ಮಾಡಿತ್ತೇಂತ ಸಾಯ್ತು? ಈ ಪ್ರೀಸ್ಟ್ ಯಾವ ಪಾಪ ಮಾಡಿದ್ದಕ್ಕಾಗಿ ಸತ್ತ?'-ಎನ್ನುವ ಪ್ರಶ್ನೆ ಡಾಕ್ಟ್ರಿಗೆ ಕಾಣ್ಸತ್ತೆ. ಡಾಕ್ಟ್ರು ತಾನು ಸೇವೆ ಮಾಡ್ತೀನಂತಲ್ಲ, ಸಮಾಜಕ್ಕೆ ಬಹಳ ದೊಡ್ಡದಾದ ಏನೋ ಮಾಡ್ತೀನಂತ ಅಲ್ಲ, ತಾನು ದೇವರ ಆಣತಿಯನ್ನು ನಿರ್ವಹಿಸುತ್ತಿದ್ದೇನೆ ಅಂತಲ್ಲ, ಯಾವುದೇ ವ್ಯಾಮೋಹವಿಲ್ಲದೆ ಬಹಳ ವಿನಯದಿಂದ ಸಮಾಜಸೇವೆ ಮಾಡ್ತಾನೇ ಇರ್ತಾನೆ. ಈ ಸಮಾಜದಲ್ಲಿ ನಮಗೆ ಪ್ಲೇಗ್ ಬಂದಾಗ ಏನನ್ನಿಸ್ತು? ಯಾಕೆ ಬಂತು ಪ್ಲೇಗ್ ಈ ದೇಶಕ್ಕೆ...?-ಅನ್ನೋ ಪ್ರಶ್ನೇನ ಎಷ್ಟು ಜನ ಕೇಳ್ಕಂಡಿದೀರ?

ತುರ್ತು ಪರಿಸ್ಥಿತಿಯಲ್ಲಿ ನೀವು ಕೇಳ್ಕಂಡಿದೀರ ಇದು ಯಾವ ತರಹ ಪ್ಲೇಗ್ ಅಂತ? ಒಂದು ತುರ್ತುಪರಿಸ್ಥಿತಿ ನಿಮ್ಗೆ ಎಷ್ಟು ನಾಟಕಗಳನ್ನು ಎಷ್ಟು ಕಾವ್ಯಗಳನ್ನು ಬರೆಯೋದಕ್ಕೆ ಪ್ರೇರೇಪಿಸ್ತು? ತುರ್ತುಪರಿಸ್ಥಿತಿ ಇದ್ದಾಗ ಯಾರಿಗೂ ಬರೆಯೋಕೆ ಆಗ್ತಾ ಇರ್ಲಿಲ್ಲ. ಏಕೆ ಅಂತೇಳಿದ್ರೆ, ಈ ಪ್ಲೇಗಿನ ವಾತಾವರಣದಲ್ಲಿ ನಾವು ಏನು ಮಾಡ್ಬೇಕು ಅನ್ನೋದು ಗೊತ್ತಾಗ್ತಿರ್ಲಿಲ್ಲ. ನೀವು ಕೇಳ್ತೀರ, 'ನೀವು ನಾಟ್ಕ ಯಾಕೆ ಬರೀತಿಲ್ಲ?' ಅಂತ. ನಾಟ್ಕ ಯಾಕೆ ಬರೀಲಿಲ್ಲ ಅಂತ್ಹೇಳಿದ್ರೆ, ಜೀವನದಲ್ಲಿ ಪೂರ್ಣವಾಗಿ ತೊಡಗಿದ್ದಾಗ-ಜೀವನಕ್ಕೆ ಇಂಥ ಒಂದು ದೊಡ್ಡ ಜಾಡ್ಯ ತಗಲಿದಾಗ ಜೀವದಿಂದ ದೂರ ಹೋಗ್ತೀರೋ ಹತ್ರ ಬರ್ತೀರೋ? ಜೀವನದಲ್ಲಿ ನೀವು ನಾಟಕವನ್ನು ಬರೆಯಲು ಆಗುತ್ತೋ? ನಾಟಕ ಮಾಡ್ತೀವೋ? ಒಂದು ನಾಟಕ ಆಡುವ ಕ್ರಿಯೆಯೂ ನೀವು ಜೀವನಕ್ಕೆ ಮಾಡುವ ವಂಚನೆಯಾಗಿ ಕಂಡ್ರೆ...?

ನಾನು ಈಗ ಹೇಳ್ತಾ ಇರೋದು ನಿಮ್ಗೆ ಅರ್ಥವಾಗ್ತಾ ಇದೆಯೋ ಗೊತ್ತಿಲ್ಲ... ಈ ಪ್ಲೇಗಿನ ವಿಚಾರ ...ಏನು ಪ್ಲೇಗಪ್ಪಾ ಅಂತಂದರೆ ನಾನೊಂದಿವ್ಸ ಬೆಂಗಳೂರಿನಲ್ಲಿ ಒಂದು

ಹೋಟ್ಲಲ್ಲಿ ಊಟ ಮಾಡ್ತಾ ಕೂತಿದ್ದೆ. ಸಂಜೆ ಏಳೂವರೆಯಲ್ಲಿ ಸ್ನೇಹಿತರ ಜೊತೆಗೆ- ಸುಮಾರು ವರ್ಷದ ಹಿಂದೆ. ಆಗ ಒಂದು ಹುಡುಗಿ ಬಂದು 'ನಿಮ್ಹೆಸರು ಲಂಕೇಶ್ ಅಲ್ವ ಸರ್?'-'ಹೌದಮ್ಮ. ಸುಮ್ನೆ ನಿಂತಿದ್ದೀರಲ್ಲ, ಕೂತ್ಕಳ್ಳಿ' ಎಂದೆ. ಕೂತ್ಕಂಡು ಇನ್ನೂ ಕಾಫಿ ಕೂಡ ತಕ್ಕಂಡಿರ್ಲಿಲ್ಲ. ಅಷ್ಟೊತ್ತಿಗೆ ಒಬ್ಬ ಬಂದ್ಬಿಟ್ಟು ಚಾಕು ತೆಗೆದ್ಬಿಟ್ಟು 'ಏನೇ, ಯಾವನ ಜೊತೆಗೆ ಮಾತಾಡ್ತಿದ್ಯೇ, ಯಾವನಿವನು ಸೂಳೆ ಮಗ?' ಎಂದ. ಅವಳು ಎದ್ಬಿಟ್ಟು 'ಇವರು ಲಂಕೇಶ್ ಅಂತ, ಸಿನೆಮಾ ಡೈರೆಕ್ಟರು, ಅವ್ರ ಹತ್ರ ಸುಮ್ನೆ ಮಾತಾಡ್ದೆ'- ಅಂದಳು. ಅವನು ಎಷ್ಟು ಜೋರ್ಮಾಡ್ದ ಅಂತೇಳಿದ್ರೆ ಅವಳು ಅವನನ್ನು ಹಿಡ್ಕೊಳ್ಳೋಕೆ ಹೋಗಿ ಓಡಿ ಹೋದ್ಲು.... He was so angry with her,he chased her. ಅವಳು ಚೀರ್ತ ಹೋಗಿ ಬಿಟ್ಲು. ಇದು ಜಾಡ್ಯ ...ನೀವು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಕುಳಿತುಕೊಂಡು ಇನ್ನೊಬ್ಬರ ಹತ್ತಿರ ಮಾತಾಡದಂತಹ ಒಂದು ಜಾಡ್ಯ.

ನಮ್ಮ ಮನೆ ಹತ್ರ ಮಣಿ ಅಂತ ಒಬ್ರು ಒಂದು ಅಂಗಡಿಗೆ ಬಂದ್ಬಿಟ್ಟು ನೂರು ರುಪಾಯಿ ಕೇಳ್ದ. ಅಂಗಡಿಯವ ಕೊಡದ್ದಕ್ಕೆ ಆತ ಹೊಡೆದ. ಹೊಡೆತದಿಂದ ಅವನ ಮೂಗು ತುಂಡಾಯ್ತು. ಆಗ ನನಗನಿಸ್ತು ಇದನ್ನೆಲ್ಲ ಹೀಗೆ ಬಿಟ್ರೆ ನನ್ನ ಮಾನ, ನನ್ನ ಮಕ್ಕಳ ಮಾನ, ನನ್ನ ಸ್ನೇಹಿತರ ಮತ್ತು ನನ್ನ ಸಮಕಾಲೀನರ ಮಾನ ಇರೋದಕ್ಕೇ ಸಾಧ್ಯ ಇಲ್ಲ... ಈ ಸರ್ಕಾರ, ಈ ವ್ಯವಸ್ಥೆ, ಈ ಚಾಕು ಚೂರಿ ಸಂಸ್ಕೃತಿ -ಇವು ಹೀಗೇ ಮುಂದುವರಿದ್ರೆ ಇಲ್ಲಿ ಯಾರೂ ಇರೋದಕ್ಕೆ ಸಾಧ್ಯವೇ ಇಲ್ಲ. ಒಂದು ಸಲ ಮನುಷ್ಯನಿಗೆ ಆತ್ಮ ಗೌರವ ಹೋಯ್ತಂದ್ರೆ ತಾವು ಮನುಷ್ಯರು ಎಂಬ ಹೆಮ್ಮೆ ಹೋಯ್ತಂದ್ರೆ ಅವರು ಏನೇ ಬರೆದ್ರು ಅದ್ಕೆ ಆತ್ಮ ಕೂಡ ಇರೋಕೆ ಸಾಧ್ಯವಿಲ್ಲ. ಇಂತಹ ಒಂದು ಪರಿಸ್ಥಿತೀಲಿ ನಾನು ನನ್ನ ಪತ್ರಿಕೆಯನ್ನು ಶುರು ಮಾಡ್ಬೇಕಾಯ್ತು.

ಪತ್ರಿಕೆಯನ್ನು ಆರಂಭಿಸಿದ ಮೇಲೆ ಅದರದ್ದೇ ಆದ ಕಷ್ಟಗಳು ಅದರದ್ದೇ ಆದ ರೋಮಾಂಚನಗಳು ಎಲ್ಲ ಎದುರಾಯ್ತು. ಈಗ ನಾನು ಬೇಕಂತಲೇ ನಾಟಕಕಾರರ ಜೊತೆಗೆ ಮತ್ತು ಸಾಹಿತಿಗಳ ಜೊತೆಗೆ ಓಡಾಡೋಕೆ ಸುರುಮಾಡಿದ್ದೇನೆ. ನಾನು ನನ್ನ ಪದ್ಯವನ್ನಾಗಲೀ ನಾಟಕವನ್ನಾಗಲೀ ಬರೆಯೋದಕ್ಕೆ ಪ್ರಯತ್ನಮಾಡ್ತಿದ್ದಾಗ ಕೆಲವರು ಬಂದು ಹೇಳಿದ್ರು... 'ಸಾರ್, ನಾವೆಲ್ಲ ಸೇರಿ ಒಂದ್ ಕೆಲ್ಸ ಮಾಡೋಣ. ಈ ಮೂರು ನಾಲ್ಕು ವರ್ಷದಲ್ಲಿ ನಮ್ಮ ಜನತಾ ಸರಕಾರಕ್ಕೂ ಅದರ ಹಿಂದೆ ಇದ್ದ ಚಾಕು ಚೂರಿ ಸರಕಾರಕ್ಕೂ ಅಷ್ಟು ವ್ಯತ್ಯಾಸ ಉಳಿದಿಲ್ಲ. ಇನ್ನೊಂದು ಎರಡು ವರ್ಷದಲ್ಲಿ ಅವರನ್ನ ಮೀರಿಸಿ ಮತ್ತೆ ಚಾಕು ಚೂರಿಗಳು ಎಲ್ಲ ಕಡೆ ಬರ್ತಾವೆ. ಆದ್ರಿಂದ ಮೂರನೇ ಶಕ್ತಿಯೊಂದನ್ನು ರೂಪಿಸೋಣ. ಜನತಾವೂ ಅಲ್ಲ, ಕಾಂಗ್ರೆಸ್ಸೂ ಅಲ್ಲ, ಅಂಥಾ ಒಂದು ಶಕ್ತಿಯನ್ನು ರೂಪಿಸೋಣ. ನೀವು ಹಿಂದೆ ಇದ್ಬಿಟ್ಟು ಸ್ವಲ್ಪ ಕ್ರಿಯಾ ಶಾಲಿಗಳಾಗಿ ಉತ್ಸಾಹದಿಂದ ಸಪೋರ್ಟ್ ಮಾಡಿ - ಅಂತೇಳಿದ್ರು. ಅದಕ್ಕೆ ನಾನ್ಹೇಳ್ದೆ 'ನಿನಗೆ ಮೂರನೆಯ ಶಕ್ತಿಯ ಅರ್ಥ ಗೊತ್ತೇನಪ್ಪಾ? ಇದು ಸಂಪೂರ್ಣವಾಗಿ ಗುಣವಾಗದ ಜಾಡ್ಯ. ಪ್ಲೇಗ್ ಇನ್ನೂ ಇದೆ... ಈ ಪ್ಲೇಗ್ ಯಾವ ರೀತಿಯಲ್ಲಿ ನಮ್ಮಲ್ಲಿದೆ ಅಂತ ಹೇಳಿದ್ರೆ ಬಹಳ ಸಾಮಾನ್ಯವಾದ -general term ನಲ್ಲಿ ನಿಮಗೆ ಹೇಳೋದಾದ್ರೆ, ನೀವು ಎಲ್ಲಾದರೂ ಒಬ್ಬ ಮುಖ್ಯ ಮಂತ್ರಿಯಾದರೆ, ಮಂತ್ರಿಯಾದರೆ ನಿಮ್ಮನ್ನು ಹಾಳುಮಾಡುವಂಥ ಶಕ್ತಿಗಳು

ಯಾವ ತರಹ ಇವೆ ಅಂತಂದ್ರೆ...ಅವು ನಮ್ಮಲ್ಲೆಲ್ಲ ಇವೆ. ಒಂದು ಸಮಾಜವನ್ನು ಭ್ರಷ್ಟಗೊಳಿಸುವ ವ್ಯಕ್ತಿ ಯಾವ್ದಕ್ಕೆ ಹೋಗ್ತಾನ ಗೊತ್ತೇನು...? ಆತ ಮೊದಲು ನಿಮ್ಮ ಅಭಿರುಚಿಯನ್ನು ಭ್ರಷ್ಟಗೊಳಿಸುತ್ತಾನೆ. ನಿಮ್ಮ ಅಭಿರುಚಿಯನ್ನು ಕೆಡ್ಸಿದ ಕೂಡ್ಲೇನೇ ನಿಮಗೆ ಪ್ಲೇಗ್ ಅಥವಾ ಕಾಲರಾ ತಕ್ಷಣ ಅಂಟಕೊಳ್ಳತ್ತೆ. ಇದನ್ನೇ ಒಂದೆರಡು ಮಾತುಗಳಲ್ಲಿ ವಿವರಿಸಿ ಹೇಳ್ತೇನೆ ನಾನು...

ಎಲ್ಲೋ ಬಾಂಬೆಯಲ್ಲಿ ನೂರು ರುಪಾಯಿಗೊಂದು ಜೀನ್ಸ್ ಪ್ಯಾಂಟ್ ಸಿಗತ್ತೇಂತ... ಬಾಳ ಚೆನ್ನಾಗಿರತ್ತೆ ಅಂತ. ಅದು ಟಾರ್ಪಲ್ ಬಟ್ಟೆಯ ಜೀನ್ಸ್. ಆ ಜೀನ್ಸ್ ಬಗ್ಗೆ ಬಾಳ ಜನ ಬೆಂಗಳೂರ್ನಲ್ಲಿ ಮಾತಾಡೋಕೆ ಸುರುವಾದ ಕೂಡ್ಲೇನೇ ಇಲ್ಲಿ ನೂರೈವತ್ತಕ್ಕೆ ಮಾರಿದ್ರೂ ಪರವಾಗಿಲ್ಲ ಅಂದ್ಬಿಟ್ಟು, ಕಂಟೋನ್ಮೆಂಟನಲ್ಲಿ ಜೀನ್ಸ್ ಅಂಗಡಿ ತೆರೆಯೋಕೆ ಪ್ರಯತ್ನ ಪಡ್ತಾನೆ ಒಬ್ಬ. ನೀವು ಬೇರೆ ಬಟ್ಟೆಗಳು ಅಥವಾ ದವಸ ಧಾನ್ಯಗಳ ಅಂಗಡಿ ತೆರೆಬೋದಾದ್ರೆ, ಲಂಚಕೊಡೋಕೆ ಸಾಧ್ಯ... ಅಂತಂದರೆ ಎರಡು ಮೂರು ಸಾವಿರ. ಆದರೆ ನಿಮ್ಮದು ಜೀನ್ಸ್ ಅಂಗಡಿಯಾದ್ರಿಂದ, ನಿಮಗೆ ಅದು ಬೇಕೇ ಬೇಕಾಗಿರೋದ್ರಿಂದ ಬಾಂಬೆಯಲ್ಲಿ ಬಹಳ ಪ್ರಖ್ಯಾತಿಯಾಗಿರುವುದರಿಂದ ಎರಡು ಲಕ್ಷ ಕೂಡ ಲಂಚ ಕೊಡೋಕೆ ಸಾಧ್ಯ! ನಿಮ್ಮ ಅಭಿರುಚಿಯೇ ಹೊರಟು ಹೋಗಿರುವ ಈ ಸ್ಥಿತಿಯಲ್ಲಿ ಒಂದು ಬ್ರೇಸಿಯರ್‌ಗಾಗಿ ಒಂದು ಪೌಡರ್‌ಗಾಗಿ ಒಂದು ಜೀನ್ಸ್‌ಗಾಗಿ ಎಷ್ಟು ದುಡ್ಡನ್ನೂ ನೀವು ಖರ್ಚು ಮಾಡಲು ಸಿದ್ಧವಿರುವಂಥ ಸ್ಥಿತಿಯಲ್ಲಿ ನೀವು ಈ ವ್ಯವಸ್ಥೆಯ ಮಂತ್ರಿಯಾಗಿದ್ರೋ ಮುಖ್ಯಮಂತ್ರಿಯಾಗಿದ್ರೋ ಏನು ಮಾಡ್ತೀರ? ನಿಮ್ಮ ಕ್ರೇಜನ್ನ ನಿಮ್ಮ ಹುಚ್ಚನ್ನ ನಿಮ್ಮಲ್ಲಿ ಹುಟ್ಟು ಹಾಕ್ಬಿಟ್ರಲ್ವ ...ಆ ಹುಚ್ಚನ್ನ ವ್ಯವಸ್ಥೆಗೊಳಿಸಿ ಆ ಹುಚ್ಚಿನ ಮೂಲಕ ಇಡೀ ಸಮಾಜವನ್ನು ಭ್ರಷ್ಟಗೊಳಿಸುವಂತಹ ಒಂದು ವ್ಯವಸ್ಥೆಯಲ್ಲಿ ನೀವು ಮೂರನೇ ಶಕ್ತಿಯನ್ನು ತಂದು ಏನು ಮಾಡ್ತೀರ ...?

ಒಬ್ಬ ಮುಖ್ಯಮಂತ್ರಿ, ಇವತ್ತು ಬಾಳ ಪ್ರಾಮಾಣಿಕನಿದೀನಿ ಅಂತ ತಿಳ್ಕಂಡಿರ್ತಾನೆ. ಅವರ ಮನೆಯವ್ರೂ, ಕೂಡ ತಮ್ಮ ಗಂಡ ಬಾಳ ಪ್ರಾಮಾಣಿಕರು ಅಂತ ತಿಳ್ಕಂಡಿರ್ತಾರೆ. ಆದರೆ ಅವನ ಸ್ನೇಹಿತರು ಅವನಿಗೆ ಗೊತ್ತಿಲ್ದ ಹಾಗೇನೇ ಅವನನ್ನ ಕರಪ್ಟ್ ಮಾಡಿರ್ತಾರೆ. ಈ ವ್ಯವಸ್ಥೇಲಿ ನಾವು ಹ್ಯಾಗೆ ನಮ್ಮ ಮನಸ್ಸನ್ನು ಪರಿಶುದ್ಧವಾಗಿ ಇಟ್ಕೋಬೇಕು? ನಾವು ಹ್ಯಾಗೆ ಈ ಸಮಾಜದಲ್ಲಿ ಒಂದು ಪ್ರಜ್ಞೆಯನ್ನು ಬೆಳೆಸ್ಬೇಕು? ಆ ಪ್ರಜ್ಞೆ ಬೆಳೆಸಿ...ಹ್ಯಾಗೆ ನಾವು ಉತ್ತಮವಾದ ಕೃತಿಗಳನ್ನು ರಂಗದ ಮೇಲೆ ತರ್ಬೇಕು? ಇಂತಹ ಪ್ರಶ್ನೆಗಳಲ್ಲಿಯೂ ಒಂದು ಕಡೆ ಸರ್ಕಾರ ಇನ್ನೊಂದು ಕಡೆ ನಿಮ್ಮ ಅಭಿರುಚಿ ಮತ್ತು ಆತ್ಮ...ನಿಮ್ಮ ಅಭಿರುಚಿ ಮತ್ತು ಆತ್ಮ ಅಂತ ಹೇಳಿದ್ರೆ...ನಿಮ್ಮ ಕುಟುಂಬ- ಉದ್ಯೋಗ -ಎಲ್ಲ. ಇನ್ನೊಂದು ಕಡೆ ಸರ್ಕಾರ ಇರತ್ತೆ ...ಮಧ್ಯೆ ಮಾರ್ಕೆಟ್ ಪ್ಲೇಸ್ ಇರತ್ತೆ. ಈ ಮಾರ್ಕೆಟ್ ಪ್ಲೇಸ್‌ನಲ್ಲಿ ನೀವು ನಾಟ್ಕ ಆಡಿ ಅದನ್ನ ಸೇಲ್ ಮಾಡೋಕೆ ಪ್ರಯತ್ನ ಪಡ್ತೀರ ...ಒಂದು ಪದ್ಯವನ್ನು ಬರ್ದು ಅದನ್ನ ಓದ್ಸೋದಕ್ಕೆ ಪ್ರಯತ್ನ ಪಡ್ತೀರ ಅಥವಾ ಒಂದು ಒಳ್ಳೆ ಕೆಲ್ಸ ಮಾಡಿ ಅದನ್ನ ಕಮ್ಯುನಿಕೇಟ್ ಮಾಡೋಕೆ ಪ್ರಯತ್ನ ಪಡ್ತೀರ? ಇಂತಹ ಒಂದು ಸಮಾಜದಲ್ಲಿ ಬಹಳ ತೀವ್ರವಾಗಿ ತೊಡಗಿದ

ಮನುಷ್ಯನಿಗೆ ನಾಟ್ಕ - ಕವನ - ಕಾದಂಬರಿ - ಇವೆಲ್ಲ ಒಂದು ಸಾಮಾನ್ಯ ಅಂಗವಾಗಿ ಕಾಣೋಕೆ ಸುರುವಾಗ್ತವೆ.

ಅದಕ್ಕೇ ನಮ್ಮಂಥೋರಿಗೆ ಮತ್ತೆ ಮತ್ತೆ ಬರೆಯೋದಕ್ಕೆ ಕಷ್ಟವಾಗತ್ತೆ. ನಾಟ್ಕ ಬರೆಯೋದು ಕಷ್ಟ ಆಗತ್ತೆ. ಬ್ರೆಷ್ಟ್ ಅಂಥೋರು ಈ ಒಂದು ಪ್ರೇಗ್‌ನ ಸ್ಥಿತಿಯನ್ನೇ ಸಮಾಜಕ್ಕಂಟಿರುವ ಒಂದು ಜಾಡ್ಯವನ್ನೇ- ಈ ಭ್ರಷ್ಟತೆಯನ್ನೇ ಅರಗಿಸಿಕೊಂಡು ನಾಟಕ ಬರೀತಾ ಇದ್ರು. ನಮ್ಮ ಚೇತನ - ನನ್ನ ಚೇತನ - ಅಷ್ಟು ದೊಡ್ಡ ಚೇತನ ಅಲ್ವೋ ಏನೋ... ಅದಕ್ಕೇ ಏನೋ ನನಗೆ ಈ ಸಮಾಜಕ್ಕೆ ಏನಾದ್ರೂ ಕಲಿಸೋದಕ್ಕೆ - ಹೊಸ್ದನ್ನ ಹೇಳೋದಕ್ಕೆ ಪ್ರಯತ್ನ ಪಡ್ತಾ ಇದ್ದಾಗ್ಲೇನೇ ಹೊಸ್ದನ್ನ ಸೃಷ್ಟಿ ಮಾಡೋಕೆ ಬಹಳ ಕಷ್ಟವಾಗ್ತಾ ಇದೆ.

ಈ ಕಾಲದಲ್ಲಿ , ಈ ಸಂಧಿ ಕಾಲದಲ್ಲಿ , ಪರ್ವ ಕಾಲದಲ್ಲಿ ನಾವು ಇಲ್ಲಿ ಸೇರಿದೇವೆ. ನಾನು ಹೀಗೆ ಮಾತಾಡಿದೆ ಅಂತ ಥಿಯೇಟರ್‌ಗೆ - ರಂಗಭೂಮಿಗೆ ವಿರುದ್ಧವಾಗಿ ಇರೋ ಮನುಷ್ಯ ಅಂತಾಗಲೀ, ಇವ್ರಿಗೆ ಇಷ್ಟವಿಲ್ಲದಿದ್ದರೂ ಕರ್ಕಂಬಂದು ಮಾತಾಡ್ಸಿದ್ವಿ ಅಂತಾಗಲೀ ದಯವಿಟ್ಟು ತಿಳ್ಕೋ ಬೇಡಿ. ಒಂದು ಕಾಲದಲ್ಲಿ ರಂಗಭೂಮಿಯಲ್ಲಿ ಬಹಳ ಸಂತೋಷ ಪಟ್ಟ ಮನುಷ್ಯ ನಾನು. ಇದೇ ಗಿರೀಶ್ ಇದ್ರು, ಬಿ. ವಿ. ಕಾರಂತರಿದ್ರು... ನಾವು ಮೂರು ನಾಟಕಗಳನ್ನು ಒಂದು ಹಬ್ಬದ ರೀತಿಯಲ್ಲಿ ಆಚರಿಸಿದೆವು ಬಯಲು ರಂಗಭೂಮಿಯಲ್ಲಿ. ಆ ಹಬ್ಬ ಇವತ್ತಿನವರೆಗೂ ಒಂದು ನೆನಪಾಗಿಯೇ ಬಹಳ ಸಂತೋಷ ಕೊಡ್ತಾ ಇದೆಯೋ ಅಥವಾ ಹಬ್ಬಾನೇ ಸಂತೋಷ ಕೊಡ್ತಾ ಇದೆಯೋ ಗೊತ್ತಿಲ್ಲ... ಮನುಷ್ಯರೆಲ್ಲ ವಿಚಿತ್ರರು. remembered are more beautyful... Anyway, ನಾವು ಆವಾಗ ಸಂತೋಷದಿಂದ ಸಂಭ್ರಮದಿಂದ ನಾಟಕ ಆಡಿದ್ವಿ... ನಾಟಕ ಎಲ್ಲರನ್ನೂ ಹತ್ರ ತರುವಷ್ಟು ಬೇರೆ ಯಾವ್ದೂ ತರಲ್ಲ. ಬಹಳ ಹತ್ರ ತಂತು ನಮ್ಮನ್ನ. ಆದ್ರೆ ಈ ಹತ್ರ ತಂದದ್ದು ಅದೇ ರೀತಿಯಲ್ಲಿ ಮುಂದುವರೀಲಿಲ್ಲ.... ಗಿರೀಶರು ಮುಂಬೈಯಲ್ಲಿ ಪ್ರೊ. ಹಿಗ್ಗಿನ್ಸ್ ಪಾತ್ರವನ್ನು ಮಾಡುವುದು ನೋಡಿ ನಗೆ ಬರತ್ತೆ. ಏಕಂದ್ರೆ ಅವರ ಬಗ್ಗೆ ನನಗೆ ಬಹಳ ಅಭಿಮಾನ. ನಟನಾಗಿ ಅಲ್ಲ... ಲೇಖಕನಾಗಿ. ಗಿರೀಶ್ ಬಹಳ ಒಳ್ಳೇ ಲೇಖಕರು. ಅವರ ನಟನೆ ನೋಡಿದಾಗೆಲ್ಲ ಇವರು ಏನೋ ಜೀವನದ ಪಾಡಿಗೆ ಮಾಡ್ತಾ ಇರೋದೇನೋ ಅನ್ಸತ್ತೆ ನಂಗೆ.

ಆಮೇಲೆ ನನ್ನನ್ನು ನೋಡಿ ಅವರು ಹೇಳ್ಬಹುದು... "ಸರಿಯಪ್ಪಾ... ನೀನು ಕೂಡಾ ಒಬ್ಬ ಲೇಖಕ. ಸಂಪಾದಕ ಅಲ್ಲ. ನೀನ್ಯಾಕೆ ಪತ್ರಿಕೆ ಮಾಡ್ತೀಯ?" - ಅಂತ ಹೇಳ್ಬಹುದು. ನನ್ನ ಪ್ರಶ್ನೆ ಏನಂತಂದ್ರೆ, ನಾವೆಲ್ಲ ಯಾಕೆ ವಿವಿಧ ರೀತಿಯ ಜೀವನವನ್ನ ಹುಡಿಕ್ಕಂಡ್ ಹೊರಟ್ಹೋದ್ವಿ?... ಬಿ. ವಿ. ಕಾರಂತ್ರಿಗೆ ಎಂದೋ ಹೇಳಿದ್ದೆ ನಾನು - ಮಧ್ಯಪ್ರದೇಶಕ್ಕೆ ಯಾಕೆ ಹೋಗ್ತೀರಪ್ಪಾ?... ಇಲ್ಲಿ ನಮ್ಮ ದೇಶದ ಮಧ್ಯದ ಅನುಭವವನ್ನು ನೋಡು... ಕರ್ನಾಟಕದ ಮಧ್ಯದ ಅನುಭವವನ್ನು ನೋಡು - ಅಂತ. ಬಾಳ ಸಲ ಹೇಳಿದೆ. ಆದ್ರೆ, ಕಾರಂತ್ರು ಹೋದ್ರು.. ಅಲ್ಲಿ ನೀವು ಎಷ್ಟೇ ಮಾಡಿದ್ರೂ ಕೂಡ ಅದು ನಿಮ್ಮ ಕರ್ನಾಟಕ ಆಗಿರಲ್ಲ.... ಅದು ಭಾರತ

ಆಗಿರತ್ತೆ ಅಷ್ಟೆ. ಒಬ್ಬ ಅಂತರಾಷ್ಟ್ರೀಯ ಮನುಷ್ಯನಾಗೋದು ಸುಲಭ. ಅಥವ ರಾಷ್ಟ್ರೀಯ ಮನುಷ್ಯನಾಗೋದು ಸುಲಭ. ಅದಕ್ಕಿಂತ ಮುಂಚೆ ಇಲ್ಲೇ ಇದ್ದು ಕೆಲವು ಕೆಲಸಗಳನ್ನ ಮಾಡಿದ್ರೆ ಚೆನ್ನಾಗಿರುತ್ತೆ....Anyway ನನ್ನ ಜನಾಂಗದ ಅನೇಕ ಲೇಖಕರು ತಮ್ಮ ತಮ್ಮ ಉದ್ಯೋಗಗಳನ್ನು ಹವ್ಯಾಸಗಳನ್ನು ಹುಡಿಕ್ಕಂಡು ದೂರ ದೂರ ಹೋಗಿದ್ದಾರೆ. ಅದರಿಂದಾಗಿ ರಂಗಭೂಮಿ ಒಂದು ದೃಷ್ಟಿಯಿಂದ ಬಚಾವಾಯ್ತೆಂತ ಕಾಣಿಸುತ್ತೆ. ಇಷ್ಟೊತ್ತಿಗೆ ಏನೇನು ಬರೆದ್ಬಿಟ್ಟು ಜನರ ಪ್ರಾಣ ತಿಂತಿದ್ರೋ...ಅದರ ಜೊತೆಗೇ ರಂಗಭೂಮಿಗೆ ಆಗಬೇಕಾದ್ದು ಆಗಲಿಲ್ಲ ಅಂತ ಕಾಣ್ಸತ್ತೆ. ನೀವು ಒಂದು ನೋಡ್ತಿರ್ಬಹುದು...ಕಾವ್ಯ ಬರೆಯುವಲ್ಲಿ ಕ್ಯಾಸೆಟ್ಟುಗಳು...ನಾಟಕ ಆಡುವಲ್ಲಿ - ಅನಗತ್ಯವಾಗಿ ಕೂಡ ಹಾಡುಗಳು ಮತ್ತು ಆದಷ್ಟು ಮಟ್ಟಿಗೆ ಜನರನ್ನು ತಲುಪುವುದಕ್ಕಾಗಿ ವಿಚಿತ್ರವಾದ ತಂತ್ರ, ಕುತಂತ್ರಗಳು - ಇವೆಲ್ಲ ರಂಗಭೂಮಿಯಲ್ಲಿ ಬಹಳ ಆಗಿವೆ.

ನಾವೀಗ ಮತ್ತೊಮ್ಮೆ ಗಂಭೀರ ಆಗ್ಬೇಕಾಗಿದೆ. 'ಪ್ಲೇಗ್' ಕಾದಂಬರಿಯ ಡಾಕ್ಟರಂತೆ ಗಂಭೀರ ಆಗ್ಬೇಕಾಗಿದೆ. ಎಷ್ಟು ಗಂಭೀರ ಆಗ್ಬೇಕಂದ್ರೆ, ನಮಗೆ ತಂತ್ರ ಎಷ್ಟು ಬೇಕೋ ಅಷ್ಟು [illegible]. ಅನುಭವವನ್ನು ಹೇಳೋದಕ್ಕೆ ಸಹಾಯ ಮಾಡೋವಷ್ಟು. ನಿಜವಾಗಿಯೂ ಸಂಕೀರ್ಣವಾದ, ಸಮರ್ಥವಾದ, ತೀವ್ರವಾಗಿ ಹೇಳಬೇಕಾದ ಅನುಭವಗಳನ್ನು ಹೇಳೋದಕ್ಕೆ ಆಗೋವಷ್ಟು. ರಂಗಭೂಮಿ ಅಂತ ಹೇಳಿದ್ರೆ - ಮಹಾರಾಜರನ್ನು ರಂಜಿಸುವ ರಂಗಭೂಮಿಯಾಗಿದ್ದಲ್ಲಿ ಕಾಳಿದಾಸನ ನಾಟಕಗಳು - ಭಾಸನ ನಾಟಕಗಳು ಇವನ್ನೆಲ್ಲ ಆಡಿದ್ರೆ, ಇವತ್ತು ಯಾರೂ ನೋಡ್ತಿರಲಿಲ್ಲ..

ನಮ್ಮ ಅನುಭವಗಳೆಲ್ಲವೂ ಪಶ್ಚಿಮದಿಂದ ಬಂದಂಥವುಗಳು. ಎಲ್ಲಾ ಕಡೆ ರೂಪಾಂತರಗಳು...ಕಥೆಯನ್ನು ನಾಟಕ ಮಾಡಿರುವುದು, ಪಶ್ಚಿಮದ ನಾಟಕಗಳನ್ನು ವಿಚಿತ್ರ ವಿಚಿತ್ರ ರೀತಿಯಲ್ಲಿ ಬದಲಾಯಿಸಿ ಭಾಷಾಂತರಿಸಿ ಆಡುವುದು ಜಾಸ್ತಿಯಾಗಿದೆ. ಇವು ಯಾಕೆ ಜಾಸ್ತಿಯಾಗಿವೆ ಅಂತ ಹೇಳಿದ್ರೆ, ನಮ್ಮ ಕ್ರಿಯಾಶಾಲಿತ್ವ ಕಡಿಮೆಯಾಗಿದೆಯೋ ಏನೋ. ಅದಕ್ಕೇ ನಾವಿವತ್ತು ಸಮಕಾಲೀನ ಪ್ರಜ್ಞೆಯಲ್ಲಿ ನಮಗೆ ನಿಜವಾಗಿ ಏನನ್ನಿಸುತ್ತದೋ - ಈ ದೇಶಕ್ಕೆ ಯಾವ ಜಾಡ್ಯ ಅಂಟಿದೆಯೋ ಆ ಜಾಡ್ಯ ಗುಣವಾಗದಿದ್ದರೂ ಕೂಡ - ಗುಣವಾಗದ ಗುಣವನ್ನು ಕೂಡ ಹೇಳುವ ಒಂದು ತಾಕತ್ತು, ಒಂದು ಧೈರ್ಯ, ಘನತೆ ನಮ್ಮಲ್ಲಿ ಮೂಡಬೇಕಾಗಿದೆ ...ಈ ವಿಚಾರ ಸಂಕಿರಣ ಅಂತಹ ಒಂದು ಸ್ಥೈರ್ಯವನ್ನು - ಗ್ರಹಿಕೆಯನ್ನು ಆರಂಭಿಸುವಂತೆ ಆಗ್ಬೇಕು. ನಮ್ಮ ಚರ್ಚೆಯಿಂದ ನಿಜವಾಗಿಯೂ ಆಳವಾದ ಅರ್ಥಪೂರ್ಣವಾದ ಅನುಭವಗಳು ಹೊರಹೊಮ್ಮಬೇಕು. ನಾನು ನಾಟಕ ಯಾಕೆ ನೋಡೋಕೆ ಹೋಗಲ್ಲ ಗೊತ್ತೇನು? ಯಾಕಂದ್ರೆ, ನಾಟ್ಕ ನೋಡ್ತಾ ಇದ್ರೆ, ಬರೀಬೇಕು ಅನ್ನಿಬಿಡತ್ತೆ. ಬರೆದ್ಬಿಟ್ಟು ಅದನ್ನು ಆಡೋದಕ್ಕಾಗಿ ಎಲ್ಲರು ಪ್ರಯತ್ನಿಸಿ ಬಿಟ್ಟು - ಅದು ಕೆಟ್ಟದಾಗಿದ್ರೆ, ಅವಮಾನ ಆಗತ್ತೆ, ಚೆನ್ನಾಗಿದ್ರೆ ಒಂದು ದುರಹಂಕಾರ ಬರತ್ತೆ. ಎರಡೂ ಬೇಡ ಅಂತ ಹೇಳ್ಬಿಟ್ಟು ನಾಟ್ಕ ನೋಡೋಕೇ ಹೋಗಲ್ಲ ನಾನು...

ಈ ಸಂಕಿರಣದಿಂದ ಕೆಲವರಿಗಾದ್ರೂ, ನಾಟ್ಕ ಬರೆಯುವಂತಹ ಒಂದು ಆಸೆ....

ಸಾಹಿತ್ಯ ಸಂವಾದ :೫೯-೫೫

ಬೋದಿಲೇರನ ಸಖ/ ೧೩೫

ಆಡುವಂತಹ ಉತ್ಸಾಹ...ಬರ್ಬೇಕು.ಈ ಸಂಕಿರಣದಿಂದ ಗಿರೀಶರು ಇನ್ನೂ ಹೆಚ್ಚಿನ ನಾಟಕಗಳನ್ನು ಬರೆಯುವುದಿದ್ದರೆ ಬರೆಯದಂತಾಗಲಿ...ಹುಡುಗ್ರು-ನೀವು ಬರೀಬೇಕು. ನೀವು ಎಷ್ಟು ಬರೀಬೇಕು ಅಂತ ಹೇಳಿದ್ರೆ ನನಗೆ ಹೊಟ್ಟೆ ಕಿಚ್ಚು ಆಗ್ಬೇಕು...ಹೊಟ್ಟೆ ಕಿಚ್ಚು ಒಂದು ಸ್ಫೂರ್ತಿ...ಇವತ್ತಿನ ಚರ್ಚೆಯಲ್ಲಿ ನಾಟಕದ ಮಿತಿ ಸೀಮಿತ ಅರ್ಥ,ಮಹತ್ವ ಎಲ್ಲರಿಗೂ ಗೊತ್ತಾಗುವಂತಾಗಲಿ.

ಸಾಹಿತ್ಯ ನಿಂತ ನೀರಲ್ಲ.ಬದುಕಿನ ಪರಿವರ್ತನೆಯ ಒಂದು ಭಾಗ.ಡಾ|| ಬಿ.ಆರ್.ಅಂಬೇಡ್ಕರ್ ತಮ್ಮ ಅಸಹಾಯಕ ಜನತೆಗೆ ನಾಲಗೆಯಾದಾಗ ಅವರು ಕೇವಲ ರಾಜಕೀಯ ವಿಷಯ ಮಾತಾಡಲಿಲ್ಲ;ಅವರು ಸಾಹಿತ್ಯದ ಮೂಲಗಳ ಬಗ್ಗೆ,ಸಂಸ್ಕೃತಿಯ ಬಗ್ಗೆ ಮಾತಾಡಿದರು;ಅಂದರೆ ಒಂದು ಜನತೆಯ ಘನತೆ,ಆತ್ಮ ಗೌರವ ಹೇಗೆ ರಾಜಕೀಯ ಶಕ್ತಿ,ಸಾಂಸ್ಕೃತಿಕ ಪಾಲುಗಾರಿಕೆಯೊಂದಿಗೆ ಬೆಸೆದುಕೊಂಡಿದೆ ಎಂದು ತೋರಿಸಿದರು.
ಒಂದು ಜನತೆಯ ಪೂರ್ಣ ಸಾಕ್ಷರತೆ ಮತ್ತು ಆತ್ಮಗೌರವದ ಸಂಬಂಧಗಳನ್ನು ನೋಡಿದೊಡನೆ ಮತ್ತೆ ಇಲ್ಲಿಯ ವ್ಯವಸ್ಥೆಯ ದೋಷಗಳು ಚರ್ಚೆಯನ್ನು ಪ್ರವೇಶಿಸುತ್ತವೆ. ಶಿಕ್ಷಣಕ್ಕೆ ಮತ್ತು ಅಭ್ಯಾಸಕ್ಕೆ ಬೇಕಾದ ವಿದ್ಯಾಲಯ ಮತ್ತು ಶಿಕ್ಷಣದ ಪರಿಕರಗಳು ಇವತ್ತಿನ ಮುಖ್ಯ ಕೊರತೆ;ಒಂದು ಉಪಯುಕ್ತ ಕನ್ನಡ ನಿಘಂಟನ್ನು ಪೂರ್ಣಗೊಳಿಸಲಾರದ,ಒಂದು ವಿಶ್ವಕೋಶ ರೂಪಿಸಲಾಗದ ವ್ಯವಸ್ಥೆ ನಮ್ಮದು;ಹಾಗೆಯೇ ಕಾಗದದ ಕಾರ್ಖಾನೆಯನ್ನು ಪಡೆದಿದ್ದೂ ಮಕ್ಕಳಿಗೆ ಸುಲಭ ಬೆಲೆಯಲ್ಲಿ ಕಾಗದ ಪುಸ್ತಕ ಒದಗಿಸಲಾರದ ಭ್ರಷ್ಟ ವ್ಯವಸ್ಥೆ. ಒಂದು ಅನಕ್ಷರಸ್ತ ದಲಿತ ಕುಟುಂಬ,ಹಿಂದುಳಿದವರ ಕುಟುಂಬ ಈ ವಲಯಗಳಲ್ಲಿ ಅನುಭವಿಸುವ ದಿಗ್ಭ್ರಮೆ ಅವರಿಗೆ ಮಾತ್ರ ಗೊತ್ತಾಗುವಂತಹದು.ಮೀಸಲಾತಿ ವಿರೋಧಿಸುವ,ಇವರ ಕಷ್ಟಗಳನ್ನು ಅರ್ಥಮಾಡಿಕೊಳ್ಳದ ಜನರಿಂದಲೇ ಈ ಬಗೆಯ ದಿಗ್ಭ್ರಮೆ ಹುಟ್ಟಿದೆ ಮತ್ತು ಈ ಜನರಿಂದಲೇ ಇವತ್ತು ಏನನ್ನೂ ಮಾಡಲಾರದ ಸ್ಥಿತಿಯನ್ನು ಸರ್ಕಾರಗಳು ತಲುಪಪಿವೆ.ಸರ್ಕಾರ,ಸಾಂಸ್ಕೃತಿಕ ವ್ಯವಸ್ಥೆ ನೇರಗೊಳ್ಳದೆ ಇಲ್ಲಿ ಅಸಹಾಯಕರಿಗೆ ನೆಮ್ಮದಿ, ಕನ್ನಡದ ಸಂಪೂರ್ಣ ವಿಕಾಸ ಕಷ್ಟ ಸಾಧ್ಯ.
ನಾನು ''ಅವರಿಗೆ ಮಾತ್ರ ಗೊತ್ತಾಗುವ ದಿಗ್ಭ್ರಮೆ'' ಎಂದು ಹೇಳಿದೆ;ಅವರಿಗೆ ಮಾತ್ರ ದಕ್ಕಬಲ್ಲ ಅನುಭವಗಳು ಇವತ್ತು ಕನ್ನಡ ಸಾಹಿತ್ಯದಲ್ಲಿ ಹೊಸ ಬುಗ್ಗೆಗಳಂತೆ ಉಕ್ಕ ಬೇಕಾಗಿದೆ; ಕನ್ನಡ ನುಡಿಯನ್ನು ಶ್ರೀಮಂತಗೊಳಿಸಬೇಕಾಗಿದೆ.ದಲಿತನ ಅನುಭವ,ಕಮ್ಮಾರನ, ಮೇದಾರನ,ಕುಂಬಾರನ,ಕ್ಷೌರಿಕನ,ಅಗಸನ ಸುಪ್ತ ಮತ್ತು ಪ್ರಜ್ಞಾ ಜಗತ್ತು ತೆರೆದು ಕೊಳ್ಳಬೇಕಾಗಿದೆ....ಎಲ್ಲಿಯವರೆಗೆ ಇಲ್ಲಿ ಕೇಂದ್ರೀಕೃತ,ಭ್ರಷ್ಟ,ಗೊಂದಲಮಯ ಆಡಳಿತ ಇರುತ್ತದೋ ಅಲ್ಲಿಯವರೆಗೆ ಇಲ್ಲಿ ಔಪಚಾರಿಕ ಶಿಕ್ಷಣ,ನೆಪಮಾತ್ರದ ನೆರವು ಇರುತ್ತವೆ. ಇದರೊಂದಿಗೆ ಇಲ್ಲಿ ಜಾತೀಯತೆ,ನೀಚತನ ಬೆಳೆಯುತ್ತಲೇ ಹೋಗುತ್ತವೆ.

- ಲಂಕೇಶ್

(ಟೀಕೆ ಟಿಪ್ಪಣಿ : ಜಾಗೃತ ಸಾಹಿತ್ಯ ಸಮಾವೇಶದ ಉದ್ಘಾಟನಾ ಭಾಷಣ)

'' ....ನೀವು ಮತ್ತೆ ಕತೆ, ಕಾದಂಬರಿ, ಕವನಕ್ಕೆ ಬರಬೇಕು. ನೀವು ನಮ್ಮ ಸಾಹಿತಿಯಾಗುವ ಅವಕಾಶ ಕಳೆದುಕೊಳ್ಳಬಾರದು. ನಿಮ್ಮ ಸಾಹಿತ್ಯ ಪ್ರಿಯರಾದ ನಾವೆಲ್ಲ ಕಾಯುತ್ತಿದ್ದೇವೆ...'' ಎಂದು ... ಅವರು ಹೇಳಿದರು.

ನಾನು ದೊಡ್ಡದಾಗಿ ನಕ್ಕು ಹೇಳಿದೆ, ''ನಾನು ಸ್ವಲ್ಪ ನನ್ನ ಮನೋಗತಿಯ ಬಗ್ಗೆ ಹೇಳಿಕೊಂಡರೆ ಕ್ಷಮಿಸುತ್ತೀರಲ್ಲವಾ? ಬರೆಯುವ ಊಹೆ ಕೂಡ ಇಲ್ಲದೆ ಎಲ್ಲೋ ಕುಗ್ರಾಮದಲ್ಲಿ ಹುಟ್ಟಿದ ನಾನು ನನ್ನ ಬದುಕನ್ನು ನಡೆಸುವುದಕ್ಕಾಗಿ ಕೆಲಸ ಮಾಡುತ್ತಲೇ ಇದ್ದೇನೆ. ಸಾಹಿತ್ಯ ಸೇವೆ, ಕಲಾ ಸೇವೆ, ಶಿಕ್ಷಣ ಸೇವೆ ಎಂದು ಸೇವೆಯ ಮಾತಾಡದೆ ಬದುಕುವುದಕ್ಕಾಗಿಯೇ ಕೆಲಸ ಮಾಡುತ್ತಿದ್ದೇನೆ ಎನ್ನಲು ನನಗೆ ಇಷ್ಟ ಮತ್ತು ಹೀಗೆ ಹೇಳುವುದೇ ಹೆಚ್ಚು ಪ್ರಾಮಾಣಿಕ. ನನಗೆ ನನ್ನ ಕೆಲಸಗಳಿಂದ ಎಂದೂ ಬಿಡುವು ಸಿಕ್ಕಲಿಲ್ಲ. ಆದ್ದರಿಂದ ಕೆಲಸಗಳಲ್ಲಿ ಹೆಚ್ಚು ಹೆಚ್ಚು ಕ್ರಿಯಾಶಾಲಿಯಾಗುವುದೇ ನಾನು ನನ್ನನ್ನು ಬೆಳೆಸಿಕೊಳ್ಳುವ ಮಾರ್ಗವಾಯಿತು. ಒಮ್ಮೆ ಗಿರೀಶ್, ಅನಂತಮೂರ್ತಿ ಇಂಥವರಿಗೆ ಭಾಭಾ ಫೌಂಡೇಶನ್ ವೇತನ ಸಿಕ್ಕು ಅವರಿಗೆ ಎರಡು ವರ್ಷ ರಜ, ಕೈತುಂಬ ಹಣ, ತಮಗಿಷ್ಟಬಂದ ಕೆಲಸ ಮಾಡಲು ಅವಕಾಶ ಸಿಕ್ಕಿತು. ನಾನು ಅರ್ಜಿ ಹಾಕಿದರೆ ಅದಕ್ಕೆ ಸರಿಯಾದ ಉತ್ತರ ಕೂಡ ದೊರೆಯಲಿಲ್ಲ. ನಾನು ಸಿನಿಮಾ ಮಾಡುತ್ತೇನೆಂದರೆ ಯಾರೂ ಹಣ ಹೂಡಲು ಮುಂದೆ ಬರಲಿಲ್ಲ. ನಾನೇ ಮಾಡಬೇಕಾಯಿತು. ಕಷ್ಟಕೋಟಲೆಗಳ ಜೊತೆಗೆ... ಈಗ ಪತ್ರಿಕೆ ನಡೆಸುತ್ತಿದ್ದೇನೆ. ನನ್ನನ್ನು ನಂಬಿದ ಜನರೊಂದಿಗೆ, ಅವರ ಸಂಕಷ್ಟಗಳು, ಆತ್ಮ ಗೌರವ, ಇಷ್ಟ ಅನಿಷ್ಟಗಳ ಜೊತೆಗೆ ತೊಡಗಿ ಹೋಗುತ್ತಿರುವ ನಾನು ಬರೆಯುತ್ತಿರುವುದು ಕಲೆಯೋ ಕಲೆಯಲ್ಲವೋ ಎಂಬುದನ್ನು ನಾನು ಚಿಂತಿಸುವುದಿಲ್ಲ. ನನ್ನ ಲೇಖನಿ ಅವರನ್ನು ನಿರಾಕರಿಸುತ್ತದೆ ...''.

ಹೀಗೆಂದು ಹೇಳಿ ಮತ್ತೊಮ್ಮೆ ನನ್ನ ತೋಟದಲ್ಲಿ ಅಡ್ಡಾಡಿದೆ ಗಾಳಿ, ಮಳೆಯಾಗಿ ಬೀಳಲಿರುವ ಕಾರ್ಮೋಡಗಳು, ಪಶ್ಚಿಮಕ್ಕೆ ವಾಲುತ್ತಿದ್ದ ಸೂರ್ಯ ನನಗೆ ಸಂಜೆಯ ಸಭೆಯ ಬಗ್ಗೆ ಎಚ್ಚರಿಸ ತೊಡಗಿದ್ದವು. ನನ್ನ ಗುಲಾಬಿಗಳು ಅರಳಿವೆ. ಸಾಕು ಎಂದುಕೊಂಡೆ. ಮನಸ್ಸು ದುಗುಡಗೊಳ್ಳ ತೊಡಗಿತು. ಸಾಹಿತ್ಯದ ಜನರನ್ನು, ಕುತೂಹಲಕ್ಕಾದರೂ ಅಲ್ಲಿಗೆ ಬರುವ ನನ್ನ ಮಿತ್ರರು ಮತ್ತು ನನಗಾಗದವರನ್ನು ಸುಮ್ಮನೆ ಕಾಯಿಸುವುದು ಸಣ್ಣತನ ಅನ್ನಿಸಿತು. ಆದರೆ ನನ್ನ ಪತ್ರಕರ್ತ ಮನಸ್ಸು ವಾದಿಸುತ್ತಲೇ ಇತ್ತು. ನನಗೆ ಇಷ್ಟವಾದದ್ದು ಮಾಡುವುದೇ ನನ್ನ ಜೀವನದ ದಾರಿಯಾಗಿದೆಯಲ್ಲವೆ? ಕೆಲವೇ ಸಾಮಾನ್ಯ ಪದ್ಯ ಬರೆದು ತನ್ನ ಕಾಲದ ಬಗ್ಗೆ ಆಳವಾಗಿ ಚಿಂತಿಸಿ ಮಾತಾಡಿದ ವರ್ಡ್ಸ್‌ವರ್ತ್ ಆತನಿಗಿಂತ ಚೆನ್ನಾಗಿ, ವ್ಯಕ್ತಿಲೇಖಕರಾಗಿ ಬರೆದ ಕೀಟ್ಸ್, ಶೆಲ್ಲಿಗಿಂತ ಮುಖ್ಯ ಲೇಖಕನಲ್ಲವೆ? ಬೇಂದ್ರೆಯಷ್ಟು ಚೆನ್ನಾಗಿ ಕವನ ಬರೆಯದಿದ್ದರೂ ತಮ್ಮ ವೈಚಾರಿಕತೆ, ವಿಮರ್ಶೆ, ಒಟ್ಟಾರೆ ಸ್ಪಷ್ಟತೆಯಿಂದಾಗಿ ಕುವೆಂಪು ಬೇಂದ್ರೆಗಿಂತ ಮುಖ್ಯ ಲೇಖಕರಲ್ಲವೆ? ತಾನು ಒಳ್ಳೆಯ ಕಾದಂಬರಿಕಾರನೆಂದು ಬೀಗುತ್ತಿದ್ದ ಜಾರ್ಜ್ ಆರ್ವೆಲ್‌ನ ವರದಿಗಳೂ, ಅಂಕಣಗಳೂ ಇವತ್ತು ಆತನ ಕಾಲದ ಉತ್ತಮ ಸಾಹಿತ್ಯಕ್ಕಿಂತ ಹೆಚ್ಚು ಅರ್ಥಪೂರ್ಣವಲ್ಲವೆ?

- ಲಂಕೇಶ್

(ಟೀಕೆ ಟಿಪ್ಪಣಿ : ಒಡಲ ಕಳವಳ ತಾಳಲಾರದೆ ಕಾಡಿಗೆ ...)

ಸಾಹಿತ್ಯ ಸಂವಾದ : ೫೪-೫೫

ಹೊಸ ಓದು

ಅನುಭಾವಿಗಳ ಕ್ರಾಂತಿ
ಅನುವಾದ : ಟಿ. ಆರ್. ಚಂದ್ರಶೇಖರ
(ಮೂಲ : ಜೆ. ಪಿ. ಶೌಟನ್ ಅವರ **ರೆವಲೂಶನ್ ಆಫ್ ದ ಮಿಸ್ಟಿಕ್ಸ್**)
ಪ್ರ : ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ, ಗದಗ.

"ಬಸವ ಮಾರ್ಗ : ಏಳು ಬೀಳುಗಳ ವರದಿ"

೧೯೧೪ರಲ್ಲಿ ಪ್ರಸಿದ್ಧ ಇಂಡಾಲಜಿಸ್ಟ್ ಫರಕುಹರ 'ಲಿಂಗಾಯತ' ಭಾರತದಲ್ಲಿ 'ಕುತೂಹಲಕಾರಿ' ಜಾತಿ, ಆದರೆ ಇದನ್ನು ಕುರಿತ ಮಾಹಿತಿ ಕಡಿಮೆ ಎಂದು ಅಂದಿದ್ದರಂತೆ. ಇತ್ತೀಚೆಗೆ ಈ ಜಾತಿಯ ಬಗ್ಗೆ ವಿಪುಲ-ವಿಫಲ ಸಾಹಿತ್ಯ ಸೃಷ್ಟಿಯಾಗುತ್ತಿದೆ. ಕಾವ್ಯ ಹಾಗೂ ಧಾರ್ಮಿಕ ಸಾಹಿತ್ಯದ ಪ್ರಕಾರವಾಗಿ 'ವಚನ' ಹಲವು ತೆರನಾದ ನಿರ್ವಚನದ ಅವಕಾಶ ಪಡೆದುಕೊಂಡಿದೆ. ಇವುಗಳನ್ನು ಸುಪ್ರಭಾತದ ಪಾತಳಿಗೂ ತಳ್ಳಲಾಗಿದೆ. ವಚನಗಳ ವಸ್ತುನಿಷ್ಠ ವಿಶ್ಲೇಷಣೆ ಹಾಗೂ ಅವು ಒಳಗೊಂಡ ಜನಪರ ಮೌಲ್ಯಗಳ ವಿವರಣೆ ಕಡಿಮೆ ಎಂದೇ ಹೇಳಬಹುದು. ಬಂಡಾಯ ಮತ ವಚನಗಳನ್ನು ಭಿನ್ನ ದೃಷ್ಟಿಯಿಂದ ಅವಲೋಕಿಸುವ ಯತ್ನ ಮಾಡಿತು. ಆದರೆ ಬಂಡಾಯ ಸಾಹಿತಿಗಳು ವಚನಗಳನ್ನು ನಿರ್ವಚಿಸುವಾಗ ಇದು 'ಕೊನೆಯ ಸತ್ಯ' ಎಂದು ಹೇಳಿ ಅವುಗಳಿಗೆ ಕೆಂಪು ಮಸಿ 'ಶರಾ' ಬರೆದು ಬಿಟ್ಟರು. ವಚನ ರಚನೆಯ ಕಾಲ ಬಹುಮುಖ ಪ್ರಭಾವಕ್ಕೆ ಒಳಗಾಗಿತ್ತು. ಆ ಪ್ರಭಾವ ಪರಿಣಾಮಗಳನ್ನು 'ಅನುಭಾವಿಗಳ ಕ್ರಾಂತಿ' ಎಂಬ ಪುಸ್ತಕದಲ್ಲಿ ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

'Revolution of Mystics' ನೆದರಲ್ಯಾಂಡಿನ ಡಾ. ಶೌಟನ್‌ರ ಪ್ರಬಂಧ. ಇದನ್ನು 'ಅನುಭಾವಿಗಳ ಕ್ರಾಂತಿ' ಎಂಬ ಹೆಸರಿನಲ್ಲಿ ಡಾ. ಟಿ. ಆರ್. ಚಂದ್ರಶೇಖರ ಕನ್ನಡಕ್ಕೆ ಅನುವಾದಿಸಿದ್ದಾರೆ. ಗದುಗಿನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ವೀರಶೈವ ಅಧ್ಯಯನ ಸಂಸ್ಥೆ ಪ್ರಕಟಿಸಿದೆ. ಪ್ರಬಂಧ ಹಾಗೂ ಅನುವಾದ ಹೇಗೆ ಇರಬೇಕು ಎಂಬುದಕ್ಕೆ ಈ ಪುಸ್ತಕ ಉತ್ತಮ ನಿದರ್ಶನವಾಗಬಲ್ಲದು. ಮೂಲ ಕೃತಿಗೆ ಸಿದ್ಧಾಂತಗಳ ಭಾರ ಇಲ್ಲ. ಅನುವಾದಕ್ಕೆ ಅರ್ಥವಾಗದ ಪಾರಭಾಷಿಕ ಪದಗಳ ಹೊದಿಕೆ ಇಲ್ಲ. ಆಸ್ಥಾನ ಪಂಡಿತರ ಜಯ ಘೋಷಗಳನ್ನು ಮಾತ್ರ ಪ್ರಕಟಿಸುವ ಮಠಗಳು ಇಂತಹ ಪ್ರಕಾಶನ - ಪ್ರಕಟಣೆಗಳಿಂದ ಪ್ರೇರಣೆ ಪಡೆಯಬೇಕಾಗಿದೆ.

ಭಕ್ತಿ ಚಳುವಳಿಗೆ ಭಾರತದಲ್ಲಿ ಪ್ರಾಚೀನ ಇತಿಹಾಸ ಇದೆ. ಮಧ್ಯಯುಗದ 'ಭಕ್ತಿ' ವ್ಯಕ್ತಿಯ ವೈಯಕ್ತಿಕ ಸಾಧನೆಗೆ ಸೀಮಿತವಾದರೆ, ಹನ್ನೆರಡನೆ ಶತಮಾನದ ಭಕ್ತಿ ಸಾಮೂಹಿಕ ಚಳುವಳಿಯ ಸ್ವರೂಪ ಪಡೆದು ಪ್ರಧಾನ ಸಂಸ್ಕೃತಿಗೆ ಪರ್ಯಾಯ ಮಾರ್ಗ ಹುಟ್ಟುಹಾಕಿತು.

ಮನುಷ್ಯನ ತುಡಿತಗಳು ಕಾವ್ಯವಾಗಿ, ಅನುಭಾವವು ಅಧ್ಯಾತ್ಮವಾಗಿ, ಸಾಮಾಜಿಕ ಸಂದರ್ಭಕ್ಕೆ ಪ್ರತ್ಯುತ್ತರ ಹೇಳಿದ ನಿದರ್ಶನ ಇಲ್ಲಿದೆ. ಸಾಹಿತ್ಯ ಹಾಗೂ ಸಾಮಾಜಿಕ ಸಂದರ್ಭ ಇಲ್ಲಿ ಮುಖಾಮುಖಿಯಾಗಿವೆ.

ಹನ್ನೆರಡನೆ ಶತಮಾನದ ಜಾತಿ , ಕಾಯಕ, ಮಹಿಳೆ ಹಾಗೂ ಶಿಕ್ಷಣ ಇವು ವಚನ ನಿರ್ಮಾಣ ಕಾಲದಿಂದ ಆರಂಭಗೊಂಡು ಸ್ವಾತಂತ್ರ್ಯೋತ್ತರ ಕಾಲದವರೆಗೆ ಕಂಡ ಏಳುಬೀಳುಗಳ ವರದಿ ಇದಾಗಿದೆ. ಪ್ರತಿ ಅಧ್ಯಾಯ ಹನ್ನೆರಡನೆ ಶತಮಾನ, ಶೂನ್ಯಸಂಪಾದನೆಕಾಲ, ವಸಾಹತು ಕಾಲ ಹಾಗೂ ಸ್ವಾತಂತ್ರ್ಯೋತ್ತರ ಕಾಲ ಎಂದು ವಿಂಗಡನೆಗೊಂಡು, ಹನ್ನೆರಡನೆ ಶತಮಾನದ ಮೂಲ ಜೀವಸೆಲೆ ರೂಪಾಂತರ ಪಡೆದ ರೀತಿಯನ್ನು ವಿವರಿಸಲಾಗಿದೆ. ಪ್ರತಿ ಹಂತಕ್ಕೆ ಲೇಖಕರು ಟಿಪ್ಪಣಿ ಬರೆಯುತ್ತ ಅದರ ಮೌಲ್ಯಮಾಪನ ಮಾಡಿದ್ದಾರೆ .

ಸಾಮಾಜಿಕ ಚಲನೆಯನ್ನು ನಿರಾಕರಿಸಿದ ವರ್ಣ ವ್ಯವಸ್ಥೆಗೆ ಹನ್ನೆರಡನೆ ಶತಮಾನದ ಚಿಂತನೆ ಕೊಟ್ಟ ಪೆಟ್ಟನ್ನು ಮೊದಲ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಜಾತಿಯ ಸಂಕೋಲೆಯಿಂದ ಮುಕ್ತವಾದ ಲಿಂಗಾಯತ ಮತ್ತೆ ಜಾತಿಯಾಗಲು ಹವಣಿಸಿದ ಕ್ರಿಯೆಯನ್ನು ಸಾಮಾಜಿಕ ಇತಿಹಾಸದ ಹಿನ್ನೆಲೆಯಲ್ಲಿ ಇಲ್ಲಿ ವಿವರಿಸಲಾಗಿದೆ. ಲಿಂಗಾಯತ ಇಂದು ಮುಕ್ತ ಸಮುದಾಯವಾಗಿಲ್ಲ. ಮುಚ್ಚಿದ ಜಾತಿಯಾಗಿದೆ. ಆರ್ಥಿಕ ರಾಜಕೀಯ ಒತ್ತಡಕ್ಕೆ ಇದರಲ್ಲಿಯ ಉಪಜಾತಿಗಳು ಛಿದ್ರೀಕರಣ ಪ್ರಕ್ರಿಯೆಯನ್ನು ಅನುಭವಿಸ ತೊಡಗಿವೆ. ಲೇಖಕರು ಇದನ್ನು ಪರಿಗಣಿಸಬಹುದಾಗಿತ್ತು.

ಜಾತಿಯ ಭದ್ರಕೋಟೆ ಒಡೆಯಲು ಬಸವಣ್ಣ ಬಳಸಿದ ಸಾಧನ ಪ್ರತಿಲೋಮ ವಿವಾಹ. ಲೇಖಕರು ಎಲ್ಲಿಯೂ ಇದನ್ನು ದಾಖಲಿಸಲಾರದೆ ಇರುವುದು ಕೊರತೆ ಎನಿಸುತ್ತದೆ. **ತಲೆದಂಡ, ಮಹಾಚೈತ್ರ, ಸಂಕ್ರಾಂತಿ** , ಮುಂತಾದ ಕೃತಿಗಳು ಈ ಸಂದರ್ಭವನ್ನು ಕೇಂದ್ರವಾಗಿಟ್ಟುಕೊಂಡು ಮಾನವನ ಸಂಬಂಧಗಳನ್ನು ವರ್ಣಿಸಿವೆ. ಡಾ. ಅರವಿಂದ ಮಾಲಗತ್ತಿ ಅಂಥವರು ಅಂತರ್‌ವರ್ಣೀಯ ವಿವಾಹ ಜರುಗಿಲ್ಲ. ಇದು ಕೇವಲ ಒಂದು ದಂತಕತೆ ಎಂದು ಹೇಳಿದ್ದಾರೆ . ಇವೆಲ್ಲಾ ಶೌಟನ್‌ರವರ ಅಧ್ಯಯನದಲ್ಲಿನ ಕೊರತೆ ಎನಿಸುತ್ತವೆ.

ಎರಡನೆ ಅಧ್ಯಾಯ ಲಿಂಗಾಯತರ 'ಕಾಯಕ ' ತತ್ವಕ್ಕೆ ಮೀಸಲಾಗಿದೆ . ಸಂಪತ್ತು, ವೃತ್ತಿ ಹಾಗೂ ಅಂತಸ್ತು ಭಾರತೀಯ ಸಮಾಜದಲ್ಲಿ ಜಾತಿಯ ಸಾಮಾಜಿಕ ಸ್ಥಾನ ನಿರ್ಧರಿಸುವಲ್ಲಿ ಪ್ರಮುಖ ಅಂಶಗಳಾಗಿವೆ. ಸಂಪತ್ತಿನ ಬಗ್ಗೆ ಸಿನಿಕಭಾವ ಹೊಂದಿದ ವೈದಿಕರಿಗೆ ವಿಜ್ಞಾನೇಶ್ವರನ '**ಮಿತಾಕ್ಷರ**' ಗ್ರಂಥ ಸಂಪತ್ತು ಗಳಿಸಲು ಅನುವುಮಾಡಿಕೊಟ್ಟಿತು. ಪುರೋಹಿತ ವರ್ಗ ಜನರಿಗೆ 'ಮೋಕ್ಷದ ಆಮಿಷವೊಡ್ಡಿ ದಾನದ ಹೆಸರಿನಲ್ಲಿ ಸುಲಿಗೆ ಪ್ರಾರಂಭಿಸಿತು. ಸ್ಪರ್ಧಾತ್ಮಕ ದಾನ ಪ್ರಾರಂಭವಾಗಿ ಅಗ್ರಹಾರ ಬಲಿತವು. ಇದರಿಂದ ವೈದಿಕ ಗುಂಪು, ಶ್ರಮರಹಿತ ಸಂಪತ್ತು ಗಳಿಸಿತೆಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ. ವಿಶ್ವದ ಎಲ್ಲಿ ಧರ್ಮಗಳಲ್ಲಿ ಪುರೋಹಿತ ವರ್ಗ ಇದೆ. ಇದು ಸಂಪತ್ತು ಹಾಗೂ ಶ್ರಮದ ಬಗ್ಗೆ ಹೊಂದಿದ

ಗ್ರಹಿಕೆಗಳನ್ನು ತುಲನಾತ್ಮಕವಾಗಿ ವಿವರಿಸಿದ್ದರೆ ಪ್ರಬಂಧಕ್ಕೆ ಇನ್ನೂ ಹೆಚ್ಚಿನ ತೂಕ ಬರುತ್ತಿತ್ತು.

ಲಿಂಗಾಯತರಲ್ಲಿ 'ಕಾಯಕ'ಕ್ಕೆ ದೊರೆತ ಮಹತ್ವದ ಹಿನ್ನೆಲೆಯಲ್ಲಿ ಬಸವಣ್ಣನಿಗೆ ಭಗವದ್ಗೀತೆಯ ತಿರುಳಾದ 'ಕರ್ಮ' ದಿಂದ ಬಲವಾದ ಪ್ರೇರಣೆ ದೊರೆಯಿತು(ಪು-೧೨೯) ಎಂತೆನ್ನುವ ಲೇಖಕರ ಅಭಿಪ್ರಾಯ ಹಲವು ಸಂಶಯಗಳಿಗೆ ಮಾರ್ಗ ಮಾಡಿಕೊಡುತ್ತದೆ. ಏಕೆಂದರೆ ಕಾಯಕದಲ್ಲಿ ದೇವರನ್ನು ಕಾಣುವ ಲಿಂಗಾಯತ ತತ್ವಕ್ಕೂ, ಫಲಾಪೇಕ್ಷೆ ಇಲ್ಲದೆ ಕರ್ಮ ನಿರ್ವಹಿಸುವ ವೈದಿಕ ಚಿಂತನೆಗೂ ಅಜಗಜಾಂತರ ವ್ಯತ್ಯಾಸ ಇದೆ. ದೇಹ, ಮನಸ್ಸು, ಭಾವ ಒಂದುಗೂಡಿಸುವದು ಕಾಯಕವಾದರೆ, '.... ಗೋವಿಂದನ ದಯೆ ಇರಲಿ' ಎಂಬ ಅಸಹಾಯಕ ಸ್ಥಿತಿಯನ್ನು 'ಕರ್ಮ' ಕಲಿಸುತ್ತದೆ. ಲಿಂಗಾಯತ ತತ್ವ ಇಂದ್ರಿಯಾಸಕ್ತಿಗಳ ಅಪಾಯದ ಬಗ್ಗೆ ಎಚ್ಚರಿಕೆ ನೀಡುತ್ತಲೇ ಲೌಕಿಕವನ್ನು ನಿರಾಕರಿಸುವುದಿಲ್ಲ. 'ಶ್ರಮ' ಇಲ್ಲಿ ಸಾಕ್ಷಾತ್ಕಾರದ ಸ್ವರೂಪ ಪಡೆಯುತ್ತದೆ. ಕೈಲಾಸ ಸೇರಲು ಕಾಯಕ ಸಾಧನವೇ ಅಥವ ಅದೇ ಗುರಿಯೆ ಎಂಬುದು ಇಂದಿಗೂ ಗೊಂದಲ.

ಬಸವಣ್ಣನವರು 'ದಾಸೋಹ' ತತ್ವ ಪ್ರತಿಪಾದಿಸಿದರು. ವೀರಶೈವದಲ್ಲಿ ದಾಸೋಹರಹಿತ ಕಾಯಕ ಅಥವ ಕಾಯಕರಹಿತ ದಾಸೋಹಕ್ಕೆ ಅವಕಾಶ ಇಲ್ಲ. ಬಹುಶಃ ದಾಸೋಹದ ಕಲ್ಪನೆಯೆ ವಿರಕ್ತ ಮಠಗಳ ಅಸ್ತಿತ್ವಕ್ಕೆ ಕಾರಣೀಭೂತವಾಗಿರಬಹುದು. ಲೇಖಕರು 'ವಿರಕ್ತಮಠ' ಹಾಗೂ 'ದಾಸೋಹ' ದ ಪರಿಕಲ್ಪನೆಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಬೇಕಾಗಿತ್ತು.

'ಕಾಯಕ ಸಿದ್ಧಾಂತದ ಪರಿಣಾಮವಾಗಿ ಲಿಂಗಾಯತರಲ್ಲಿ ಪ್ರಗತಿ ಸಾಧ್ಯವಾಗಿದೆ. ಲಿಂಗಾಯತರ ವಿಚಾರಗಳು ಎಲ್ಲ ದೃಷ್ಟಿಯಿಂದ ಕ್ಯಾಲ್ವಿನಿಸ್ಟರ ಸಾತ್ವಿಕ ವಿಚಾರಗಳಿಗೆ ಸಮಾಂತರವಾಗಿ ನಿಲ್ಲುತ್ತವೆ. ಮ್ಯಾಕ್ಸ್ ವೆಬರನು ತೋರಿಸಿರುವಂತೆ, ಬಂಡವಾಳಶಾಹಿ ಗುಣಗಳನ್ನು ಲಿಂಗಾಯತವು ಅಂತರ್ಗತ ಮಾಡಿಕೊಂಡಿದೆ' (ಪು-೧೬೮) ಎಂದು ಲೇಖಕರು ಅವಸರದ ಅಭಿಪ್ರಾಯ ನೀಡಿದ್ದಾರೆ. ಇದು ವಾದಗ್ರಸ್ತ ವಿಚಾರ. ಏಕೆಂದರೆ ಧರ್ಮ ಹಾಗೂ ಆರ್ಥಿಕ ಪ್ರಗತಿಗಳ ನಡುವಿನ ಸಂಬಂಧ ಇಂದಿಗೂ ಚರ್ಚಾತ್ಮಕ. ಧರ್ಮ ಆರ್ಥಿಕ ಪ್ರಗತಿಗೆ ಮಾರಕ ಎಂದು ಮಾರ್ಕ್ಸ್ ಮತದವರು ವಾದಿಸಿದರೆ, ವಿಶ್ವದ ಕೆಲವು ಧರ್ಮಗಳು ಆರ್ಥಿಕ ಪ್ರಗತಿಗೆ ಪೂರಕ ಎಂದು ಮ್ಯಾಕ್ಸ ವೆಬರ್ ಮತದವರು ವಾದಿಸಿದ್ದಾರೆ. ಕ್ರೈಸ್ತ ಧರ್ಮದ ಆಂತರಿಕ ಗೊಂದಲದಿಂದ ಕ್ಯಾಥೊಲಿಕ್ ಹಾಗೂ ಪ್ರೊಟೆಸ್ಟಂಟ್ ಪಂಗಡಗಳು ಹುಟ್ಟಿಕೊಂಡವು. ಲೂಥರ್, ಕೆಲ್ವಿನ್ ಮುಂತಾದವರು ಚರ್ಚಿನ ಕರ್ಮಠತ್ವ ಪ್ರತಿಪಾದಿಸುವ ಮಠಗಳ ವಿರುದ್ಧ ಹೋರಾಡಿ 'ಪ್ರರೋಹಿತ ಶಾಹಿ' ಯಿಂದ ಜನರನ್ನು ಬಿಡುಗಡೆಗೊಳಿಸಲು ಯತ್ನಿಸಿದರು. ಹನ್ನೆರಡನೆ ಶತಮಾನದ ಚಳುವಳಿಗೂ ಹಾಗೂ ಪ್ರೊಟೆಸ್ಟಂಟ್ ಚಳುವಳಿಗೂ ಕೆಲವು ಹೋಲಿಕೆಗಳಿವೆ. ಆದರೆ ಎರಡೂ ತದ್ರೂಪಿಗಳಲ್ಲ. ವೀರಶೈವರು ಪ್ರೊಟೆಸ್ಟಂಟ ಹಿಂದೂಗಳೆ? ಎಂಬ ಪ್ರಶ್ನೆಗೆ ಸರಳ ಉತ್ತರ ಇಲ್ಲ. ಅಲ್ಲದೆ ವೆಬರ್‌ರವರ ಬಂಡವಾಳ ಬೆಳವಣಿಗೆಯ ಸಿದ್ಧಾಂತ ಇಂದು ಕಟು ವಿಮರ್ಶೆಗೆ ಒಳಗಾಗಿದೆ. ಆದ್ದರಿಂದ ಲಿಂಗಾಯತವು ಬಂಡವಾಳಶಾಹಿ ಗುಣವನ್ನು ಅಂತರ್ಗತ ಮಾಡಿಕೊಂಡಿದೆ ಎಂತೆನ್ನುವ ಲೇಖಕರ ನಿರ್ಣಯ

ಅವೈಜ್ಞಾನಿಕವಾದುದು ಎನಿಸುತ್ತದೆ. ಶೌಟನ್‌ರ ವಿಚಾರ ಸರಿಯಾಗಿದ್ದರೆ, ಲಿಂಗಾಯತರು ಹೆಚ್ಚಿರುವ ಕರ್ನಾಟಕ ರಾಜ್ಯ ಭಾರತದಲ್ಲಿ ಹೆಚ್ಚು ಪ್ರಗತಿ ಸಾಧಿಸಿದ ರಾಜ್ಯವಾಗಿರಬೇಕಿತ್ತು. ಹೋಗಲಿ, ಲಿಂಗಾಯತರ ಸಾಂದ್ರತೆ ಹೆಚ್ಚು ಇರುವ ಉತ್ತರ ಕರ್ನಾಟಕದ ಜಿಲ್ಲೆಗಳು ಹೆಚ್ಚು ಶ್ರೀಮಂತವಾಗಿರಬೇಕಾಗಿತ್ತು.

ಮೂರನೇ ಅಧ್ಯಾಯ ಮಹಿಳೆಯರಿಗೆ ಮೀಸಲಾಗಿದೆ. ನಿಸ್ಸಂಶಯವಾಗಿ ಲಿಂಗಾಯತ ಮಹಿಳೆ, ವೈದಿಕ ಮಹಿಳೆಗಿಂತ ಸುದೈವಿ. ಪಂಚಸೂತಕ ನಿರಾಕರಿಸಿದ ವೀರಶೈವ, ಮಹಿಳೆಗೆ ಇಷ್ಟಲಿಂಗ ಹಾಗೂ ನೊಸಲಿಗೆ ವಿಭೂತಿ ಧರಿಸುವ ಅವಕಾಶ ನೀಡಿತು. ಅಪ್ರತಿಮ ಸ್ವಾಭಿಮಾನಿಯಾದ ಕಿತ್ತೂರ ಚನ್ನಮ್ಮ, ಲಿಂಗಾಯತಳಾದ್ದರಿಂದ ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟಗಾರ್ತಿ ಎಂಬ ಪಟ್ಟದಿಂದ ವಂಚಿತಳಾದಳೆಂಬುದನ್ನು 'ನಂಬುವುದು ಕಷ್ಟ' (ಪು-೨೬೮) ಎಂಬುದು ಲೇಖಕರ ವಿಚಾರವಾಗಿದೆ. ಹಿಂದುತ್ವದ ಭಾರ ಭಾರತದ ಇತಿಹಾಸಕ್ಕಿದೆ, ಎಂಬ ನಂಬಿಕೆಯಲ್ಲಿ ನಂಬಿಕೆ ಇಟ್ಟರೆ ಚನ್ನಮ್ಮ ಹಾಗೂ ಕರ್ನಾಟಕಕ್ಕೆ ಈ ಕೀರ್ತಿ ಲಭಿಸಲಾರದಂತೆ ತಡೆದ ಕಾಣದ ಕೈಗಳ 'ಕೈಚಳಕ' ಅರ್ಥವಾಗುತ್ತದೆ.

ಮಹಿಳೆ ಚಂಚಲೆ, ವಿಶ್ವಾಸದ್ರೋಹಿ, ದಾನವಾಗಿ ಕೊಡುವ ವಸ್ತು, ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂಬ ಮೌಲ್ಯಗಳು ಮನುಪ್ರಣೀತ ಚಿಂತನೆಯಿಂದ ಪ್ರಭಾವಿತಗೊಂಡ ಮೇಲ್ಜಾತಿಗೆ ಮೀಸಲು. 'ತೆರ' ಪದ್ಧತಿಯನ್ನು ಅಸುರವಿವಾಹವೆಂದು ಕರೆದ ಧರ್ಮಶಾಸ್ತ್ರಗಳು ವರದಕ್ಷಿಣೆ ಶಾಪವನ್ನು ಸಮಾಜಕ್ಕೆ ನೀಡಿದವು. ಪುರುಷನ ಪೌರುಷ ಹೆಣ್ಣಿನ ಪರಾವಲಂಬಿತನ 'ಸತಿಯಂತಹ' ಕ್ರೌರ್ಯಗಳನ್ನು ಸೃಷ್ಟಿಸಿತು. ಉಡುಕಿ - ಕೂಡಿಕೆಯಂತಹ ಸರಳ ಮಾರ್ಗಗಳನ್ನು ವೈದಿಕೇತರ ಗುಂಪು ಅನುಸರಿಸಿತ್ತು. ಆದರೆ ಧರ್ಮಶಾಸ್ತ್ರಜ್ಞರ ಮೈಲಿಗೆ ಕಣ್ಣಿಗೆ ಅವು ಕಾಣಲಿಲ್ಲ.

ಲಿಂಗಾಯತ ಮಹಿಳೆಯ ಸ್ಥಾನಮಾನ ಇತರ ಜಾತಿಗಳ ಮಹಿಳೆಗಿಂತ ಹೆಚ್ಚು ಭಿನ್ನವಾಗಿಲ್ಲ. ಆದರೂ ಇವಳು ಭಿನ್ನ. ಮಹಿಳಾ ಜಗದ್ಗುರುವನ್ನು ಈ ಸಮಾಜ ಒಪ್ಪಿದೆ. ಹನ್ನೆರಡನೆ ಶತಮಾನದಲ್ಲಿ ಮಹಿಳೆ ಪಡೆದ ಸಮಾನತೆಯ ಮೌಲ್ಯವು, ಅವಳು ಸ್ವಾತಂತ್ರ್ಯ ಚಳುವಳಿ, ಕುಟುಂಬದ ಆರ್ಥಿಕ ನಿರ್ವಹಣೆ, ಆಧುನಿಕ ಶಿಕ್ಷಣ ಮುಂತಾದವುಗಳನ್ನು ನಿರ್ವಹಿಸುವಲ್ಲಿ ಹೇಗೆ ಪ್ರಭಾವ ಬೀರಿತು ಎಂಬ ದೃಷ್ಟಿಯಿಂದ ಅಭ್ಯಸಿಸಬಹುದಿತ್ತು.

ಭಾರತದ ಮಹಿಳೆ ಎಂದು ಎಲ್ಲರನ್ನು ಒಂದೇ ತಕ್ಕಡಿಯಲ್ಲಿ ತೂಗುವ ಯತ್ನವನ್ನು ಲೇಖಕರು ಮಾಡಿದ್ದಾರೆ. ಜಾತಿಯ ಶ್ರೇಣಿಗೆ ಅನುಗುಣವಾಗಿ ಮಹಿಳೆಯರ ಸ್ಥಾನ-ಪಾತ್ರಗಳು ಭಿನ್ನವಾಗುತ್ತವೆ ಎಂಬ ಸಾಮಾಜಿಕ ಸತ್ಯವನ್ನು ಲೇಖಕರು ಗ್ರಹಿಸಿದಂತಿಲ್ಲ. ಶ್ರೇಣಿಯಲ್ಲಿ ಮೇಲೆ ಹೋದಂತೆ ಮಹಿಳೆ ಹೆಚ್ಚು ಪರಾಧೀನತೆ ಅನುಭವಿಸುತ್ತಾಳೆ. ತಳಜಾತಿಗೆ ಬಂದಂತೆ ಪುರುಷನೊಂದಿಗೆ ಸಮಾನತೆ ಪಡೆಯುತ್ತಾಳೆ. ಬಹುಶಃ ವಿವಿಧ ಸ್ತರಗಳಲ್ಲಿ ಅವಳು ನಿರ್ವಹಿಸುವ ಶ್ರಮ ಸಂಸ್ಕೃತಿ ಇದಕ್ಕೆ ಕಾರಣವಾಗಿರಬಹುದು. 'ಸತಿ' ಮೇಲ್ಜಾತಿಗಳ ಸಂಪ್ರದಾಯವಾಗಿತ್ತೇ ಹೊರತು ತಳಜಾತಿಗಳಿಗೆ ಅದು ಅನ್ವಯವಾಗುತ್ತಿರಲಿಲ್ಲ. 'ಅಯ್ಯಾಚಾರ'ದ ದೀಕ್ಷೆ ಪುರುಷ ಜಂಗಮರಿಗೆ ಮೀಸಲಾಗಿ ಉಳಿಯಿತು.

ಮಾತೆ ಮಹದೇವಿ ,ಸಜ್ಜಲ ಗುಡ್ಡದ ಶರಣಮ್ಮ ಮುಂತಾದವರು ಜಂಗಮೇತರ ಪುರ್ವಾಶ್ರಮದವರು ಎಂಬುದನ್ನು ಮುಖ್ಯವಾಗಿ ಪರಿಗಣಿಸಬೇಕಾಗಿದೆ.

ಒಟ್ಟಿಗೆ ಮಹಿಳೆಗೆ ಸಂಬಂಧಿಸಿದ ಅಧ್ಯಾಯ ಗಿಂಜು ಹಿಡಿಸುವಷ್ಟು ವಿವರಣೆ ಪಡೆದಿದೆ.**'ಲಿಂಗಾಯತ ಅನೈತಿಕ ವಿವಾಹೇತರ ಸಂಬಂಧಗಳ ಬಗ್ಗೆ ಉದಾರವಾದಿ ನಿಲುವು ತಳೆದಿದೆ. ಅನೈತಿಕ ಸಂಬಂಧಗಳು ಈ ಸಮುದಾಯದಲ್ಲಿ ತೀಕ್ಷ್ಣ ಪ್ರತಿಕ್ರಿಯೆಯನ್ನೇನೂ ಸೃಷ್ಟಿಸುವುದಿಲ್ಲ'**(ಮೂಲಕೃತಿ ಪು-೨೪೨. ಅನು ಪು-೨೮೭) ಎಂಬ ಅಭಿಪ್ರಾಯ ಹಲವು ಸಂಶಯಗಳಿಗೆ ಮಾರ್ಗ ಮಾಡಿಕೊಡುತ್ತದೆ. ಲೇಖಕರು ಹಲವು ಸಂದರ್ಭಗಳಲ್ಲಿ ಸಿ. ಪಿ. ಬ್ರೌನ್‌ರ ವಿಚಾರ ನಿರಾಕರಿಸುತ್ತ ದುಬಾಯಿಯ ಟಿಪ್ಪಣಿ ಅವಲಂಬಿಸಿದ್ದಾರೆ. ವಿದೇಶ ಅಧ್ಯಯನಕಾರರಿಗೆ ಮಾಹಿತಿ ಒದಗಿಸುವ ಬಾತ್ಮಿದಾರನ ವಿಚಾರ ಇಲ್ಲಿ ಪ್ರಭಾವ ಬೀರಿರಬಹುದು. ಭಾರತದಲ್ಲಿ ಪ್ರತಿಯೊಂದು ಜಾತಿ ತನ್ನದೇ ಆದ ಲೈಂಗಿಕ ವಿಧಿ ನಿಷೇಧಗಳನ್ನು ಹೊಂದಿದೆ. ಶೌಟನ್ನರು ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯನ್ನು ಆಕರವಾಗಿ ಬಳಸುತ್ತಾ(ಪು೨೪೨), ನಾರಾಯಣಪ್ಪನ ಸಮುದಾಯವನ್ನು ಹೊಗಳಿದ್ದಾರೆ . ಆದರೆ ಚಂದ್ರಿಯ ಮಾನವೀಯತೆಯ ನವುರನ್ನು ಗಮನಿಸಿಲ್ಲ. ಅಲ್ಲದೆ ಸಮಾಜಶಾಸ್ತ್ರೀಯ ಸಂಶೋಧನೆಗಳಿಗೆ ಕಾದಂಬರಿ ಆಕರವಾಗಬಹುದೇ ಎಂಬುದು ಮೂಲ ಪ್ರಶ್ನೆ.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಲೇಖಕರು ವಿಷಯಕ್ಕೆ ನ್ಯಾಯ ಒದಗಿಸುವ ಯತ್ನ ಮಾಡಿದ್ದಾರೆ. ಸನಾತನ ಶಿಕ್ಷಣದ 'ಗುರು'ವಿನ ಕಲ್ಪನೆ ಕಾಲಾಂತರದಲ್ಲಿ ಜಂಗಮಕ್ಕೆ ವರ್ಗಾವಣೆ ಆದ ರೀತಿ ವೈಚಾರಿಕ ನಿರೂಪಣೆ ಪಡೆದಿದೆ. ಕರ್ಮಠ ಜಂಗಮರು 'ಅಲ್ಲಮನ ಅಧ್ಯಕ್ಷತೆ' ನಿರಾಕರಿಸಿದ ಅಂಶ ಹೆಚ್ಚು ವಿವರಣೆ ಪಡೆದಿದ್ದರೆ ಕಲ್ಯಾಣ ಕ್ರಾಂತಿಯ ಸಿಕ್ಕುಗಳನ್ನು ಬಿಡಿಸ ಬಹುದಾಗಿತ್ತು. ಸನಾತನಿಗಳಾದ ಪಂಚ ಪೀಠದವರು ಮೆರವಣಿಗೆಯಲ್ಲಿ ಬಸವಣ್ಣನ ಭಾವಚಿತ್ರವಿರುವ ದ್ವಾರದ ಕೆಳಗೆ ಹೋಗಲು ನಿರಾಕರಿಸಿ, ನೆಹರು ಬೂಟುಗಾಲಲ್ಲಿ ನಿಂತ ಭಾವಚಿತ್ರವಿರುವ ದ್ವಾರದಲ್ಲಿ ಸಂತೋಷದಿಂದ ಹೋದ ಸಂಗತಿ ಕುತೂಹಲಕಾರಿಯಾಗಿದೆ. ಇಂತಹ ಹಲವು ಕುತೂಹಲಕಾರಿ ಸಂದರ್ಭಗಳನ್ನು ಲೇಖಕರು ಸಂಗ್ರಹಿಸಿದ್ದಾರೆ . ಭಕ್ತರನ್ನು ಆಧುನೀಕರಣಕ್ಕೆ ಸಜ್ಜುಗೊಳಿಸುವಲ್ಲಿ ಪಂಚಪೀಠಗಳು ಸೋತ ಚಿತ್ರಣ, ವಿರಕ್ತ ಮಠಗಳು ನಗರಗಳನ್ನು ವಸಾಹತು ಮಾಡಿಕೊಂಡು ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಸೇವೆ ನ್ಯಾಯ ಸಮ್ಮತ ವಿವರಣೆ ಪಡೆದಿವೆ.

ಲಿಂಗಾಯತ ಸಮುದಾಯ ಹತ್ತೊಂಭತ್ತನೆ ಶತಮಾನದ ಕೊನೆ ಹಾಗೂ ಇಪ್ಪತ್ತನೆ ಶತಮಾನದ ಮೊದಲ ಪಾದದಲ್ಲಿ ಆಧುನಿಕ ಶಿಕ್ಷಣಕ್ಕೆ ತನ್ನನ್ನು ತೆರೆದುಕೊಂಡಿದೆ. ನಾಲ್ಕೈದು ದಶಕದಲ್ಲಿ ಈ ಸಮಾಜಕ್ಕೆ ಹೊಸ ರೂಪ ಕೊಡುವಲ್ಲಿ ವಿರಕ್ತ ಮಠಗಳ ಸಿಂಹ ಪಾಲನ್ನು ಲೇಖಕರು ಸರಿಯಾಗಿ ಗುರುತಿಸಿದ್ದಾರೆ. ಮಠಾಧೀಶರು ಜಂಗಮ ಜಾತಿಯವರಾಗಿರಬೇಕು, ಜಂಗಮೇತರ ಮಠಾಧೀಶರು ಹೊರತಾದ ಉದಾಹರಣೆ ಎಂದು ಹೇಳುತ್ತ ಇಳಕಲ್ಲ ಮಠವನ್ನು ಉದಾಹರಿಸಿದ್ದಾರೆ . ಆದರೆ ಇಳಕಲ್ಲ ಮಠಕ್ಕೆ ದಲಿತ ಉತ್ತರಾಧಿಕಾರಿಯನ್ನು

ನೇಮಕ ಮಾಡುವ ವಿಚಾರ ಇದೆ.ಇನ್ನೂ ಆಗಿಲ್ಲ.ಬಾತ್ಮಿದಾರರು ತಪ್ಪು ಮಾಹಿತಿ ಒದಗಿಸಿರಬಹುದು.

ಲಿಂಗಾಯತವನ್ನು ಅಖಂಡ ಸಮುದಾಯವಾಗಿ ನೋಡುವುದು ತಪ್ಪು.ಆದಿವಾಸಿ ಲಕ್ಷಣ ಹೊಂದಿದ ಹಾಗೂ ವೈದಿಕ ಮನೋಭಾವದ ಗುಂಪುಗಳು ಒಟ್ಟಿಗೆ ಇಲ್ಲಿ ಇವೆ.ಈ ಸಮುದಾಯ ಸಾವಿರ ಬಣ್ಣಗಳ,ಕಾಮನ ಬಿಲ್ಲಿನ ಪ್ರತಿರೂಪ.ಧರ್ಮಶಾಸ್ತ್ರದ ಸಾಹಿತ್ಯಕ್ಕೆ ಸಮಾಜಶಾಸ್ತ್ರದ ಉಡಿಗೆ ತೊಡಿಸಿದ ಅನುಭವ ಆಗುತ್ತದೆಯೆ ಹೊರತು,ಇದು ಸಮಾಜಶಾಸ್ತ್ರದ ಕೃತಿ ಎನಿಸುವುದಿಲ್ಲ.ಆದರೆ 'ಕಾಸಿ ಕಮ್ಮಾರ'ರಾಗುವ ಪಂಡಿತರಿಗೆ ವಚನಗಳನ್ನು ನೋಡುವ ಒಳನೋಟದ ಮಾರ್ಗಸೂಚಿ ಇಲ್ಲಿ ಇದೆ.ಸಾಹಿತಿಗೆ ಸಮಾಜ ವಿಜ್ಞಾನಗಳ ಪರಿಜ್ಞಾನ,ಸಮಾಜ ವಿಜ್ಞಾನಿಗೆ ಸಾಹಿತ್ಯದ ಒಳನೋಟ ಅಗತ್ಯ ಎಂಬುದನ್ನು ಈ ಪುಸ್ತಕ ಸಾಬೀತು ಮಾಡುತ್ತದೆ.

ಅನುವಾದಕ್ಕೆ ಸಂಬಂಧಿಸಿದಂತೆ ಕೆಲವು ವಿಚಾರ ಹೇಳಲೇಬೇಕು.ಮೂಲಕೃತಿಯ ಆಶಯಕ್ಕೆ ಧಕ್ಕೆ ಬರದಂಥ ಅನುವಾದ ಇದೆ ;ಅನುವಾದ ಎನ್ನಲಾರದಷ್ಟು ಭಾಷೆ ಸೊಗಸಾಗಿದೆ.ಇದು ಸಮಾಜಶಾಸ್ತ್ರದ ಪುಸ್ತಕವಾಗಿರುವುದರಿಂದ ಕೆಲವು ಶಬ್ದಗಳ ಬಳಕೆ ಭಿನ್ನವಾಗಬೇಕಿತ್ತು.ಉದಾ-occupationಗೆ ಕಸಬು ಎನ್ನುವುದರ ಬದಲಾಗಿ ವೃತ್ತಿ ಎಂಬ ಶಬ್ದ ಸೂಕ್ತವಾಗಬಹುದಿತ್ತು.'ವಕ್ತೃ' ಎಂಬ ಪದಕ್ಕೆ ಬದಲಾಗಿ ಬಾತ್ಮೀದಾರ ಅಥವ ಮಾಹಿತಿದಾರ ಎಂಬ ಸರಳ ಶಬ್ದ ಬಳಸಬಹುದಾಗಿತ್ತು.

ಮೂಲಕೃತಿಯ ಆಕರ ಗ್ರಂಥ ಹಾಗೂ ಅಡಿ ಟಿಪ್ಪಣಿಗಳನ್ನು ಅನುವಾದಕರು ಮನಬಂದಂತೆ ಕೈ ಬಿಟ್ಟಿದ್ದಾರೆ.ಇದರಿಂದ ಗಂಭೀರ ಓದುಗರಿಗೆ ನಿರಾಶೆಯಾಗುತ್ತದೆ. ೧೮೮೪ರ ವಿಜಾಪುರ ಜಿಲ್ಲೆ ಗೆಜೆಟಿಯರ್‌ದಲ್ಲಿ ದಾಖಲಾದ ಜಾತಿ ಪಟ್ಟಿ ನೀಡುವಾಗ (ಪು-೧೫೮) ನಾಡಿಗ (Barber caste)ಎಂಬ ಪದ ಬಳಕೆಯಾಗಿದೆ .ಇದು ನಾವಲಿಗ ಅಥವ ನಾವಿಂದ ಆಗಬೇಕಿತ್ತು.ಮೂಲಕೃತಿಯಲ್ಲಿಯೂ ಈ ಅಪಚಾರ ಆಗಿದೆ.ಅನುವಾದಕರು ಸರಿಪಡಿಸ ಬಹುದಿತ್ತು.ಮುದ್ರಾರಾಕ್ಷಸನ ಒಡಲಿಗೆ ಹಾಕಬಹುದಾದ ಕೆಲವು ದೋಷಗಳೂ ಉಳಿದಿವೆ.ಕರ್ಷಣೆ-ಘರ್ಷಣೆ(ಪು-೧೯೯).ಪು-೨೫೩ರಲ್ಲಿ ಹರವಾಳ-ಅರಟಾಳ, ಪು-೨೭೫ರಲ್ಲಿ ವಿಶೇಷ್ಣ - ವಿಶೇಷ ,ಪು-೨೮೨ರಲ್ಲಿ ಪಾತಶಾಲೆ -ಪಾಕಶಾಲೆ ,ಪು-೨೯೯ರಲ್ಲಿ ಸಂಸಾಟ್ಕರ - ಸಂಸ್ಕಾರ ಆಗಬೇಕಾಗಿತ್ತು.

ಹನ್ನೆರಡನೆ ಶತಮಾನ ಸಾಮಾಜಿಕ ತಲ್ಲಣ ಹುಟ್ಟಿಸಿತು.ಪ್ರಧಾನ ಸಂಸ್ಕೃತಿಗೆ ಪರ್ಯಾಯ ವ್ಯವಸ್ಥೆ ಹುಟ್ಟು ಹಾಕಿತು.ಹೆಬ್ಬಾವಿನಂತ ವೈದಿಕತ್ವ ಇದನ್ನು ನುಂಗಲು ಹವಣಿಸಿತು.೧೯ನೇ ಶತಮಾನದ ಹೊತ್ತಿಗೆ ಜೀವದ್ರವ ಕಳೆದುಕೊಂಡ ಬಸವಕ್ರಾಂತಿ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ವಿರಕ್ತರ ನೆರವಿನಿಂದ ಪುನರುತ್ಥಾನ ಪ್ರಕ್ರಿಯೆಗೆ ಬಿಚ್ಚಿಕೊಂಡಿರುವ ಪ್ರಕ್ರಿಯೆಗಳನ್ನು ಮನಂಬುಗುವಂತೆ ವಿವರಿಸುವ ಈ ಕೃತಿ ಸಾಹಿತ್ಯ ಹಾಗೂ ಮಾನವಿಕ ಕ್ಷೇತ್ರಗಳ ಅಪರೂಪದ ಪುಸ್ತಕ ಆಗಿದೆ.

- ಮಹೇಶ ತಿಪ್ಪಶೆಟ್ಟಿ

ಮತಾಂತರ ಮತ್ತು ಇತರ ಲೇಖನಗಳು

ಲೇ : ಡಾ.ವಿ.ಮುನಿವೆಂಕಟಪ್ಪ

ಪ್ರ : ವಿಚಾರವಾದಿ ಪ್ರಕಾಶನ, ಮೈಸೂರು

ಪುಟ : ೧೩೬ ಬೆಲೆ : ರೂ.೧೦೦ /-

"ದಲಿತರ ಕಣ್ಣಲ್ಲಿ ಮತಾಂತರ ಮತ್ತು...."

ಡಾ.ಮುನಿವೆಂಕಟಪ್ಪನವರ ಈ ಪುಸ್ತಕ, ಅವರ ಈ ಬಗೆಯ ಈ ಹಿಂದಿನ ಎರಡು ಪುಸ್ತಕಗಳಾದ 'ದಲಿತ ಚಳುವಳಿ : ಒಂದು ಅವಲೋಕನ' ಹಾಗೂ 'ದಲಿತ ಸಾಹಿತ್ಯ ದರ್ಶನ' ಎಂಬ ಪುಸ್ತಕಗಳ ಚಿಂತನಾ ಧಾಟಿಯ ಮುಂದುವರಿಕೆಯಾಗಿದೆ. ಪ್ರಸ್ತುತ ಪುಸ್ತಕದಲ್ಲಿ ಸಾಹಿತ್ಯದ ಬಗೆಗೆ ಒಂದೆರಡು ಲೇಖನಗಳಿದ್ದರೂ, ಲೇಖಕರ ಒತ್ತು ಸಾಹಿತ್ಯೇತರ ಚರ್ಚೆಗಳಾದ, ಜಾತಿ, ಮಿಸಲಾತಿ, ಮತಾಂತರ, ಬೌದ್ಧಧರ್ಮ- ಮುಂತಾದ ನೆಲೆಗಳ ಕಡೆಗೆ ಪ್ರಧಾನವಾಗಿ ಚಿಂತಿಸಿದೆ. ಈ ಪುಸ್ತಕದಲ್ಲಿ ಒಟ್ಟು ಒಂಭತ್ತು, ಬೇರೆ ಬೇರೆ ಬಗೆಯ ಲೇಖನಗಳಿದ್ದರೂ- ಅವೆಲ್ಲವುಗಳೂ ಅಂಬೇಡ್ಕರ್ ಚಿಂತನೆಗಳನ್ನು ಒಂದು ಸೈದ್ಧಾಂತಿಕ ನೆಲೆಯನ್ನಾಗಿಸಿಕೊಂಡು ಚರ್ಚೆ ಮಾಡಿದ ಲೇಖನಗಳಾಗಿವೆ. ಹೀಗಾಗಿ ಅಂಬೇಡ್ಕರ್ ಅವರಿಗೆ ಸಹಜವಾಗಿ ಇದ್ದ- ವೈದಿಕಶಾಹಿ ವಿರೋಧೀ ನಿಲುವುಗಳು, ಮತಾಂತರ ಕುರಿತ ಅವರ ವಿಚಾರಗಳು, ಮಿಸಲಾತಿ, ಸಂವಿಧಾನ, ಜಾತಿ ನಿರ್ಮೂಲನ, ಶಿಕ್ಷಣ, ಸಂಘಟನೆ, ಹೋರಾಟ- ಮುಂತಾದ ಎಲ್ಲ ಬಗೆಯ ವಿಚಾರಗಳು ಇಲ್ಲಿನ ಲೇಖನಗಳ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವಿಸಿವೆ, ಪ್ರೇರಣೆ ನೀಡಿವೆ. ಕನ್ನಡದ ಸಾಂಸ್ಕೃತಿಕ ಲೋಕವನ್ನು ಆ ದಿಶೆಯಲ್ಲಿ ಚರ್ಚಿಸುವಂತೆ ಪ್ರೇರೇಪಿಸಿವೆ. ಹೀಗಾಗಿ ಇಲ್ಲಿನ ಲೇಖನಗಳಿಗೆ ತನ್ನಿಂದ ತಾನೆ ಪ್ರಸ್ತುತತೆ, ತೀವ್ರತೆ, ಆಕ್ರೋಶ - ಕೆಲವೊಮ್ಮೆ ಏಕಪಕ್ಷೀಯ ಪೂರ್ವಗ್ರಹಗಳು ಪ್ರಾಪ್ತವಾಗಿವೆ.

ಇವೊತ್ತು ಬರೆಯುತ್ತಿರುವ ಕನ್ನಡ ಸಾಹಿತ್ಯ ಲೋಕದ ದಲಿತ ಬರಹಗಾರರಲ್ಲಿ ಕೆಲವರು ಸೌಮ್ಯವಾದಿಗಳೂ, ಕೆಲವರು ಉಗ್ರವಾದಿಗಳೂ ಇದ್ದಾರೆಂದು ಸ್ಥೂಲವಾಗಿ ವರ್ಗೀಕರಿಸಿ ಹೇಳುವುದಾದರೆ ಮುನಿವೆಂಕಟಪ್ಪನವರು ಎರಡನೆಯ ಪಂಗಡಕ್ಕೆ ಸೇರುತ್ತಾರೆಂಬುದು ಅವರು ಸೌಮ್ಯವಾದಿ ಲೇಖಕರ ಮೇಲೆ ಖಾರವಾಗಿ ಬರೆಯುವುದರಿಂದಲೇ ಅರಿವಿಗೆ ಬರುವಂತಿದೆ. ಮುನಿವೆಂಕಟಪ್ಪನವರ ವಾದಗಳು ಒಂದು ಕಡೆಯಿಂದ ಸರಿಯಾಗಿ ಕಂಡರೆ - ಮತ್ತೊಂದು ಕಡೆಯಿಂದ ಅವರು ಕೆಲ ಸಾಹಿತ್ಯೇತರ ಕಾರಣಗಳಿಂದ ಪೂರ್ವಾಗ್ರಹ ಪೀಡಿತರಾಗಿದ್ದಾರೇನೋ ಅನ್ನಿಸುತ್ತದೆ.

ಮೊದಲ ಲೇಖನ 'ಮತಾಂತರ : ಒಂದು ಚಿಂತನೆ' - ಈಗಾಗಲೆ ಅಂಬೇಡ್ಕರ್ ಈ ಬಗ್ಗೆ ಪ್ರಸ್ತಾಪಿಸಿದ ಪ್ರಶ್ನೆಗಳನ್ನು- ಪರ್ಯಾಯಗಳನ್ನು ಕುರಿತು ತನ್ನ ಚರ್ಚೆಯನ್ನು ಮುಂದುವರೆಸುತ್ತದೆ. ಈ ಲೇಖನದ ಮುಖ್ಯ ಭಾಗ, ಮತ್ತು ಗಣನೀಯ ಸೇರ್ಪಡೆಯೆಂದರೆ, ಕರ್ನಾಟಕದಲ್ಲಿ ಬೌದ್ಧ ಧರ್ಮ ಸ್ವೀಕಾರ ಮಾಡಿದವರ ಜೊತೆಗಿನ ಪತ್ರ ಸಂವಾದ ಹಾಗೂ ಅವರು ಬೌದ್ಧ ಧರ್ಮ ಸ್ವೀಕಾರ ಮಾಡಲು ಪ್ರೇರೇಪಿಸಿದ ಅಂಶಗಳು ಚರ್ಚೆಯ ಉಪಯುಕ್ತ ಭಾಗಗಳಾಗಿವೆ, ಹಾಗೂ ಸವರ್ಣೀಯರ ಕಣ್ಣು ತೆರೆಸುವಂತಿವೆ.

ಎರಡನೆಯ ಲೇಖನ-'ವಚನ ಚಳುವಳಿಯಲ್ಲಿ ದಲಿತ ವಚನಾಕರರು'-ಎಂಬುದು ಒಂದು ಪರಿಚಯಾತ್ಮಕ ಲೇಖನವಾಗಿದ್ದರೂ, ಮುನಿವೆಂಕಟಪ್ಪನವರ ದಲಿತಪರ ಅನನ್ಯ ಕಾಳಜಿ ಹಲವು ಹೊಸ ನೋಟಗಳ ಕಡೆ ಕಣ್ಣು ಹಾಯಿಸಲೆತ್ನಿಸುತ್ತದೆ. ಮಾದಾರ ಚೆನ್ನಯ್ಯ, ಡೋಹಾರ ಕಕ್ಕಯ್ಯ, ಢಕ್ಕೆಯ ಮಾರಯ್ಯ, ಮಾದರ ಧೂಳಯ್ಯ, ಉರಿಲಿಂಗ ಪೆದ್ದಿ, ಪುಣ್ಯಸ್ತ್ರೀ ಕಾಳವ್ವೆ -ಮೊದಲಾದ ದಲಿತ ವಚನಕಾರರ ಸ್ಥೂಲ ಪರಿಚಯವನ್ನು, ಅವರುಗಳ ಜಾತಿ ವಿರೋಧಿ ನಿಲುವು ಮತ್ತು ಧಾರ್ಮಿಕ ತುಡಿತಗಳನ್ನು ಇಲ್ಲಿ ಲೇಖಕರು ಚರ್ಚಿಸಿದ್ದಾರೆ.

'ಅಂತ್ಯಜನ ಆತ್ಮಕಥೆ'-ಈ ಲೇಖಕರು ಬರೆದಿರುವ ಹಾಗೂ ಪ್ರಕಟವಾಗಬೇಕಿರುವ ಆತ್ಮಚರಿತ್ರೆಯ ಮೊದಲ ಭಾಗ-ಬಾಲ್ಯವನ್ನು ಕುರಿತ ಅನುಭವ ಮಂಡನೆಯಾಗಿದೆ. ಈ ಭಾಗ ಓದುವಾಗ ಒಬ್ಬ ದಲಿತ ಹುಡುಗ ಸವರ್ಣೀಯರೇ ಪ್ರಬಲವಾಗಿರುವ ಹಳ್ಳಿಯೊಂದರಲ್ಲಿ ಎದುರಿಸಬಹುದಾದ ಎಲ್ಲಾ ಅಸ್ಪೃಶ್ಯ ಜನ್ಯ ಅವಮಾನಗಳನ್ನು ಅನುಭವಿಸಿರುವುದು ನಮ್ಮ ಅರಿವಿಗೆ ಬರುತ್ತದೆ. ಹಳ್ಳಿಯ ಸಾಮಾಜಿಕ ಸಂರಚನೆ ಮನುಪ್ರಣಿತ ಜಾತಿ ವ್ಯವಸ್ಥೆಯೇ ಆಗಿರುವಾಗ ಹಳ್ಳಿಯಲ್ಲಿ ಜನಿಸುವ ಯಾವೊಬ್ಬ ದಲಿತ ಹುಡುಗನೂ ಈ ವಿಷಚಕ್ರದಿಂದ ಪಾರಾಗದಂತಹ ವ್ಯವಸ್ಥೆ ಇವೊತ್ತಿಗೂ ಇರುವುದು ವಾಸ್ತವ ಸಂಗತಿಯಾಗಿದೆ. ಅಂಥ ವ್ಯವಸ್ಥೆಯನ್ನು ಲೇಖಕರು ಇಲ್ಲಿ ಕಟ್ಟಿ ಕೊಡಲು ಪ್ರಯತ್ನಿಸಿದ್ದಾರೆ. ಆದರೆ ಮುನಿವೆಂಕಟಪ್ಪ ಅವರ ನೋವುಗಳು ವರದಿಯ ವೇಷ ತಳೆದಿವೆ. ವೇಗ ಮತ್ತು ಅವಸರದ ಬರವಣಿಗೆ ಓದುಗನ ಅಂತಃಕರಣವನ್ನು ತಲುಪದಂತೆ ಮೇಲು ಮೇಲೆಯೇ ಬೀಸಿ ಹೋದಂತಾಗುತ್ತದೆ. ಪ್ರಾಯಶಃ ಮುನಿವೆಂಕಟಪ್ಪನವರ ತೀವ್ರವಾದ ಸಿಟ್ಟು ಬರವಣಿಗೆಗೆ ಅವಶ್ಯವಾದ ಸಂಯಮವನ್ನು ಮೀರಿ ಹೋದದ್ದರ ಫಲದಿಂದಲೂ ಹೀಗಾಗಿರಬಹುದು.

'ದಲಿತ ಸಾಹಿತ್ಯ ಬೆಳೆದು ಬಂದ ಬಗೆ'-ಒಂದು ಪರಿಚಯಾತ್ಮಕ ಲೇಖನ. ದಲಿತ ಸಾಹಿತ್ಯ ಹಾಗೂ ಅದಕ್ಕೆ ಪೂರಕವಾದ ದಲಿತ ಸಂಘರ್ಷ ಸಮಿತಿಯ ಹೋರಾಟಗಳ ಒಂದು ಚಾರಿತ್ರಿಕ ರೂಪುರೇಷೆಗಳನ್ನು ಈ ಲೇಖನ ಪರಿಚಯಿಸಲು ಪ್ರಯತ್ನಿಸುತ್ತದೆ. ಈ ಲೇಖನದಲ್ಲಿ ಅಲ್ಲಲ್ಲಿ ಆಕ್ರೋಶ, ವ್ಯಗ್ರತೆಗಳೂ ಹಣಕಿ ಹಾಕಿವೆ. ಅದರಲ್ಲೂ ವಿಶೇಷವಾಗಿ ಡಾ. ಸಿದ್ಧಲಿಂಗಯ್ಯ ಮತ್ತು ದೇವನೂರು ಮಹದೇವರ ಬಗ್ಗೆ ತೀವ್ರತರ ದಾಳಿ ನಡೆಸಿದ್ದಾರೆ. ದಲಿತ ಲೇಖಕರಾದ ಜಿ. ವೆಂಕಟಯ್ಯ, ಪ್ರೊ. ಬಿ. ಕೃಷ್ಣಪ್ಪ, ಬರಗೂರು, ಡಾ. ಸಿದ್ಧಲಿಂಗಯ್ಯ, ಡಾ. ಮ. ನ. ಜ., ಡಾ. ಎಲ್. ಹನುಮಂತಯ್ಯ, ಡಾ. ವಿ. ಮುನಿವೆಂಕಟಪ್ಪ, ಗಂಗಾರಾಂ ಚಂಡಾಳ, ಕೆ. ಬಿ. ಸಿದ್ದಯ್ಯ, ಬಿ. ಚಿನ್ನಸ್ವಾಮಿ... ಮುಂತಾದ ದಲಿತ ಲೇಖಕರ ಕಿರುಪರಿಚಯವೂ ಇಲ್ಲಿದೆ. ಯಾಕೋ ಏನೋ ಕನ್ನಡದ ಮುಖ್ಯ ಕಥೆಗಾರರಾದ ಮೊಗಳ್ಳಿ ಗಣೇಶ ಅವರನ್ನು ಚರ್ಚೆಯ ಮುಖ್ಯ ಕೇಂದ್ರದಿಂದ ಕೈ ಬಿಟ್ಟಿರುವುದು ಆಶ್ಚರ್ಯ ತರಿಸುತ್ತದೆ.

'ಶೋಷಿತ ವರ್ಗದ ದನಿ ಡಾ. ಅಂಬೇಡ್ಕರ್', 'ಬುದ್ಧ ಮತ್ತು ಬೌದ್ಧಧರ್ಮ', 'ದೇವರು- ಧರ್ಮ ಮತ್ತು ದಲಿತರು' -ಎಂಬ ಈ ಮೂರು ಲೇಖನಗಳೂ ಒಂದೇ ಮಾದರಿಯವು. ಈ ಲೇಖನದಲ್ಲಿ ಲೇಖಕರು ತಮ್ಮ ವಿಚಾರ ಮಂಡನೆಗೆ ಡಾ. ಅಂಬೇಡ್ಕರ ನಿಲುವುಗಳನ್ನು ಸಾಕಷ್ಟು ಸೋದಾಹರಣವಾಗಿ ಬಳಸುತ್ತಾರೆ. ಹಾಗೆಯೇ ನಿಡುಮಾಮಿಡಿ

ಸಂಸ್ಥಾನದ ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮಿಜಿಯವರ ಲೇಖನಗಳನ್ನು ಬಳಸಿಕೊಳ್ಳುತ್ತಾರೆ. ಹಿಂದೂಧರ್ಮ, ಜಾತಿ ಪದ್ಧತಿ, ದೇವರು, ಪುರಾಣ, ಹಿಂದೂ ವೈದಿಕಗ್ರಂಥಗಳನ್ನು ಕುರಿತು ಅಂಬೇಡ್ಕರ್ ವ್ಯಕ್ತಪಡಿಸಿದ ಸ್ಫೋಟಕ ವಿಚಾರಗಳ ಹಾದಿಯನ್ನೆ ಮುನಿವೆಂಕಟಪ್ಪ ಅವರು ಇಲ್ಲಿ ಮುಂದುವರೆಸಿದ್ದಾರೆ .'ದೇವರೋ ಅಥವ ಯಾರೋ ಅತಿಮಾನವರು ನಿಮ್ಮ ಗುಲಾಮಗಿರಿಯನ್ನು ನಿರ್ಮೂಲನೆ ಮಾಡುವುದಿಲ್ಲ,ನಿಮ್ಮ ಗುಲಾಮಗಿರಿಯನ್ನು ನೀವೇ ನಿರ್ಮೂಲನೆ ಮಾಡಬೇಕು.ನಿಮ್ಮ ವಿಮೋಚನೆಯು ರಾಜಕೀಯ ಅಧಿಕಾರದಲ್ಲಿದೆಯೇ ವಿನಾ ತೀರ್ಥಯಾತ್ರೆಮತ್ತು ವ್ರತಾಚರಣೆಗಳಲ್ಲಿ ಇಲ್ಲ-' ಎಂಬ ಡಾ.ಅಂಬೇಡ್ಕರ ಅವರ ಮಾತುಗಳೇ ಈ ಎಲ್ಲ ಲೇಖನಗಳ ಕೇಂದ್ರ ಕಾಳಜಿಯಾಗಿವೆ.

'ಮಿಸಲಾತಿ: ಒಂದು ಅವಲೋಕನ'-ಎಂಬುದು ಈ ಸಂಗ್ರಹದ ಒಂದು ಅತ್ಯುತ್ತಮ ಲೇಖನ.ಇಲ್ಲಿ ಲೇಖಕರ ದಲಿತಪರ ಕಾಳಜಿ, ಬದ್ಧತೆ, ಕಳಕಳಿ, ಅಧ್ಯಯನ, ವಿಚಾರ ಮಂಡನೆಯ ಸಂದರ್ಭದಲ್ಲಿನ ಗಾಂಭೀರ್ಯ -ಎಲ್ಲವೂ ಈ ಲೇಖನದಲ್ಲಿ ಡಾ. ಮುನಿವೆಂಕಟಪ್ಪ ಅವರೊಬ್ಬ ಸಮರ್ಥ ಚಿಂತಕರು ಎಂಬುದನ್ನು ಸಾಬೀತು ಪಡಿಸುವಂತಿವೆ.ತಾವು ಮಂಡಿಸುವ ವಿಚಾರಗಳಿಗೆ ಪೂರಕ ಸಾಮಗ್ರಿಗಳನ್ನಾಗಿ ಯಥೇಚ್ಛ ಉಲ್ಲೇಖಗಳನ್ನೂ,ಆಕರಗಳನ್ನು, ಕಾನೂನುಗಳನ್ನು,ಆದೇಶಗಳನ್ನು ಉಲ್ಲೇಖಿಸುವುದರಿಂದ ಮಿಸಲಾತಿ ಕುರಿತಂತೆ ಈವರೆಗೆ ಬಂದ ಲೇಖನಗಳಲ್ಲಿ ಇದು ಒಂದು ಗಮನಾರ್ಹ ಲೇಖನವಾಗಿದೆ.

ಮಿಸಲಾತಿ ಕುರಿತಂತೆ ಇರುವ ತಪ್ಪು ತಿಳುವಳಿಕೆಗಳು,ಅದನ್ನು ಜಾರಿ ಮಾಡುವ ಸಂದರ್ಭದಲ್ಲಿ ಆಗುವ ಮೋಸಗಳು,ಜಾರಿಯಾಗದೆ ಉಳಿವ ಆದೇಶಗಳು,ಸರ್ಕಾರಗಳು-ಮಾಧ್ಯಮಗಳು -ಮಿಸಲಾತಿಗಾಗಿಯೇ ಈಗ ಶುರುವಾಗಿರುವ ದಲಿತ-ದಲಿತರ ನಡುವಿನ ತಿಕ್ಕಾಟ,ಕೆಲ ವಿಶೇಷ ಪ್ರಕರಣಗಳ ಉದಾಹರಣೆ -ಇತ್ಯಾದಿ ವಿಷಯ ಸಾಮಗ್ರಿಯಿಂದ ಈ ಲೇಖನ ಒಂದು ಮನನೀಯವಾದ ಲೇಖನವಾಗಿದೆ.

ಒಟ್ಟಾರೆ ಈ ಪುಸ್ತಕವು ಈಗ ನಡೆಯುತ್ತಿರುವ ದಲಿತಪರ ಚಿಂತನೆ,ಚರ್ಚೆ, ಹೋರಾಟಗಳಿಗೆ ಒಂದು ಹೊಸ ಸೇರ್ಪಡೆಯಾಗಿದೆ.ಲೇಖಕರು ಹೇಳುವ ಕೆಲ ವಿಷಯಗಳನ್ನು ನಾವು ಒಪ್ಪದಿದ್ದರೂ,ಪ್ರಶ್ನಿಸಲು ಅವಕಾಶವಿದ್ದರೂ-ಅವರ ಪ್ರಾಮಾಣಿಕ ದಲಿತಪರ ಕಳಕಳಿ ಮತ್ತು ಕಾಳಜಿಗಳು ಈ ಪುಸ್ತಕವನ್ನು ತುಂಬಿಕೊಂಡಿವೆ.

-ಪ್ರಹ್ಲಾದ ಅಗಸನಕಟ್ಟೆ

ಬಿರುಗಾಳಿ (ಕಾದಂಬರಿ)
ಲೇ : ಡಾ.ಆರ್.ವಿ.ಭಂಡಾರಿ
ಪ್ರ : ಬಂಡಾಯ ಪ್ರಕಾಶನ , ಅರೆ ಅಂಗಡಿ , ತಾ॥ ಹೊನ್ನಾವರ ; ಉತ್ತರಕನ್ನಡ ಜಿಲ್ಲೆ
ಪುಟ :೮೦ ಬೆಲೆ : ರೂ.೩೦ /-

''ಮುಳುವಾದ ತಂತ್ರ ,ಸೊರಗಿದ ಕಾದಂಬರಿ''

'ಬಿರುಗಾಳಿ' ಆರ್.ವಿ.ಭಂಡಾರಿಯವರ ಎರಡನೇ ಕಾದಂಬರಿ ; ಕಿರುಕಾದಂಬರಿ.

ಒಬ್ಬ ಪ್ರೌಢಶಾಲೆಯ ಬಾಲಕನ ಮೂಲಕ ಬಿಚ್ಚಿಕೊಳ್ಳುವ ಈ ಕಾದಂಬರಿಯ ಲೋಕ ಮೂರು ತಲೆಮಾರುಗಳ ಕಥೆಯನ್ನು ಹೇಳುತ್ತದೆ. ಮೊದಲನೆಯ ತಲೆಮಾರಿನ ಕಥೆ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಭಾಗಿಯಾಗಿದ್ದರೆ ನಂತರದ ತಲೆಮಾರು ಸ್ವತಂತ್ರ ಭಾರತದ ಫಲವನ್ನು ಅನುಭವಿಸುವಲ್ಲಿ ಮುಳುಗಿದ್ದು. ಮೊದಲನೆಯ ತಲೆಮಾರು ಮೌಲ್ಯಗಳಿಗೆ, ಸಿದ್ಧಾಂತಗಳಿಗೆ ಹಾಗೆಯೇ ತ್ಯಾಗ ಬಲಿದಾನಗಳಿಗೆ ಬದ್ಧವಾಗಿದ್ದರೆ ಎರಡನೆಯ ತಲೆಮಾರು ಇವನ್ನೆಲ್ಲ ಗಾಳಿಗೆ ತೂರಿ ಸ್ವಾರ್ಥದಲ್ಲಿ ಮೈಮರೆತದ್ದು; ಮೌಲ್ಯ ಈ ತಲೆಮಾರಿಗೆ ಒಂದು ಆದರ್ಶವಲ್ಲ; ಭೋಗವೇ ಪರಮ ಗುರಿ. ಅದಕ್ಕಾಗಿ ಯಾವುದೇ ಮಾರ್ಗವನ್ನು ಹಿಡಿಯಲು ಈ ತಲೆಮಾರು ಹೇಸುವುದಿಲ್ಲ. ಮೂರನೆಯ ತಲೆಮಾರು ಈ ಬಾಲಕನದು. ಇಲ್ಲಿ ಮತ್ತೆ ಮೌಲ್ಯಗಳ ಕಡೆಗೆ ಹೊರಳುವ, ಆ ದಿಕ್ಕಿನಲ್ಲಿ ಚಿಂತಿಸುವ ಮನಸ್ಸೊಂದು ಜೀವಂತವಾಗಿರುವುದು ಕಾಣಿಸುತ್ತದೆ. ಹಾಗೆಯೇ ಈ ತಲೆಮಾರಿನಲ್ಲಿ, ಬಡತನ, ವರ್ಗ ವ್ಯತ್ಯಾಸ, ದಬ್ಬಾಳಿಕೆ ಅದರ ಫಲವಾಗಿ ಹುಟ್ಟಿಕೊಳ್ಳುವ ನಕ್ಸಲೈಟ್ ಚಳವಳಿ ಮಾದರಿಯಂಥ ಹೋರಾಟಗಳು ಹುಟ್ಟುವುದರ ಸೂಚನೆಗಳು ಇವೆ.

ಕಾದಂಬರಿಯ ಆರಂಭವೇ ಕುತೂಹಲವನ್ನು ಹುಟ್ಟಿಸುತ್ತದೆ. ಪ್ರೌಢಶಾಲೆಯ, ಸೂಕ್ಷ್ಮ ಮನಸ್ಸಿನ ಹುಡುಗನೊಬ್ಬ ತನ್ನ ಸಹಪಾಠಿಯೊಬ್ಬನ 'ಟಾಂಟ್' ಕೊಡುವ ಒಂದು ಮಾತಿನಿಂದ ಒಳಪ್ರಪಂಚಕ್ಕೆ ಸರಿಯುವುದು, ತನ್ನ ಸಿರಿವಂತಿಕೆಯಲ್ಲಿಯೂ ಅಸ್ವಸ್ಥನಾಗುವುದು, ಸಮಾಜದ ಬಗೆಗೆ ಚಿಂತಿಸುವುದು ಮತ್ತು ಈ ಮೂಲಕ ಮೂರು ತಲೆಮಾರುಗಳ ಕಥೆಯನ್ನು ಬಿಚ್ಚುವುದು ಈ ಕಾದಂಬರಿಯಲ್ಲಿದೆ. ವಾಸ್ತವವಾಗಿ ಈ ಕಾದಂಬರಿಯ ಹರವು ಬಹಳ ದೊಡ್ಡದು. ಅಂಕೋಲೆಯ ಸ್ವಾತಂತ್ರ್ಯದ ಹೋರಾಟವನ್ನು ಬಲ್ಲವರಿಗೆ ಅಂಥ ಕೆಲವು ಸೆಳಕುಗಳು ಈ ಕೃತಿಯಲ್ಲಿ ಹಾದು ಹೋಗುವುದು ತಿಳಿಯುತ್ತದೆ. ಈ ಹೋರಾಟದ ಸುತ್ತಲೇ ಒಂದು ಬೃಹತ್ ಕಾದಂಬರಿಯನ್ನು ರಚಿಸುವ ಅವಕಾಶವಿದೆ. ಆದರೆ ಭಂಡಾರಿಯವರ ಗಮನ ಅತ್ತ ಇಲ್ಲ. ಸ್ವಾತಂತ್ರ್ಯ ಹೋರಾಟವನ್ನು ಕೇವಲ ಒಂದು ಮೌಲ್ಯ ಸೂಚನೆಗಾಗಿ ಬಳಸಿಕೊಂಡು, ನಂತರ ಸ್ವಾತಂತ್ರ್ಯೋತ್ತರ ಭಾರತದ ವಿದ್ಯಮಾನಗಳನ್ನು ದಾಖಲಿಸುವ ದಿಕ್ಕಿನಲ್ಲಿಯೇ ಭಂಡಾರಿಯವರ ಮನಸ್ಸು ಕೆಲಸ ಮಾಡುತ್ತಿರುವುದನ್ನು ಗಮನಿಸಬಹುದು. ಆದರೆ ಇಲ್ಲಿಯೂ ಆಳಕ್ಕೆ ಹೋಗಿ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಮತ್ತು ಗಾಢವಾಗಿ ಚಿತ್ರಿಸಲು ಕೃತಿ ಪ್ರಯತ್ನಿಸುವುದಿಲ್ಲ. ಮೇಲಿನ ಸ್ತರದಲ್ಲಿ ಮಾತ್ರ ಸಂಗತಿಗಳನ್ನು ಗ್ರಹಿಸಿ, ಸಮಸ್ಯೆಯ ಸಂಕೀರ್ಣ ಸ್ವರೂಪವನ್ನು ಅರ್ಥಮಾಡಿಕೊಳ್ಳುವುದಕ್ಕೆ ಹೋಗದೆ, ತನ್ನ ಆಶಯವನ್ನು ಮಾತ್ರ ಸ್ಪಷ್ಟವಾಗಿ ದಾಖಲಿಸುತ್ತ ವೇಗವಾಗಿ ಸಾಗಿಹೋಗುವುದು ಕೃತಿಯ ಪರಿಣಾಮವನ್ನು ಮಸುಕುಗೊಳಿಸಿದೆ. ಕಾದಂಬರಿಯ ಆಶಯ ಮಾತ್ರ ಢಾಳಾಗಿ ಕಾಣಿಸುವಂತೆ ಕೃತಿಯ ಒಟ್ಟಾರೆ ಪರಿಣಾಮ ಮನಸ್ಸಿನಲ್ಲಿ ಅಚ್ಚಾಗುವುದಿಲ್ಲ.

ಬಾಲಕನ ಮೂಲಕ ಕಥೆ ಹೇಳುವ ತಂತ್ರವೇ ಕೃತಿಗೆ ಮುಳುವಾಗಿದೆ. ಬಾಲಕನ ಮನಸ್ಸಿಗೆ ನಿಲುಕುವ ಸಂಗತಿಗಳು ಎಷ್ಟು, ವಿಚಾರದ ಸ್ವರೂಪ ಏನು ಎಂಬುದು ತಿಳಿಯದೆ ಭಂಡಾರಿಯವರು ಎಲ್ಲವನ್ನು ಕೃತಿಯ ಚೌಕಟ್ಟಿನೊಳಕ್ಕೆ ತರಲು ಯತ್ನಿಸುತ್ತಾರೆ. ಹೀಗಾಗಿಯೇ

ಇಲ್ಲಿ ಪುಟ್ಟ ಬಾಲಕನೊಬ್ಬ ಪ್ರಬುದ್ಧ ಚಿಂತಕನಂತೆ ಮೌಲ್ಯಗಳ ಬಗ್ಗೆ ಚಿಂತಿಸುತ್ತಾನೆ; ವಿವೇಚಿಸುತ್ತಾನೆ. ಬಡತನ ನಿರ್ಮೂಲನೆ ಬಗ್ಗೆ, ಬಡತನ, ಸಿರಿವಂತಿಕೆ, ಜಮೀನ್ದಾರರು, ಬಂಡವಾಳಶಾಹಿಗಳ ವಿಲಾಸ, ಸಮಾಜಪರಿವರ್ತನೆಯ ಮಾರ್ಗ ಇತ್ಯಾದಿಗಳ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಾನೆ; ಉಪದೇಶ ನೀಡುತ್ತಾನೆ. ಇದೆಲ್ಲ ಈ ಕೃತಿಯನ್ನು ಬೆಳೆಸುವ ಬದಲು ಸೊರಗುವಂತೆ ಮಾಡಿವೆ.

ತಾನು ಹೇಳಬೇಕಾದದ್ದು ಏನು, ಅದಕ್ಕೆ ಅಗತ್ಯವಾದ ತಂತ್ರ ಯಾವುದು ಎಂಬುದನ್ನು ಲೇಖಕ ಸ್ಪಷ್ಟವಾಗಿ ತಿಳಿದಿರದಿದ್ದರೆ ಹೀಗೆ ಕೃತಿಗಳು ಸೊರಗುತ್ತವೆ. ಭಂಡಾರಿಯವರ ಈ ಕೃತಿಯಲ್ಲಿ ಆಗಿರುವುದು ಇದೇ. ಇಷ್ಟಾದರೂ ಕೃತಿ ಅಲ್ಲಲ್ಲಿ ಸರಳವಾದ ಮತ್ತು ಪರಿಣಾಮಕಾರಿಯಾದ ನಿರೂಪಣೆಯನ್ನು ಪಡೆದಿದೆ.

-ಜಿ.ಪಿ.ಬಸವರಾಜು

ದುರುಗ ಜಾನಪದ
ಮತ್ತು
ಗೊಲ್ಲ ಕಡಗ (ಎರಡೂ ಜಾನಪದ ಅಧ್ಯಯನಗಳು)
ಲೇ: ಮೀರಾಸಾಬಿಹಳ್ಳಿ ಶಿವಣ್ಣ

ಚಿತ್ರದುರ್ಗ ಜಿಲ್ಲೆಯ ಜಾನಪದಕ್ಕೆ ಸಂಬಂಧಿಸಿದಂತೆ ಅನೇಕ ಲೇಖನಗಳನ್ನು ಬರೆದು ಜನಪ್ರಿಯರಾಗಿರುವ ಡಾ. ಮೀರಾಸಾಬಿಹಳ್ಳಿ ಶಿವಣ್ಣನವರು ಇದೀಗ ಆ ಜಿಲ್ಲೆಯ ಜನಸಂಸ್ಕೃತಿಗೆ ಸಂಬಂಧಿಸಿದಂತೆ ಎರಡು ಮುಖ್ಯ ಕೃತಿಗಳನ್ನು ಏಕಕಾಲದಲ್ಲಿ ಪ್ರಕಟಿಸಿದ್ದಾರೆ. ''ಚಿತ್ರದುರ್ಗ ಜಿಲ್ಲೆಯ ಬುಡಕಟ್ಟುಗಳ ಬಗ್ಗೆ ಎರಡು ದಶಕಗಳಿಂದಲೂ ಕೆಲಸ ಮಾಡುತ್ತಿರುವ ನಾನು ಆಗಾಗ್ಗೆ ಬರೆದ ಲೇಖನಗಳಲ್ಲಿ ಕೆಲವನ್ನು ಇಲ್ಲಿ ಸಂಕಲಿಸಲಾಗಿದೆ'' ಎಂದು ಹೇಳಿಕೊಂಡಿದ್ದಾರೆ. ಅಂದರೆ ಕಳೆದ ಸುಮಾರು ೨೦ ವರ್ಷಗಳ ನಿರಂತರ ಶ್ರಮದ ಪರಿಣಾಮವಾಗಿ ಈ ಎರಡು ಕೃತಿಗಳಲ್ಲಿನ ೪೦ ಲೇಖನಗಳು ಸಿದ್ಧವಾಗಿವೆ. ಅತ್ಯಂತ ವ್ಯಾಪಕವಾದ ಕ್ಷೇತ್ರಕಾರ್ಯ, ಸೂಕ್ಷ್ಮ ವೀಕ್ಷಣೆ, ಅತ್ಯಮೂಲ್ಯ ಮಾಹಿತಿಗಳು ಮತ್ತು ಸಂಕೋಚ ಸಹಿತವಾದ ಒಳನೋಟಗಳಿಂದಾಗಿ ಈ ಎರಡೂ ಕೃತಿಗಳು ಗಂಭೀರವಾದ ಪರಿಶೀಲನೆಗೆ ಅರ್ಹವಾಗಿವೆ.

ಶಿವಣ್ಣನವರು ಕ್ಷೇತ್ರಕಾರ್ಯಕ್ಕೆ ಆಯ್ದುಕೊಂಡ ಪ್ರದೇಶ ಮತ್ತು ಸಮುದಾಯಗಳು ಬೇರೆ ಬೇರೆ ಕಾರಣಗಳಿಂದ ಅತ್ಯಂತ ಮುಖ್ಯವಾಗಿವೆ. ಮೊಳಕಾಲ್ಮೂರು, ಚಳ್ಳಕೆರೆ, ಹಿರಿಯೂರು, ಚಿತ್ರದುರ್ಗ, ಜಗಳೂರು ಮೊದಲಾದ ಪ್ರದೇಶಗಳಲ್ಲಿ ಶಿವಣ್ಣನವರು ಕ್ಷೇತ್ರಕಾರ್ಯ ಮಾಡಿದ್ದಾರೆ. ಈ ಜಾಗಗಳು ಜನವಸತಿಯುಳ್ಳ ಅತ್ಯಂತ ಪ್ರಾಚೀನ ಪ್ರದೇಶಗಳಾಗಿವೆ. ಸಮತಟ್ಟಾದ ಬಯಲುಪ್ರದೇಶ, ಪುಟ್ಟ ಪುಟ್ಟ ಗುಡ್ಡಗಳು ಮತ್ತು ಕಲ್ಲು ಬಂಡೆಗಳಿಂದ ಕೂಡಿದ ಈ ಜಾಗಗಳು ಶುಷ್ಕ ಹವಾಮಾನಕ್ಕೆ ಪ್ರಸಿದ್ಧವಾಗಿವೆ. ದಶಂಬರದಿಂದ ಫೆಬ್ರುವರಿಯವರೆಗೆ ಇಲ್ಲಿನ ಹವಾಮಾನ ಶುಷ್ಕವೂ ತಣ್ಣನೆಯದೂ ಆಗಿರುತ್ತದೆ. ಮುಂದೆ

ಮಾರ್ಚ್ ತಿಂಗಳಿಂದ ಮೇ ತಿಂಗಳಿನವರೆಗೆ ಬಿಸಿಲು ಏರುತ್ತಾ ಹೋಗಿ, ಜೂನ್ ತಿಂಗಳ ಹೊತ್ತಿಗೆ ದಕ್ಷಿಣ ಪಶ್ಚಿಮದ ಕಡೆಯಿಂದ ಬೀಸುವ ಮುಂಗಾರು ಮಳೆಹನಿಗಳಿಗಾಗಿ ಜನರು ಆಗಸದ ಕಡೆಗೆ ನೋಡುತ್ತಿರುತ್ತಾರೆ. ಈ ನಿರೀಕ್ಷೆ ನಿರಂತರವಾಗಿ ದೀಪಾವಳಿವರೆಗೆ ಮುಂದುವರೆಯುತ್ತದೆ. ಮುಂದಿನ ದಿನಗಳು ಮುಂಗಾರೋತ್ತರ ದಿನಗಳು. ಬಿದ್ದ ನಾಲ್ಕು ಹನಿ ಮಳೆಯಿಂದಾಗಿ ಭೂಮಿಯಲ್ಲಿ ಹಸಿರು ಚಿಗುರುತ್ತದೆ. ದನಗಳಿಗೆ, ಕುರಿಗಳಿಗೆ, ಆಡುಗಳಿಗೆ ಹೊಟ್ಟೆ ತುಂಬುವ ಕಾಲ. ಮೈಸೂರು ರಾಜ್ಯ ಗೆಜೆಟಿಯರ್ ಪ್ರಕಾರ ಇಲ್ಲಿ ಬೀಳುವ ಮಳೆಯ ವಾರ್ಷಿಕ ಪ್ರಮಾಣ ೫೭೪.೯ ಮಿ.ಮಿ. ಕಳೆದ ೯೧ ವರ್ಷಗಳಲ್ಲಿ ಸರಾಸರಿ ೩೯ ದಿನಗಳಲ್ಲಿ ಮಾತ್ರ ಇಲ್ಲಿ ಮಳೆ ಬಂದಿದೆ. ಈ ಹವಾಮಾನವು ಯಾವುದೇ ಪಶುಪಾಲಕ ಗುಂಪಿಗೆ ಹೇಳಿಮಾಡಿಸಿದ್ದು. ಕಡಿಮೆ ಮಳೆ, ಕಡಿಮೆ ಕಾಡು, ಒಂದೆರಡು ಮಳೆಗೆ ಚಿಗುರುವ ಹುಲ್ಲುಗಾವಲುಗಳು, ಪುಟ್ಟ ಪೊದರುಗಳ ನಡುವೆಯೇ ವಲಸೆಗಾರ ಪಶುಪಾಲಕ ಸಂಸ್ಕೃತಿ ಚಿಗುರೊಡೆಯುತ್ತದೆ. ಇಲ್ಲಿನ ಇಂಥ ವಿಶಿಷ್ಟ ಹವಾಮಾನದ ಪರಿಣಾಮವಾಗಿಯೇ ಈ ಜಾಗಗಳು ಅತ್ಯಂತ ಪ್ರಾಚೀನ ಜನವಸತಿಯ ನೆಲೆಗಳೂ ಆಗಿವೆ.

ಗೊಲ್ಲರು ಮತ್ತು ಬೇಡರು ಈ ಭಾಗದ ಪ್ರಮುಖ ಪಶುಪಾಲಕರು. ಅತ್ಯಂತ ಪ್ರಾಚೀನವಾದ ಅನೇಕ ನಡಾವಳಿಗಳನ್ನು ಇಂದಿನವರೆಗೂ ಹೊತ್ತು ತಂದವರು. ಮಾನವ ಶಾಸ್ತ್ರಜ್ಞರಿಗೆ, ಜಾನಪದ ವಿದ್ವಾಂಸರಿಗೆ, ಪುರಾತತ್ವ ಶಾಸ್ತ್ರಜ್ಞರಿಗೆ ಈ ಸಮುದಾಯಗಳು ನೀಡಬಹುದಾದ ಮಾಹಿತಿ ಮತ್ತು ಒಳನೋಟಗಳು ಊಹನಾತೀತ. ಒಂದು ಕಾಲಕ್ಕೆ ಪೂರ್ತಿ ವಲಸೆಗಾರರಾಗಿರಬಹುದಾದ ಈ ಸಮುದಾಯಗಳು ಮಹಾರಾಷ್ಟ್ರ ರಾಜ್ಯದ ಪೂರ್ವ ಭಾಗ, ಕರ್ನಾಟಕ ರಾಜ್ಯದ ಉತ್ತರ ಭಾಗ, ಆಂಧ್ರ ಪ್ರದೇಶದ ಪಶ್ಚಿಮ ಭಾಗ ಮತ್ತು ಮಧ್ಯಪ್ರದೇಶದ ದಕ್ಷಿಣಭಾಗಗಳಲ್ಲಿ ಸಂಚರಿಸುತ್ತಿರಬೇಕು. ಈಗಣ ರಾಜ್ಯಗಳ ಕಲ್ಪನೆಯನ್ನು ಕಳಚಿಕೊಂಡು ನೋಡಿದರೆ ನಾನು ಮೇಲೆ ಹೇಳಿದ ಪ್ರದೇಶಗಳು ಅಖಂಡವಾಗಿ ವಲಸೆಗಾರ ಪಶುಪಾಲಕ ಸಂಸ್ಕೃತಿಗೆ ಅತ್ಯಂತ ಅನುಕೂಲಕರವಾಗಿರುವುದನ್ನು ಕಾಣಬಹುದು. ಮೈಲಾರಲಿಂಗನ ಭಕ್ತರಾದ ವಲಸೆಗಾರ ಕುರುಬರು ಈಗಲೂ ಈ ಪ್ರದೇಶಗಳಲ್ಲಿ ಸಂಚರಿಸುವುದನ್ನು ನಾನು ಗಮನಿಸಿದ್ದೇನೆ.

ಪೂರ್ಣ ವಲಸೆಗಾರ ಪಶುಪಾಲಕರಾಗಿದ್ದ ಸಮುದಾಯಗಳು ಕಾಲಾಂತರದಲ್ಲಿ ಅರೆವಲಸೆಗಾರ ಪಶುಪಾಲಕರಾಗಿ ಮಾರ್ಪಟ್ಟ ಕಾಲದಲ್ಲಿ (ಕರ್ನಾಟಕದ ಮಟ್ಟಿಗೆ-ಸುಮಾರು ೮-೯ನೇ ಶತಮಾನ) ಪ್ರಾಯಸ್ಥ ಗಂಡಸರು ಮತ್ತು ಹೆಂಗಸರು ಗುಡಿಸಲಲ್ಲಿ ಉಳಿದುಕೊಂಡರೆ, ಗಟ್ಟಿಮುಟ್ಟಾದ ಗಂಡಸರು ದನ-ಕುರಿಗಳೊಂದಿಗೆ ವಲಸೆ ಹೋಗುತ್ತಿದ್ದರು. ತುಂಗಭದ್ರಾ ನದಿ ತೀರದಲ್ಲಿ ಇಂದಿಗೂ ಇಂಥ ಅರೆ ವಲಸೆಗಾರ ಪಶುಪಾಲಕ ಸಮುದಾಯಗಳು ಇವೆ. ಬಹುಮಟ್ಟಿಗೆ ೧೨ನೇ ಶತಮಾನದ ಹೊತ್ತಿಗೆ ಈ ಅರೆವಲಸೆಗಾರ ಪಶುಪಾಲಕ ಸಮುದಾಯಗಳು ಕೃಷಿ ವಲಸೆಗಾರ ಪಶುಪಾಲಕ ಸಮುದಾಯಗಳಾಗಿ ಪರಿವರ್ತನೆಗೊಂಡವು. ಇದಕ್ಕೆ ಮುಖ್ಯ ಕಾರಣ ಮಳೆ ನೀರನ್ನು ಕೃತಕ ಕೆರೆಗಳಲ್ಲಿ ಸಂಗ್ರಹಿಸುವ ಕಲೆಗಾರಿಕೆಯನ್ನು ಜನರು ಬೆಳೆಸಿಕೊಂಡದ್ದು. ಕಂಪಿಲ ಮತ್ತು ಕುಮಾರರಾಮರು

ಈ ಕೆಲಸವನ್ನು ಬಹಳ ವ್ಯವಸ್ಥಿತವಾಗಿ ಮಾಡಿದಂತಿದೆ. ಎರಡು ಬೆಟ್ಟಗಳ ನಡುವೆ ಮಣ್ಣಿನ ದಂಡೆಯನ್ನು ನಿರ್ಮಿಸಿ ಅದರಲ್ಲಿ ವ್ಯರ್ಥವಾಗಿ ಹರಿದು ಹೋಗುತ್ತಿದ್ದ ಮಳೆ ನೀರನ್ನು ಸಂಗ್ರಹಿಸಿಡಲಾಯಿತು. ಈ ನೀರನ್ನು ಕೃಷಿ ಕೆಲಸಗಳಿಗಾಗಿ ಬಳಸಿಕೊಳ್ಳುವ ಹೊತ್ತಿಗೆ ಅರೆ ವಲಸೆಗಾರ ಪಶುಪಾಲಕ ಸಮುದಾಯಗಳು ಕೃಷಿ -ಪಶುಪಾಲಕ ಸಮುದಾಯಗಳಾಗಿ ಬದಲಾದವು. ಚಿತ್ರದುರ್ಗ, ಬಳ್ಳಾರಿ ಪ್ರದೇಶಗಳಲ್ಲಿರುವ ಈ ಬಗೆಯ ಕೆರೆಗಳು ವಿಶೇಷವಾದ ಅಧ್ಯಯನಕ್ಕೆ ಅರ್ಹವಾಗಿವೆ.

ಕುಮಾರರಾಮ -ಕಂಪಿಲರು ಸ್ವತಃ ಬೇಡ ಸಮುದಾಯಕ್ಕೆ ಸೇರಿದವರಾದ್ದರಿಂದ ಅವರ ಕೆಲಸಗಳು ಬೇಡ ಸಮುದಾಯದ ಮೇಲೆ ವಿಶೇಷವಾದ ಪರಿಣಾಮ ಬೀರಿರಬೇಕು. ಒಳನಾಡಿನ ಬರಡುಭೂಮಿಯು ಕೃಷಿ ಭೂಮಿಯಾಗಿ ಮಾರ್ಪಟ್ಟಾಗ ಬೇಡರು, ಕುರುಬರೂ ಸೇರಿದಂತೆ ಅನೇಕ ಸಮುದಾಯಗಳು ಅರೆಕೃಷಿಕರಾಗಿ ಮಾರ್ಪಟ್ಟವೆ. ಈ ಮಾರ್ಪಾಡು ಚಾರಿತ್ರಿಕವಾದುದು ಮತ್ತು ಬಗೆ ಬಗೆಯ ಸಾಂಸ್ಕೃತಿಕ ರಚನೆಗಳಿಗೆ ಕಾರಣವಾದುದು.

ಶಿವಣ್ಣನವರ ಎರಡು ಪುಸ್ತಕಗಳಿಗೆ ಸಂಬಂಧಿಸಿದಂತೆ ಮೇಲಿನ ಮಾತುಗಳನ್ನು ಹೇಳಲು ಕಾರಣವೆಂದರೆ, ಅವರ ಪುಸ್ತಕಗಳಲ್ಲಿ ವಲಸೆಗಾರ, ಅರೆವಲಸೆಗಾರ ಮತ್ತು ಕೃಷಿ ವಲಸೆಗಾರ ಸಂಸ್ಕೃತಿಗೆ ಸಂಬಂಧಿಸಿದ ವಿವರಗಳಿರುವುದು. ಒಮ್ಮೊಮ್ಮೆ ಈ ವಿವರಗಳು ಒಂದಕ್ಕೆ ಇನ್ನೊಂದು ಪೂರಕವಾಗಿರುವಂತೆ ಕಂಡುಬರುತ್ತವೆ; ಮತ್ತೊಮ್ಮೆ ಅವು ವೈರುದ್ಧ್ಯಗಳಿಂದ ಕೂಡಿರುವಂತೆ ತೋರುತ್ತವೆ. ಇನ್ನೊಮ್ಮೆ ಅವು ಸಮಾನಾಂತರವಾಗಿರುವಂತೆಯೂ ಭಾಸವಾಗುತ್ತವೆ. ಚರಿತ್ರೆಯ ಭಿನ್ನ ಘಟ್ಟಗಳೆಲ್ಲವೂ ವರ್ತಮಾನದಲ್ಲಿ ಪ್ರತ್ಯಕ್ಷವಾದಾಗ ಇಂಥ ಸಂದಿಗ್ಧಗಳು ಸಹಜವಾಗಿಯೇ ಉಂಟಾಗುತ್ತವೆ. ಈ ಎಲ್ಲ ಸಂದಿಗ್ಧಗಳ, ಸಂಘರ್ಷಗಳ ಅರಿವು ಶಿವಣ್ಣನವರಿಗೆ ಇರುವುದರಿಂದಲೇ ಅವರ ಎಲ್ಲ ಲೇಖನಗಳೂ ಒಂದು ಬಗೆಯ ಸಂಕೋಚದಿಂದ ಕೂಡಿವೆ. ಅವರಿಗೆ ಅವರ ಕೈಯಲ್ಲಿರುವ ಮಾಹಿತಿಗಳ ಬಗ್ಗೆ ತುಂಬ ಹೆಮ್ಮೆ ಇದೆ, ಗೌರವ ಇದೆ. ಅವುಗಳನ್ನು ವ್ಯಾಖ್ಯಾನಿಸುವಾಗ ಮಾತ್ರ ಸ್ವಲ್ಪ ಹಿಂಜರಿಕೆ ತೋರುತ್ತಾರೆ. ವಿಸ್ತಾರವಾದ ಓದು, ಚರ್ಚೆಗಳಿಂದ ಮಾತ್ರ ಈ ಮಿತಿಗಳಿಂದ ಪಾರಾಗಬಹುದು.

'ದುರುಗ ಜಾನಪದ 'ದಲ್ಲಿ ಹೆಚ್ಚಾಗಿ ಸಮೀಕ್ಷಾತ್ಮಕ ಲೇಖನಗಳಿವೆ. 'ಚಿತ್ರದುರ್ಗ ಜಿಲ್ಲೆಯ ಜಾನಪದ ', 'ಜಿಲ್ಲೆಯ ಬುಡಕಟ್ಟುಗಳು -ಸಾಂಸ್ಕೃತಿಕ ಸಮೀಕ್ಷೆ', 'ಜಿಲ್ಲೆಯ ಬುಡಕಟ್ಟುಗಳು ಹಾಗೂ ಅವುಗಳ ಜಾನಪದ ಸಾಹಿತ್ಯ', 'ನಾಯಕನಹಟ್ಟಿಯ ಪಾಳೆಯಗಾರರು- ಒಂದು ಮುನ್ನೋಟ', 'ಜಿಲ್ಲೆಯ ಜನಪದ ಕಲೆಗಳು', 'ಚಳ್ಳಕೆರೆ ತಾಲೂಕಿನ ಜಾನಪದ '- ಇವೆಲ್ಲ ಪರಿಚಯಾತ್ಮಕ ಲೇಖನಗಳು. 'ಗಣೆಯವರು', 'ಥಿಕ್ಕಿ ಹಬ್ಬ ಮತ್ತು ಹಾಲುರಾಮೇಶ್ವರ' - ಈ ಲೇಖನಗಳು ವಿಶ್ಲೇಷಣಾತ್ಮಕವಾಗಿವೆ. ಈ ಬಗೆಯ ವಿಶ್ಲೇಷಣಾತ್ಮಕ ಮನೋಧರ್ಮವು 'ಗೊಲ್ಲ ಕಡಗ 'ದ ಎಲ್ಲ ಲೇಖನಗಳಲ್ಲಿಯೂ ಕಂಡುಬರುತ್ತದೆ. ಈ ಪುಸ್ತಕದ 'ಎತ್ತಪ್ಪನ ಸಂಪ್ರದಾಯ', 'ಜುಂಜಪ್ಪನ ಕಾವ್ಯ', 'ಕಾಡುಗೊಲ್ಲರ ಶವ ಸಂಸ್ಕಾರಗಳು' 'ಥಗಮು - ಒಂದು ರೋಚಕ ಜನಪದ ಕಾವ್ಯ', 'ಉಚ್ಚಂಗಮ್ಮ' - ಮೊದಲಾದ ಲೇಖನಗಳು ವಿಶಿಷ್ಟವಾಗಿವೆ.

ಈಗ ನಾನು ಮತ್ತೆ ಮೊದಲು ಹೇಳಿದ ಸಾಂಸ್ಕೃತಿಕ ಪರಿವರ್ತನೆಯ ವಿಷಯಕ್ಕೆ ಬರುತ್ತಿದ್ದೇನೆ.'ದುರುಗ ಜಾನಪದ'ದ ಮೊದಲ ಲೇಖನದಲ್ಲಿ ಶಿವಣ್ಣನವರು 'ಕಾಡುಗೊಲ್ಲರು ಮತ್ತು ಮ್ಯಾಸಬೇಡರು ಮೂಲದಲ್ಲಿ ಒಂದೇ ಜನಾಂಗವಾಗಿದ್ದಿರಬೇಕು' (ಪು:೨) ಎಂದು ಊಹಿಸಿದ್ದಾರೆ.ಮೂಲದಲ್ಲಿ ಅಂದರೆ ಯಾವಾಗ ಎಂಬುದು ಖಚಿತವಿಲ್ಲ. ಆದರೆ ಮುಂದೆ ಅವರು ಈ ಎರಡೂ ಸಮುದಾಯಗಳ ನಡುವೆ ನಡೆದ ಸಂಘರ್ಷದ ವಿವರಗಳನ್ನು ದಾಖಲಿಸುತ್ತಾ ಹೋಗುತ್ತಾರೆ.ಒಂದು ಹಂತದಲ್ಲಿಯಂತೂ ''ಕಾಡುಗೊಲ್ಲರ ಮೂಲಕ್ಕೆ ಸೇರಿದ ಮ್ಯಾಸಬೇಡರಲ್ಲಿ ಈ ಬಗೆಯ 'ಗಣಿ ಕಾವ್ಯ'ಗಳು ಇಲ್ಲದಿರುವುದು ಆಶ್ಚರ್ಯಕರ ಬೆಳವಣಿಗೆ''(ಪು:೩)ಎಂದು ಅವರು ಬರೆದಿದ್ದಾರೆ.ಆದರೆ ಇನ್ನೊಂದೆಡೆ ಅವರು ಬರೆಯುವುದು ಹೀಗೆ-''ಮೂಲತಃ ಗಿರಿಜನರೂ ಬೇಟೆಗಾರರೂ ಆಗಿದ್ದ ಮ್ಯಾಸಬೇಡರು ಕೃಷಿ ಸಂಸ್ಕೃತಿಗೆ ತಮ್ಮನ್ನು ಯಾವಾಗ ಒಡ್ಡಿಕೊಂಡರು ಎಂಬುದು ಒಂದು ಕುತೂಹಲಕರ ಘಟ್ಟ.ಮ್ಯಾಸಬೇಡರ ಸಾಂಸ್ಕೃತಿಕ ವೀರರಾದ ಜಗಲೂರು ಪಾಪನಾಯಕ, ಕಾದಿರಿ ಪಾಲನಾಯಕರು ಪಶುಪಾಲಕರೇ ಆಗಿರುವುದನ್ನು ಗಮನಿಸಬಹುದು'' (ಪು:೨೧). ಹೀಗೆ ಬರೆಯುವಾಗ ಶಿವಣ್ಣನವರಲ್ಲಿ ಈ ಎರಡೂ ಸಮುದಾಯಗಳ ಮೂಲದ ಬಗ್ಗೆ ಪೂರ್ವಗ್ರಹೀತವಾದ ಒಂದು ಚಿಂತನೆಯಿದೆ.ಅಂಥ ಚಿಂತನೆಯಿರುವುದು ತಪ್ಪೆಂದು ನಾನು ಹೇಳುತ್ತಿಲ್ಲ.ಅಂಥ ಚಿಂತನೆಯು ವರ್ತಮಾನ ಕಾಲದ ಕೆಲವು ವೀಕ್ಷಣೆಗಳನ್ನು ವಿವರಿಸಲು ಮಾತ್ರ ಸಹಾಯಮಾಡುವುದಿಲ್ಲ.ಹೀಗಾಗಿ ಬೇಡರಲ್ಲಿ ಗಣಿಕಾವ್ಯಗಳು ಇಲ್ಲ ಎಂದು ಹೇಳುವಷ್ಟರಲ್ಲಿ ಅವು ನಿಂತು ಹೋಗುತ್ತವೆ.ಯಾಕೆ ಇಲ್ಲ? ಅಥವಾ ಹಾಗೆ ಇಲ್ಲದ್ದರಿಂದ ಆದ ನಷ್ಟ ಏನು ಎಂಬುದನ್ನು ಅವು ವಿವರಿಸಲಾರದಾಗಿವೆ.ಕೆಲವು ಬಗೆಯ ಗೈರುಹಾಜರಿಗಳನ್ನು ಹೇಗೆ ಅರ್ಥವಿಸಬೇಕು ಎಂಬ ಸಮಸ್ಯೆ ಎರಡೂ ಕೃತಿಗಳಲ್ಲಿ ಹಾಗೇ ಉಳಿದುಕೊಂಡಿದೆ.

ಜುಂಜಪ್ಪನ ಕಾವ್ಯದ ಬಗ್ಗೆ ಬರೆಯಲಾದ ಲೇಖನದಲ್ಲಿ ಶಿವಣ್ಣನವರು ಅಪೂರ್ವವಾದ ಕೆಲವು ಒಳನೋಟಗಳನ್ನು ನೀಡಿದ್ದಾರೆ.ಜುಂಜಪ್ಪನ ಕಾವ್ಯವನ್ನು ಅವರು ಪರಿಭಾವಿಸುವುದು ಹೀಗೆ-''ಮೂರು ತಲೆಮಾರುಗಳ ಬೀಸುಳ್ಳ ಈ ಕಾವ್ಯದ ಕೇಂದ್ರ, ಪಶುಪಾಲನೆ.ಒಂದು ಕಾಲಕ್ಕೆ ಭಾರತದ ಮಹೋನ್ನತ ಸಂಸ್ಕೃತಿಯ ಪ್ರತೀಕವಾಗಿದ್ದ ಪಶುಪಾಲನೆಯ ಕೊನೆಯ ದಿನಗಳ ಚಿತ್ರಣ ನೀಡುವ ದೃಷ್ಟಿಯಿಂದ ಜುಂಜಪ್ಪನ ಕಾವ್ಯಕ್ಕೆ ವಿಶೇಷ ಮಹತ್ವವಿದೆ.ಪಶುಪಾಲನೆ ಬಿಟ್ಟು ಕುರಿಸಾಕನೆಯ ಹೊರಳುದಾರಿಯಲ್ಲಿರುವ ಸೂಕ್ಷ್ಮ ಚಿತ್ರಣವನ್ನು ಕಾವ್ಯ ನೀಡುತ್ತದೆ''(ಪು:೩೮).'ಪಶುಪಾಲಕ ಸಂಸ್ಕೃತಿ ಸಂಪೂರ್ಣ ನಿರ್ನಾಮಗೊಂಡ ಘಟ್ಟದಲ್ಲಿ ನಿಂತು ಹಳೆಯದನ್ನು ಮೆಲುಕು ಹಾಕುತ್ತ ಚಿಂತಿಸುವ ವಿಶಿಷ್ಟಕಾವ್ಯ' ವೆಂದು ಅವರು ಮೌಖಿಕ ಕಾವ್ಯವೊಂದನ್ನು ಗ್ರಹಿಸುವ ರೀತಿ ರೋಚಕವಾಗಿದೆ. ಸಾಮಾಜಿಕ ಬದಲಾವಣೆ ಮತ್ತು ಜನಪದ ಮಹಾಕಾವ್ಯಗಳನ್ನು ಹೀಗೆ ಅರ್ಥವಿಸುವ ರೀತಿಯೂ ಹೊಸದಾದುದು.'ಥಗಮು' ಮತ್ತು 'ಊದೋಗಣೆ 'ಗಳ ಕುರಿತಾದ ವಿವರಗಳೂ ನವೀನವಾಗಿವೆ.

ಸಾಹಿತ್ಯ ಸಂವಾದ :೯೪-೯೫

ಹೀಗೆ ಶಿವಣ್ಣನವರ ಈ ಎರಡೂ ಕೃತಿಗಳು ಕನ್ನಡ ಜಾನಪದ ಅಧ್ಯಯನ ಮಾತ್ರವಲ್ಲ, ಭಾರತೀಯ ಜಾನಪದ ಅಧ್ಯಯನ ಸಂದರ್ಭದಲ್ಲಿಯೇ ತುಂಬ ಮುಖ್ಯವಾದ ಕೃತಿಗಳಾಗಿವೆ. ವಲಸೆಗಾರ ಪಶುಪಾಲಕರ, ಅರೆ ವಲಸೆಗಾರ ಪಶುಪಾಲಕರ ಮತ್ತು ಕೃಷಿ ವಲಸೆಗಾರ ಪಶುಪಾಲಕರ ಬಗ್ಗೆ ಆಸಕ್ತಿ ಇರುವವರೆಲ್ಲ ಆಳವಾಗಿ ಅಧ್ಯಯನ ಮಾಡಬೇಕಾದ ಕೃತಿಗಳಿವು.

ಕೊನೆಯಲ್ಲಿ ಒಂದು ಮಾತು: ಶಿವಣ್ಣನವರು ವಿಷಯ ಮಂಡನೆಯಲ್ಲಿ ಇನ್ನಷ್ಟು ಶಿಸ್ತನ್ನು ತೋರುವ ಅವಶ್ಯಕತೆಯಿದೆ. ಪುನರಾವರ್ತನೆಗಳು ಹೇರಳವಾಗಿವೆ. ಅನೇಕ ಕಡೆ ಭಾಷೆ ತುಂಬಾ ರಮ್ಯವಾಗಿದೆ. ಪರಿಭಾಷೆಗಳು ಅಲ್ಲಲ್ಲಿ ಖಚಿತತೆಯನ್ನು ಕಳೆದುಕೊಂಡಿವೆ. ಕಾಡುಗೊಲ್ಲರು, ಬೇಡರು, ಕುರುಬರನ್ನು ನಾವು 'ಜನಾಂಗ'ಗಳೆಂದು ಕರೆಯಬಾರದು. ಜನಾಂಗ ಎಂಬುದು 'ರೇಸ್' ಎಂಬ ಆಂಗ್ಲಪದಕ್ಕೆ ಸಂವಾದಿಯಾದ ಪದ. ಜಗತ್ತಿನಲ್ಲಿ ಮುಖ್ಯವಾಗಿ ನಾಲ್ಕು ಜನಾಂಗಗಳಿವೆ. ಅವುಗಳೆಂದರೆ, ನಿಗ್ರೋಯಿಡ್, ಆಸ್ಟ್ರಲಾಯಿಡ್, ಕಾಕಸಾಯಿಡ್ ಮತ್ತು ಮಂಗೋಲಾಯಿಡ್. ಕರ್ನಾಟಕದಲ್ಲಿರುವ ಪಶುಪಾಲಕರಲ್ಲಿ ಇನ್ನೂ ಸಮುದಾಯ (ಕಮ್ಯುನಿಟಿ) ಪ್ರವೃತ್ತಿಗಳಿದ್ದು ಈಗ ಅವು ನಿಧಾನವಾಗಿ 'ಜಾತಿ' (ಕ್ಯಾಸ್ಟ್)ಗಳಾಗಿ ಮಾರ್ಪಡುತ್ತಿವೆ. ಈ ಅರ್ಥದಲ್ಲಿ ನಾವು ಜನಾಂಗ, ಜಾತಿ, ಸಮುದಾಯ, ಬುಡಕಟ್ಟು ಮೊದಲಾದ ಪದಗಳನ್ನು ಅವುಗಳ ಅರ್ಥವರಿತು ಬಳಸಬೇಕು. ಆಗಲೇ ಕನ್ನಡ ಜಾನಪದ ಅಧ್ಯಯನ ಹೊಸ ಎತ್ತರಕ್ಕೇರಲು ಸಾಧ್ಯ.

-ಪುರುಷೋತ್ತಮ ಬಿಳಿಮಲೆ

ನಿಂತು ನೋಡುವೆ ಅವುಗಳತ್ತಲೆ (ಲಲಿತ ಪ್ರಬಂಧಗಳು)
ಲೇ: ಟಿ. ಆರ್. ರಾಧಾಕೃಷ್ಣ
ಪ್ರ: ಕೀರ್ತಿ ಪ್ರಕಾಶನ, ಬೆಂಗಳೂರು ೫೬೦೦೪೬ ಬೆಲೆ : ೪೮ /-

ಕತೆಗಾರ ರಾಧಾಕೃಷ್ಣ ಈಗ ಪ್ರಬಂಧಗಳ ಸಂಕಲನ ಒಂದನ್ನು ಪ್ರಕಟಿಸಿದ್ದಾರೆ. ಕಥನ ಎನ್ನುವುದು ಏನೆಂದರೂ ಸ್ವಾಭಿವ್ಯಕ್ತಿಯ ಪರೋಕ್ಷಮಾರ್ಗ. ಪ್ರಬಂಧವೋ ಸ್ವಾಭಿವ್ಯಕ್ತಿಯ ಪ್ರತ್ಯಕ್ಷಮಾರ್ಗ. 'ಕಥನ' ಮತ್ತು 'ಭಾವಗೀತ' ಮಾರ್ಗದ ಫರಕು ಇಲ್ಲಿದೆ. ಭಾವಗೀತೆ ಹೇಗೋ ಹಾಗೆಯೇ ಒಳ್ಳೆಯ ಪ್ರಬಂಧವೂ ಆತ್ಮವೇಧೆಯ ಅಭಿವ್ಯಕ್ತಿ. ಆದುದರಿಂದಲೇ ಭಾವಗೀತೆಯಲ್ಲಿ ಆಗುವಂತೆ ಪ್ರಬಂಧದಲ್ಲಿಯೂ ಒಂದು ವಿಶಿಷ್ಟವೂ ಸ್ವಾಯತ್ತವೂ ಆದ ಮನೋಧರ್ಮದ ಗ್ರಹಿಕೆ ಮುಖ್ಯವಾಗುತ್ತದೆ. ಪ್ರಬಂಧವನ್ನು ರಚಿಸುವ ಮನೋಧರ್ಮ, ತಾನೇ ಉರಿಯುವುದರಿಂದ ತಾನು ಬೆಳಕು ನಿರ್ಮಿಸುವ ಸ್ವಧರ್ಮ ಕ್ರಾಂತಿಯಲ್ಲಿ ತೊಡಗದಂತಹ ಮನೋಧರ್ಮವಾಗಿದ್ದರೆ, ಅಂಥ ಮನೋಧರ್ಮ ನಿರ್ಮಿಸುವ ಪ್ರಬಂಧಗಳ ಓದು ನನಗಂತೂ ಹಿಂಸೆ. ರಾಧಾಕೃಷ್ಣರ ಮನಸ್ಸು ಪ್ರತಿಫಲಿಸುವ ಕನ್ನಡಿಯಲ್ಲ... ದಗ್ಧಶೀಲವಾದ ಊದುಬತ್ತಿ. ಆದ್ದರಿಂದಲೇ ಅವರ ಬರವಣಿಗೆಯ ಹೆಚ್ಚು ಭಾಗ ತನ್ನ ಆಪ್ತತೆಯಿಂದ, ಆರ್ದ್ರತೆಯಿಂದ, ವಿಲಕ್ಷಣ ಹೊಳಹುಗಳಿಂದ ಸೂಕ್ಷ್ಮ ಓದಿಗೆ

ಪ್ರಿಯವಾಗುತ್ತದೆ.'ಭಾಷೆಯ ಏರಿಳಿತಗಳು'-ಭಾಷಾವಿಜ್ಞಾನಿ ಬರೆಯಲಾಗದ, ಕೇವಲ ಸಾಹಿತಿ ಮಾತ್ರಬರೆಯಬಹುದಾದ ಭಾಷಾಜಿಜ್ಞಾಸೆ.ಬಾಲ್ಯದ ಭಾಷೆ,ಯೌವನದ ಭಾಷೆ, ಮುಪ್ಪಿನ ಭಾಷೆ ಎಂದು ಭಾಷೆಯನ್ನು ಹೊಸತೆರನಾಗಿ ಪರಿಭಾವಿಸುವ ಕ್ರಮ ರೋಚಕ ವಾಗಿದೆ.'ವೃಕ್ಷ ದೇವತೆಗಳು' ನನಗೆ ಪ್ರಿಯವಾದ ಇನ್ನೊಂದುಪ್ರಬಂಧ.ಇಲ್ಲಿ ಕನ್ನಡಿಯಕೆಲಸ ಬಹಳ ಕಡಿಮೆ. ಇಲ್ಲಿರುವುದು ಅಡಿಗರ ಭಾಷೆಯಲ್ಲಿ ಹೇಳುವುದಾದರೆ 'ಸ್ವಯಂದೀಪಕತೆಯ ಗುಣ.' ಅನಂತ ಬೆಳಗುಗಳಿಂದ ಬೇಂದ್ರೆ ಒಂದು ಬೆಳಗನ್ನು ಬಿಡಿಸಿ ಕೊಂಡಂತೆ, ರಾಧಾಕೃಷ್ಣ ಇಲ್ಲಿ ಕಾಡಿನಿಂದ ಕೆಲವು ಮರಗಳನ್ನು ತಮ್ಮವಾಗಿ ಬಿಡಿಸಿ ಕೊಂಡಿದ್ದಾರೆ. ಈ ಮರಗಳೊಂದಿಗೆ ಲೇಖಕನೂ ತಾದಾತ್ಮ್ಯ ಪಡೆಯುವುದರಿಂದ ಈ ಮರಗಳಿಗೆ ವಿಶಿಷ್ಟವಾದ ಜೀವಲಕ್ಷಣ ಪ್ರಾಪ್ತವಾಗಿದೆ. ಪರವನ್ನು ತನ್ನ ಸ್ವಂತದ್ದಾಗಿ ಮಾಡಿಕೊಳ್ಳುವುದೇ ಸ್ವಾಯತ್ತತೆಯ ಸಂವೇದನಾ ಮಾರ್ಗ.'ವೈಶಾಖ ಶುದ್ಧ ಹುಣ್ಣಿಮೆಯ ಬೆಳಕು' ಎಂಬ ಪ್ರಬಂಧದಲ್ಲಿ ತಾನು ಕಂಡದ್ದರ ಮೇಲೆ, ಪೂರ್ವಸಿದ್ಧವಾದ ಅರಿವನ್ನು ಹೊದಿಸುವ ಕ್ರಮವಿದೆ. ಇದು ಶ್ರೇಷ್ಠವಾದ ಅಧ್ಯಾಪನ ಮಾರ್ಗ. ಆದರೆ ಆತ್ಮಬಂಧದ ಅನನ್ಯ ಅಭಿವ್ಯಕ್ತಿಗೆ ಅಪೋಹ ತರುವಂಥದ್ದೂ ಹೌದು. ಈ ಬಗೆಯ ತೊಡಕು ರಾಧಾಕೃಷ್ಣರ ಕೆಲವು ಪ್ರಬಂಧಗಳಲ್ಲಿ ಇದೆ. ಮಾಸ್ತರಿಕೆ ಮತ್ತು ಅಂತರ್ವಾಣಿಗಳ ವಿರುದ್ಧ ಚಲನೆಗಳ ದ್ವಂದ್ವ ಇದು. ಲೇಖಕ ಹೇಳುವುದನ್ನು ಮರೆತು ಹೇಳಿಕೊಳ್ಳುವುದಕ್ಕೆ ತೊಡಗಿದಾಗ ಪ್ರಾಯಶಃ ನಿಜವಾದ ಆತ್ಮಾಭಿವ್ಯಕ್ತಿ ಸಾಧ್ಯವಾಗುತ್ತದೆ ಎಂದು ಈಚೆಗೆ ನನಗೆ ಮತ್ತೆ ಮತ್ತೆ ಅನ್ನಿಸುತ್ತಿದೆ. 'ನುಡಿವೆಣ,ನಡೆವೆಣ...' ಪ್ರಥಮಾರ್ಧ ತುಂಬ ತೀವ್ರವಾಗಿದೆ; ದ್ವಿತೀಯ ಅರ್ಧದಲ್ಲಿ ತೀವ್ರತೆ ಕಡಿಮೆಯಾಗುತ್ತದೆ. ನನಗೆ ಪ್ರಿಯವಾಗುವುದು ಮೊದಲಭಾಗ. ಭಾವಗೀತೆಯಂತೆಯೇ ಪ್ರಬಂಧವೂ ಉದ್ವಕ್ತೂ ಭಾವತಪ್ತತೆ, ತೀವ್ರ ತನ್ಮಯತೆಯಲ್ಲಿ ಏಕಾಗ್ರಗೊಳ್ಳಬೇಕೆಂದು ನಾನು ಆಶಿಸುತ್ತೇನೆ. ಆದುದರಿಂದಲೇ ಕನ್ನಡದ ಇಬ್ಬರು ಮಹಾಪ್ರಬಂಧಕಾರರಲ್ಲಿ ಮೂರ್ತಿರಾಯರ ಶೈಲಿಗಿಂತ, ಪುತಿನ ಅವರ ಶೈಲಿ ನನಗೆ ಹೆಚ್ಚು ಪ್ರಿಯವಾಗುತ್ತದೆ. ಇದು ರುಚಿಯಪ್ರಶ್ನೆಯೂ ಇರಬಹುದು. ಆದುದರಿಂದಲೇ ಲಲಿತಪ್ರಬಂಧ ಎನ್ನುವುದಕ್ಕಿಂತ ಭಾವಪ್ರಬಂಧ ಎನ್ನುವುದು ಪ್ರಬಂಧದ ಸ್ವರೂಪವನ್ನು ನಿಶ್ಚಯಿಸಬೇಕು ಎನ್ನುವುದು ನನ್ನ ಅಪೇಕ್ಷೆ.

ರಾಧಾಕೃಷ್ಣರ ಮನೋಧರ್ಮವೂ ಪುತಿನರವರ ಮನೋಧರ್ಮಕ್ಕೆ ಹೋಲಿಕೆ ಉಳ್ಳದ್ದು. ಚಿಂತನೆ ಮತ್ತು ತನ್ಮಯತೆ ಅವರ ಪ್ರಬಂಧಗಳ ಮುಖ್ಯ ಲಕ್ಷಣ. ಬದುಕಿನ ಆರಾಧನೆ ಅವರಿಗೆ ಮಹತ್ವದ್ದೆನ್ನಿಸಿದೆ. ಸಾವು, ಮುಪ್ಪುಗಳಿಗೆ ಹೂಡಬಹುದಾದ ಸಮರ್ಥ ಪ್ರತ್ಯಸ್ತ್ರಗಳು ಬದುಕಿನ ಬತ್ತಳಿಕೆಯಲ್ಲಿವೆ ಎಂದು ಅವರು ನಂಬಿದ್ದಾರೆ . ಬುದ್ಧನ ದರ್ಶನ, ಮಹಾಮೈತ್ರಿ, ಕರುಣೆ ಅವರ ಆರಾಧನೆಯ ಅಂಶಗಳಾಗಿವೆ. ಇದೆಲ್ಲಾ ನನಗೂ ಪ್ರಿಯವಾದದ್ದೇ. ಪ್ರಿಯವಾಗದ ಒಂದೇ ಅಂಶ ಅಲ್ಲಲ್ಲಿ ಧುತ್ತೆಂದು ಪ್ರತ್ಯಕ್ಷವಾಗುವ ಮಾಸ್ತರಿಕೆಯ ಚಟ! ಅದನ್ನು ಈ ನನ್ನ ಪ್ರಿಯ ಗೆಳೆಯ ಮೀರುವುದು ಸಾಧ್ಯವಾದರೆ.... ಮೇಲೀಜುಗರನ್ನು ಥಳಕ್ಕನೆ ಆಳಕ್ಕೆಳೆದುಕೊಳ್ಳುವ ಭಾವಪ್ರಬಂಧದ ಅನೇಕ ಆವರ್ತಗಳನ್ನು ಇವರು ನಿರ್ಮಿಸಬಲ್ಲರು.

-ಎಚ್. ಎಸ್. ವೆಂಕಟೇಶ ಮೂರ್ತಿ

ಹೊಸ ಪುಸ್ತಕಗಳು

ಸಾಹಿತ್ಯದ ಸಪ್ತ ಧಾತುಗಳು(ಲೇಖನಗಳು)
ಲೇ: ಯಶವಂತ ಚಿತ್ತಾಲ
ಪ್ರ : ಆನಂದಕಂದ ಗ್ರಂಥಮಾಲೆ
ಮಲ್ಲಾಡಿಹಳ್ಳಿ -೫೭೭೫೩೧
ಪು:೧೦೮ ಬೆಲೆ : ರೂ.೮೦/-

ಹೇಮಂತ ಋತುವಿನ ಸ್ವರಗಳು
(ಉರ್ದು ಕಥೆಗಳು)
ಮೂಲ: ಕುರ್ರತುಲ ಐನ ಹೈದರ್
ಕನ್ನಡಕ್ಕೆ : ಡಾ. ಪಂಚಾಕ್ಷರಿ ಹಿರೇಮಠ
ಪುಟ: ೨೯೬ ಬೆಲೆ ರೂ.:೧೫೦/-

ಜನತೆಯ ರಾಜ್ಯ (ಅಸ್ಸಾಮಿ ಕಾದಂಬರಿ)
ಮೂಲ: ಬೀರೇಂದ್ರಕುಮಾರ್
ಭಟ್ಟಾಚಾರ್ಯ
ಕನ್ನಡಕ್ಕೆ: ಕೆ. ಪುಟ್ಟಸ್ವಾಮಿ
ಪುಟ: ೩೨೩ ಬೆಲೆ: ರೂ೧೨೫/-

ದೇವರ ವಿಕರಾಳಗಳು
(ಮಲೆಯಾಳಿ ಕಾದಂಬರಿ)
ಮೂಲ: ಎಂ. ಮುಕುಂದನ್
ಕನ್ನಡಕ್ಕೆ : ನಾ. ದಾಮೋದರ ಶೆಟ್ಟಿ
ಪುಟ : ೩೪೯ ಬೆಲೆ : ರೂ.೧೨೦/-

ಹೋರಾಟ(ಮರಾಠಿ ಕಾದಂಬರಿ)
ಮೂಲ: ಆನಂದ ಯಾದವ
ಕನ್ನಡಕ್ಕೆ: ಲ. ರಾ. ಪಂಡಿತ್
ಪುಟ: ೪೪೦ ಬೆಲೆ : ರೂ.೨೦೦/-

ಗೋಡೆಗಳಿಂದ ಆಚೆ ಆಕಾಶ
(ಗುಜರಾಥಿ ಕಾದಂಬರಿ)
ಮೂಲ: ಕುಂದನಿಕಾ ಕಾಪಡಿಯಾ
ಕನ್ನಡಕ್ಕೆ: ಎಸ್. ಕೆ. ರಮಾದೇವಮ್ಮ ಮತ್ತು
ಲಿಂಗರಾಜು
ಪುಟ: ೨೮೯ ಬೆಲೆ : ರೂ.೧೫೦

ಕಾಣೆಯಾದ ಟೋಪಿಯ ರಹಸ್ಯ ಮತ್ತಿತರ ಕಥೆಗಳು(ಒರಿಯಾ ಕಥೆಗಳು)
ಮೂಲ: ಮನೋಜ್ ದಾಸ್
ಕನ್ನಡಕ್ಕೆ: ಎಂ. ಎಸ್. ಕೆ. ಪ್ರಭು
ಪುಟ: ೨೮೧ ಬೆಲೆ : ರೂ.೧೦೦/-

ನಾನಿನ್ನು ನಿದ್ರಿಸಲಾರೆ
(ಮಲೆಯಾಳ ಕಾದಂಬರಿ)
ಮೂಲ: ಪಿ. ಕೆ. ಬಾಲಕೃಷ್ಣನ್
ಕನ್ನಡಕ್ಕೆ: ಸಾರಾ ಅಬೂಬಕ್ಕರ್
ಪುಟ: ೨೪೯ ಬೆಲೆ : ರೂ.೯೫ /-

ಅಭಿನವಗುಪ್ತ
ಇಂಗ್ಲಿಶ್ ಮೂಲ: ಜಿ. ಟಿ. ದೇಶಪಾಂಡೆ
ಕನ್ನಡಕ್ಕೆ : ಎನ್. ಬಾಲಸುಬ್ರಹ್ಮಣ್ಯ
ಪುಟ: ೧೯೬ ಬೆಲೆ : ರೂ.೭೫

ಚಿಲಕಮರ್ತಿ ಲಕ್ಷ್ಮೀನರಸಿಂಹಮ್
ತೆಲುಗು ಮೂಲ: ವಿ. ವಿ. ಎಲ್.
ನರಸಿಂಹರಾವ್
ಪುಟ: ೧೧೬ ಬೆಲೆ : ರೂ.೨೫/-

ಕಾಗೆಗಳು ಮತ್ತು ಕಾಲಾಪಾನಿ
(ಹಿಂದಿ ಸಣ್ಣಕಥೆಗಳು)
ಮೂಲ: ನಿರ್ಮಲ್ ವರ್ಮಾ
ಕನ್ನಡಕ್ಕೆ: ಭಾಲಚಂದ್ರ ಜಯಶೆಟ್ಟಿ
ಪುಟ: ೧೫೮ ಬೆಲೆ : ರೂ.೬೦ /-

ಎರಡು ದಶಕದ ಕವಿತೆ (ಕನ್ನಡ)
ಸಂ: ಜಿ. ಎಸ್ ಶಿವರುದ್ರಪ್ಪ ಮತ್ತು
ಚನ್ನವೀರ ಕಣವಿ
ಪುಟ : ೧೦೮ ಬೆಲೆ : ರೂ . ೬೫ /-

ವಿಚಿತ್ರ ವರ್ಣ(ಒರಿಯಾ ಕಥೆಗಳು)
ಮೂಲ : ರವಿ ಪಟ್ನಾಯಕ್
ಕನ್ನಡಕ್ಕೆ: ಸ್ನೇಹಲತಾ ರೋಹಿಡೇಕರ್
ಪುಟ : ೧೫೫ ಬೆಲೆ : ರೂ .೭೫ /-

ಎ. ಆರ್. ಕೃಷ್ಣಶಾಸ್ತ್ರಿ
ಲೇ : ಟಿ. ವಿ. ವೆಂಕಟಾಚಲ ಶಾಸ್ತ್ರಿ
ಪುಟ : ೧೪೯ ಬೆಲೆ : ರೂ .೨೫ /-

ಕಾದಂಬರಿಕಾರ ಗಳಗನಾಥರು
ಲೇ : ಶ್ರೀನಿವಾಸ ಹಾವನೂರ
ಪುಟ : ೮೭ ಬೆಲೆ : ರೂ .೨೫ /-

ಶಾಂತಿನಾಥ ದೇಸಾಯಿ
ಲೇ : ಜಿ. ಎಸ್. ಆಮೂರ
ಪುಟ : ೧೨೫ ಬೆಲೆ : ರೂ ೨೫ /-

ಈ ಮೇಲಿನ ೧೪ ಪುಸ್ತಕಗಳು ಕೇಂದ್ರ ಸಾಹಿತ್ಯ ಅಕಾಡೆಮಿ , ನವ ದೆಹಲಿ ಇವರ ಪ್ರಕಟಣೆಗಳು

Reg. No. : KAR.KAN. 08358/05 TC